ಮಂಗಳವಾರ, ಜೂನ್ 9, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ...
ಮಣ್ಣು ಮಾಫಿಯಾದಿಂದ ಮಣ್ಣಿನ ಕೊರತೆ ಉಂಟಾಗಿದೆ ಎಂದು ಆರೋಪಿಸಿ, ಕಲಾವಿದರು ಕೋಲ್ಕತ್ತದಲ್ಲಿ ಪ್ರತಿಭಟನೆ ನಡೆಸಿದರು



ಕಟಾವು...
ಛತ್ತೀಸಗಢದ ಬಸ್ತಾರ್ ಜಿಲ್ಲೆಯಲ್ಲಿ ಭತ್ತ ಕಟಾವು ಮಾಡುವುದರಲ್ಲಿ ತೊಡಗಿದ್ದ ಕಾರ್ಮಿಕ ಮಹಿಳೆಯರು





10 YEAR WARRANTY | BAJAJ SECURE • AMC • ROAD SIDE ASSISTANCE | 72198 21111 | Flipkart | amazon.in


*ನಿಯಮ ಹಾಗೂ ಷರತ್ತುಗಳು ಅನ್ವಯ. ಉಳಿತಾಯವು ಜೂನ್ 1ರಿಂದ ಜೂನ್ 30, 2026ರ ವರೆಗೆ ಆಯ್ದ ಮಾಡೆಲ್‌ಗಳಿಗಾಗಿ ಅನ್ವಯಿಸುತ್ತದೆ. ಅನ್ವಯಿಸುವ ಆಫರ್‌ಗಳು ಮಾಡೆಲ್‌ಗಳಿಗಾಗಿ/ರಾಜ್ಯಗಳಲ್ಲಿ ವ್ಯತ್ಯಾಸವಿರಬಹುದು. ಇ-ಕಾಮ್ ಆಫರ್‌ಗಳು ಬೇರೆ ಬೇರೆ ಪಾರ್ಟನರ್‌ಗಳಲ್ಲಿ ವ್ಯತ್ಯಾಸವಿರಬಹುದು. ನೀಡಲಾಗಿರುವ ESRPಗಳು ಬೇಸ್ ವೇರಿಯಂಟ್‌ನವಾಗಿವೆ. ಆಫರ್‌ಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಮೀಪದ ಡೀಲರ್‌ಶಿಪ್‌ಗೆ ಭೇಟಿ ನೀಡಿ. ₹2 000 ಕಡಿತ ಪಲ್ಸರ್ 125 ನಿಯಾನ್ ಮೇಲೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Lalbagh Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9620614106 • **Gokul Road branch** 9035927969 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, **MISHA BAJAJ**: 9632684225. • **Chikodi** MISHA BAJAJ: 9632765225 • **Gokak** MISHA BAJAJ: 9035454225 • **Bellary AADI BAJAJ: 9606050250• Raichur SHAH MOBILITY: 9538113444• Koppal I A BAJAJ: 9632512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 7022627411•(Bus Stand Road) 7022627412• **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805, 9663566620 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 7760967801 • **Chamarajapuram** POPULAR BAJAJ • **Vontikoppal** STAR BAJAJ: 9886959722 • **Mandya** POPULAR BAJAJ: 7760967802 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.


ಬಿಜೆಪಿ ಮೂವರಿಂದ ನಾಮಪತ್ರ ಸಲ್ಲಿಕೆ

ರಾಜ್ಯಸಭೆಗೆ ಪ್ರೊ.ನಾಗರಾಜ್ • ಪರಿಷತ್‌ಗೆ ರಘು ಕೌಟಿಲ್ಯ, ಲಿಂಗರಾಜ ಪಾಟೀಲ

ಪ್ರಜಾವಾಣಿ ವಾರ್ತೆ


ಎಂ.ನಾಗರಾಜ್


ರಘು ಕೌಟಿಲ್ಯ


ಲಿಂಗರಾಜ ಪಾಟೀಲ

ಬೆಂಗಳೂರು: ರಾಜ್ಯಸಭೆಯ ಒಂದು ಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ.ನಾಗರಾಜ್, ವಿಧಾನಪರಿಷತ್‌ನ ಎರಡು ಸ್ಥಾನಗಳಿಗೆ ಬಿಜೆಪಿಯ ರಘು ಕೌಟಿಲ್ಯ ಮತ್ತು ಲಿಂಗರಾಜ ಪಾಟೀಲ ಸೋಮವಾರ ನಾಮಪತ್ರ ಸಲ್ಲಿಸಿದರು.

ಜೆಡಿಎಸ್‌ನ ಹಾಲಿ ವಿಧಾನಪರಿಷತ್ ಸದಸ್ಯ ಗೋವಿಂದರಾಜ್ ಅವರೂ ನಾಮಪತ್ರ ಸಲ್ಲಿಸಿದ್ದಾರೆ. ಇದೇ 18 ರಂದು ರಾಜ್ಯಸಭೆ ಮತ್ತು ವಿಧಾನಪರಿಷತ್‌ನ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ನಾಮ ಪತ್ರ ಸಲ್ಲಿಕೆಗೆ ಸೋಮವಾರ ಕೊನೆಯ ದಿನವಾಗಿತ್ತು.

ಸಂಘ ಪರಿವಾರದ ಕಟ್ಟಾಳು ನಾಗರಾಜ್: ಧಾರವಾಡದವರಾದ ಪ್ರೊ. ಎಂ.ನಾಗರಾಜ್ ಅವರು ದೀರ್ಘ ಕಾಲ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಆರ್‌ಎಸ್‌ಎಸ್ ಮತ್ತು ಎಬಿವಿಪಿ ಕಾರ್ಯಕರ್ತರಾಗಿದ್ದರು. ಬಿಜೆಪಿ ಮೂಲಕ ಸಕ್ರಿಯ ರಾಜಕೀಯ ಪ್ರವೇಶಿಸಿದರು. ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇವರು ಕುರುಬ ಸಮುದಾಯಕ್ಕೆ ಸೇರಿದವರು. ಈ ಹಿಂದೆ ಕರ್ನಾಟಕ ಲೋಕಸೇವಾ ಆಯೋಗ ಸದಸ್ಯರಾಗಿದ್ದರು. ಜನಸಂಘ ಸ್ಥಾಪಕ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮಶತಮಾನೋತ್ಸವ ವರ್ಷದ ನಿಮಿತ್ತ ಪ್ರತಿ ಜಿಲ್ಲೆಯಲ್ಲೂ ಬಿಜೆಪಿಯ ಸ್ವಂತ ಕಾರ್ಯಾಲಯ ನಿರ್ಮಿಸುವ ಅಮಿತ್ ಶಾ ಅವರ ಕನಸಿನ ಯೋಜನೆಯಲ್ಲಿ ಭವನ ನಿರ್ಮಾಣ ಸಮಿತಿಗೆ ಕರ್ನಾಟಕದ ಸಂಚಾಲಕರಾಗಿಯೂ ಕೆಲಸ ಮಾಡಿದ್ದಾರೆ.

ವಿಧಾನಪರಿಷತ್ ಅಭ್ಯರ್ಥಿ ಲಿಂಗರಾಜ ಪಾಟೀಲ ಅವರು ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಸೇರಿದವರು. ಸುಮಾರು 37 ರಿಂದ 38 ವರ್ಷಗಳಿಂದ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಪಕ್ಷದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದು, ಬಿಜೆಪಿ ರಾಜ್ಯ ಘಟಕದ ಶಿಸ್ತು ಸಮಿತಿಯ ಅಧ್ಯಕ್ಷರಾಗಿದ್ದಾರೆ.

ರಘು ಕೌಟಿಲ್ಯ ಮಡಿವಾಳ ಸಮುದಾಯಕ್ಕೆ ಸೇರಿದವರು. ಬಿಜೆಪಿ ಸ್ಲಂ ಮೋರ್ಚಾ ರಾಜ್ಯ ಕಾರ್ಯದರ್ಶಿ, ಪಕ್ಷದ ರಾಜ್ಯ ಸಹ ವಕ್ತಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಬಿಜೆಪಿ ರಾಜ್ಯ ಘಟಕದ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಗಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಮೈಸೂರು– ಚಾಮರಾಜನಗರ ದ್ವಿಸದಸ್ಯ ಸ್ಥಾನದ ಚುನಾವಣೆಯಲ್ಲಿ ಸತತ ಎರಡು ಬಾರಿ ಬಿಜೆಪಿ ಟಿಕೆಟ್ ಲಭಿಸಿತ್ತು. 2015 ಹಾಗೂ 2021ರ ಚುನಾವಣೆಯಲ್ಲಿ ಸ್ಪರ್ಧಿಸಿ ಅವರು ಪರಾಭವಗೊಂಡಿದ್ದರು.


ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆಗೆ ಸಮರ್ಥ ಅಭ್ಯರ್ಥಿಗಳನ್ನೇ ವರಿಷ್ಠರು ಆಯ್ಕೆ ಮಾಡಿದ್ದಾರೆ. ಈ ಆಯ್ಕೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಸಂತಸ ತಂದಿದೆ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ರಾಜ್ಯಸಭೆಗೆ ದೇವೇಗೌಡ: ಹುಸಿಯಾದ ನಿರೀಕ್ಷೆ


ಎಚ್‌.ಡಿ. ದೇವೇಗೌಡ

ಜೆಡಿಎಸ್ ವರಿಷ್ಠ ಹಾಲಿ ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಅವರನ್ನು ಬಿಜೆಪಿ ರಾಜ್ಯಸಭೆಗೆ ಮರು ಆಯ್ಕೆ ಮಾಡಲಿದೆ ಎಂಬ ನಿರೀಕ್ಷೆ ಹುಸಿಯಾಗಿದೆ.

ಜೆಡಿಎಸ್ ಪಕ್ಷ ಎನ್‌ಡಿಎ ಕೂಟದ ಭಾಗವಾಗಿರುವುದರಿಂದ ಮತ್ತು ಪ್ರಧಾನಿ ನರೇಂದ್ರ ಮೋದಿ ಹಾಗೂ ದೇವೇಗೌಡರ ನಡುವಿನ ಬಾಂಧವ್ಯ ಉತ್ತಮವಾಗಿರುವ ಕಾರಣ, ದೇವೇಗೌಡರಿಗೆ ಟಿಕೆಟ್ ನೀಡಿ ಆಯ್ಕೆ ಮಾಡಲಾಗುವುದು ಎಂಬ ಚರ್ಚೆ ಕಳೆದ ಕೆಲವು ತಿಂಗಳಿನಿಂದ ಸಾರ್ವಜನಿಕ ವಲಯದಲ್ಲಿ ನಡೆದಿತ್ತು.

‘ದೇವೇಗೌಡ ಅವರನ್ನು ಬಿಜೆಪಿ ಟಿಕೆಟ್‌ನಿಂದ ರಾಜ್ಯಸಭೆಗೆ ಆಯ್ಕೆ ಮಾಡುವ ಬಗ್ಗೆ ನಮ್ಮ ಪಕ್ಷದ ವತಿಯಿಂದ ಯಾರಿಗೂ ಕೋರಿಕೆ ಸಲ್ಲಿಸಿರಲಿಲ್ಲ’ ಎಂದು ಜೆಡಿಎಸ್ ಮೂಲಗಳು ಹೇಳಿವೆ.

‘ರಾಜ್ಯ ಬಿಜೆಪಿಯಲ್ಲಿ ಈ ಬಗ್ಗೆ ಯಾವುದೇ ಚರ್ಚೆ ನಡೆದಿರಲಿಲ್ಲ. ವರಿಷ್ಠರಿಂದಲೂ ಈ ಕುರಿತು ಯಾವುದೇ ಸೂಚನೆ ಬಂದಿರಲಿಲ್ಲ’ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಈ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬಿ.ವೈ. ವಿಜಯೇಂದ್ರ, ‘ದೇವೇಗೌಡರು ಮೋದಿ ಅವರ ಕೈ ಬಲಪಡಿಸಿದ್ದಾರೆ. ಅವರು ಎನ್‌ಡಿಎಗೆ ಬೆಂಬಲ ನೀಡಿದ್ದಾರೆ. ಅವರ ಬಗ್ಗೆ ಪಕ್ಷಕ್ಕೆ ಅಪಾರ ಗೌರವ ಇದೆ. ರಾಜ್ಯಸಭೆಗೆ ಅವರನ್ನು ಕಳುಹಿಸುವ ಬಗ್ಗೆ ರಾಜ್ಯ ಮಟ್ಟದಲ್ಲಿ ಚರ್ಚೆ ನಡೆದಿರಲಿಲ್ಲ. ಇತ್ತೀಚಿನ ರಾಜಕೀಯ ಸ್ಥಿತಿಗತಿ ನೋಡಿ ಸೂಕ್ತ ಅಭ್ಯರ್ಥಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಪ್ರಾಮಾಣಿಕವಾಗಿ ದುಡಿದ ಪಕ್ಷದ ಕಾರ್ಯಕರ್ತರಿಗೆ ಅವಕಾಶ ನೀಡಿದ್ದಾರೆ’ ಎಂದರು.

‘ರಾಜ್ಯಸಭೆಗೆ ಸುಮಲತಾ ಅಂಬರೀಷ್ ಅವರ ಹೆಸರು ಪ್ರಸ್ತಾಪವಾಗಿತ್ತು. ಈ ಹಿಂದೆ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ವತಂತ್ರ ಸ್ಪರ್ಧೆ ಮಾಡಿದ್ದಾಗ ಬಿಜೆಪಿ ಬೆಂಬಲ ನೀಡಿತ್ತು. ಒಳ್ಳೆಯ ಅಂತರದಿಂದ ಗೆಲುವು ಸಾಧಿಸಿದ್ದರು. 2024ರ ಚುನಾವಣೆಯಲ್ಲಿ ಜೆಡಿಎಸ್‌ನ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಕ್ಷೇತ್ರ ಬಿಟ್ಟು ಕೊಟ್ಟಿದ್ದರು. ಸುಮಲತಾ ಅವರಿಗೆ ಮುಂದೆ ಸೂಕ್ತ ಸ್ಥಾನಮಾನ ಕೊಡಲಾಗುವುದು’ ಎಂದು ಹೇಳಿದರು.

ಪ್ರಜಾವಾಣಿ

ಫೋನ್‌–ಇನ್ ಕಾರ್ಯಕ್ರಮ ಇಂದು

ಪ್ರಶ್ನೆ ಕೇಳಿ ಸಮಸ್ಯೆಗೆ ಪರಿಹಾರ ಪಡೆಯಿರಿ

- ಸಿಇಟಿ ಸೀಟು ಹಂಚಿಕೆ ಪ್ರಕ್ರಿಯೆ ಹೇಗಿರುತ್ತದೆ?
- ಕಾಲೇಜು-ಕೋರ್ಸ್ ಆಯ್ಕೆ ಹೇಗೆ?
- ಆಯ್ಕೆ ಮಾಡಿಕೊಂಡ ಕಾಲೇಜು, ಕೋರ್ಸ್ ಬೇಡವೆಂದರೆ ಏನು ಮಾಡಬೇಕು?
- ಕೊನೆಯ ಸುತ್ತಿನ ನಂತರ ಕಾಲೇಜಿಗೆ ಪ್ರವೇಶ ಪಡೆಯುವುದು ಕಡ್ಡಾಯವೇ?
- ನೀಟ್ ವಿಳಂಬವಾಗಿದೆ. ಈಗ ಎಂಜಿನಿಯರಿಂಗ್ ಪಡೆದು ನಂತರ ವೈದ್ಯಕೀಯ ಸೇರಬಹುದೇ?


ಎಚ್‌.ಪ್ರಸನ್ನ, ಕಾರ್ಯನಿರ್ವಾಹಕ ನಿರ್ದೇಶಕ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ದಿನಾಂಕ **09.06.2026** ಮಂಗಳವಾರ
ಕರೆ ಮಾಡಿ
ಸಮಯ: ಬೆಳಿಗ್ಗೆ **11** ರಿಂದ **12**
ದೂರವಾಣಿ: **080 45557230**

‘ಎಚ್‌ಡಿಕೆ ರಾಜಕೀಯ ಶರಣಾಗತಿಯ ಪರಮಾವಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಮತ್ತು ಅದರ ನಾಯಕತ್ವ ಜೆಡಿಎಸ್‌ಗೆ ಪದೇ ಪದೇ ಮಾಡುತ್ತಿರುವ ಅವಮಾನವನ್ನು ಕೇಂದ್ರ ಸಚಿವ ಸ್ಥಾನ ಉಳಿಸಿಕೊಳ್ಳುವ ಉದ್ದೇಶದಿಂದ ಎಚ್‌.ಡಿ. ಕುಮಾರಸ್ವಾಮಿ ಸಹಿಸಿಕೊಳ್ಳುತ್ತಿರುವುದು ರಾಜಕೀಯ ಶರಣಾಗತಿಯ ಪರಮಾವಧಿ’ ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ.

ಎಚ್‌.ಡಿ. ದೇವೇಗೌಡ ಅವರಿಗೆ ರಾಜ್ಯಸಭೆಯ ನಾಮನಿರ್ದೇಶನ ನಿರಾಕರಿಸಿರುವ ಬಿಜೆಪಿ ನಡೆಯನ್ನು ಟೀಕಿಸಿ ಸುರ್ಜೇವಾಲಾ ‘ಎಕ್ಸ್’ ಮಾಡಿದ್ದಾರೆ.

‘ರಾಜಕೀಯ ಬದಿಗೊತ್ತಿ ದೇವೇಗೌಡರನ್ನು ರಾಜ್ಯಸಭೆಗೆ ಆಯ್ಕೆ ಮಾಡಲು ಕಾಂಗ್ರೆಸ್ ಬೆಂಬಲಿಸಿತ್ತು. ಆದರೆ, ಬಿಜೆಪಿಯು ಜೆಡಿಎಸ್ ಕಾರ್ಯಕರ್ತರು ಮತ್ತು ನಾಯಕರಿಗೆ ಅಪಮಾನ ಮಾಡಿದೆ. ಜೆಡಿಎಸ್‌ನವರಿಗೆ ಸ್ವಾಭಿಮಾನವಿದ್ದರೆ ಮೊದಲು ಬಿಜೆಪಿ ಮೈತ್ರಿ ಬಿಟ್ಟು ಹೊರಗೆ ಬರಲಿ’ ಎಂದು ಅವರು ಇದೇ ವೇಳೆ ಸವಾಲು ಹಾಕಿದ್ದಾರೆ.

‘ದೇವೇಗೌಡರಿಗೆ ಬಿಜೆಪಿಯಿಂದ ಅವಮಾನ’

‘ದೇವೇಗೌಡರ ಸಹಾಯದಿಂದ ಸಂಸತ್ತಿನಲ್ಲಿ ಮಸೂದೆಗಳನ್ನು ಬಿಜೆಪಿ ಪಾಸ್ ಮಾಡಿಕೊಂಡಿತು. ಆದರೆ, ಈಗ ಅವರಿಗೆ ಅಪಮಾನ ಮಾಡಿದೆ’ ಎಂದು ಬಿಜೆಪಿ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ವಾಗ್ದಾಳಿ ನಡೆಸಿದರು

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ದೇವೇಗೌಡರಿಗೆ ಮಾಡಿರುವ ಅಪಮಾನಕ್ಕೆ ಮುಂದಿನ ದಿನಗಳಲ್ಲಿ ಜನರು ತಕ್ಕ ಪಾಠ ಕಲಿಸಲಿದ್ದಾರೆ’ ಎಂದರು.

ಕಾಂಗ್ರೆಸ್ ಇತಿಹಾಸ ಗೊತ್ತಿದೆ: ಜೆಡಿಎಸ್

ಬೆಂಗಳೂರು: ‘ಮತ್ತೊಂದು ಪಕ್ಷದ ಆಂತರಿಕ ವಿಷಯ ಮಾತನಾಡುವ ಮೊದಲು ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ತಮ್ಮ ಪಕ್ಷದ ಕರಾಳ ಇತಿಹಾಸವನ್ನು ನೆನಪಿಸಿಕೊಳ್ಳಬೇಕು’ ಎಂದು ಜೆಡಿಎಸ್ ಟೀಕಿಸಿದೆ.

ಈ ಕುರಿತು ‘ಎಕ್ಸ್’ ಮಾಡಿರುವ ಜೆಡಿಎಸ್, ‘ದೇಶದ ಪ್ರಧಾನಮಂತ್ರಿ ಸ್ಥಾನಕ್ಕೇರಿದ ಕರ್ನಾಟಕದ ಎಚ್‌.ಡಿ.ದೇವೇಗೌಡ ಅವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಿದ ಕಾಂಗ್ರೆಸ್ ಪಕ್ಷದ ದ್ರೋಹವನ್ನು 30 ವರ್ಷಗಳಿಂದ ಕನ್ನಡಿಗರು ಪ್ರಶ್ನಿಸುತ್ತಿದ್ದಾರೆ. 2019ರಲ್ಲಿ ಮೈತ್ರಿ ನಾಟಕ ಮಾಡಿಕೊಂಡು ಎಚ್‌.ಡಿ.ಕುಮಾರಸ್ವಾಮಿ ಅವರ ಬೆನ್ನಿಗೆ ಚೂರಿ ಹಾಕಿದ್ದು ಇದೇ ಕಾಂಗ್ರೆಸ್’ ಎಂದು ಟೀಕಿಸಿದೆ.

‘ಒಳಗೆ ಜಾತ್ಯತೀತತೆಯ ಮುಖವಾಡ, ಹೊರಗೆ ಜಾತಿ ದ್ವೇಷದ ರಾಜಕಾರಣವನ್ನು ಕಾಂಗ್ರೆಸ್ ಮಾಡುತ್ತಾ ಬಂದಿದೆ. ಮಾಜಿ ಪ್ರಧಾನಿಗಳಾದ ಪಿ.ವಿ. ನರಸಿಂಹರಾವ್, ಮನಮೋಹನ್ ಸಿಂಗ್ ಅವರಂತಹ ನಾಯಕರನ್ನು ನಕಲಿ ಗಾಂಧಿ ಕುಟುಂಬ ಹೇಗೆ ಅಪಮಾನಿಸಿತ್ತು ಎನ್ನುವುದೂ ಗೊತ್ತಿದೆ’ ಎಂದಿದೆ.

ಆಸ್ತಮಾಕ್ಕೆ ಔಷಧ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ


ಮೃಗಶಿರಾ ಮಳೆ ನಕ್ಷತ್ರ ಕೂಡುವ ಸಮಯದಲ್ಲಿ ಆಸ್ತಮಾ ರೋಗಿಗಳಿಗೆ ಕೊಪ್ಪಳ ತಾಲ್ಲೂಕಿನ ಕುಟುಗನಹಳ್ಳಿಯಲ್ಲಿ ಸೋಮವಾರ ಪಾರಂಪರಿಕ ಔಷಧ ಪಡೆಯಲು ರಾಜ್ಯ ಹಾಗೂ ಹೊರರಾಜ್ಯಗಳಿಂದ ಬಂದಿದ್ದ ಜನಸಮೂಹ. ಪ್ರತಿ ವರ್ಷ ಗ್ರಾಮದ ಅಶೋಕರಾವ್ ಕುಲಕರ್ಣಿ ಔಷಧ ತಯಾರಿಸಿ ಉಚಿತವಾಗಿ ಕೊಡುತ್ತಾರೆ

ಕೈತಪ್ಪಿದ ಸಿ.ಎಂ ಸ್ಥಾನ– ಡಿಸಿಎಂ ಜಿ.ಪರಮೇಶ್ವರ ಹೇಳಿಕೆ

‘ರಾಜಕೀಯ ನಿವೃತ್ತಿ ಬಯಸಿದ್ದೆ’

ಪ್ರಜಾವಾಣಿ ವಾರ್ತೆ


ಜಿ.ಪರಮೇಶ್ವರ

ತುಮಕೂರು: ‘ಮುಖ್ಯಮಂತ್ರಿ ಬದಲಾವಣೆ ಸಮಯದಲ್ಲಿ ನನಗೆ ಅವಕಾಶ ನೀಡುವಂತೆ ಪಕ್ಷದ ಹೈಕಮಾಂಡ್‌ಗೆ ಕೇಳಿಕೊಂಡಿದ್ದೆ. ಒಂದು ವೇಳೆ ಅವಕಾಶ ಕೊಡದಿದ್ದರೆ ವಾಪಸ್ ಹೋಗುವುದಾಗಿ ಹೇಳಿದ್ದೆ. ರಾಜಕೀಯದಿಂದ ದೂರ ಉಳಿಯುವ ಬಗ್ಗೆ ಚಿಂತಿಸಿದ್ದೆ’ ಎಂದು ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಸಿದ್ಧಾರ್ಥ ಕಾಲೇಜು ಸಿಬ್ಬಂದಿ ಈಚೆಗೆ ಅಭಿನಂದಿಸಿದ ಸಮಯದಲ್ಲಿ ಮನಬಿಚ್ಚಿ ಮಾತನಾಡಿರುವ ವಿಡಿಯೊ ಈಗ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡಿದೆ.

‘2013ರ ವಿಧಾನಸಭಾ ಚುನಾವಣೆಯಲ್ಲಿ ನಾನು ಸೋತಿದ್ದರಿಂದ ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು. ಆಗಲೂ ಅವಕಾಶ ಸಿಗಲಿಲ್ಲ. ಈ ಬಾರಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಬಂದಾಗ ಪ್ರಯತ್ನಿಸಿದೆ. ಮುಖ್ಯಮಂತ್ರಿ ಆಗುವ ವಿಶ್ವಾಸ ಇತ್ತು. ನನಗೆ ಅವಕಾಶ ಕೊಡದಿದ್ದರೆ ವಾಪಸ್ ಹೋಗುವುದಾಗಿ ಒಂದು ಹಂತದಲ್ಲಿ ಹೈಕಮಾಂಡ್‌ಗೆ ಹೇಳಿದ್ದೆ. ಕಡೆಗೆ ಯಾವುದೋ ಕಾರಣಕ್ಕೆ ಪರಿಸ್ಥಿತಿ ಬದಲಾಯಿತು. ರಾಜಕೀಯ ವಾತಾವರಣ ಬದಲಾದಂತೆ, ತೀರ್ಮಾನಗಳು ಕೂಡ ಬದಲಾಗುತ್ತವೆ. ಹಾಗಾಗಿ, ಈಗ ಉಪ ಮುಖ್ಯಮಂತ್ರಿ ಸ್ಥಾನ ಕೊಟ್ಟಿದ್ದಾರೆ. ಜವಾಬ್ದಾರಿಯುತ ಸ್ಥಾನ. ಅದಕ್ಕೆ ಕುಂದು ಬರದ ರೀತಿಯಲ್ಲಿ ನಡೆದುಕೊಳ್ಳುತ್ತೇನೆ’ ಎಂದು ತಿಳಿಸಿದರು.

‘2013ರ ಚುನಾವಣೆಯಲ್ಲಿ ನಾನು ಗೆದ್ದಿದ್ದರೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಿರಲಿಲ್ಲ. ನನ್ನ ಹಣೆಬರಹವೋ ಏನೋ ಗೊತ್ತಿಲ್ಲ. ಆಗ ನಾನು ಸೋತ ಕಾರಣಕ್ಕೆ ಸಿದ್ದರಾಮಯ್ಯ ಅವರಿಗೆ ಅವಕಾಶ ಸಿಕ್ಕಿತ್ತು’ ಎಂದು ಬೇಸರದಿಂದ ಹೇಳಿದರು.

‘2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 80 ಸ್ಥಾನ ಗೆದ್ದಿತ್ತು. 37 ಸ್ಥಾನಗಳನ್ನು ಗೆದ್ದಿದ್ದ ಜೆಡಿಎಸ್ ಜತೆಗೆ ಪಕ್ಷ ಮೈತ್ರಿ ಮಾಡಿಕೊಂಡಾಗ ಎಚ್‌.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. ಆಗಲಾದರೂ ಸಹ ನನ್ನನ್ನು ಮುಖ್ಯಮಂತ್ರಿ ಮಾಡಬಹುದಿತ್ತು. ಆದರೆ, ಆಗಲಿಲ್ಲ. ಎರಡನೇ ಬಾರಿಗೂ ಅವಕಾಶ ಕೈತಪ್ಪಿತು’ ಎಂದರು.

‘ರಾಜಕೀಯಕ್ಕೆ ಆಕಸ್ಮಿಕವಾಗಿ ಬಂದೆ. ಈಗ 40 ವರ್ಷಗಳ ಅನುಭವ ಬೆನ್ನಿಗಿದೆ. ಜನಪರ ಕೆಲಸ ಮಾಡಿದ್ದರಿಂದ ಜನರ ಪ್ರೀತಿ ಸಿಕ್ಕಿದೆ. ಇಲ್ಲವಾಗಿದ್ದರೆ ಜನರಾಗಲೀ, ಪಕ್ಷವಾಗಲೀ ನನ್ನನ್ನು ಗುರುತಿಸುತ್ತಿರಲಿಲ್ಲ’ ಎಂದು ತಿಳಿಸಿದರು.

ಮುಖ್ಯಾಂಶಗಳು
- ಮೂರು ಬಾರಿ ಕೈ ತಪ್ಪಿದ ಮುಖ್ಯಮಂತ್ರಿ ಸ್ಥಾನ
- 40 ವರ್ಷಗಳ ಅನುಭವ ಬೆನ್ನಿಗಿದೆ– ಜನರ ಪ್ರೀತಿ ದಕ್ಕಿದೆ– ಪರಮೇಶ್ವರ

ಅಹಿಂದ ಹಿಂದಕ್ಕೆ ತಳ್ಳುವವರು ಈಗಲೂ ಇದ್ದಾರೆ: ಸಚಿವ ಸತೀಶ ಜಾರಕಿಹೊಳಿ


ಸತೀಶ ಜಾರಕಿಹೊಳಿ

ಬೆಳಗಾವಿ: ‘ಅಹಿಂದ’ ನಾಯಕರನ್ನು ಹಿಂದಕ್ಕೆ ತಳ್ಳುವ ಕೆಲಸ ಮೊದಲಿನಿಂದಲೂ ನಡೆದಿದೆ. ಈಗಲೂ ಅಂತಹ ಪ್ರಯತ್ನಗಳು ಮುಂದುವರಿದಿವೆ. ಎಲ್ಲವನ್ನೂ ಮೀರಿ ನಾವು ಬೆಳೆಯಬೇಕು; ಬೆಳೆಯುತ್ತೇವೆ’ ಎಂದು ಸಚಿವ ಸತೀಶ ಜಾರಕಿಹೊಳಿ ಇಲ್ಲಿ ಪ್ರತಿಕ್ರಿಯಿಸಿದರು.

‘ಪ್ರಸಕ್ತ ಸರ್ಕಾರದಲ್ಲಿ ಅಹಿಂದ ನಾಯಕರಿಗೆ ಹಿನ್ನಡೆ ಆಗಿದೆಯೇ? ಅಪಪ್ರಚಾರ ನಡೆದಿದೆಯೇ’ ಎಂಬ ಪ್ರಶ್ನೆಗೆ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಅಂಥ ಕೆಲಸಗಳು ನಡೆದೇ ಇವೆ. ಸದ್ಯ ನನ್ನ ಬಗ್ಗೆ ಅಪಪ್ರಚಾರ ಮಾಡಿದವರ ವಿರುದ್ಧ ತನಿಖೆ ನಡೆದಿದೆ’ ಎಂದರು.

‘ಈಗ ನನಗೆ ಸಿಕ್ಕ ಸ್ಥಾನಕ್ಕೆ ನಾನು ತೃಪ್ತನಾಗಿದ್ದೇನೆ. ಕಾಂಗ್ರೆಸ್‌ನಲ್ಲಿ ತಾಳ್ಮೆಯಿಂದ ಕಾಯುವುದು ಮುಖ್ಯ. ಕಾಯ್ದವರಿಗೆ ಎಲ್ಲವೂ ಸಿಕ್ಕಿದೆ. ನಾನು ಕೂಡ 2028ರವರೆಗೂ ಕಾಯುತ್ತೇನೆ. ಯಾರ ಮೇಲೂ ಅಸಮಾಧಾನ ಇಲ್ಲ’ ಎಂದರು.

‘ನಿಮಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡಿಸುವಲ್ಲಿ ಸಿದ್ದರಾಮಯ್ಯ ಹಿಂದೆ ಸರಿದಿದ್ದು ಏಕೆ’ ಎಂಬ ಪ್ರಶ್ನೆಗೆ, ‘ಸದ್ಯ ಪರಮೇಶ್ವರ ಅವರಿಗೆ ಕೊಡಿಸಿದ್ದಾರೆ. ಮುಂದೆ ನೋಡೋಣ. ನನಗೆ ತಕ್ಕದಾದ ಗೌರವ ಸಿಕ್ಕಿದೆ ಎಂಬುದು ನನ್ನ ಅನಿಸಿಕೆ’ ಎಂದು ಹೇಳಿದರು.

ಕೊಟ್ಟರೂ ‘ಬೆಂಗಳೂರು ಅಭಿವೃದ್ಧಿ’ ಬೇಡ: ಸಚಿವ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಖಾತೆ ಬದಲಾವಣೆ ಬೇಡಿಕೆ, ರಾಜೀನಾಮೆ ಕೊಟ್ಟಿದ್ದು, ವಾಪಸ್ ಪಡೆದದ್ದು ಮುಗಿದ ಅಧ್ಯಾಯ. ಬೆಂಗಳೂರು ಅಭಿವೃದ್ಧಿ ಖಾತೆ ಈಗ ಕೊಟ್ಟರೂ ತೆಗೆದುಕೊಳ್ಳುವುದಿಲ್ಲ’ ಎಂದು ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಖಾತೆ ಹಂಚಿಕೆ ನಂತರ ಅಸಮಾಧಾನಗೊಂಡು ರಾಜೀನಾಮೆ ನೀಡಿ, ವಾಪಸ್ ಪಡೆದಿದ್ದ ರಾಮಲಿಂಗಾರೆಡ್ಡಿ ಅವರು, ತಮ್ಮ ಇಲಾಖೆಯ ಮೊದಲ ಸಭೆಯನ್ನು ಸೋಮವಾರ ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನೀರಾವರಿ ಇಲಾಖೆಯ ಅಧಿಕಾರಿಗಳ ಜತೆ ಚರ್ಚೆ ನಡೆಸಿದ್ದೇನೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಘೋಷಿಸಿದ ₹5,300 ಕೋಟಿ, ಕಳಸ-ಬಂಡೂರಿ ಯೋಜನೆ, ಮೇಕೆದಾಟು ಅನುಷ್ಠಾನ ಸೇರಿದಂತೆ ರಾಜ್ಯದ ನೀರಾವರಿ ಸಮಸ್ಯೆಗಳ ಕುರಿತು ಕೇಂದ್ರ ಸರ್ಕಾರದ ಗಮನ ಸೆಳೆಯಲು, ತ್ವರಿತ ಅನುಷ್ಠಾನಕ್ಕೆ ಒತ್ತಾಯಿಸಲು ದೆಹಲಿಗೆ ತೆರಳಲು ನಿರ್ಧರಿಸಿದ್ದೇನೆ’ ಎಂದು ಮಾಹಿತಿ ನೀಡಿದರು.

‘ಇಲ್ಲಿಯವರೆಗೂ ಇಲಾಖೆಯ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಅವರು ಈಗ ಮುಖ್ಯಮಂತ್ರಿಯಾಗಿದ್ದಾರೆ. ಇಲಾಖೆಯ ನಾಲ್ಕು ನಿಗಮಗಳಿಗೆ ಅವರೇ ಅಧ್ಯಕ್ಷರು. ಹೀಗಾಗಿ ಇಲಾಖೆಗೆ ಹೆಚ್ಚಿನ ಅನುದಾನ ನೀಡುವ ನಿರೀಕ್ಷೆ ಇದೆ. ಬಾಕಿ ಇರುವ ಬಿಲ್‌ಗಳ ಇತ್ಯರ್ಥಕ್ಕೆ ಮತ್ತೊಂದು ಸುತ್ತಿನ ಸಭೆ ನಡೆಸಲಾಗುವುದು. ಬಳಿಕ ಶ್ವೇತಪತ್ರದ ರೀತಿ ದಾಖಲೆ ಕೊಡುತ್ತೇನೆ. ಇಲಾಖೆಯನ್ನು ಯಶಸ್ವಿಯಾಗಿ ನಿಭಾಯಿಸುತ್ತೇನೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಮಲಿಂಗಾರೆಡ್ಡಿಗೆ ಶಿವಕುಮಾರ್ ಕೊಠಡಿ: ಡಿ.ಕೆ.ಶಿವಕುಮಾರ್ ಅವರು ಉಪಮುಖ್ಯಮಂತ್ರಿ ಇದ್ದಾಗ ಬಳಸುತ್ತಿದ್ದ ವಿಧಾನಸೌಧ ಕೊಠಡಿಗಳನ್ನೇ ರಾಮಲಿಂಗಾರೆಡ್ಡಿ ಅವರಿಗೆ ಹಂಚಿಕೆ ಮಾಡಲಾಗಿದೆ.

ಖಾತೆ ವಹಿಸಿಕೊಳ್ಳಲು ಕೃಷ್ಣ ಬೈರೇಗೌಡ ಹಿಂದೇಟು?

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು (ಬಿಎಂಆರ್‌ಡಿಎ) ಸೇರಿಸದಿದ್ದರೆ ತಮಗೆ ಹಂಚಿಕೆಯಾದ ಬೆಂಗಳೂರು ಅಭಿವೃದ್ಧಿ ಖಾತೆಯನ್ನು ವಹಿಸಿಕೊಳ್ಳಬೇಕೇ, ಬೇಡವೇ ಎಂಬ ಗೊಂದಲದಲ್ಲಿ ಸಚಿವ ಕೃಷ್ಣ ಬೈರೇಗೌಡ ಇದ್ದಾರೆ.

ಪ್ರಮುಖ ಪ್ರಾಧಿಕಾರಗಳನ್ನು ಬಿಟ್ಟು ಖಾತೆ ಹಂಚಿಕೆ ಮಾಡಿರುವ ಬಗ್ಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಬಳಿಯೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ. ಬೆಂಗಳೂರು ಅಭಿವೃದ್ಧಿ ಖಾತೆಗೆ ರಾಮಲಿಂಗಾ ರೆಡ್ಡಿ ಆಕಾಂಕ್ಷಿಯಾಗಿದ್ದರು. ಅದನ್ನು ಕೃಷ್ಣ ಬೈರೇಗೌಡರಿಗೆ ನೀಡಲಾಗಿತ್ತು. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಆ ವ್ಯಾಪ್ತಿಯ ಐದು ನಗರಪಾಲಿಕೆಗಳು, ಬೆಂಗಳೂರು ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ), ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಮಾತ್ರ ಸೇರಿವೆ. ಆದರೆ, ಈ ವ್ಯಾಪ್ತಿಯಲ್ಲಿ ಬಿಡಿಎ, ಬಿಎಂಆರ್‌ಡಿಎ, ಬಿಐಎಪಿಎ, ರಾಜಧಾನಿಗೆ ಮಾಸ್ಟರ್ ಪ್ಲಾನ್ ರೂಪಿಸುವ ಬೆಂಗಳೂರು ಯೋಜನೆ ಸೇರಿಲ್ಲ.

‘ಪಂಚಾಯತ್‌ರಾಜ್: 4,000 ಹುದ್ದೆಗಳ ಭರ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲಾಖೆಯಲ್ಲಿ ಖಾಲಿ ಇರುವ 4,000 ಹುದ್ದೆಗಳ ಭರ್ತಿಗೆ ತಕ್ಷಣವೇ ಪ್ರಕ್ರಿಯೆ ಆರಂಭಿಸಲು ಸೂಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲಾಖೆಯಲ್ಲಿ 25,540 ಮಂಜೂರಾದ ಹುದ್ದೆಗಳಿದ್ದು, 8,770 ಖಾಲಿ ಇವೆ. ಎ–ವೃಂದದ 268, ಬಿ–ವೃಂದದ 1,079, ಸಿ–ವೃಂದದ 5,294, ಡಿ–ವೃಂದದ 2,129 ಖಾಲಿ ಹುದ್ದೆಗಳಲ್ಲಿ ಮೊದಲ ಹಂತದಲ್ಲಿ 4 ಸಾವಿರ ಭರ್ತಿ ಮಾಡಲಾಗುತ್ತಿದೆ. ಸಿ ಮತ್ತು ಡಿ ವೃಂದದ ಹುದ್ದೆಗಳ ನೇರ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಧಿಸೂಚನೆ ಹೊರಡಿಸಲಿದೆ ಎಂದರು.

‘1,400 ಹುದ್ದೆಗಳ ಭರ್ತಿಗೆ ಈಗಾಗಲೇ ಅನುಮತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಹುದ್ದೆಗಳ ಭರ್ತಿಗೂ ಕ್ರಮ ವಹಿಸುವಂತೆ ಸೂಚನೆ ನೀಡಲಾಗಿದೆ’ ಎಂದು ಹೇಳಿದರು.

ಮಳೆ ವಿಳಂಬವಾದರೆ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ, ಯಾವುದೇ ಜಲಮೂಲಗಳಿಂದ ಕಲುಷಿತ ನೀರು ಪೂರೈಕೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಸೂಚಿಸಲಾಗಿದೆ. ತುರ್ತು ಬಳಕೆಗೆ ₹117 ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

ಇ-ಸ್ವತ್ತಿಗೆ ಅರ್ಜಿ ಸಲ್ಲಿಸಿದವರಿಗೆ ಖಾತಾ ವಿಳಂಬವಾಗುತ್ತಿದೆ. ಸರ್ವರ್ ಸಮಸ್ಯೆ ಪರಿಹರಿಸಲು, ಎಲ್ಲ ಆಸ್ತಿಗಳ ದಾಖಲೀಕರಣ ಮಾಡಲು, ಜಿಯೊ ಟ್ಯಾಗ್ ಮಾಡಿ ಸರ್ಕಾರಿ ಆಸ್ತಿ ಸಂರಕ್ಷಣೆ ಮಾಡಲು, ಗ್ರಾಮೀಣ ಭಾಗದ ಸಾಮಾಜಿಕ ಅರಣ್ಯವನ್ನು ಆಡಿಟ್ ಮಾಡಿಸಲು, ರಸ್ತೆಗಳ ಸ್ಥಿತಿಗತಿಯ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

‘ಗುಣಮಟ್ಟ, ಪಾರದರ್ಶಕತೆಗೆ ಆದ್ಯತೆ’

ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ


ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು

ಬೆಂಗಳೂರು: ‘ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಗುಣಮಟ್ಟ ಮತ್ತು ಪಾರದರ್ಶಕತೆಗೆ ಆದ್ಯತೆ ನೀಡಬೇಕು’ ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಅವರು ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಹಿರಿಯ ಅಧಿಕಾರಿಗಳ ಜೊತೆ ‘ಕಾವೇರಿ’ಯಲ್ಲಿ ಇಲಾಖೆಯ ವಿವಿಧ ಯೋಜನೆಗಳು, ಕಾರ್ಯಕ್ರಮಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದ ಕುರಿತು ಸೋಮವಾರ ಅವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ, ನಾಗರಿಕರಿಗೆ ಒದಗಿಸುತ್ತಿರುವ ಮೂಲಸೌಲಭ್ಯಗಳು, ಬಾಕಿ ಉಳಿದಿರುವ ಯೋಜನೆಗಳ ಸ್ಥಿತಿ ಹಾಗೂ ಭವಿಷ್ಯದ ಕಾರ್ಯಯೋಜನೆಗಳ ಕುರಿತು ಅಧಿಕಾರಿಗಳಿಂದ ಸಚಿವರು ಮಾಹಿತಿ ಪಡೆದರು.

‘ಸಾರ್ವಜನಿಕರಿಗೆ ಶೀಘ್ರ ಮತ್ತು ಪರಿಣಾಮಕಾರಿ ಸೇವೆಗಳನ್ನು ಒದಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಇಲಾಖೆಯ ಅಭಿವೃದ್ಧಿ ಕಾರ್ಯಗಳು ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳುವಂತೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು’ ಎಂದೂ ಅವರು ನಿರ್ದೇಶನ ನೀಡಿದರು.

ಪೋಕ್ಸೊ ಪ್ರಕರಣದ ವಿಚಾರಣೆ ಎದುರಿಸುತ್ತಿರುವ ಮಾಜಿ ಮುಖ್ಯಮಂತ್ರಿ

ಬಿಎಸ್‌ವೈ ಪ್ರಕರಣ: ಷರತ್ತು ಸಡಿಲಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪೋಕ್ಸೊ ಪ್ರಕರಣದ ಆರೋಪ ಎದುರಿಸುತ್ತಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಜಾಮೀನು ಷರತ್ತನ್ನು ಹೈಕೋರ್ಟ್ ಸಡಿಲಿಸಿದೆ.

ಈ ಸಂಬಂಧ ಯಡಿಯೂರಪ್ಪ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು ಸೋಮವಾರ ವಿಚಾರಣೆ ನಡೆಸಿ ಆದೇಶಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಹೀಗಾಗಿ, ಅನುಮತಿ ಇಲ್ಲದೇ ವ್ಯಾಪ್ತಿ ಪ್ರದೇಶ ಬಿಟ್ಟು ತೆರಳದಂತೆ ವಿಧಿಸಲಾಗಿರುವ ಷರತ್ತು ಸಡಿಲಿಸಬೇಕು’ ಎಂದು ಮನವಿ ಮಾಡಿದರು.ಅದನ್ನು ಮಾನ್ಯ ಮಾಡಿದ ನ್ಯಾಯಪೀಠ ಷರತ್ತು ಸಡಿಲಿಸಿ ಆದೇಶಿಸಿ ವಿಚಾರಣೆಯನ್ನು ಮುಂದೂಡಿತು.

ಜೀವರಾಜ್ ಅರ್ಜಿ: ಮುರೊಳ್ಳಿ ಆರೋಪಕ್ಕೆ ಅಸಮಾಧಾನ

ಬೆಂಗಳೂರು: ಶೃಂಗೇರಿ ವಿಧಾನಸಭಾ ಚುನಾವಣೆಯ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಯ ಡಿ.ಎನ್. ಜೀವರಾಜ್ ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಿಸಿದ ನಂತರ ಅವರ ವಿರುದ್ಧ ಮತಗಳನ್ನು ತಿರುಚಿದ ಆರೋಪದಡಿ ದೂರು ನೀಡಿದ ಮತ ಎಣಿಕೆಯ ಕಾಂಗ್ರೆಸ್ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ಅವರ ಬಗ್ಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

‘ಸುಧೀರ್ ಕುಮಾರ್ ಮುರೊಳ್ಳಿ ನೀಡಿದ ದೂರು ಆಧರಿಸಿ ಚಿಕ್ಕಮಗಳೂರು ಟೌನ್ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಜೀವರಾಜ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿ ಪರಿಶೀಲಿಸಿದ ನ್ಯಾಯಪೀಠ, ‘ಮತಪತ್ರಗಳು ಚುನಾವಣಾ ಆಯೋಗದ ವಶದಲ್ಲಿರುವಾಗ ಜೀವರಾಜ್ ಅವುಗಳನ್ನು ಹೇಗೆ ತಾನೆ ತಿದ್ದಲು ಸಾಧ್ಯ? ಮತ ಪೆಟ್ಟಿಗೆಗಳಿಗೆ ಚುನಾವಣಾ ಆಯೋಗ ಹಾಕಿದ್ದ ಮೊಹರು ಒಡೆದು ಮತಗಳನ್ನು ತಿದ್ದುಪಡಿ ಮಾಡಿ ಬಂದರೇ? ಹಾಗಾದರೆ ಚುನಾವಣಾ ಆಯೋಗದ ಭದ್ರತೆ ನಿಷ್ಪ್ರಯೋಜಕ ಎನ್ನುತ್ತೀರಾ’ ಎಂದು ದೂರುದಾರರ ಪರ ವಕೀಲರನ್ನು ಖಾರವಾಗಿ ಪ್ರಶ್ನಿಸಿತು.

ಅಂತೆಯೇ, ಅರ್ಜಿದಾರರ ವಿರುದ್ಧದ ಎಫ್‌ಐಆರ್‌ಗೆ ನೀಡಿರುವ ಮಧ್ಯಂತರ ತಡೆ ಆದೇಶವನ್ನು ಜುಲೈ 3ರವರೆಗೆ ವಿಸ್ತರಿಸಿ ವಿಚಾರಣೆ ಮುಂದೂಡಿತು.

ಅತ್ಯಾಚಾರ ಆರೋಪ: ದಾಖಲೆ ಸಲ್ಲಿಕೆಗೆ ನಿರ್ದೇಶನ

ಬೆಂಗಳೂರು: ‘ಕೊಡಗಿನ ಹೋಂ ಸ್ಟೇನಲ್ಲಿ ಅಮೆರಿಕ ಪ್ರವಾಸಿ ಮಹಿಳೆಯ ಮೇಲೆ ನಡೆದಿದೆ ಎನ್ನಲಾದ ಅತ್ಯಾಚಾರ ಆರೋಪದ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ತನಿಖಾ ದಾಖಲೆಗಳನ್ನು ಸಲ್ಲಿಸಿ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಹೋಂ ಸ್ಟೇ ಮಾಲೀಕ ಪೊನ್ನಪ್ಪ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

‘ವಿದೇಶಿ ಪ್ರವಾಸಿಯ ಮೇಲೆ ಅತ್ಯಾಚಾರ ನಡೆದಿರವುದು ಗಂಭೀರ ವಿಚಾರ. ಪ್ರಕರಣದ ದಾಖಲೆಗಳನ್ನು ಪರಿಶೀಲಿಸದೆ ಅರ್ಜಿದಾರರ ವಿರುದ್ಧ ತನಿಖೆಗೆ ತಡೆ ನೀಡಲಾಗದು. ಆದ್ದರಿಂದ ಈತನಕ ನಡೆಸಿರುವ ತನಿಖೆಯ ಸಂಪೂರ್ಣ ದಾಖಲೆಗಳನ್ನು ಜೂನ್ 10ರೊಳಗೆ ಸಲ್ಲಿಸಿ’ ಎಂದು ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.

ಪ್ರಕರಣವೇನು?: ‘ಪ್ರಕರಣ ನಡೆದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿಲ್ಲ ಎಂಬ ಆರೋಪದಡಿ ನನ್ನ ವಿರುದ್ಧ ದಾಖಲಾಗಿದೆ. ಇದರಿಂದ ನನ್ನ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಇದಕ್ಕಾಗಿ ₹15 ಲಕ್ಷ ಪರಿಹಾರ ನೀಡಲು ನಿರ್ದೇಶಿಸಬೇಕು ಮತ್ತು ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಪೊನ್ನಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

‘ಹೋಂ ಸ್ಟೇಗೆ ಆಗಮಿಸಿದ್ದ ಸಂತ್ರಸ್ತೆಗೆ ಪಾನೀಯದಲ್ಲಿ ಅಮಲು ಪದಾರ್ಥ ಬೆರೆಸಿ, ಹೋಂ ಸ್ಟೇ ನೌಕರ ಅತ್ಯಾಚಾರ ಎಸಗಿದ್ದಾನೆ’ ಎಂದು ಆರೋಪಿಸಿ ಪ್ರಕರಣ ದಾಖಲಿಸಲಾಗಿದೆ.

ಬಾಲಕನಿಂದ ಕಾರು ಚಾಲನೆ, ಪಾಲಕರಿಗೆ ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ರಾಣಿ ಚನ್ನಮ್ಮ ವೃತ್ತದ ಬಳಿ ಸೋಮವಾರ ಬಾಲಕನೊಬ್ಬ ಕಾರು ಚಾಲನೆ ಮಾಡಿದ್ದು, ಮೋಟಾರು ವಾಹನ ಕಾಯ್ದೆಯಡಿ ನೋಟಿಸು ನೀಡಲಾಗಿದೆ. ಅಲ್ಲದೆ, ವಾಹನದ ಮಾಲೀಕತ್ವ ಹೊಂದಿದ್ದ ಬಾಲಕನ ತಂದೆಗೆ ₹25 ಸಾವಿರ ದಂಡ ವಿಧಿಸಲಾಗಿದೆ.

ಸೋಮವಾರ ಬೆಳಿಗ್ಗೆ 10.50ರ ವೇಳೆಗೆ ಬಾಲಕ ಕಾರು ಚಲಾಯಿಸುತ್ತಿದ್ದ. ಸಂಚಾರ ವಿಭಾಗದ ಪೊಲೀಸರು ವಾಹನ ಸಮೇತ ಬಾಲಕನನ್ನು ಠಾಣೆಗೆ ಕರೆತಂದರು. ‘ಪಾಲಕರನ್ನು ಕರೆಯಿಸಿ ತಿಳಿವಳಿಕೆ ಹೇಳಿ, ದಂಡ ವಿಧಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದ್ದಾರೆ.

ನಿಧನ ವಾರ್ತೆ

ಎಐಸಿಸಿ ಕಾರ್ಯದರ್ಶಿ ಸೂರಜ್ ಹೆಗ್ಡೆ


ಸೂರಜ್ ಹೆಗ್ಡೆ

ಬೆಂಗಳೂರು: ಎಐಸಿಸಿ ಕಾರ್ಯದರ್ಶಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗ್ಡೆ (55) ಅವರು ಹೃಯಸ್ತಂಭನದಿಂದ ಭಾನುವಾರ ರಾತ್ರಿ ನಿಧನರಾದರು.

ಅವರಿಗೆ ಹೆಂಡತಿ, ಇಬ್ಬರು ಗಂಡು ಮಕ್ಕಳು ಇದ್ದಾರೆ. ಸೂರಜ್ ಹೆಗ್ಡೆ ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರ ಮೊಮ್ಮಗ. ಕಾಂಗ್ರೆಸ್ ಪಕ್ಷದ ಯುವ ಹಾಗೂ ಪ್ರಭಾವಿ ನಾಯಕರಲ್ಲಿ ಒಬ್ಬರಾಗಿದ್ದರು.

ಹೃದಯಸ್ತಂಭನಕ್ಕೆ ಒಳಗಾದ ತಕ್ಷಣ ಹೆಗ್ಡೆ ಅವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಅಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ.

ಎಐಸಿಸಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವ ಜೊತೆಗೆ ತಮಿಳುನಾಡು ಮತ್ತು ಪುದುಚೆರಿ ಕಾಂಗ್ರೆಸ್ ಘಟಕಗಳ ಉಸ್ತುವಾರಿ ಜವಾಬ್ದಾರಿಯನ್ನೂ ಸೂರಜ್ ಹೆಗ್ಡೆ ನಿರ್ವಹಿಸುತ್ತಿದ್ದರು.

ಮೃತರ ಅಂತ್ಯಕ್ರಿಯೆ ಹೆಬ್ಬಾಳದ ಸ್ಮಶಾನದಲ್ಲಿ ಮಂಗಳವಾರ ನಡೆಯಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

‘ಖಾಸಗಿ ಬಸ್ ಪ್ರಯಾಣ ದರ ಶೇ 5 ರಿಂದ ಶೇ 8ರಷ್ಟು ಏರಿಕೆ’

ಪ್ರಜಾವಾಣಿ ವಾರ್ತೆ

ಉಡುಪಿ: ತೈಲ, ಟೋಲ್ ದರ ಏರಿಕೆ ಸೇರಿ ದೈನಂದಿನ ವೆಚ್ಚ ಏರಿಕೆಯಿಂದಾಗಿ ರಾಜ್ಯದಾದ್ಯಂತ ಖಾಸಗಿ ಬಸ್‌ಗಳ ಪ್ರಯಾಣ ದರವನ್ನು ಶೇ 5ರಿಂದ ಶೇ 8 ರಷ್ಟು ಏರಿಕೆ ಮಾಡಲಾಗಿದೆ.

‘ಪರಿಷ್ಕೃತ ದರವು ಜೂನ್ 9ರಿಂದ ಜಾರಿಗೆ ಬರಲಿದೆ’ ಎಂದು ಕರ್ನಾಟಕ ರಾಜ್ಯ ಮಜಲು ವಾಹನ (ಸ್ಟೇಜ್ ಕ್ಯಾರಿಯರ್) ಬಸ್ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಕುಯಿಲಾಡಿ ಸುರೇಶ್ ನಾಯಕ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯ ಸರ್ಕಾರದ ಅಧಿಸೂಚನೆಯಂತೆ ಸೆಸ್ ಹಾಕಲು ಅವಕಾಶವಿದ್ದು ಅದರಂತೆ ದರ ಏರಿಸಿದೆ. ಟೈರ್ ಸೇರಿ ಬಿಡಿ ಭಾಗಗಳ ದರವೂ ಏರಿಕೆಯಾಗಿರುವುದರಿಂದ ಬಸ್ ಮಾಲೀಕರು ಸಂಕಷ್ಟ ಅನುಭವಿಸುವಂತಾಗಿದೆ’ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೆನರಾ ಬಸ್ ಮಾಲಕರ ಸಂಘದ ಅಧ್ಯಕ್ಷ ರಾಜವರ್ಮ ಬಲ್ಲಾಳ್, ಸದಾನಂದ ಚಾತ್ರ ಉಪಸ್ಥಿತರಿದ್ದರು.



prajavani.net prajavani | ಮಂಗಳವಾರ, ಜೂನ್ 9, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 159 | ಪುಟ 16 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 73,524 | ನಿಫ್ಟಿ 23,123 | $/₹ 95.61 | ಚಿನ್ನ (Std. 10g) ₹1,56,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,58,000 (ಬೆಂಗಳೂರು)

‘ಶಕ್ತಿ’ಗೆ ಶೀಘ್ರ ಸ್ಮಾರ್ಟ್ ಕಾರ್ಡ್

ಮಹಿಳೆಯರಿಗೆ ಉಚಿತವಾಗಿ ವಿತರಣೆ • 3 ಕೋಟಿ ಕಾರ್ಡ್ ಅಗತ್ಯ–ಬೈರತಿ ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವ ‘ಶಕ್ತಿ’ ಯೋಜನೆಯಡಿ ಶೀಘ್ರದಲ್ಲಿ ‘ಸ್ಮಾರ್ಟ್ ಕಾರ್ಡ್’ ವಿತರಿಸಲು ಸಾರಿಗೆ ಇಲಾಖೆ ನಿರ್ಧರಿಸಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದ್ದ ಡಿ.ಕೆ. ಶಿವಕುಮಾರ್ ಅವರು, ‘ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ 5 ಗ್ಯಾರಂಟಿ ಯೋಜನೆಗಳು ಅರ್ಹರಿಗೆ ತಲುಪಬೇಕು ಎಂಬ ಕಾರಣಕ್ಕೆ, ಫಲಾನುಭವಿಗಳ ಮಾಹಿತಿಯನ್ನು ಸಂಗ್ರಹಿಸಬೇಕು’ ಎಂದು ಸೂಚಿಸಿದ್ದರು. ಹೀಗೆ ನಿರ್ದೇಶನ ನೀಡುವ ಮುಖೇನ, ಅನರ್ಹರನ್ನು ಪಟ್ಟಿಯಿಂದ ಹೊರಗಿಡುವ ಬಗ್ಗೆಯೂ ಸುಳಿವು ನೀಡಿದ್ದರು.



ಬೈರತಿ ಸುರೇಶ್

ಇದರ ಮುಂದಿನ ಹೆಜ್ಜೆಯಾಗಿ, ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುವ ಮಹಿಳೆಯರಿಗೆ ‘ಸ್ಮಾರ್ಟ್ ಕಾರ್ಡ್’ ನೀಡುವ ಮೂಲಕ, ‘ಶಕ್ತಿ’ ಯೋಜನೆ ಸೌಲಭ್ಯ ಅರ್ಹರಿಗಷ್ಟೇ ತಲುಪಿಸುವತ್ತ ಇಲಾಖೆ ಹೆಜ್ಜೆ ಇಡತೊಡಗಿದೆ.

ನೂತನ ಸಾರಿಗೆ ಸಚಿವರಾಗಿ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸೋಮವಾರ ಕಾರ್ಯಾರಂಭ ಮಾಡಿದ ಬೈರತಿ ಸುರೇಶ್, ಅಧಿಕಾರಿಗಳ ಜೊತೆ ಸಭೆ ನಡೆಸಿ ಚರ್ಚಿಸಿದ ಬಳಿಕ ಈ ಮಾಹಿತಿ ನೀಡಿದರು. ‘ಶಕ್ತಿ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸ್ಮಾರ್ಟ್ ಕಾರ್ಡ್ ವಿತರಿಸಲಾಗುವುದು’ ಎಂದು ಅವರು ಹೇಳಿದರು.

‘ಮೂರು ಕೋಟಿಗೂ ಹೆಚ್ಚು ಜನರಿಗೆ ‘ಶಕ್ತಿ’ ಯೋಜನೆಯ ಸ್ಮಾರ್ಟ್ ಕಾರ್ಡ್ ವಿತರಿಸಲಾಗುವುದು. ಮಹಿಳೆಯರಿಗೆ ಈ ಕಾರ್ಡ್ ಅನ್ನು ಉಚಿತವಾಗಿ ನೀಡಲಾಗುವುದು. ಪುರುಷರು ‘ನಮ್ಮ ಮೆಟ್ರೊ’ ಕಾರ್ಡ್ ಮಾದರಿಯಲ್ಲಿ ಹಣ ಪಾವತಿಸಿ ಈ ಕಾರ್ಡ್ ಪಡೆದುಕೊಳ್ಳಬಹುದು. ಕಾರ್ಡ್‌ನಲ್ಲಿ ಹಣ ಖಾಲಿಯಾದ ಬಳಿಕ ರೀ ಚಾರ್ಜ್ ಮಾಡಬೇಕಾಗುತ್ತದೆ’ ಎಂದು ಅವರು ತಿಳಿಸಿದರು.

‘ದೊಡ್ಡ ಸಂಖ್ಯೆಯಲ್ಲಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಬೇಕಾದ ಅಗತ್ಯ ಇರುವುದರಿಂದ, ಅವುಗಳನ್ನು ಸಿದ್ಧಪಡಿಸಲು ಜಾಗತಿಕ ಟೆಂಡರ್ ಕರೆಯಲಾಗುವುದು. ಬಳಿಕ ಕಾರ್ಡ್ ವಿತರಿಸುವ ಪ್ರಕ್ರಿಯೆಯನ್ನು ಪೈಲಟ್ ಯೋಜನೆಯಡಿ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದೂ ಸಚಿವರು ತಿಳಿಸಿದರು.

▶8

‘ಸ್ಮಾರ್ಟ್’ನಿಂದ ನಕಲಿ ಕಾರ್ಡ್‌ಗೆ ಕಡಿವಾಣ

‘ಶಕ್ತಿ’ ಯೋಜನೆಯಡಿ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ನಿತ್ಯ ಸರಾಸರಿ 75.68 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಇದೇ ಫೆ. 12ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಈ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ವಿತರಿಸಲು ಸರ್ಕಾರ ನಿರ್ಣಯ ತೆಗೆದುಕೊಂಡಿತ್ತು. ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ನಾಲ್ಕು ಸಾರಿಗೆ ನಿಗಮಗಳ ಮೂಲಕ ಕಾರ್ಡ್ ವಿತರಿಸಲು ಮತ್ತು ಯೋಜನೆಯನ್ನು ಸಮನ್ವಯಗೊಳಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ರಾಜ್ಯ ನೋಡಲ್ ಸಂಸ್ಥೆಯಾಗಿ ನೇಮಿಸಲು ತೀರ್ಮಾನಿಸಲಾಗಿತ್ತು.

▶8

2 ತಿಂಗಳ ನಂತರ ಚುನಾವಣೆ

ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳ ಚುನಾವಣೆ ಪ್ರಕ್ರಿಯೆಯನ್ನು ಎರಡು ತಿಂಗಳ ನಂತರ ಆರಂಭಿಸಲಾಗುವುದು. ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಆಡಳಿತವನ್ನು ಈ ವರ್ಷದ ಅಂತ್ಯದ ಒಳಗೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಕ್ಷೇತ್ರ ಪುನರ್ ವಿಂಗಡಣೆ, ಮೀಸಲಾತಿ ಹಂಚಿಕೆಯ ಕಾರಣಗಳಿಂದ ಚುನಾವಣೆ ವಿಳಂಬವಾಗಿದೆ. ಬೆಳಗಾವಿ, ಕಲಬುರಗಿ, ಹಾವೇರಿ ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ಬಾಕಿ ಇದ್ದ ಕ್ಷೇತ್ರ ಪುನರ್‌ವಿಂಗಡಣಾ ಕಾರ್ಯ ಮುಕ್ತಾಯ ಹಂತಕ್ಕೆ ಬಂದಿದೆ. ಮೀಸಲಾತಿ ನಿಗದಿ ಕಾರ್ಯವನ್ನೂ ತ್ವರಿತವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಎರಡು ತಿಂಗಳ ನಂತರ ಚುನಾವಣಾ ಪ್ರಕ್ರಿಯೆ ಆರಂಭಿಸಲು ಆಯೋಗವನ್ನು ಕೋರಲಾಗುವುದು’ ಎಂದರು.

ಮದ್ಯ: ವಯಸ್ಸು ಖಾತ್ರಿಗೆ ಗುರುತುಪತ್ರ



ಪ್ರಿಯಾಂಕ್ ಖರ್ಗೆ

‘ಪಬ್, ಬಾರ್, ಕ್ಲಬ್, ರೆಸ್ಟೋರೆಂಟ್ ಸೇರಿದಂತೆ ಮದ್ಯ ಮಾರಾಟ ಕೇಂದ್ರಗಳಿಗೆ ಬಾಲಕರ ಪ್ರವೇಶ, ಮದ್ಯಪಾನ ತಡೆಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು. ಮದ್ಯ ಪೂರೈಕೆಗೂ ಮೊದಲು ವಯಸ್ಸಿನ ಖಾತ್ರಿಗೆ ಗುರುತಿನ ಚೀಟಿ ಕಡ್ಡಾಯಗೊಳಿಸಿ’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ವಯಸ್ಸು ನಮೂದಿಸಿರುವ ಗುರುತಿನ ಪತ್ರ ತೋರಿಸದಿದ್ದರೆ ಪ್ರವೇಶ ನೀಡಬಾರದು. ಪ್ರವೇಶ ದ್ವಾರದ ಸಿಸಿಟಿವಿ ಕ್ಯಾಮೆರಾ ಸುಸ್ಥಿತಿಯಲ್ಲಿರಬೇಕು. ದೃಶ್ಯಾವಳಿಗಳನ್ನು ಸಂರಕ್ಷಿಸಬೇಕು. ಸಂಸ್ಥೆಗಳು, ನಾಗರಿಕ ಗುಂಪುಗಳೊಂದಿಗೆ ಪೊಲೀಸ್ ಸಮನ್ವಯ ಸಾಧಿಸಬೇಕು. ಅಪ್ರಾಪ್ತ ವಯಸ್ಕರಿಗೆ ಮದ್ಯ, ತಂಬಾಕು ಪೂರೈಸುವ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

▶8

ಜೀವಗೊಂಡ ಜಲಪಾತ

ಪ್ರಜಾವಾಣಿ ಚಿತ್ರ: ಬಸವರಾಜ ಶಿರಸಂಗಿ



ಬೆಳಗಾವಿ ಜಿಲ್ಲೆಯ ಸವದತ್ತಿ ಬಳಿಯ ಯಲ್ಲಮ್ಮನ ಗುಡ್ಡದಲ್ಲಿ ಸೋಮವಾರ ಮಳೆಯಿಂದ ಸೃಷ್ಟಿಯಾದ ಸಿದ್ಧನಕೊಳ್ಳ ಜಲಪಾತ

ಸಂಘರ್ಷ ಶಮನಕ್ಕೆ ಯತ್ನ

ಇರಾನ್ ಮೇಲೆ ದಾಳಿ ಬೇಡ: ಇಸ್ರೇಲ್‌ಗೆ ಟ್ರಂಪ್ ತಾಕೀತು

ದುಬೈ/ವಾಷಿಂಗ್ಟನ್ (ಎಪಿ/ಪಿಟಿಐ): ಇರಾನ್ ಹಾಗೂ ಇಸ್ರೇಲ್ ಪರಸ್ಪರ ತೀವ್ರ ದಾಳಿ–ಪ್ರತಿದಾಳಿ ನಡೆಸಿದ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಪ್ರವೇಶದಿಂದ ಸೋಮವಾರ ಉಭಯ ದೇಶಗಳ ನಡುವಿನ ಉದ್ವಿಗ್ನತೆ ಶಮನಗೊಂಡಿದೆ.

ಇಸ್ರೇಲ್ ಮೇಲೆ ಆಕ್ರಮಣಕಾರಿ ದಾಳಿ ನಡೆಸುವುದನ್ನು ನಿಲ್ಲಿಸುವುದಾಗಿ ಇರಾನ್ ಸೇನೆ ಘೋಷಿಸಿದೆ.

2 ತಿಂಗಳ ಹಿಂದೆ ಅಮೆರಿಕ ಹಾಗೂ ಇರಾನ್‌ನೊಂದಿಗೆ ಕದನ ವಿರಾಮ ಒಪ್ಪಂದ ಏರ್ಪಟ್ಟ ಬಳಿಕ, ಇತ್ತೀಚೆಗೆ ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಮತ್ತೆ ತೀವ್ರಗೊಂಡಿತ್ತು. ಈ ಉದ್ವಿಗ್ನತೆಯು ಪಶ್ಚಿಮ ಏಷ್ಯಾವನ್ನು ಮತ್ತೆ ಪೂರ್ಣ ಪ್ರಮಾಣದ ಯುದ್ಧಕ್ಕೆ ಎಳೆದೊಯ್ಯುವ ಆತಂಕ ಎದುರಾಗಿತ್ತು.

‘ಇಸ್ರೇಲ್ ಅಥವಾ ಅದರ ಮಿತ್ರ ರಾಷ್ಟ್ರಗಳು ದಕ್ಷಿಣ ಲೆಬನಾನ್ ಮೇಲೆ ದಾಳಿ ನಡೆಸಿದರೆ, ಅದಕ್ಕೆ ತಕ್ಕ ಉತ್ತರ ನೀಡಬೇಕಾಗುತ್ತದೆ. ಇದು ಕಠಿಣ ಮತ್ತು ದಮನಕಾರಿಯಾಗಿರುತ್ತದೆ’ ಎಂದು ಇರಾನ್ ಸೇನೆ ಎಚ್ಚರಿಕೆ ನೀಡಿದೆ.

ಇರಾನ್ ಮೇಲೆ ಪ್ರತೀಕಾರ ತೀರಿಸಿ-ಕೊಳ್ಳದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಸಲಹೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

‘ಇರಾನ್‌ನ ಇತ್ತೀಚಿನ ಕ್ಷಿಪಣಿ ದಾಳಿಗೆ ಪ್ರತಿದಾಳಿ ನಡೆಸಬೇಡಿ. ಇದು ಮೂರು ತಿಂಗಳ ಸಂಘರ್ಷವನ್ನು ಕೊನೆಗೊಳಿಸಲು ನಡೆಯುತ್ತಿರುವ ಶಾಂತಿ ಒಪ್ಪಂದದ ಮಾತುಕತೆಗೆ ಅಪಾಯವನ್ನು ಉಂಟುಮಾಡುತ್ತದೆಂದು ಟ್ರಂಪ್ ಅವರು ನೆತನ್ಯಾಹು ಅವರಿಗೆ ಕರೆಮಾಡಿ ತಿಳಿಸಿದ್ದಾರೆ’ ಎಂದು ಅಮೆರಿಕದ ಸುದ್ದಿ ಸಂಸ್ಥೆ ‘ಆಕ್ಸಿಯೋಸ್’ ವರದಿ ಮಾಡಿದೆ.

‘ಸೋಮವಾರ, ಮಂಗಳವಾರ ಅಥವಾ ಬುಧವಾರ ಒಪ್ಪಂದಕ್ಕೆ ಸಹಿ ಹಾಕಲಾಗುವುದು’ ಎಂದು ಟ್ರಂಪ್ ತಿಳಿಸಿದ್ದಾರೆ. ‘ನೀವು ನಿಮ್ಮ ಕ್ಷಿಪಣಿ-ಗಳನ್ನು ಹಾರಿಸಿದ್ದೀರಿ, ಅಷ್ಟೇ ಸಾಕು. ಮತ್ತೆ ಮಾತುಕತೆಗೆ ಕುಳಿತು ಒಪ್ಪಂದ ಮಾಡಿಕೊಳ್ಳಿ’ ಎಂದು ಇಸ್ರೇಲ್ ಮೇಲೆ ಇರಾನ್ ನಡೆಸಿದ ದಾಳಿಯನ್ನು ಉಲ್ಲೇಖಿಸುತ್ತಾ ಅವರು ಹೇಳಿದ್ದಾರೆ.

▶10

ಇರಾನ್ ತೊರೆಯುವಂತೆ ಭಾರತ ಸಲಹೆ

ದುಬೈ (ಪಿಟಿಐ): ದೇಶದ ಪ್ರಜೆಗಳು ಇರಾನ್‌ಗೆ ಪ್ರವಾಸ ಕೈಗೊಳ್ಳಬಾರದು. ಇರಾನ್‌ನಲ್ಲಿರುವ ಭಾರತೀಯರು ಲಭ್ಯವಿರುವ ಸಾರಿಗೆ ಸಂಪನ್ಮೂಲ ಬಳಸಿಕೊಂಡು ಆ ದೇಶವನ್ನು ತೊರೆಯಬೇಕು ಎಂದು ಭಾರತ ಸೋಮವಾರ ಸಲಹೆ ನೀಡಿದೆ. ಈ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚಾದ ಬೆನ್ನಲ್ಲೇ ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಈ ಸಲಹೆಯನ್ನು ನೀಡಿದೆ.

ಅಧಿಕೃತ ಮೂಲಗಳ ಪ್ರಕಾರ, ‘ಫೆಬ್ರುವರಿ 28ರಂದು ಇರಾನ್ ಮೇಲೆ ಅಮೆರಿಕ, ಇಸ್ರೇಲ್ ದಾಳಿ ಆರಂಭಿಸಿದಾಗ, ವಿದ್ಯಾರ್ಥಿಗಳು ಸೇರಿದಂತೆ ಸುಮಾರು 9 ಸಾವಿರ ಭಾರತೀಯರು ಇರಾನ್‌ನಲ್ಲಿದ್ದರು. ಈವರೆಗೆ 1,800 ಮಂದಿ ಭಾರತಕ್ಕೆ ಮರಳಿದ್ದಾರೆ.

COSMOS CO-OP. BANK LTD. MULTISTATE SCHEDULED BANK
Enriching Life!
Cosmo Education Loan
Reasonable ROI
Female Students 8.50%* | Male Students 8.90%*
*T&C (ROI p.a.)
Loan available upto ₹ 1 Crore in India and upto ₹ 1.50 Crore in abroad
080-26619950 / 22421999

20 ಟಿಎಂಸಿ ಸಂಸದರು ಎನ್‌ಡಿಎಗೆ

ವಿಧಾನಸಭೆ ಬಳಿಕ ಸಂಸದೀಯ ಘಟಕದಲ್ಲೂ ಭಿನ್ನಮತ

ಕೋಲ್ಕತ್ತ/ನವದೆಹಲಿ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದಲ್ಲಿ ಉದ್ಭವಿಸಿರುವ ಆಂತರಿಕ ಭಿನ್ನಮತ ಸೋಮವಾರ ಮತ್ತಷ್ಟು ತೀವ್ರಗೊಂಡಿದೆ. ಮುಖ್ಯ ಸಚೇತಕಿ ಕಾಕೋಲಿ ಘೋಷ್ ದಸ್ತಿದಾರ್ ನೇತೃತ್ವದಲ್ಲಿ ಪಕ್ಷದ 20 ಸಂಸದರು ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದು, ಬಿಜೆಪಿ ನೇತೃತ್ವದ ಎನ್‌ಡಿಎಗೆ ಬೆಂಬಲ ಘೋಷಿಸಿದ್ದಾರೆ.

ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಅವರ ಸೋದರ ಸಂಬಂಧಿ, ಸಂಸದ ಅಭಿಷೇಕ್ ಬ್ಯಾನರ್ಜಿ ಅವರು ವಿರೋಧ ಪಕ್ಷಗಳ ಒಕ್ಕೂಟ ‘ಇಂಡಿಯಾ’ ಸಭೆಯಲ್ಲಿ ಭಾಗಿಯಾಗಿರುವಾಗಲೇ ಈ ಬೆಳವಣಿಗೆ ನಡೆದಿದೆ.

ವಿಧಾನಸಭೆ ಚುನಾವಣೆಯ ಸೋಲಿನ ಬಳಿಕ ಶೋಬನ್‌ದೇವ್ ಚಟ್ಟೋಪಾಧ್ಯಾಯ ಅವರನ್ನು ವಿರೋಧ ಪಕ್ಷದ ನಾಯಕನಾಗಿ ನೇಮಿಸುವ ಹೈಕಮಾಂಡ್ ನಿರ್ಧಾರವನ್ನು ಪಕ್ಷದ 58 ಶಾಸಕರು ವಿರೋಧಿಸಿದ್ದರು. ಬಳಿಕ ಅವರು ಪ್ರತ್ಯೇಕ ಬಣ ರಚಿಸಿ, ಉಚ್ಚಾಟಿತ ಶಾಸಕ ರುತಬ್ರತಾ ಬ್ಯಾನರ್ಜಿ ನೇತೃತ್ವದಲ್ಲಿ ವಿಧಾನಸಭೆಯಲ್ಲಿ ಪ್ರಮುಖ ವಿರೋಧ ಪಕ್ಷವಾಗಿ ಮಾನ್ಯತೆ ಪಡೆದಿದ್ದರು. ಇದರ ಬೆನ್ನಲ್ಲೇ ಪಕ್ಷದ ಸಂಸದೀಯ ಘಟಕದಲ್ಲಿಯೂ ಬಂಡಾಯ ಭುಗಿಲೆದ್ದಿದೆ.

▶11

ಎನ್‌ಡಿಎ ಬೆಂಬಲಕ್ಕೂ ಮುನ್ನ ಸಭೆ

ಎನ್‌ಡಿಎ ಬೆಂಬಲಿಸುವ ನಿರ್ಧಾರ ಘೋಷಿಸುವ ಮುನ್ನ, ಅತೃಪ್ತ ಟಿಎಂಸಿ ಸಂಸದರ ಗುಂಪು ನವದೆಹಲಿಯಲ್ಲಿ ಸಭೆ ಸೇರಿ, ಹೊಸ ಬಣ ರಚಿಸುವ ಸಾಧ್ಯತೆ ಸೇರಿದಂತೆ ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚೆ ನಡೆಸಿತ್ತು. ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿರುವ ಸುಖೇಂದು ಶೇಖರ್ ರಾಯ್, ಸಂಸದರಾದ ಪ್ರಸೂನ್ ಬ್ಯಾನರ್ಜಿ, ಶರ್ಮಿಳಾ ಸರ್ಕಾರ್, ಜಗದೀಶ್ ಚಂದ್ರ ಬಾಸುನಿಯಾ, ಕಾಲಿಪಡಾ ಸರೇನ್ ಖೇರ್ವಾಲ್ ಮತ್ತು ಆರುಪ್ ಚಕ್ರವರ್ತಿ ಸಭೆಯಲ್ಲಿ ಭಾಗಿಯಾಗಿದ್ದರು.

▶11

‘ಬಿಜೆಪಿ ವಿರುದ್ಧ ಒಗ್ಗಟ್ಟಿನ ಹೋರಾಟ’

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಲು ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಮುಖ್ಯವೆಂದು ಪ್ರತಿಪಾದಿಸಿದ ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟ, ಬಿಜೆಪಿ ಮತ್ತು ಆರ್‌ಎಸ್‌ಎಸ್ ದಾಳಿಯನ್ನು ಒಗ್ಗೂಡಿ ಎದುರಿಸಲು ಪ್ರತಿಜ್ಞೆ ಮಾಡಿತು. ಕೆಲ ಪಕ್ಷಗಳ ಭಿನ್ನಾಭಿಪ್ರಾಯದ ನಡುವೆಯೇ ಇಲ್ಲಿನ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಸೋಮವಾರ ಕೂಟದ ಸಭೆ ನಡೆಯಿತು. ಅದರಲ್ಲಿ ಭಾಗವಹಿಸಿದ್ದ ನಾಯಕರು, ಕೇಂದ್ರ ಸರ್ಕಾರದ ವಿರುದ್ಧ ಕೈಗೊಳ್ಳಬೇಕಾದ ಹೋರಾಟಗಳ ಕುರಿತು ಚರ್ಚಿಸಿದರು.

ವಿವರ ▶9

ವಿಶ್ವಕಪ್ ಫುಟ್‌ಬಾಲ್ ಏನೇನು ಹೊಸತು?

ಫುಟ್‌ಬಾಲ್ ಪ್ರೇಮಿಗಳು ಬಹುಕಾತರದಿಂದ ಕಾಯುತ್ತಿರುವ 23ನೇ ಫಿಫಾ ವಿಶ್ವಕಪ್ ಟೂರ್ನಿ ಜೂನ್ 11ರಿಂದ ಜುಲೈ 19ರವರೆಗೆ ಅಮೆರಿಕ–ಕೆನಡಾ–ಮೆಕ್ಸಿಕೊ ಜಂಟಿ ಆತಿಥ್ಯದಲ್ಲಿ ನಡೆಯುತ್ತಿದೆ. ಈ ಫುಟ್‌ಬಾಲ್ ವಿಶ್ವಕಪ್‌ನ ಪ್ರಮುಖ ವಿಶೇಷಗಳು ಏನೇನಿವೆ?

ವಿವರ ▶7

ಬೆಳಗಾವಿ, ಕರಾವಳಿ: ಮಳೆಯ ಅಬ್ಬರ

ಬೆಳಗಾವಿ/ಕಾರವಾರ: ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸೋಮವಾರ ಧಾರಾಕಾರ ಮಳೆ ಸುರಿಯಿತು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಚನ್ನಮ್ಮನ ಕಿತ್ತೂರು, ಯರಗಟ್ಟಿ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಸುರಿದ ಮಳೆಯಿಂದ ಹಲವೆಡೆ ಮರ, ವಿದ್ಯುತ್ ಕಂಬಗಳು ಉರುಳಿದವು. ಬೈಕ್, ಆಟೊ, ಟ್ರ್ಯಾಕ್ಟರ್, ಕಾರುಗಳು ತೇಲಿದವು.

ವಿವರ ▶8

ಚಿನಕುರುಳಿ — ಪ್ರಕಾಶ್ ಶೆಟ್ಟಿ



1 ಸ್ಥಾನಕ್ಕೆ ಕಾಂಗ್ರೆಸ್–ಜೆಡಿಎಸ್ ಜಿದ್ದಾಜಿದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ನ ಏಳನೇ ಸ್ಥಾನಕ್ಕೆ ಕಾಂಗ್ರೆಸ್‌ನ ವಿನಯ್ ಕಾರ್ತಿಕ್ ಮತ್ತು ಜೆಡಿಎಸ್‌ನ ಗೋವಿಂದರಾಜ್ ಅವರು ನಾಮಪತ್ರ ಸಲ್ಲಿಸಿರುವುದರಿಂದ ಚುನಾವಣೆ ನಡೆಯುವುದು ಬಹುತೇಕ ಖಚಿತವಾಗಿದೆ.

ವಿಧಾನಸಭೆ ಸದಸ್ಯರಿಂದ ಪರಿಷತ್ತಿಗೆ ಆಯ್ಕೆಯಾಗಬೇಕಾದ ಒಟ್ಟು ಏಳು ಸ್ಥಾನಗಳಿಗೆ ಎಂಟು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮಂಗಳವಾರ (ಜೂ.9) ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಜೂನ್ 11 ಕೊನೆಯ ದಿನಾಂಕವಾಗಿದೆ.

ಶಾಸಕರ ಸಂಖ್ಯಾ ಬಲದ ಆಧಾರದಲ್ಲಿ ಕಾಂಗ್ರೆಸ್ ನಾಲ್ಕು ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಅನಾಯಾಸವಾಗಿ ಗೆಲ್ಲಲಿವೆ. ಉಳಿದ ಒಂದು ಸ್ಥಾನಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳು ಗೆಲ್ಲುವ ಮತಕ್ಕಾಗಿ ಅನ್ಯಮತಗಳ ಶಾಸಕರನ್ನು ಸೆಳೆಯಲು ಇನ್ನಿಲ್ಲದ ಪ್ರಯತ್ನ ನಡೆಸಲೇಬೇಕಾಗುತ್ತದೆ.

ಕಾಂಗ್ರೆಸ್ ಅಭ್ಯರ್ಥಿಯು ಇಬ್ಬರು ಪಕ್ಷೇತರರು ಮತ್ತು ಬಿಜೆಪಿಯ ಉಚ್ಚಾಟಿತ ಶಾಸಕರಾದ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರ ಮತಗಳು ಸಿಗುವ ನಿರೀಕ್ಷೆಯಲ್ಲಿದ್ದಾರೆ. ಒಬ್ಬ ಅಭ್ಯರ್ಥಿಯ ಗೆಲುವಿಗೆ ತಲಾ 28 ಮತಗಳು ಬೇಕಾಗುತ್ತದೆ.

▶9

ಪಕ್ಷಗಳ ಬಲಾ ಬಲ

ಕಾಂಗ್ರೆಸ್	135
ಬಿಜೆಪಿ	62
ಜೆಡಿಎಸ್	18
ಬಿಜೆಪಿ ಉಚ್ಚಾಟಿತರು	3
ಕೆಆರ್‌ಪಿಪಿ (ಜನಾರ್ದನ ರೆಡ್ಡಿ)	1
ಎಸ್‌ಕೆಪಿ (ದರ್ಶನ್ ಪುಟ್ಟಣ್ಣಯ್ಯ)	1
ಪಕ್ಷೇತರ	2
ಖಾಲಿ	2
ಒಟ್ಟು	224

ಎಲ್‌ಪಿಜಿ ಸಿಲಿಂಡರ್ ಬೆಲೆ ಹೆಚ್ಚಳದ ಬೆನ್ನಲ್ಲೇ ಕೇಂದ್ರದಿಂದ ನಿರ್ಧಾರ

ಉಜ್ವಲಾ ಸಿಲಿಂಡರ್ 4ಕ್ಕೆ ಕಡಿತ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ (ಪಿಎಂಯುವೈ) ಫಲಾನುಭವಿಗಳಿಗೆ ಪ್ರತಿವರ್ಷ ನೀಡುತ್ತಿದ್ದ ಸಬ್ಸಿಡಿ ಸಹಿತ ಎಲ್‌ಪಿಜಿ ಸಿಲಿಂಡರ್ ಸಂಖ್ಯೆಯನ್ನು ಕೇಂದ್ರ ಸರ್ಕಾರವು ನಾಲ್ಕಕ್ಕೆ ಇಳಿಕೆ ಮಾಡಿದೆ.

ಪಿಎಂಯುವೈ ಯೋಜನೆಯನ್ನು 2016ರಲ್ಲಿ ಆರಂಭಿಸಲಾಗಿದೆ. ಇದರ ಅಡಿಯಲ್ಲಿ ಬಡ ಕುಟುಂಬಗಳಿಗೆ ಸೇರಿದ ಮಹಿಳೆಯರಿಗೆ ಠೇವಣಿ ಇಲ್ಲದೆ ಎಲ್‌ಪಿಜಿ ಸಂಪರ್ಕ ಒದಗಿಸಲಾಗುತ್ತದೆ. ಆರಂಭದಲ್ಲಿ ಈ ಯೋಜನೆಯ ಅಡಿ ಫಲಾನುಭವಿಗಳಿಗೆ ವರ್ಷವೊಂದರಲ್ಲಿ 14.2 ಕೆ.ಜಿ. ತೂಕದ 12 ಸಿಲಿಂಡರ್‌ಗಳನ್ನು ಸಬ್ಸಿಡಿ ಸಹಿತವಾಗಿ ಒದಗಿಸಲಾಗುತ್ತಿತ್ತು. ಕಳೆದ ವರ್ಷ ಇದನ್ನು ವರ್ಷಕ್ಕೆ ಒಂಬತ್ತು ಸಿಲಿಂಡರ್‌ಗಳಿಗೆ ಇಳಿಸಲಾಯಿತು. ಈಗ ಅದು ನಾಲ್ಕಕ್ಕೆ ತಗ್ಗಿದೆ.



ಹೊಸ ಸಂಖ್ಯೆಯು ಉಜ್ವಲಾ ಯೋಜನೆಯ ಫಲಾನುಭವಿಗಳು ವರ್ಷವೊಂದರಲ್ಲಿ ಬಳಕೆ ಮಾಡುವ ಸಿಲಿಂಡರ್‌ಗಳ ಸರಾಸರಿ ಸಂಖ್ಯೆಗೆ ಅನುಗುಣವಾಗಿ ಇದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಪ್ರವೀಣ್ ಎಂ. ಖನೂಜಾ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಈಗ ಅರ್ಹ ಸಂಖ್ಯೆಯ ಸಿಲಿಂಡರ್‌ಗಳಿಗೆ ₹300 ಸಬ್ಸಿಡಿ ನೀಡಲಾಗುತ್ತಿದೆ. ಸಬ್ಸಿಡಿ ಮೊತ್ತವು ಫಲಾನುಭವಿಗಳಿಗೆ ಖಾತೆಗೆ ನೇರವಾಗಿ ವರ್ಗಾವಣೆ ಆಗುತ್ತದೆ. ಎಲ್‌ಪಿಜಿ ಸಿಲಿಂಡರ್ ಬೆಲೆ ಹೆಚ್ಚಳದ ಬೆನ್ನಲ್ಲೇ ಸಬ್ಸಿಡಿ ಸಹಿತ ಸಿಲಿಂಡರ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ.

ದೆಹಲಿಯಲ್ಲಿ ಈಗ ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹942 ಆಗಿದೆ. ₹300 ಸಬ್ಸಿಡಿ ಮೊತ್ತವನ್ನು ಪರಿಗಣಿಸಿದರೆ ಉಜ್ವಲಾ ಯೋಜನೆಯ ಫಲಾನುಭವಿಗಳು ವರ್ಷವೊಂದರಲ್ಲಿ ನಾಲ್ಕು ಸಿಲಿಂಡರ್‌ಗಳಿಗೆ ₹642 ಪಾವತಿಸಬೇಕಾಗುತ್ತದೆ.

ಮನೆಬಳಕೆಯ ಒಂದು ಎಲ್‌ಪಿಜಿ ಸಿಲಿಂಡರ್ ಪೂರೈಸಲು ಸರ್ಕಾರವು ಈಗ ₹1,600ರಷ್ಟು ವೆಚ್ಚ ಮಾಡುತ್ತಿದೆ. ಈ ಮೊತ್ತವನ್ನು ಪರಿಗಣಿಸಿದಾಗ ಉಜ್ವಲಾ ಯೋಜನೆಯ ಫಲಾನುಭವಿಗಳಿಗೆ ಸಿಲಿಂಡರ್‌ಗೆ ₹1,000ದಷ್ಟು ನೆರವು ನೀಡಿದಂತಾಗುತ್ತದೆ ಎಂದು ಖನೂಜಾ ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್‌ನಲ್ಲಿ ನಷ್ಟ: ಪೆಟ್ರೋಲ್ ಮತ್ತು ಡೀಸೆಲ್‌ಅನ್ನು ದೇಶದಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿರುವುದರ ಪರಿಣಾಮವಾಗಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಕಂಪನಿಗಳಿಗೆ ನಷ್ಟ ಆಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಪೆಟ್ರೋಲ್ ಮಾರಾಟದಿಂದ ಲೀಟರಿಗೆ ₹6ರಷ್ಟು ಹಾಗೂ ಡೀಸೆಲ್ ಮಾರಾಟದಿಂದ ₹30ರಷ್ಟು ನಷ್ಟ ವಾಗುತ್ತಿದೆ ಎಂದು ಹೇಳಿದ್ದಾರೆ.

‘ತೈಲ ಬೆಲೆ ಇಳಿಯಲಿದೆ’

ಕಚ್ಚಾ ತೈಲ ಹಾಗೂ ಅನಿಲದ ಬೆಲೆಯು ಮುಂದಿನ ತಿಂಗಳುಗಳಲ್ಲಿ ಕಡಿಮೆ ಆಗಲಿದೆ ಎಂಬ ವಿಶ್ವಾಸವನ್ನು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ವ್ಯಕ್ತಪಡಿಸಿದ್ದಾರೆ ಎಂದು ರಾಯಿಟರ್ಸ್ ಸುದ್ದಿಸಂಸ್ಥೆ ವರದಿ ಮಾಡಿದೆ. ತೈಲದ ಬೆಲೆಯು ಈಗಿನ ದುಬಾರಿ ಮಟ್ಟದಲ್ಲಿ ಹೆಚ್ಚಿನ ಕಾಲ ಮುಂದುವರಿಯಲು ಸಾಧ್ಯವಿಲ್ಲ, ಬೆಲೆಯು ಮುಂದಿನ ತಿಂಗಳುಗಳಲ್ಲಿ ಕಡಿಮೆ ಆಗುವ ನಿರೀಕ್ಷೆ ಇದೆ. ಆದರೆ ಕೊಲ್ಲಿ ಬಿಕ್ಕಟ್ಟು ಇತರ ಕಡೆಗಳಿಗೂ ವ್ಯಾಪಿಸಿದರೆ ಪರಿಸ್ಥಿತಿ ಕಳವಳಕಾರಿ ಆಗಬಹುದು ಎಂದು ಅವರು ಸಿಎನ್‌ಎನ್–ನ್ಯೂಸ್18 ವಾಹಿನಿಗೆ ಹೇಳಿದ್ದಾರೆ ಎಂಬುದಾಗಿ ರಾಯಿಟರ್ಸ್ ವರದಿ ಉಲ್ಲೇಖಿಸಿದೆ.



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಗುಡುಗು ಸಹಿತ ಮಳೆ ಆಗುವ ಸಾಧ್ಯತೆ ಇದೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಇಂದಿರಾನಗರ: ಹಸಿರು ಹೊದಿಕೆಗೆ ಸಂಕಷ್ಟ?

ಒಎಂಆರ್‌ನಿಂದ ಸಿಲ್ಕ್ ಬೋರ್ಡ್‌ಗೆ ಎಲಿವೇಟೆಡ್ ಕಾರಿಡಾರ್

• ನವೀನ್ ಮಿನೇಜಸ್

ಬೆಂಗಳೂರು: ಹಳೇ ಮದ್ರಾಸ್ ರಸ್ತೆಯಿಂದ (ಒಎಂಆರ್) ಸಿಲ್ಕ್ ಬೋರ್ಡ್‌ಗೆ ಸಂಪರ್ಕಿಸುವ ₹1,300 ಕೋಟಿ ವೆಚ್ಚದ ಉದ್ದೇಶಿತ ಎಲಿವೇಟೆಡ್ ಕಾರಿಡಾರ್, ಮರಗಳ ಸಾಲುಗಳಿಂದ ಕಂಗೊಳಿಸುತ್ತಿರುವ (ವೃಕ್ಷ ಪಥ) ಇಂದಿರಾನಗರದ ಮೂಲಸ್ವರೂಪವನ್ನೇ ಬದಲಾಯಿಸುವ ಸಾಧ್ಯತೆ ಇದೆ.

ಈ ಕಾರಿಡಾರ್ ಸ್ವಾಮಿ ವಿವೇಕಾನಂದ ಮೆಟ್ರೊ ಸ್ಟೇಷನ್, ಇಂದಿರಾನಗರದ 80 ಅಡಿ ರಸ್ತೆ, ಸಿಎಂಎಚ್ ರಸ್ತೆ ಮತ್ತು 100 ಅಡಿ ರಸ್ತೆಯ ಮೂಲಕ ಮಡಿವಾಳದ ಕಡೆಗೆ ಸಾಗಲಿದೆ ಎಂದು ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ತಿಳಿಸಲಾಗಿದೆ.

ಈ ಪ್ರಸ್ತಾವಕ್ಕೆ ಪ್ರತಿಕ್ರಿಯಿಸಿರುವ 'ಐ ಚೇಂಜ್ ಇಂದಿರಾನಗರ' ಗುಂಪಿನ ಸದಸ್ಯರು, 'ಸಂಚಾರ ದಟ್ಟಣೆ ಹೆಚ್ಚಾಗುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದು, 'ಈ ಯೋಜನೆ ಅನುಷ್ಠಾನಕ್ಕೆ ಮೊದಲು ನಾಗರಿಕರ ಸಲಹೆ ಪಡೆಯಬೇಕು. ಇಂದಿರಾನಗರದ 80 ಅಡಿ ರಸ್ತೆ, 100 ಅಡಿ ರಸ್ತೆಯ ಬದಲು ಸುರಂಜನ್‌ದಾಸ್ ರಸ್ತೆಯ ಮೂಲಕ ಅಲೈನ್‌ಮೆಂಟ್ ಸಾಗಬೇಕು' ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಸಿದ್ಧಪಡಿಸಿರುವ ಡಿಪಿಆರ್ ಪ್ರಕಾರ, 11.62 ಕಿ.ಮೀ ಉದ್ದದ ಕಾರಿಡಾರ್, ಬೆಂಗಳೂರು ಪೂರ್ವ ಮತ್ತು ದಕ್ಷಿಣ ಬೆಂಗಳೂರಿನ ಸಂಚಾರವನ್ನು ಸುಗಮಗೊಳಿಸಲಿದೆ. ನಿರ್ಮಾಣ ಹಂತದಲ್ಲಿರುವ ಈಜಿಪುರ ಮೇಲ್ಸೇತುವೆಗೆ ಈ ಯೋಜನೆ ಸಂಪರ್ಕ ಕಲ್ಪಿಸಲಿದೆ. ರಾಜ್ಯ ಸರ್ಕಾರ ಏಪ್ರಿಲ್‌ನಲ್ಲಿ ಅನುಮೋದನೆ ನೀಡಿದ 11 ಹೊಸ ಮೇಲ್ಸೇತುವೆಗಳಲ್ಲಿ ಈ ಎಲಿವೇಟೆಡ್ ಕಾರಿಡಾರ್ ಒಂದಾಗಿದೆ.

ಹೊಸ ಮೇಲ್ಸೇತುವೆ ಅಲೈನ್‌ಮೆಂಟ್ ಇತ್ತೀಚೆಗೆ ನಿರ್ಮಿಸಿರುವ ವೈಟ್‌ಟಾಪಿಂಗ್ ರಸ್ತೆಯಲ್ಲಿ ಸಾಗಲಿದ್ದು, ಇಲ್ಲಿ ಸಾಲುಸಾಲಾಗಿ ಬೃಹತ್ ಮರಗಳು, ನಾಗರಿಕ ಸ್ನೇಹಿ ಪಾದಚಾರಿ ಮಾರ್ಗಗಳಿವೆ. ಈ ಮಾರ್ಗದಲ್ಲಿ ಐಷಾರಾಮಿ ವಸತಿ ಹಾಗೂ ವಾಣಿಜ್ಯ ಪ್ರದೇಶಗಳಿವೆ.

ಈ ಯೋಜನೆಯಲ್ಲಿ ಹಳೇ ಮದ್ರಾಸ್ ರಸ್ತೆಯಲ್ಲಿ ರೋಟರಿ ಮೇಲ್ಸೇತುವೆ ನಿರ್ಮಾಣವಾಗಲಿದ್ದು, ಇಂದಿರಾ ಗೇಟ್ ಮತ್ತು ಹಳೆಯ ಕೆಎಫ್‌ಸಿ ಸಿಗ್ನಲ್‌ನಲ್ಲಿ 90 ಡಿಗ್ರಿಯ ತಿರುವು ಹೊಂದಲಿದೆ. ದೊಮ್ಮಲೂರು ಮೇಲ್ಸೇತುವೆ ಬಳಿ, ಒಂದು ರ‍್ಯಾಂಪ್ ಒಳವರ್ತುಲ ರಸ್ತೆ ಕಡೆಗೆ ಇರಲಿದೆ. ಹೊಸೂರು ರಸ್ತೆಯವರೆಗೂ ಅಲೈನ್‌ಮೆಂಟ್ ಮುಂದುವರಿಯಲಿದೆ. ಸಿಲ್ಕ್ ಬೋರ್ಡ್‌ನಲ್ಲಿ ಡಬಲ್ ಡೆಕರ್ ಮೆಟ್ರೊಗೆ ಈ ಮೇಲ್ಸೇತುವೆ ಸಂಪರ್ಕಿಸುವ ಪ್ರಸ್ತಾವವಿದೆ. 24 ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸುವ ಗುರಿಯನ್ನು ಡಿಪಿಆರ್‌ನಲ್ಲಿ ನೀಡಲಾಗಿದೆ.

ಬಿ–ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ಮಾತನಾಡಿ, 'ಹೊಸೂರು ರಸ್ತೆ ಮತ್ತು ಹಳೇ ಮದ್ರಾಸ್ ರಸ್ತೆ ನಡುವಿನ ವಾಹನ ಸಂಚಾರವನ್ನು ಸುಗಮಗೊಳಿಸುವ ಅಲೈನ್‌ಮೆಂಟ್ ಇದಾಗಿದೆ. ಈಜಿಪುರ ಮೇಲ್ಸೇತುವೆ ಪ್ರತ್ಯೇಕ ಯೋಜನೆಯಾಗಿದೆ. ಇದು ಮುಗಿದ ಮೇಲೆ ಇಂದಿರಾನಗರದಲ್ಲಿ ಹೆಚ್ಚು ಸಂಚಾರವಿರುತ್ತದೆ. ದಟ್ಟಣೆಯನ್ನು ನಿರೀಕ್ಷಿಸಿ, ಎಲಿವೇಟೆಡ್ ಕಾರಿಡಾರ್ ಅನ್ನು ನಿರ್ಮಿಸುತ್ತಿದ್ದೇವೆ' ಎಂದರು.

'ವಾಹನ ದಟ್ಟಣೆ ಇರುವುದು ನಿಜ. ಆದರೆ, ಇಂದಿರಾನಗರದ 80 ಅಡಿ ರಸ್ತೆ ಮತ್ತು ಸಿಎಂಎಚ್ ರಸ್ತೆ ಈಗಾಗಲೇ ಕಿರಿದಾಗಿವೆ. ಹೊಸ ಮೇಲ್ಸೇತುವೆ ನಿರ್ಮಾಣದ ಸಂದರ್ಭದಲ್ಲಿ ನಾಗರಿಕರು ದೂಳು ಮತ್ತು ಮಾಲಿನ್ಯದ ಸಂಕಷ್ಟ ಅನುಭವಿಸಬೇಕಾಗುತ್ತದೆ. ನಿಗದಿತ ಸಮಯದಲ್ಲಿ ಕಾಮಗಾರಿ ಮುಗಿಯುತ್ತದೆ ಎಂಬುದಕ್ಕೆ ಯಾವುದೇ ಖಾತರಿ ಇಲ್ಲ' ಎಂದು ಇಂದಿರಾನಗರದ ನಿವಾಸಿ ಸತೀಶ್ ರಾವ್ ಕಳವಳ ವ್ಯಕ್ತಪಡಿಸಿದರು.

'ಐ ಚೇಂಜ್ ಇಂದಿರಾನಗರ'ದ ಸ್ನೇಹಾ ನಡಿಹಾಲ್, 'ಮೇಲ್ಸೇತುವೆಯ ಅನುಕೂಲ ಮತ್ತು ಅನನುಕೂಲಗಳನ್ನು ನಾವು ಪರಿಶೀಲಿಸುತ್ತಿದ್ದೇವೆ. ಈ ಅಲೈನ್‌ಮೆಂಟ್‌ನ ಪರಿಶೀಲನೆಗಾಗಿ ವೃತ್ತಿಪರ ಸಲಹೆಗಾರರನ್ನು ನೇಮಿಸಿಕೊಳ್ಳಲು ನಾಗರಿಕರು ಹಣ ಸಂಗ್ರಹ ಮಾಡುತ್ತಿದ್ದಾರೆ. ಈ ಯೋಜನೆ ಸಾಕಷ್ಟು ಅನನುಕೂಲ ಮಾಡಲಿದೆ' ಎಂದರು.

ಅಂಕಿ ಅಂಶಗಳು

11.2 ಕಿ.ಮೀ ಮಾರ್ಗ
ಹಳೇ ಮದ್ರಾಸ್ ರಸ್ತೆಯಿಂದ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆವರೆಗೆ ಎಲಿವೇಟೆಡ್ ಕಾರಿಡಾರ್ (ಸ್ವಾಮಿ ವಿವೇಕಾನಂದ ಮೆಟ್ರೊ ಸ್ಟೇಷನ್– ಇಂದಿರಾನಗರ– ಹಳೇ ವಿಮಾನನಿಲ್ದಾಣ ರಸ್ತೆ– ಹೊಸೂರು ರಸ್ತೆ– ಸಿಲ್ಕ್ ಬೋರ್ಡ್ ಜಂಕ್ಷನ್)



₹1,300 ಕೋಟಿ
ಒಟ್ಟು ಅಂದಾಜು ವೆಚ್ಚ
(₹**852** ಕೋಟಿ ಸಿವಿಲ್ ಕಾಮಗಾರಿ
₹**171.38** ಕೋಟಿ ಭೂಸ್ವಾಧೀನ
₹**276.62** ಕೋಟಿ ಜಿಎಸ್‌ಟಿ, ಪಿಎಂಸಿ ಇತ್ಯಾದಿ)

ತಂತ್ರಜ್ಞಾನ: 'ಅಲ್ಟ್ರಾ ಹೈ ಪರ್ಫಾಮನ್ಸ್ ಫೈಬರ್ ರಿ–ಇನ್‌ಫೋರ್ಸ್ಡ್ ಕಾಂಕ್ರೀಟ್'

'ಮಿತಿಮೀರುತ್ತಿದೆ ಮಾದಕ ವಸ್ತು ಹಾವಳಿ'

ಶಾಲೆ– ಕಾಲೇಜುಗಳ ಬಳಿ ಪೊಲೀಸ್ ಕಣ್ಗಾವಲಿಗೆ ಆಗ್ರಹ

ಬೆಂಗಳೂರು: 'ಶಾಲಾ-ಕಾಲೇಜುಗಳ ಬಳಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಪಿಡುಗನ್ನು ಬೇರು ಸಮೇತ ಕಿತ್ತೊಗೆಯಲು ವಿಶೇಷ ದಳ ರಚಿಸಬೇಕು. ಕಡ್ಡಾಯ ಪೊಲೀಸ್ ಗಸ್ತು ವ್ಯವಸ್ಥೆ ಮಾಡಬೇಕು' ಎಂದು ಆಗ್ರಹಿಸಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಸಲ್ಲಿಸಿದ್ದಾರೆ.



ದಿನೇಶ್ ಗೂಳಿಗೌಡ

'ಇತ್ತೀಚಿನ ದಿನಗಳಲ್ಲಿ ಶಾಲಾ-ಕಾಲೇಜುಗಳ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡ್ರಗ್ಸ್ ಮತ್ತು ಗಾಂಜಾದಂತಹ ಮಾದಕ ದ್ರವ್ಯಗಳ ಹಾವಳಿ ಮಿತಿಮೀರುತ್ತಿದೆ. ಹೀಗಾಗಿ, ಈ ಪ್ರದೇಶಗಳಲ್ಲಿ ತಂಬಾಕು ಉತ್ಪನ್ನಗಳನ್ನು ನಿಷೇಧಿಸಬೇಕು. ಅಲ್ಲದೆ, 'ಕೋಟ್ಪಾ' ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಶಾಲಾ-ಕಾಲೇಜುಗಳ ಬಳಿ ದಾಖಲಾಗುವ 'ಕೋಟ್ಪಾ' ಹಾಗೂ ಮಾದಕ ವಸ್ತು ಮಾರಾಟ ಪ್ರಕರಣಗಳನ್ನು ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರತಿ ತಿಂಗಳು ಅಪರಾಧಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಡ್ಡಾಯವಾಗಿ ಪರಿಶೀಲಿಸಬೇಕು. ಮಾದಕ ವಸ್ತು ಮಾರಾಟ ಹಾಗೂ ಸೇವನೆಯ ಜಾಲವನ್ನು ಪತ್ತೆಹಚ್ಚಲು ಜಿಲ್ಲಾ ಮಟ್ಟದಲ್ಲಿ ವಿಶೇಷ ಪೊಲೀಸ್ ದಳ ರಚಿಸಬೇಕು, ವೈದ್ಯಕೀಯ ಪುನರ್ವಸತಿ ಮತ್ತು ಕೌನ್ಸೆಲಿಂಗ್ ವ್ಯವಸ್ಥೆ ಮಾಡಬೇಕು, ಗೋಪ್ಯ ಸಹಾಯವಾಣಿ ಆರಂಭಿಸಬೇಕು, ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

ಪೊಲೀಸರಿಗೆ ಉಚಿತ ಆರೋಗ್ಯ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಶೀರ್ವಾದ್ ಬೈ ಅಲಿಯಾಕ್ಸಿಸ್ ಮತ್ತು ಸ್ಮೈಲ್ ಫೌಂಡೇಷನ್ ಸಹಯೋಗದಲ್ಲಿ ವಿವಿಧ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿಗೆ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು.

ಹೃದ್ರೋಗ, ಶ್ರವಣ ದೋಷ ಹಾಗೂ ನೇತ್ರ ತಪಾಸಣೆ, ವಿವಿಧ ಮಾದರಿಯ ಪರೀಕ್ಷೆಗಳು ಹಾಗೂ ಮಹಿಳಾ ಸಿಬ್ಬಂದಿಗೆ ಸ್ತ್ರೀರೋಗ ತಜ್ಞರೊಂದಿಗೆ ಸಮಾಲೋಚನೆ ವ್ಯವಸ್ಥೆ ಮಾಡಲಾಗಿತ್ತು.

ಆಶೀರ್ವಾದ್ ಬೈ ಅಲಿಯಾಕ್ಸಿಸ್‌ನ ಮುಖ್ಯ ಹಣಕಾಸು ಅಧಿಕಾರಿ ಮತ್ತು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ವಿಭಾಗದ ಮುಖ್ಯಸ್ಥ ಸುದೀಪ್ ಅಗರ್ವಾಲ್ ಮಾತನಾಡಿ, 'ಸಾರ್ವಜನಿಕರ ಸುರಕ್ಷತೆಗಾಗಿ ದಣಿವರಿಯದೆ ದುಡಿಯುವ ಪೊಲೀಸರಿಗೆ ವೈದ್ಯಕೀಯ ತಪಾಸಣೆಯ ಅಗತ್ಯವಿದೆ ಎಂಬ ಉದ್ದೇಶದಿಂದ ಶಿಬಿರ ಆಯೋಜಿಸಲಾಗಿದೆ' ಎಂದರು.

ಸ್ಮೈಲ್ ಫೌಂಡೇಷನ್‌ನ ಸಹ-ಸಂಸ್ಥಾಪಕ ಶಾಂತನು ಮಿಶ್ರಾ, 'ಸಂಸ್ಥೆಯು 27 ರಾಜ್ಯಗಳಲ್ಲಿ 25 ಲಕ್ಷಕ್ಕೂ ಹೆಚ್ಚು ಮಂದಿಗೆ ಸೇವೆ ಸಲ್ಲಿಸುತ್ತಿದೆ' ಎಂದರು.

650 ಸಿಬ್ಬಂದಿ ಪ್ರಯೋಜನ ಪಡೆದರು. ಡಿಸಿಪಿ ಸತೀಶ್ ಕುಮಾರ್ ಮಾತನಾಡಿದರು.

ಭಾರತೀಯ ಕಲಾ ಪ್ರತಿಷ್ಠಾನದಲ್ಲಿ ಅಂತರರಾಷ್ಟ್ರೀಯ ಪತ್ರಾಗಾರ ಸಪ್ತಾಹ

ವಿಶಿಷ್ಟ ಸಂಶೋಧನೆಗಳ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಾಹತುಶಾಹಿ ಅವಧಿಯಲ್ಲಿ ಬ್ರಿಟಿಷರು ಬೇಟೆಯನ್ನು ಪೌರುಷದ ಸಂಕೇತವಾಗಿ ಪ್ರದರ್ಶಿಸುತ್ತಿದ್ದ ಫೋಟೊಗಳು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕೌದಿಯಲ್ಲಿ ಅಕ್ಷರಗಳನ್ನು ಮೂಡಿಸುವ ಬಗೆ, ಸಾಂಪ್ರದಾಯಿಕ ಮುದ್ರಣ ಮಾಧ್ಯಮದ ಮೂಲಕ ರಾಜಕೀಯ–ಸಾಂಸ್ಕೃತಿಕ ಇತಿಹಾಸ ಕಟ್ಟುವ ರೀತಿ, ಅಂಕಿ ಸಂಖ್ಯೆ– ಚಿತ್ರಗಳ ಆಟದ ಮೂಲಕ ಕಾಣಿಸುವ ಕೋಲ್ಕತ್ತ ನಗರದ ಇತಿಹಾಸ...

ಇಂಥ ಅನನ್ಯ ಸಂಶೋಧನೆಗಳ ಫಲಿತಗಳು ನಗರದಲ್ಲಿನ ಭಾರತೀಯ ಕಲಾ ಪ್ರತಿಷ್ಠಾನದಲ್ಲಿ ಸೋಮವಾರದಿಂದ ಅನಾವರಣಗೊಂಡಿವೆ. ಪ್ರತಿಷ್ಠಾನದ ಅನುದಾನದಲ್ಲಿ ಮೂರು ದಶಕದಲ್ಲಿ ವಿವಿಧ ಕಲಾ ಪ್ರಕಾರಗಳಿಗೆ ಸಂಬಂಧಿಸಿ ನಡೆದ ವಿಶಿಷ್ಟ ಸಂಶೋಧನೆಗಳ ಕುರಿತ ಪ್ರದರ್ಶನವು ಅಂತರರಾಷ್ಟ್ರೀಯ ಪತ್ರಾಗಾರ ಸಪ್ತಾಹದ ಅಂಗವಾಗಿ ಏರ್ಪಾಡಾಗಿದ್ದು, ಯುವ ಸಂಶೋಧಕರ ಗಮನ ಸೆಳೆಯಲಾರಂಭಿಸಿದೆ.

ಪುಸ್ತಕ, ಸಿನಿಮಾ, ಸಿ.ಡಿಗಳು, ಆಟಗಳು, ವೆಬ್‌ಸೈಟ್, ಶೈಕ್ಷಣಿಕ ಸಾಮಗ್ರಿಗಳು ಪ್ರತಿಷ್ಠಾನದ ಕಾರ್ಯವೈಖರಿಗೆ ಕನ್ನಡಿ ಹಿಡಿಯುತ್ತವೆ.

ಮಹಾರಾಷ್ಟ್ರದ ಭಕ್ತಿ ಪರಂಪರೆಯ ಹಾಡುಗಾರ್ತಿಯರ ರಚನೆಗಳಲ್ಲಿ ಕಾಣುವ ಭಕ್ತಿ ಮತ್ತು ಮಹಿಳಾಪರ ಧ್ವನಿಗಳ ಕುರಿತು ಸಂಶೋಧಿಸಿ ಸಿದ್ಧಪಡಿಸಿದ ಧ್ವನಿಮುದ್ರಿಕೆಯೂ ಇಲ್ಲಿದೆ.

ಡಿಜಿಟಲೀಕರಣ: ಡಿ.ವಿ.ಡಿಗಳಲ್ಲಿರುವ ಹಳೆಯ ಸಿನಿಮಾಗಳ ಡಿಜಿಟಲೀಕರಣದ ಪ್ರಯತ್ನವನ್ನೂ ಪ್ರತಿಷ್ಠಾನವು ಕೈಗೊಂಡಿದ್ದು, ಅದಕ್ಕಾಗಿ ಡಿ.ವಿ.ಡಿ ದಾಖಲೆಗಳನ್ನು ಓದುವ ಹಳೆಯ ಉಪಕರಣಗಳನ್ನೂ ಬಳಸಲಾಗುತ್ತಿದೆ, ಪ್ರಾತ್ಯಕ್ಷಿಕೆಯನ್ನೂ ನೀಡಲಾಗುತ್ತಿದೆ.

ಕನ್ನಡದಲ್ಲೇ ಹೆಚ್ಚು ಸಂಶೋಧನೆ

'ಪ್ರತಿಷ್ಠಾನವು ವಿವಿಧ ರಾಜ್ಯಗಳ ಸಂಶೋಧಕರಿಗೆ ಅನುದಾನ ನೀಡುತ್ತಿದ್ದು, ಮೂರು ದಶಕದ ಅವಧಿಯಲ್ಲಿ ಕರ್ನಾಟಕದಲ್ಲೇ ಅತಿ ಹೆಚ್ಚು, ಅಂದರೆ 264 ಸಂಶೋಧನೆಗಳು ನಡೆದಿರುವುದು ವಿಶೇಷ. ಅವುಗಳಲ್ಲಿ ಸರ್ಕಾರಿ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಸಂಶೋಧನೆಗಳು ಹೆಚ್ಚು. ಈ ವಿಭಾಗದಲ್ಲಿ ಸರ್ಕಾರಿ ಶಾಲೆಗಳ ಆಸಕ್ತ ಶಿಕ್ಷಕರಿಗೆ ಒಂದು ವರ್ಷ ಅಧ್ಯಯನ–ಸಂಶೋಧನೆ ನಡೆಸಲು ಅವಕಾಶವಿದೆ. ವಿದ್ಯಾರ್ಥಿ ಸ್ನೇಹಿ ಸಂಶೋಧನೆಗಳಿಗೆ ಆದ್ಯತೆ ನೀಡಲಾಗುವುದು' ಎಂದು ಪ್ರಮುಖರಾದ ದೀಪಕ್ 'ಪ್ರಜಾವಾಣಿ'ಗೆ ತಿಳಿಸಿದರು.



ಅಂತರರಾಷ್ಟ್ರೀಯ ಪತ್ರಾಗಾರ ಸಪ್ತಾಹದ ಅಂಗವಾಗಿ ಬೆಂಗಳೂರಿನ ಭಾರತೀಯ ಕಲಾ ಪ್ರತಿಷ್ಠಾನದಲ್ಲಿ ಸೋಮವಾರ ಆರಂಭವಾದ ವಸ್ತುಪ್ರದರ್ಶನದಲ್ಲಿ ಸಿಬ್ಬಂದಿಯೊಬ್ಬರು ಸಾರ್ವಜನಿಕರಿಗೆ ಮಾಹಿತಿ ನೀಡಿದರು

ಪಂಜಾಬ್ ನಿರಾಶ್ರಿತರೂ, ತೆಲಂಗಾಣ ಕೃಷಿಕ ಮಹಿಳೆಯರೂ...

ಸಪ್ತಾಹದ ಅಂಗವಾಗಿ ಪ್ರತಿಷ್ಠಾನವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ತೆಲಂಗಾಣದ ಕೃಷಿಕ ಮಹಿಳೆಯರ ಬದುಕಿನ ಕುರಿತು ಅದಿತಿ ಮಡ್ಡಾಲಿ ನಿರ್ದೇಶಿಸಿರುವ 'ಪನಿ ಪಾಟ ಪೋರಾಟಂ' ತೆಲುಗು ಸಿನಿಮಾ ಪ್ರದರ್ಶನ ಜೂನ್ 11ರಂದು ನಡೆಯಲಿದೆ.

ಪಂಜಾಬ್ ವಿಭಜನೆಯ ನಿರಾಶ್ರಿತರ ಕುರಿತ ಪ್ರಿಯಾಂಕ ಚಾಬ್ರಾ ನಿರ್ದೇಶನದ 'ಇಕ್ರಾರ್ ನಾಮಾ' ಸಿನಿಮಾ 12ರಂದು ಪ್ರದರ್ಶನಗೊಳ್ಳಲಿದೆ.

ಅಂಚಿಗೆ ತಳ್ಳಲ್ಪಟ್ಟ ವಿಷಯಗಳ ದಾಖಲೀಕರಣದ ಕುರಿತ ಸಂವಾದ 12ರಂದು ನಡೆಯಲಿದ್ದು, ಸಲಿಂಗಿಗಳ ಹೋರಾಟದ ದಾಖಲೀಕರಣದಲ್ಲಿ ಸಕ್ರಿಯರಾಗಿರುವ ಮೀರಾ ಬ್ರೂನರ್ ಹಾಗೂ ಕೀಸ್ಟೋನ್ ಫೌಂಡೇಷನ್‌ನ ಫೈಸಲ್ ರೆಹಮಾನ್ ಪಾಲ್ಗೊಳ್ಳಲಿದ್ದಾರೆ.

'ಮೊಬೈಲ್‌ನಿಂದ ದೃಷ್ಟಿದೋಷ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊಬೈಲ್ ಬಳಕೆ ಮತ್ತು ಟಿ.ವಿ ವೀಕ್ಷಣೆ ಅವಧಿ ಹೆಚ್ಚಾಗಿರುವುದರಿಂದ ಮಕ್ಕಳಲ್ಲಿ ದೃಷ್ಟಿದೋಷ ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿವೆ' ಎಂದು ಹುಬ್ಬಳ್ಳಿಯ ನೇತ್ರ ತಜ್ಞ ಡಾ. ವೆಂಕಟರಾಮ ಕಟ್ಟಿ ಕಳವಳ ವ್ಯಕ್ತಪಡಿಸಿದರು.

ಜಯಪ್ರಿಯ ಮೆಡಿಕಲ್ ಫೌಂಡೇಷನ್, ಹಯಗ್ರೀವ ವೈದ್ಯಕೀಯ ಹಾಗೂ ಮಹಿಳಾ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಯಲಹಂಕ ಉಪ ನಗರದಲ್ಲಿ ಆಯೋಜಿಸಿದ್ದ ನೇತ್ರ ಉಚಿತ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

'ಮಕ್ಕಳು ಮೊಬೈಲ್ ಬಳಸುವ ಬಗ್ಗೆ ಪಾಲಕರು ಹೆಚ್ಚಿನ ನಿಗಾ ವಹಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಯುವಜನತೆ ಗಂಭೀರವಾದ ದೃಷ್ಟಿದೋಷ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಶಿಬಿರವನ್ನು ಉದ್ಘಾಟಿಸಿದ ದೂರದರ್ಶನ ಕೇಂದ್ರದ ನಿವೃತ್ತ ನಿರ್ದೇಶಕ ಜಿ.ಎಂ. ಶಿರಹಟ್ಟಿ ಮಾತನಾಡಿ, 'ಕಣ್ಣು ಮಾನವನಿಗೆ ದೊರೆತ ಅಮೂಲ್ಯ ಕೊಡುಗೆ. ಅದರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಸಾರ್ವಜನಿಕರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಇಂತಹ ಶಿಬಿರಗಳು ಸಹಕಾರಿಯಾಗಲಿವೆ' ಎಂದರು.

'ಶಿಬಿರದ ಮೂಲಕ ಈವರೆಗೆ 90 ಸಾವಿರ ಮಂದಿಗೆ ನೇತ್ರ ಚಿಕಿತ್ಸೆ ನೀಡಿದ್ದು, ಶೀಘ್ರದಲ್ಲೇ 1 ಲಕ್ಷ ಗುರಿ ತಲುಪುವ ವಿಶ್ವಾಸವಿದೆ' ಎಂದು ಡಾ. ಹರ್ಷ ಹೇಳಿದರು.

ಡಾ.ಮಧುರಾಮ, ಡಾ.ಸುನಂದಾ, ಡಾ.ಶೇಖರ ಶೆಟ್ಟಿ, ಡಾ.ಕಲಾ ಸೇರಿದಂತೆ ತಜ್ಞ ವೈದ್ಯರ ತಂಡವು ಚಿಕಿತ್ಸೆ ನೀಡಿ ಮಾರ್ಗದರ್ಶನ ಮಾಡಿತು. ಶಿಬಿರದಲ್ಲಿ 200ಕ್ಕೂ ಹೆಚ್ಚು ಮಂದಿಗೆ ಕಣ್ಣಿನ ತಪಾಸಣೆ ನಡೆಸಿ, ಅಗತ್ಯವಿದ್ದವರಿಗೆ ಸ್ಥಳದಲ್ಲೇ ಉಚಿತವಾಗಿ ಕನ್ನಡಕ ವಿತರಿಸಲಾಯಿತು.



ಯಲಹಂಕದಲ್ಲಿ ನಡೆದ ಶಿಬಿರದಲ್ಲಿ ವೈದ್ಯರು ಕಣ್ಣಿನ ತಪಾಸಣೆ ನಡೆಸಿದರು

ಸಂಕ್ಷಿಪ್ತ ಸುದ್ದಿ

ಫಲಿತಾಂಶ 10ರಂದು

ಬೆಂಗಳೂರು: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2026-27ನೇ ಸಾಲಿನ ಪಿಎಚ್.ಡಿ ಪ್ರವೇಶ ಪರೀಕ್ಷೆಯ ಫಲಿತಾಂಶ ಜೂನ್ 10ರಂದು ಪ್ರಕಟಗೊಳ್ಳಲಿದ್ದು, ಜೂನ್ 17ರಿಂದ 19ರವರೆಗೆ ಅಭ್ಯರ್ಥಿಗಳ ಸಂದರ್ಶನ ನಡೆಯಲಿದೆ.

ಜೂನ್ 23ರಂದು ಅರ್ಹತಾ ಪಟ್ಟಿ ಪ್ರಕಟಗೊಳ್ಳಲಿದೆ ಎಂದು ಪರೀಕ್ಷಾಂಗ ಕುಲಸಚಿವ ಪ್ರೊ. ರಮೇಶ ಬಿ.ಕುಡೇನಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘವು 2026ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಶೇ 90ಕ್ಕೂ ಹೆಚ್ಚು ಅಂಕ ಪಡೆದ ತಿಗಳ (ಅಗ್ನಿವಂಶ ಕ್ಷತ್ರಿಯ) ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಜೂನ್ 30ರ ಒಳಗಾಗಿ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ಮೊ. 99453 88967 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪೀಣ್ಯ 2ನೇ ಹಂತ: ಹೆಚ್ಚುತ್ತಿದೆ ಶಬ್ದ ಮಾಲಿನ್ಯ, ಸೊಳ್ಳೆ ಕಾಟ

ಚಿಂದಿ ಗೋದಾಮು: ಜನರಿಗೆ ತೊಂದರೆ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಎಲ್ಲೆಂದರಲ್ಲಿ ಎಸೆದ ಕಬ್ಬಿಣ ತ್ಯಾಜ್ಯದಿಂದ ವಾಹನ ಸವಾರರಿಗೆ ತೊಂದರೆ, ದುರ್ನಾತ ಬೀರುವ ಹಸಿ ಕಸ, ಸೊಳ್ಳೆ, ಚೇಳು, ಹೆಗ್ಗಣ, ಹಾವುಗಳ ಕಾಟ, ಶಬ್ದ ಮಾಲಿನ್ಯ...

–ಪೀಣ್ಯ 2ನೇ ಹಂತದ ಜಿಕೆಡಬ್ಲ್ಯು ಬಡಾವಣೆ, ರಾಜಗೋಪಾಲ್ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದ ಜನರು ಎದುರಿಸುತ್ತಿರುವ ಸಮಸ್ಯೆಗಳಿವು.

'ವಸತಿ ಪ್ರದೇಶದಲ್ಲಿ ಅನಧಿಕೃತವಾಗಿ ತಲೆ ಎತ್ತುತ್ತಿರುವ ಚಿಂದಿ ವಸ್ತುಗಳ ಗೋದಾಮುಗಳು ತೀವ್ರ ಸಮಸ್ಯೆಯನ್ನು ತಂದೊಡ್ಡಿವೆ. ದಪ್ಪನೆಯ ಕಬ್ಬಿಣದ ವಸ್ತುಗಳನ್ನು ಚೂರು ಮಾಡಲು ಜೋರಾಗಿ ಬಡಿಯುವುದರಿಂದ ಶಬ್ದ ಮಾಲಿನ್ಯ ಹೆಚ್ಚಿದೆ' ಎಂಬುದು ಸ್ಥಳೀಯರ ಆರೋಪ.


'ಗೋದಾಮುಗಳಿಂದ ಅಕ್ಕಪಕ್ಕದ ಮನೆಗಳಿಗೆ ಹೆಗ್ಗಣಗಳು, ಸೊಳ್ಳೆ, ಹಾವುಗಳು ಬರುತ್ತಿವೆ. ನಮಗೆ ವಾಸಿಸುವುದೇ ಕಷ್ಟವಾಗಿದೆ. ಗೋದಾಮುಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಮನವಿ ಮಾಡಿದ್ದೇವೆ. ಆದರೆ ಪ್ರಯೋಜನವಾಗಿಲ್ಲ' ಎಂದು ನಿವಾಸಿ ಶಿಲ್ಪಾ ರಾಣಿ ವಿಷಾದಿಸಿದರು.

'ಹಲವೆಡೆ ಇಂಥ ಗೋದಾಮುಗಳನ್ನು ಸ್ಥಾಪಿಸಿರುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಈ ಗೋದಾಮುಗಳನ್ನು ಕೈಗಾರಿಕಾ ಪ್ರದೇಶಕ್ಕೆ ಸ್ಥಳಾಂತರಿಸಬೇಕು' ಎಂದು ನಿವಾಸಿ ಉಮೇಶ್ ರಾವಣ್ ಆಗ್ರಹಿಸಿದರು.

ಸ್ಥಳೀಯ ಬಿಜೆಪಿ ಮುಖಂಡ ಗುರು ನಿಶ್ಚಲ್, 'ಶಾಸಕರ ಆದೇಶದ ಮೇರೆಗೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಲಾಗಿತ್ತು. ಗೋದಾಮುಗಳನ್ನು ಮುಚ್ಚುವಂತೆ ಮಾಲೀಕರಿಗೆ ಅಧಿಕಾರಿಗಳು ಸೂಚಿಸಿದ್ದಾರೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಅನಧಿಕೃತವಾಗಿ ಗೋದಾಮು ಆರಂಭ
- ದುರ್ವಾಸನೆ, ಹೆಗ್ಗಣ, ಸೊಳ್ಳೆ, ಹಾವುಗಳ ಕಾಟ
- ಕೈಗಾರಿಕಾ ಪ್ರದೇಶಕ್ಕೆ ಸ್ಥಳಾಂತರಿಸಲು ಮನವಿ



ಎರಡು ಕಡೆ ಅನಧಿಕೃತ ಗೋದಾಮುಗಳನ್ನು ಮುಚ್ಚಿಸಲಾಗಿದೆ. ಉಳಿದೆಡೆ ನೋಟಿಸ್ ನೀಡಿ ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿರುವೆ

ಎಸ್. ಮುನಿರಾಜು, ಶಾಸಕ



ಅನಧಿಕೃತ ಗೋದಾಮುಗಳಿಗೆ ಭೇಟಿ ನೀಡಿದ ಅಧಿಕಾರಿಗಳು ಮಾಲೀಕರಿಗೆ ನೋಟಿಸ್ ನೀಡಿದರು

KPTCL
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಬೆಂಗಳೂರು ಪ್ರಸರಣ (ಕಾರ್ಯಾಚರಣೆ) ವೃತ್ತ–ದಕ್ಷಿಣ ಅಡಿಯಲ್ಲಿ ಬರುವ ಕೆಳಕಂಡ ಕಾಮಗಾರಿಗಳಿಗಾಗಿ ಬಿಡ್ ವಿಚಾರಣೆ ಸಂಖ್ಯೆಗಳ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(07)/2026–27/1119–20 ದಿನಾಂಕ: 05.06.2026
1.ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/24–25/ ಇ.ಪಿ.ಆರ್–15,ಕರೆ–4,ದಿನಾಂಕ: 01.10.2024ರ ಅನ್ವಯ ಟಿ.ಎಲ್.ಎಂ ಉಪ–ವಿಭಾಗ ಹೂಡಿ ವ್ಯಾಪ್ತಿಯ ಜಗದೀಶ್‌ನಗರದಲ್ಲಿರುವ ಟವರ್ ನಂ.5 ಮತ್ತು ಟವರ್ ನಂ.6 66ಕೆ.ವಿ ಹೆಚ್‌ಎಎಲ್–ಬಿಡಬ್ಲೂಟಿಸಿ–1&2 (ಹೆಚ್‌ಎಎಲ್–ಕೆ.ಬಿ.ಹಳ್ಳಿ & ಹೆಚ್‌ಎಎಲ್–ಭಾಗಮನೆ–ಜಿಟಿಆರ್‌ಇ) ಡಿ/ಸಿ ಲೈನ್‌ನಲ್ಲಿನ ಲಂಭಾಂತರವನ್ನು ಹೆಚ್ಚಿಸಲು 66ಕೆವಿ ಡಿಡಿ +0 ಎನ್‌ಬಿಟಿ ಕವಿಪ್ರನಿನಿ ವಿನ್ಯಾಸದ ಗೋಪುರಗಳನ್ನು ಅಳವಡಿಸುವ ಕಾಮಗಾರಿ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(06)/2026–27/1121–22 ದಿನಾಂಕ: 05.06.2026
2.ಕವಿಪ್ರನಿನಿ/ಅ.ಇಂ/ಟಿಆರ್(ಓಪಿ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/25–26/ ಇ.ಪಿ.ಆರ್–02, ಕರೆ–04, ದಿನಾಂಕ: 17.05.2025ರ ಅನ್ವಯ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಅವಲಹಳ್ಳಿ ಮತ್ತು ಮೆಡಹಳ್ಳಿ (ಯಲ್ಲಮ್ಮ ಲೇಕ್)ಯಲ್ಲಿ 66ಕೆವಿ ಡಿಸಿ ಹೂಡಿ–ಪಾಟರಿರಸ್ತೆ (ಹೊಸಕೋಟೆ–1), ಹೂಡಿ–ಹೊಸಕೋಟೆ (ಹೊಸಕೋಟೆ–2) ಮಾರ್ಗವನ್ನು ಟವರ್ ಸಂಖ್ಯೆ 14 ರಿಂದ ಟವರ್ ಸಂಖ್ಯೆ 18 ಗೆ ಸ್ಥಳಾಂತರಿಸುವ ಕಾಮಗಾರಿ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(09)/2026–27/1123–24 ದಿನಾಂಕ: 05.06.2026
3.ಕವಿಪ್ರನಿನಿ/ಅ.ಇಂ/ಟಿಆರ್(ಓಪಿ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/24–25/ ಇ.ಪಿ.ಆರ್–15, ಕರೆ–6, ದಿನಾಂಕ: 01.10.2024ರ ಅನ್ವಯ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಅನುಗ್ರಹ ಲೇಔಟ್‌ನ ಟವರ್ ನಂ.16 ಮತ್ತು ಟವರ್ ನಂ.22 ನಡುವಿನ ಅಸ್ತಿತ್ವದಲ್ಲಿರುವ 220ಕೆ.ವಿ ಹೂಡಿ–ಮಾಲೂರು ಎಸ್.ಸಿ ಲೈನ್‌ನಲ್ಲಿನ ಲಂಭ ಕುಸಿತವನ್ನು ಹೆಚ್ಚಿಸಲು 3 ನಂ.ಗಳ 220ಕೆವಿ ಡಿಡಿ + 0 ಗದಗ–ಬಾಗಲಕೋಟೆ ವಿನ್ಯಾಸ ಗೋಪುರ, 220ಕೆ.ವಿ ಡಿಬಿ/ಡಿಇ+6 ಎನ್‌ಬಿಟಿ ಎನ್‌ಆರ್‌ಎಸ್–ಲಗ್ಗೆರೆ ವಿನ್ಯಾಸದ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(08)/2026–27/1125–26 ದಿನಾಂಕ: 05.06.2026
4.ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/25–26/ ಇ.ಪಿ.ಆರ್–04, ಕರೆ–6, ದಿನಾಂಕ: 17.05.2025ರ ಅನ್ವಯ ಟಿ.ಎಲ್.ಎಂ ಉಪ–ವಿಭಾಗ ಹೂಡಿ ವ್ಯಾಪ್ತಿಯ ರಾಮಮೂರ್ತಿನಗರದಲ್ಲಿರುವ ಟವರ್ ನಂ.9 ಮತ್ತು 11– 66ಕೆ.ವಿ ಐಟಿಐ–ಹೆಬ್ಬಾಳ–1 & 2 (ಐಟಿಐ–ಬಾಣಸವಾಡಿ ಮತ್ತು ಐಟಿಐ– ಪಾಟರಿ ರಸ್ತೆ) ಡಿ/ಸಿ ಲೈನ್ ನಲ್ಲಿ 66ಕೆ.ವಿ ಡಿಡಿ+3 [9 ಆರ್ಮ್] ಎನ್‌ಬಿಟಿ ಕವಿಪ್ರನಿನಿಯ ಟವರ್ ಮತ್ತು 66ಕೆ.ವಿ ಡಿಡಿ+3 ಎನ್‌ಬಿಟಿ ಕವಿಪ್ರನಿನಿಯ ವಿನ್ಯಾಸ ಟವರ್‌ನ 2 ಸಂಖ್ಯೆಗಳ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(01)/2026–27/1127–28 ದಿನಾಂಕ: 05.06.2026
5.ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/24–25/ ಇ.ಪಿ.ಆರ್–83, ಕರೆ–4, ದಿನಾಂಕ:12.02.2025ರ ಅನ್ವಯ ಟಿ.ಎಲ್.ಎಂ ಉಪ–ವಿಭಾಗ ಹೂಡಿ ವ್ಯಾಪ್ತಿಯ ಸೇಂಟ್‌ಥಾಮಸ್‌ನಗರ, ಹೆಚ್.ಬಿ.ಆರ್ ಲೇಔಟ್, ಸೇಂಟ್‌ಚಾರ್ಲ್ಸ್ ಶಾಲೆಯ ಹತ್ತಿರದಲ್ಲಿ ಹಾದು ಹೋಗಿರುವ 66ಕೆ.ವಿ ಹೆಬ್ಬಾಳ–ಐ.ಟಿ.ಐ ಜೋಡಿ ಮಾರ್ಗ ಟವರ್‌ಸಂಖ್ಯೆ 22 ಮತ್ತು 23ರ ನಡುವೆ 02 ಸಂಖ್ಯೆ ಡಿಡಿ+6 ಎನ್‌ಬಿಟಿ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(12)/2026–27/1129–30 ದಿನಾಂಕ: 05.06.2026
6.ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/24–25/ ಇ.ಪಿ.ಆರ್–15, ಕರೆ–4, ದಿನಾಂಕ: 01.10.2024ರ ಅನ್ವಯ ಟಿ.ಎಲ್.ಎಂ ಉಪ–ವಿಭಾಗ ಹೂಡಿ ವ್ಯಾಪ್ತಿಯ 66ಕೆವಿ ಐಟಿಐ–ಹೆಬ್ಬಾಳ–1&2 (ಹೆಬ್ಬಾಳ–ಎಲ್. ಆರ್.ಬಂಡೆ & ಹೆಬ್ಬಾಳ–ಬಾಣಸವಾಡಿ ಟ್ಯಾಪ್ ಮಾಡಲಾಗಿರುವ ಪಾಟರಿ ರಸ್ತೆ) 66ಕೆ.ವಿ ಡಬಲ್ ಸರ್ಕ್ಯೂಟ್ ಲೈನ್, ಹೆಚ್‌ಎಂಟಿ ಲೇಔಟ್‌ನ ಟವರ್ ನಂ. 06 & 07 ಮಧ್ಯಂತರದಲ್ಲಿ 02 ಸಂಖ್ಯೆಯ 66ಕೆ.ವಿ ಡಿಸಿ+6 ಎನ್‌ಬಿಟಿ ಕವಿಪ್ರನಿನಿ ವಿನ್ಯಾಸದ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(05)/2026–27/1131–32 ದಿನಾಂಕ: 05.06.2026
7.ಕವಿಪ್ರನಿನಿ/ಅ.ಇಂ/ಟಿಆರ್(ಓಪಿ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/25–26/ ಇ.ಪಿ.ಆರ್–03, ಕರೆ–4, ದಿನಾಂಕ: 17.05.2025ರ ಅನ್ವಯ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಗರುಡಚಾರ್‌ಪಾಳ್ಯ ಮಹದೇವಪುರದಲ್ಲಿರುವ ಟವರ್ ನಂ.9 ಮತ್ತು 10 66ಕೆ.ವಿ ಹೂಡಿ–ಬಿಡಬ್ಲ್ಯೂಟಿಸಿ–1&2 ಡಿ/ಸಿ ಲೈನ್ ನ ಮಧ್ಯದಲ್ಲಿ 110ಕೆ.ವಿ ಡಿಡಿ+3 ಎನ್‌ಬಿಟಿ ಕವಿಪ್ರನಿನಿಯ ಟವರ್ ಮತ್ತು 110ಕೆ.ವಿ, ಡಿಡಿ+0, ಎನ್‌ಬಿಟಿ, ಕವಿಪ್ರನಿನಿಯ ಡಿಸೈನ್ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಕ–180(02)/2026–27/1133–34 ದಿನಾಂಕ: 05.06.2026
8.ಕವಿಪ್ರನಿನಿ/ಅ.ಇಂ/ಟಿಆರ್(ಓಪಿ)/ದಕ್ಷಿಣ–ವೃತ್ತ/ಇಇ(ಓ)/ಎಇಇ–1/24–25/ ಇ.ಪಿ.ಆರ್–15, ಕರೆ–4, ದಿನಾಂಕ: 01.10.2024ರ ಅನ್ವಯ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಹಿರಂಡನಹಳ್ಳಿ ಲೇಕ್ ಹತ್ತಿರ ಹಾದು ಹೋಗಿರುವ 66ಕೆವಿ ಡಿಜಿ–3 ಮತ್ತು ಡಿಜಿ–4 ಜೋಡಿ ಮಾರ್ಗದ ಟವರ್ ಸಂಖ್ಯೆ 70 ಮತ್ತು 72ರ ನಡುವೆ 01 ಸಂಖ್ಯೆ ಡಿಎ+03, ಕವಿಪ್ರನಿನಿ, ವಿನ್ಯಾಸದ ಎನ್‌ಬಿಟಿ, ಮಧ್ಯಂತರ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ಗೆ ಹೈಪರ್ ಲಿಂಕ್ **"E Procurement KPTCL"** ನಲ್ಲಿ ಅಥವಾ **https://kppp.karnataka.gov.in** ಗೆ ದಿನಾಂಕ: **08.06.2026 ರಂದು** ಅಥವಾ ತದ ನಂತರ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ(ಕಾರ್ಯಾಚರಣೆ) ವೃತ್ತ–ದಕ್ಷಿಣ, ನೆಲಮಹಡಿ,
ಕವಿಪ್ರನಿನಿ, ಕಚೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

House

Mysore

SALE 60X40 MUDA site 2BHK house behind Sankranthi Circle HEBBAL, MYSORE. 11,500/- sqft. 9900850729

PERSONAL

Change of Name

I, SREECHARAN, residing at Malur Channapatna, Ramanagar-562160 have changed my name as SREECHARAN NARASIMHAPRASAD vide affidavit dated 6/6/2026 before Notary K.S. Bammappanavar, Begalauru

ಕ್ಲಾಸಿಫೈಡ್ಸ್
ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU Approved by AICTE
KCET CODE: E087



Admission Open 2026-27
B.E: ENGINEERING
CSE | ISE | AI&ML
ECE | MECH | CIVIL

VIVEKANANDA COLLEGES

PHARMA	LAW	DEGREE	MANAGEMENT
D.PHARM B.PHARM M. PHARM	3 YEAR LL.B 5 YEAR : B.A | B.COM LL.B	B.A | B.SC | B.ED B.COM : REG. | BDA | LSCM M.COM	BCA BBA MBA

95139 53482
76250 13637
R & D Centers | Excellent Placement | 4.4 Lac Avg. P.A CTC | Skill Lab | Campus Hostel

VKIT Campus
Gudimavu, Kumbalagodu, Off. Mysuru Road, Bengaluru-74.
Email : principal@vitb.ac.in Web : vitb.ac.in

JES Main Campus
Dr. Rajkumar Road, Next to Orion Mall, Rajajinagar, Bengaluru-55
E-mail : admission@vivekanandacolleges.in Web : vivekanandacolleges.in

CHANGE OF NAME
I, **RAMESH KUMAR** and **RAMESH KUMAR KANYALAL,** R/at Apt No. 401, 4th Floor, Gangothri Enclave, 36th A Cross, 11th A Main Road, Head Post Office, Jayanagar, 4th T Block, Bengaluru-560011, declare that the above names pertain to me only & henceforth I shall be known as **RAMESH KUMAR** vide affidavit dated 08-06-2026 before notary Mohammed Hussain K, Bangalore.

I, MALLIKARJUN S/o Late. Basanna R/at Flat No.1, 729/34-1, 2nd Main road, E Block, 2nd Stage Rajajinagar, Bangalore- 560010 have changed my name to MALLIKARJUN.B.DEVAPUR vide affidavit dated: 06/06/2026 Before Notary Onkarappa.N.R Bangalore.

I, MALACHIRA SUNITHA DHIRAJ, residing at House No. 594, 14th Cross, 5th Main, RMV 2nd Stage, New BEL Road, Bangalore 560094, have changed my name from MALACHIRA SUNITHA DHIRAJ to SUNITHA DHIRAJ, vide affidavit dated 04/06/2026, sworn before B.R. SHASHIKALA, Notary, Bangalore.

I, ARIHANT S/o SANTOK CHAND JAIN have changed my name to ARIHANT JAIN vide affidavit dated: 6/6/2026 Before Notary Vanajakshi. R Bangalore.

BUSINESS

Business to Business

Finance

GOLDEN OPPORTUNITY Property Investors Fully Secured Layout Project Best Returns 1year Project. Genuine's Only. 9902678314

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

JOB
To Place your Classified Ads Contact:
9886213331

ಮೂತ್ರಪಿಂಡ ಚಿಕಿತ್ಸೆಗೆ ಮತ್ತೊಂದು ಆಸ್ಪತ್ರೆ

ಸಜ್ಜೆಪಾಳ್ಯದಲ್ಲಿ ನೆಫ್ರೊ–ಯುರಾಲಜಿ ಸಂಸ್ಥೆಯ ಶಾಖೆ ನಿರ್ಮಾಣಕ್ಕೆ ಕ್ರಮ

160 ಸಂಸ್ಥೆ ಸದ್ಯ ಹೊಂದಿರುವ ಹಾಸಿಗೆಗಳು | **200-300** ಸಂಸ್ಥೆಗೆ ಭೇಟಿ ನೀಡುವ ದೈನಂದಿನ ಹೊರರೋಗಿಗಳು | **1.06** ಲಕ್ಷ ಕಳೆದ ವರ್ಷ ಚಿಕಿತ್ಸೆ ಪಡೆದ ಹೊರರೋಗಿಗಳು | **6,345** ಕಳೆದ ವರ್ಷ ಚಿಕಿತ್ಸೆ ಪಡೆದ ಒಳರೋಗಿಗಳು

ಬ್ರ್ಯಾಂಡ್ ಬೆಂಗಳೂರು

• ವರುಣ ಹೆಗಡೆ

ಬೆಂಗಳೂರು: ಮೂತ್ರಪಿಂಡದ (ಕಿಡ್ನಿ) ಕಾಯಿಲೆಗಳು ಮತ್ತು ಮೂತ್ರನಾಳದ ಸಮಸ್ಯೆಗಳ ಚಿಕಿತ್ಸೆಗೆ ಇಲ್ಲಿನ ನೆಫ್ರೊ-ಯುರಾಲಜಿ ಸಂಸ್ಥೆಗೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ರೋಗಿಗಳ ದಟ್ಟಣೆ ನಿರ್ವಹಣೆಗೆ ನಗರದಲ್ಲಿ ಸಂಸ್ಥೆಯ ಶಾಖೆ ತಲೆಯೆತ್ತಲಿದೆ.

ಈಗಾಗಲೇ ರಾಜ್ಯ ಸರ್ಕಾರ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ ಕ್ರಮಕೈಗೊಂಡಿದ್ದು, ಯಶವಂತಪುರ ಹೋಬಳಿಯ ಸಜ್ಜೆಪಾಳ್ಯದಲ್ಲಿ ಸ್ಥಳ ಗುರುತಿಸಿದೆ. ಇದಕ್ಕೆ ಸಚಿವ ಸಂಪುಟದ ಅನುಮೋದನೆಯೂ ದೊರೆತಿದ್ದು, ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗುತ್ತಿದೆ. 500 ಹಾಸಿಗೆಗಳ ಕಟ್ಟಡವು ಒಟ್ಟು ಐದು ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಲಿದೆ. ವೈದ್ಯಕೀಯ ಶಿಕ್ಷಣ ಇಲಾಖೆಗೆ ಸೇರಿದ ಮೂರು ಎಕರೆ ಪ್ರದೇಶದ ಜತೆಗೆ, ಇದಕ್ಕೆ ಹೊಂದಿಕೊಂಡಿರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಎರಡು ಎಕರೆ ಪ್ರದೇಶವನ್ನು ಆಸ್ಪತ್ರೆಯ ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುತ್ತದೆ.

ಈ ಪ್ರದೇಶದಲ್ಲಿ ಶಾಖೆ ನಿರ್ಮಾಣದಿಂದ, ಬೆಂಗಳೂರು ಉತ್ತರದಲ್ಲಿ ವೈದ್ಯಕೀಯ ಸೇವೆ ವಿಸ್ತರಣೆಯಾಗಲಿದೆ. ಬೆಂಗಳೂರಿನ ಆಚೆಯಿಂದಲೂ, ತುಮಕೂರು ಸೇರಿ ವಿವಿಧೆಡೆಯಿಂದ ಬರುವ ತುರ್ತು ಪ್ರಕರಣಗಳ ನಿರ್ವಹಣೆಗೆ ಈ ಶಾಖೆ ಸಹಕಾರಿಯಾಗಲಿದೆ.



ನೆಫ್ರೊ–ಯುರಾಲಜಿ ಸಂಸ್ಥೆಯ ಹೊರನೋಟ


ಹಾಸಿಗೆ ಹೆಚ್ಚಳ: ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಸಂಸ್ಥೆಯು, 2007ರಿಂದ ಕಾರ್ಯನಿರ್ವಹಿಸುತ್ತಿದೆ. ಇದು ಸ್ವಾಯತ್ತ ಸಂಸ್ಥೆಯಾಗಿದ್ದು, 160 ಹಾಸಿಗೆಗಳನ್ನು ಒಳಗೊಂಡಿದೆ.

ಡಯಾಲಿಸಿಸ್ ಸೇರಿ ವಿವಿಧ ಚಿಕಿತ್ಸೆಗೆ ರಾಜ್ಯದ ವಿವಿಧೆಡೆಯಿಂದ ರೋಗಿಗಳು ಇಲ್ಲಿಗೆ ಬರುತ್ತಿದ್ದು, ಪ್ರತಿನಿತ್ಯ 200ಕ್ಕೂ ಹೆಚ್ಚು ರೋಗಿಗಳಿಗೆ ಡಯಾಲಿಸಿಸ್ ಮಾಡಲಾಗುತ್ತಿದೆ.

ಸಂಸ್ಥೆಯ ಆವರಣದಲ್ಲಿ ಅನೆಕ್ಸ್ ಕಟ್ಟಡ ತಲೆಯೆತ್ತಿದ್ದು, ನೂತನ ಕಟ್ಟಡವು 30 ಹಾಸಿಗೆಗಳ ಡಯಾಲಿಸಿಸ್ ಘಟಕ ಮತ್ತು 20 ಹಾಸಿಗೆಗಳ ತೀವ್ರ ನಿಗಾ ಘಟಕವನ್ನೂ ಒಳಗೊಂಡಿದೆ. ಇದೂ ಸಹ ಶೀಘ್ರದಲ್ಲಿಯೇ ಕಾರ್ಯಾರಂಭಿಸಲಿದ್ದು, ಸಂಸ್ಥೆಯ ಒಟ್ಟು ಹಾಸಿಗೆಗಳ ಸಂಖ್ಯೆ 290ಕ್ಕೆ ಏರಿಕೆಯಾಗಲಿದೆ.

> **ಮೂತ್ರಪಿಂಡ ಮತ್ತು ಮೂತ್ರನಾಳದ ಸಮಸ್ಯೆಗಳಿಗೆ ಚಿಕಿತ್ಸೆ ವಿಸ್ತರಿಸಬೇಕೆಂಬ ಬೇಡಿಕೆ ಹಲವು ವರ್ಷಗಳಿಂದ ಇದೆ. ಆ ನಿಟ್ಟಿನಲ್ಲಿ ಶಾಖೆ ವಿಸ್ತರಣೆಗೆ ರಾಜ್ಯ ಸರ್ಕಾರ ಕ್ರಮಕೈಗೊಂಡಿದೆ**
> **ಡಾ.ಶಿವಲಿಂಗಯ್ಯ ಎಂ.,** ನೆಫ್ರೊ-ಯುರಾಲಜಿ ಸಂಸ್ಥೆ ನಿರ್ದೇಶಕ

‘ಮೂತ್ರಪಿಂಡಗಳು ರಕ್ತವನ್ನು ಶುದ್ಧೀಕರಿಸುವ, ತ್ಯಾಜ್ಯಗಳನ್ನು ಮೂತ್ರದ ಮೂಲಕ ಹೊರಹಾಕುವ ಮತ್ತು ದ್ರವಗಳ ಸಮತೋಲನವನ್ನು ಕಾಪಾಡುವ ಪ್ರಮುಖ ಕೆಲಸ ಮಾಡುತ್ತವೆ. ಮಧುಮೇಹ ಮತ್ತು ರಕ್ತದೊತ್ತಡವೇ ಮೂತ್ರಪಿಂಡ ಸಂಬಂಧಿ ಸಮಸ್ಯೆಗಳಿಗೆ ಪ್ರಮುಖ ಕಾರಣಗಳಾಗಿವೆ. ಮೂತ್ರಪಿಂಡ ಸರಿಯಾಗಿ ಕಾರ್ಯನಿರ್ವಹಿಸಬೇಕಾದರೆ ನಮ್ಮ ಆಹಾರ ಪದ್ಧತಿ ಮುಖ್ಯವಾಗುತ್ತದೆ. ಮೂತ್ರಪಿಂಡದ ಆರೋಗ್ಯ ಕಡೆಗಣಿಸಿ, ಹೆಚ್ಚಿನವರು ಗಂಭೀರ ಸಮಸ್ಯೆ ತಂದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆ ದಾಖಲಾತಿ ಹೆಚ್ಚಳವಾಗಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ. ಶಿವಲಿಂಗಯ್ಯ ಎಂ. ತಿಳಿಸಿದರು.



ರೋಗಿಗಳ ಸಂಖ್ಯೆ ಹೆಚ್ಚಳ

ನೆಫ್ರೊ-ಯುರಾಲಜಿ ಸಂಸ್ಥೆಗೆ ರಾಜ್ಯದ ವಿವಿಧೆಡೆಯಿಂದ ಶಿಫಾರಸು ಆಧಾರದಲ್ಲಿಯೂ ರೋಗಿಗಳು ಬರುತ್ತಿದ್ದಾರೆ. ಕಳೆದ ಐದು ವರ್ಷಗಳಲ್ಲಿ 4.5 ಲಕ್ಷಕ್ಕೂ ಅಧಿಕ ಮಂದಿ ಹೊರರೋಗಿಗಳಾಗಿ, 35 ಸಾವಿರಕ್ಕೂ ಅಧಿಕ ಮಂದಿ ಒಳರೋಗಿಗಳಾಗಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. 14 ಸಾವಿರಕ್ಕೂ ಅಧಿಕ ಸಂಕೀರ್ಣ (ಪ್ರಮುಖ) ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದೆ. 30,000ಕ್ಕೂ ಅಧಿಕ ಮಂದಿಗೆ ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ.


ನಗರದ ಐಐಎಂಬಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅರ್ನಬ್ ಮುಖರ್ಜಿ, ಸುಂದರಿ ರವೀಂದ್ರನ್, ರಿತ್ವಿಕ್ ರಂಜನಂ ಪಾಂಡೆ, ಡಾ. ಆಶೂ ಗ್ರೋವರ್, ಹೆಲ್ತ್ ಸಿಸ್ಟಮ್ಸ್ ಗ್ಲೋಬಲ್ ಪ್ರತಿನಿಧಿ ಪ್ರಗತಿ ಹೆಬ್ಬಾರ್, ಜಿಐಜಿಎಚ್ ನಿರ್ದೇಶಕ ವಿವೇಕಾನಂದ ಝಾ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಮಾಹಿತಿ ಕೊರತೆ: ತಪ್ಪು ನಿರ್ಧಾರಗಳಿಗೆ ದಾರಿ’

ಪ್ರಜಾವಾಣಿ ವಾರ್ತೆ

‘ಇಪಿಎಚ್‌ಪಿ–2026’ ಸಮ್ಮೇಳನ

ಬೆಂಗಳೂರು: ವಿಶ್ವಾಸಯೋಗ್ಯವಾದ ಮತ್ತು ತಳಮಟ್ಟದ ವಾಸ್ತವ ಸಂಗತಿಗಳನ್ನು ಆಧರಿಸಿ ರೂಪಿಸಿದ ಸಾರ್ವಜನಿಕ ಆರೋಗ್ಯ ನೀತಿಗಳು ಹೆಚ್ಚು ಪರಿಣಾಮಕಾರಿಯಾಗುತ್ತವೆ. ಮಾಹಿತಿ ಕೊರತೆ ಅಥವಾ ಅಂಕಿ ಅಂಶಗಳ ತಪ್ಪು ವ್ಯಾಖ್ಯಾನಗಳು ತಪ್ಪು ನೀತಿಗಳಿಗೆ ದಾರಿಯಾಗುವ ಅಪಾಯವಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ ಹೇಳಿದರು.

ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ (ಐಪಿಎಚ್), ದಿ ಜಾರ್ಜ್ ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಹೆಲ್ತ್ ಇಂಡಿಯಾ (ಜಿಐಜಿಎಚ್), ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಡಿಸಿನ್ ಆಂಟ್‌ವರ್ಪ್ (ಐಟಿಎಂ) ಸಹಭಾಗಿತ್ವದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ (ಐಐಎಂಬಿ) ಆಯೋಜಿಸಿರುವ ಐದನೇ ಆವೃತ್ತಿಯ ‘ಇಪಿಎಚ್‌ಪಿ–2026’ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಪರಿಣಾಮಕಾರಿ ಸಾರ್ವಜನಿಕ ನೀತಿ ರೂಪಿಸುವಲ್ಲಿ ಅಂಕಿ ಅಂಶಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ನೀತಿ ನಿರೂಪಣೆಯಲ್ಲಿ ಎಷ್ಟು ವಾಸ್ತವ ಸಂಗತಿಗಳು ಬಳಕೆಯಾಗುತ್ತವೆಯೋ, ಅಷ್ಟು ಅದು ಸಹಕಾರಿಯಾಗುತ್ತದೆ ಮತ್ತು ಜಾರಿಯಲ್ಲಿರುವ ನೀತಿಗಳನ್ನು ಮತ್ತಷ್ಟು ಸುಧಾರಿಸುತ್ತದೆ ಎಂದು ಅವರು ಹೇಳಿದರು.

ಆರೋಗ್ಯ ಇಲಾಖೆಯಲ್ಲಿನ ತಮ್ಮ ಅನುಭವವನ್ನು ಹಂಚಿಕೊಂಡ ಅವರು, ‘ನಾವು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಸರಿಯಾದ ಅಂಕಿ ಅಂಶ ಬಳಸದಿದ್ದರೆ, ತಪ್ಪು ನೀತಿ ಆಯ್ಕೆಗಳನ್ನು ಮಾಡುವ ಸಾಧ್ಯತೆ ಇರುತ್ತದೆ. ಸಂಶೋಧನೆ ಮತ್ತು ನೀತಿ ನಿರೂಪಣೆ ನಡುವಿನ ಬಲವಾದ ಪಾಲುದಾರಿಕೆಯು ಸರ್ಕಾರಗಳು ಹೆಚ್ಚು ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ಸಾರ್ವಜನಿಕ ಆರೋಗ್ಯ ಫಲಿತಾಂಶಗಳನ್ನು ಸುಧಾರಿಸಲು ನೆರವಾಗಬಹುದು’ ಎಂದು ಅಭಿಪ್ರಾಯಪಟ್ಟರು.

ವಿಜ್ಞಾನಿ ಡಾ. ಆಶೂ ಗ್ರೋವರ್ ಮಾತನಾಡಿ, ‘ವೈಜ್ಞಾನಿಕ ಸಂಶೋಧನೆಗಳಿಂದ ದೊರೆಯುವ ನಿಖರ ಮಾಹಿತಿಗಳು ನಿತ್ಯದ ವೈದ್ಯಕೀಯ ಸೇವೆ ಹಾಗೂ ನೀತಿಗಳಾಗಿ ರೂಪುಗೊಳ್ಳಲು ಸರಾಸರಿ 17 ವರ್ಷ ಬೇಕಾಗುತ್ತದೆ’ ಎಂದು ಹೇಳಿದರು.

ಪರಿಸರ ದಿನ: ಜಾಗೃತಿ ಅಭಿಯಾನ


ಪಿ.ಕೆ.ಎಸ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಶಾಲಾ ಆವರಣದಲ್ಲಿ ಸಸಿಗಳನ್ನು ನೆಟ್ಟರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಪಿ.ಕೆ.ಶೆಟ್ಟಿ ಪಾಲ್ಗೊಂಡರು

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನ ಅರ್ಕಾವತಿ ಬಡಾವಣೆಯಲ್ಲಿರುವ ಪಿ.ಕೆ.ಎಸ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

ಪರಿಸರ ಸಂರಕ್ಷಣೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಶಾಲೆಯ ಮಕ್ಕಳು ವಿವಿಧ ತಂಡಗಳನ್ನು ರಚಿಸಿಕೊಂಡು, ಸಮೀಕ್ಷಾ ಕಾರ್ಯ ಕೈಗೊಂಡರು.

ಜಕ್ಕೂರು ವ್ಯಾಪ್ತಿಯ 120ಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿದ ವಿದ್ಯಾರ್ಥಿಗಳು, ತ್ಯಾಜ್ಯ ವಿಂಗಡಣೆ, ಪ್ಲಾಸ್ಟಿಕ್ ಮರುಬಳಕೆ, ನೀರಿನ ಹಾಗೂ ಇಂಧನದ ಮಿತವ್ಯಯ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಹಾಗೂ ಸೌರಶಕ್ತಿಯ ಬಳಕೆ ಕುರಿತು ಜಾಗೃತಿ ಮೂಡಿಸಿದರು.

ವಿದ್ಯಾರ್ಥಿಗಳ ಪ್ರಯತ್ನಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು.

ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಸಸಿನೆಟ್ಟು ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡಿದರು.

‘ಎಚ್–1ಬಿ ವೀಸಾ ಶುಲ್ಕ ಹೆಚ್ಚಳ ಕಾನೂನುಬಾಹಿರ’

ನ್ಯೂಯಾರ್ಕ್ (ಎಎಫ್‌ಪಿ): ಎಚ್–1ಬಿ ವೀಸಾಕ್ಕಾಗಿ 1ಲಕ್ಷ ಡಾಲರ್ ಶುಲ್ಕ ಪಾವತಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿದ್ದ ಆದೇಶವನ್ನು ಅಮೆರಿಕದ ಫೆಡರಲ್ ನ್ಯಾಯಾಲಯವು ರದ್ದುಗೊಳಿಸಿದೆ.


ಟ್ರಂಪ್

‘ಹೆಚ್ಚುವರಿ ಶುಲ್ಕ ವಿಧಿಸುವ ನಿರ್ಧಾರವನ್ನು ಸಂಸತ್ತು ಅಂಗೀಕರಿಸಿಲ್ಲ’ ಎಂದು ಬಾಸ್ಟನ್‌ನ ಫೆಡರಲ್ ನ್ಯಾಯಾಧೀಶ ಲಿಯೊ ಸಾರೊಕಿನ್ ಸೋಮವಾರ ತೀರ್ಪು ನೀಡಿದರು.

ಎಚ್–1ಬಿ ವೀಸಾ ಶುಲ್ಕವನ್ನು 1ಲಕ್ಷ ಡಾಲರ್‌ಗೆ ಹೆಚ್ಚಿಸಿ ಟ್ರಂಪ್ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ಅದೇಶಿಸಿದ್ದರು. ಇದನ್ನು ಪ್ರಶ್ನಿಸಿ 20 ಡೆಮಾಕ್ರಟಿಕ್ ಸ್ಟೇಟ್ ಅಟಾರ್ನಿ ಜನರಲ್‌ಗಳು ಅರ್ಜಿ ಸಲ್ಲಿಸಿದ್ದರು.

‘ಕೆಲವು ವಿದೇಶಿ ಪ್ರಜೆಗಳ ಪ್ರವೇಶವನ್ನು ನಿರ್ಬಂಧಿಸಲು ಫೆಡರಲ್ ವಲಸೆ ಕಾನೂನಿನ ಅಡಿಯಲ್ಲಿ ವೀಸಾಕ್ಕೆ ಹೆಚ್ಚುವರಿ ಶುಲ್ಕ ವಿಧಿಸುವ ಕಾನೂನುಬದ್ಧ ಅಧಿಕಾರ ಅಧ್ಯಕ್ಷರಿಗೆ ಇದೆ’ ಎಂಬ ಸರ್ಕಾರಿ ಪರ ವಕೀಲರ ವಾದವನ್ನು ನ್ಯಾಯಾಧೀಶರು ಅಲ್ಲಗಳೆದರು.

‘ಶಾಲೆ: ಮೂಲಸೌಕರ್ಯ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಂಭ್ರಮಾಚರಣೆಯನ್ನು ನಿಲ್ಲಿಸಿ, ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡುವ ಮೂಲಕ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸಬೇಕು’ ಎಂದು ಎಎಪಿ ಆಗ್ರಹಿಸಿದೆ.

‘ಶೈಕ್ಷಣಿಕ ವರ್ಷ ಆರಂಭವಾಗಿದ್ದರೂ ಶಾಲೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಕೊಠಡಿ, ಶೌಚಾಲಯ, ಬೆಂಚ್-ಡೆಸ್ಕ್‌ಗಳಿಲ್ಲ. ನಲಿ-ಕಲಿ ಪದ್ಧತಿಯಿಂದ ದ್ವಿಭಾಷಾ ತರಗತಿಗಳ ವ್ಯವಸ್ಥೆಗೆ ಬದಲಾವಣೆ ಮಾಡಿರುವುದಾಗಿ ಸರ್ಕಾರ ಹೇಳಿದ್ದರೂ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿ ಸಂಪೂರ್ಣ ವಿಫಲವಾಗಿದೆ’ ಎಂದು ಎಎಪಿಯ ರಾಜ್ಯ ಖಜಾಂಚಿ ಪ್ರಕಾಶ್ ನೆಡುಂಗಡಿ ಆರೋಪಿಸಿದ್ದಾರೆ.

‘ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ನೆಲದ ಮೇಲೆಯೇ ಕುಳಿತು ಪಾಠ ಕೇಳುವ ಪರಿಸ್ಥಿತಿ ಇದ್ದು, ಇಲಾಖೆಯ ನಿರ್ಲಕ್ಷ್ಯಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಶಾಲೆಗಳು ದಾನಿಗಳ ಬಳಿ ನೆರವು ಕೇಳುವ ಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರ ನಾಚಿಕೆ ಪಡಬೇಕಾದ ಸಂಗತಿ. ಶಾಲೆಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಅನುದಾನ ಎಲ್ಲಿಗೆ ಹೋಗುತ್ತಿದೆ ಎಂಬ ಪ್ರಶ್ನೆಗೆ ಉತ್ತರ ನೀಡಬೇಕು’ ಎಂದಿದ್ದಾರೆ.

‘ಮೂಲಸೌಕರ್ಯಗಳ ಕೊರತೆಯಿರುವ ಶಾಲೆಗಳ ಜಿಲ್ಲಾವಾರು ಪಟ್ಟಿಯನ್ನು ಕೂಡಲೇ ಪ್ರಕಟಿಸಬೇಕು. ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನ ಘೋಷಿಸಬೇಕು. ನಿರ್ಲಕ್ಷ್ಯ ವಹಿಸಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

ಜರ್ಮನಿಗೆ ಜಿಟಿಟಿಸಿಯ ಐವರು ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ (ಜಿಟಿಟಿಸಿ) ಐವರು ವಿದ್ಯಾರ್ಥಿಗಳನ್ನು ಜರ್ಮನಿಯ ಡಸೆಲ್ಡಾರ್ಫ್‌ನ ಪ್ರಮುಖ ಸಾರ್ವಜನಿಕ ಸಾರಿಗೆ ಸಂಸ್ಥೆ ರೈನ್‌ಬಾನ್ ಎಜಿ ಉದ್ಯೋಗಕ್ಕೆ ಆಯ್ಕೆ ಮಾಡಿಕೊಂಡಿದೆ.

ಇದೇ ವರ್ಷದ ಸೆಪ್ಟೆಂಬರ್‌ನಿಂದ ಆರಂಭವಾಗುವ ಜರ್ಮನ್ ಅಸ್‌ಬಿಲ್ಡಿಂಗ್ (ದ್ವಿಮುಖ ವೃತ್ತಿಪರ ತರಬೇತಿ) ಕಾರ್ಯಕ್ರಮದಡಿ ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು, ಈ ಕುರಿತು ರೈನ್‌ಬಾನ್ ಒಪ್ಪಿಗೆ ಪತ್ರಗಳನ್ನು ವೈದ್ಯಕೀಯ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ಅಭ್ಯರ್ಥಿಗಳಿಗೆ ಹಸ್ತಾಂತರಿಸಿದರು.

ಜಾಗತಿಕವಾಗಿ ಮಾನ್ಯತೆ ಪಡೆದ ಜರ್ಮನ್ ವೃತ್ತಿಪರ ಶಿಕ್ಷಣ ಪದ್ಧತಿಯಾದ ಅಸ್‌ಬಿಲ್ಡಿಂಗ್, ರಚನಾತ್ಮಕ ತರಗತಿ ಬೋಧನೆ ಮತ್ತು ಪ್ರಾಯೋಗಿಕ ಕಾರ್ಯಸ್ಥಳ ತರಬೇತಿಯನ್ನು ಒದಗಿಸುತ್ತದೆ. ವಿದ್ಯಾರ್ಥಿಗಳು ಡಸೆಲ್ಡಾರ್ಫ್‌ನ ರೈನ್‌ಬಾನ್ ಎಜಿಯಲ್ಲಿ ತರಬೇತಿ ಪಡೆದು, ವಿಶ್ವ ದರ್ಜೆಯ ಕೈಗಾರಿಕಾ ಅನುಭವ ಪಡೆಯಲಿದ್ದಾರೆ.

ಕೌಶಲಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸುಬೋಧ್ ಯಾದವ್ ಮಾತನಾಡಿ, ‘ರೈನ್‌ಬಾನ್ ಎಜಿ ಸಹಯೋಗ ಕರ್ನಾಟಕದ ಯುವಜನರಿಗೆ ಜಾಗತಿಕ ಉದ್ಯೋಗ ಮಾರ್ಗಗಳನ್ನು ತೆರೆಯುತ್ತದೆ. ರಾಜ್ಯದಾದ್ಯಂತ ಇನ್ನಷ್ಟು ಅಭ್ಯರ್ಥಿಗಳಿಗೆ ಈ ಪ್ರಯೋಜನ ತಲುಪಿಸಲಾಗುವುದು’ ಎಂದು ಹೇಳಿದರು.

ಜಿಟಿಟಿಸಿ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಪೂಜಾರಿ ಇದ್ದರು.

ನಗರದಲ್ಲಿ ಇಂದು

ರಾಜ್ಯಮಟ್ಟದ ಕಾನೂನು ಜಾಗೃತಿ ಕಾರ್ಯಾಗಾರ: ಉದ್ಘಾಟನೆ: ನ್ಯಾ.ಬಿ.ವೀರಪ್ಪ, ಎಚ್.ಶಶಿಧರ ಶೆಟ್ಟಿ, ಸಚಿನ್ ಘೋರ್ಪಡೆ, ಅತಿಥಿ: ಖುಷಿ ಕುಶಾಲಪ್ಪ, ಅಧ್ಯಕ್ಷತೆ: ಮೋಹನ್ ರಾವ್ ನಲವಡೆ, ಆಯೋಜನೆ: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆ, ಸ್ಥಳ: ಎನ್‌ಜಿಒ ಸಭಾಂಗಣ, ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಪಾರ್ಕ್, ಬೆಳಿಗ್ಗೆ 10

ಶೋಷಿತ ಸಮುದಾಯಗಳ ಐಕ್ಯತಾ ದಿನ, ಬಿ.ಕೃಷ್ಣಪ್ಪ ಸಂಸ್ಮರಣೆ: ಉದ್ಘಾಟನೆ: ಮಾವಳ್ಳಿ ಶಂಕರ್, ಅತಿಥಿ: ಇಂದಿರಾ ಕೃಷ್ಣಪ್ಪ, ರಾಚಪ್ಪ ಶಿವಮೊಗ್ಗ, ಮುಖ್ಯ ಭಾಷಣ: ಸುಬ್ಬು ಹೊಲೆಯಾರ್, ಮುನಿನಂಜಪ್ಪ ಮಾರಗೊಂಡನಹಳ್ಳಿ, ಕೈಕೊಂಡ್ರಹಳ್ಳಿ ನಾರಾಯಣಸ್ವಾಮಿ, ನಿರ್ಮಲಾ, ಅಧ್ಯಕ್ಷತೆ: ಮಣಿಪಾಲ್ ರಾಜಪ್ಪ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

ಬಿ.ಕೃಷ್ಣಪ್ಪ ಅವರ 88ನೇ ಜನ್ಮದಿನಾಚರಣೆ, ‘ಮೂಕನಾಯಕ’ ದಿನಪತ್ರಿಕೆ ಪ್ರಾರಂಭೋತ್ಸವ: ಉದ್ಘಾಟನೆ: ಡಾ.ಜಿ.ಪರಮೇಶ್ವರ, ಪಿ.ಎಂ. ನರೇಂದ್ರಸ್ವಾಮಿ, ಅಧ್ಯಕ್ಷತೆ: ಎಂ.ಸಿ.ನಾರಾಯಣ, ಆಯೋಜನೆ: ದಲಿತ ಸಂಘರ್ಷ ಸಮಿತಿ (ಭೀಮವಾದ), ಸ್ಥಳ: ಪುರಭವನ, ಬೆಳಿಗ್ಗೆ 11.30

‘ಶ್ರೀಕೃಷ್ಣ ಸಂಧಾನ’ ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ಕಲ್ಲೂರು ಶ್ರೀನಿವಾಸ್, ಸಾನ್ನಿಧ್ಯ: ಮುನಿರಾಜು ಅಪ್ಪಾಜಿ ನಾಗೇನಹಳ್ಳಿ, ಅಧ್ಯಕ್ಷತೆ: ಎಂ.ಜಗದೀಶ್‌ಗೌಡ, ಆಯೋಜನೆ: ಶ್ರೀಕುಮಾರರಾಮ ಕಲಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11.30

‘ರಾಜಕೀಯ ಸಂತ ಶಾಂತವೇರಿ ಗೋಪಾಲಗೌಡ’ ಕೃತಿ ಬಿಡುಗಡೆ: ಬಿ.ಆರ್.ಪಾಟೀಲ, ಶೂದ್ರ ಶ್ರೀನಿವಾಸ್, ಅಧ್ಯಕ್ಷತೆ: ಕೆ.ಆರ್.ರಮೇಶ್ ಕುಮಾರ್, ಅತಿಥಿ: ಬಂಜಗೆರೆ ಜಯಪ್ರಕಾಶ, ಟಿ.ಎನ್. ಸೀತಾರಾಂ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಶಾಂತವೇರಿ ಗೋಪಾಲಗೌಡ ಸಮಾಜವಾದಿ ಪ್ರತಿಷ್ಠಾನ, ಸ್ಥಳ: ಎಚ್‌ಎನ್ ಬಹುಮಾಧ್ಯಮ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5


ಬಂಜಗೆರೆ ಜಯಪ್ರಕಾಶ

ಯುವ ಸಂಗೀತೋತ್ಸವ: ಉದ್ಘಾಟನೆ: ಎಂ.ವಿ. ಸತ್ಯನಾರಾಯಣ, ಪದ್ಮಾ ಗುರುದತ್, ವಯಲಿನ್ ಜುಗಲ್‌ಬಂದಿ: ಅದಿತಿ– ಅರುಂದತಿ ಹೆಬ್ಬಾರ್, ಕರ್ನಾಟಕ ಸಂಗೀತ ಗಾಯನ: ಮಹತಿ ರಘುರಾಮ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 5.15

26ನೇ ವರ್ಷದ ಪ್ರವಚನ ವಾಹಿನಿ: ‘ವಿದುರ ನೀತಿ’ ವಿಷಯದ ಬಗ್ಗೆ ಪ್ರವಚನ: ಕಡೂರ್ ಶ್ರೀಧರಾಚಾರ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಅಂತರರಾಷ್ಟ್ರೀಯ ಆರ್ಕೈವ್ಸ್ ಸಪ್ತಾಹ: ‘ಇಖ್ರಾರ್ ನಾಮಾ’ ಸಿನಿಮಾ ಪ್ರದರ್ಶನ, ಆಯೋಜನೆ: ಭಾರತೀಯ ಕಲಾ ಪ್ರತಿಷ್ಠಾನ (ಐಎಫ್‌ಎ), ಸ್ಥಳ: ‘ಅಪೂರ್ವ’ ನೆಲಮಹಡಿ, ನಂ.259, 4ನೇ ಕ್ರಾಸ್, ರಾಜ್ ಮಹಲ್ 4ನೇ ಹಂತ, ಸಂಜಯ್‌ನಗರ, ಸಂಜೆ 6.30

‘ವೇಯ್ಟಿಂಗ್’ ನಾಟಕ ಪ್ರದರ್ಶನ: ರಚನೆ: ವಿಜಯಲಕ್ಷ್ಮಿ ದೊಡ್ಡಮನಿ, ತಂಡ: ಕಲಾಕೃಷಿ, ನಿರ್ದೇಶನ: ಡಿ.ಟಿ. ಅಶೋಕ, ಆಯೋಜನೆ: ಚಿಗುರು, ಕುಸುಮಾಲೆ– ಗಿರೀಶ್ ಕಾರ್ನಾಡ್ ಕನ್ನಡ ನಾಟಕ ರಚನಾ ಫೆಲೊಶಿಪ್, ಭಾಷಾ ಕೇಂದ್ರ, ಸಮಾಗತ ಫೌಂಡೇಷನ್, ಸ್ಥಳ: ಪ್ರೆಸ್ಟಿಜ್ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್, ಅಂಜನಾದ್ರಿ ಬಡಾವಣೆ, ಕೋಣನಕುಂಟೆ, ಸಂಜೆ 7.30

‘ಒಡಿಸ್ಸಿ’ ನಾಟಕ ಪ್ರದರ್ಶನ: ರಚನೆ: ಹೋಮರ್, ಅನುವಾದ ಮತ್ತು ನಿರ್ದೇಶನ: ಯದುನಂದನ ಅವಾರಂ, ತಂಡ: ರಂಗಸೋಪಾನ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

ಯುಪಿಎಸ್‌ಸಿ ಸಾಧಕರಿಗೆ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ

‘ನಡೆದು ಬಂದ ದಾರಿ ಮರೆಯದಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರಿಗಳು ಸಮುದಾಯವು ಕಲಿಸಿದ ಅನುಕಂಪವನ್ನು ಹೃದಯದಲ್ಲಿಟ್ಟುಕೊಂಡು ಜನಸೇವೆ ಮಾಡಬೇಕು. ನಡೆದು ಬಂದ ದಾರಿಯನ್ನೂ ಮರೆಯಬಾರದು’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ವಿಜಯನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಚುಂಚಶ್ರೀ ಬಳಗವು ಆಯೋಜಿಸಿದ್ದ 11 ಯುಪಿಎಸ್‌ಸಿ ಸಾಧಕರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ‘ಋಣದ ಸೂತಕ ಎಂದಿಗೂ ನಮ್ಮನ್ನು ಹಿಂಬಾಲಿಸುತ್ತದೆ. ಹೀಗಾಗಿ, ಸಮಾಜವು ಕೊಟ್ಟ ಜ್ಞಾನವನ್ನು ಮರೆಯದೇ ಋಣ ತೀರಿಸಿ’ ಎಂದರು.

‘ಅಮಾವಾಸ್ಯೆಯಲ್ಲಿ ಕಪ್ಪು ಬೆಕ್ಕು ಹಿಡಿದಷ್ಟೇ ನಾಗರಿಕ ಸೇವಾ ಪರೀಕ್ಷೆಯಲ್ಲಿ ಪಾಸಾಗುವುದು ಕಷ್ಟ. 20 ಲಕ್ಷ ಮಂದಿಯಲ್ಲಿ ತೇರ್ಗಡೆಯಾಗುವುದು 900 ಅಭ್ಯರ್ಥಿಗಳು ಮಾತ್ರ. ಸಮುದಾಯದ 11 ಮಂದಿ ಸಾಧನೆ ಮಾಡಿದ್ದು ಶ್ಲಾಘನೀಯ’ ಎಂದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ‘ದನ ಮೇಯಿಸಿಕೊಂಡು ಪರೀಕ್ಷೆಯಲ್ಲಿ ಉತ್ತೀರ್ಣರಾದ ಧನಂಜಯ್ ಅವರಂಥ ಗ್ರಾಮೀಣ ಪ್ರತಿಭೆಗಳು ಹೆಚ್ಚಾಗಬೇಕು. ಅಧಿಕಾರಿಗಳು ಜಾತಿ ಪ್ರಜ್ಞೆ ಬಿಟ್ಟು ಪ್ರೀತಿಯಿಂದ ಜನಸೇವೆ ಮಾಡಬೇಕು’ ಎಂದರು.


ಅಭಿನಂದನಾ ಸಮಾರಂಭದಲ್ಲಿ ನಂಜಾವಧೂತ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ ಅವರು ಯುಪಿಎಸ್‌ಸಿ ಸಾಧಕರನ್ನು ಸನ್ಮಾನಿಸಿದರು. ಎಚ್.ಸಿ.ಬಾಲಕೃಷ್ಣ, ಗಾ.ನಂ.ಶ್ರೀಕಂಠಯ್ಯ, ಎಂ.ಎನ್.ಅನುಚೇತನ್, ಚೇತನ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಶಾಸಕ ಎನ್.ಚಲುವರಾಯಸ್ವಾಮಿ ಮಾತನಾಡಿ, ‘ನಾಡಪ್ರಭು ಕೆಂಪೇಗೌಡ, ಕುವೆಂಪು ಹಾಗೂ ಬಾಲಗಂಗಾಧರನಾಥ ಸ್ವಾಮೀಜಿ ಅವರು ಒಕ್ಕಲಿಗ ಸಮುದಾಯದ ಸ್ಫೂರ್ತಿ ಹಾಗೂ ಶಕ್ತಿ ಆಗಿದ್ದಾರೆ. ಯುಪಿಎಸ್‌ಸಿ ಸಾಧಕರು ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು’ ಎಂದರು.

ಪ್ರೋತ್ಸಾಹ ನೀಡಿ: ‘ಶಾಸಕಾಂಗದಲ್ಲಿ ಸಮುದಾಯದ ಜನಪ್ರತಿನಿಧಿಗಳಿದ್ದಾರೆ. ಕಾರ್ಯಾಂಗ, ನ್ಯಾಯಾಂಗದಲ್ಲಿಯೂ ಉನ್ನತ ಸ್ಥಾನಗಳನ್ನು ಅಲಂಕರಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಪ್ರೋತ್ಸಾಹ ಕೊಡಬೇಕು’ ಎಂದು ಶಾಸಕ ಶರತ್ ಬಚ್ಚೇಗೌಡ ಹೇಳಿದರು.

2025-26ನೇ ಸಾಲಿನ ಯುಪಿಎಸ್‌ಸಿ ಸಾಧಕರಾದ ಕಿರಣ್ ಕಮಟೆ, ಎ.ಸಾಗರ್, ಎ.ಮಧು, ಎ.ಅನೂಪ್ ರೆಡ್ಡಿ, ವರುಣ್ ಪಿ.ಗೌಡ, ಆರ್. ಧನಂಜಯ, ಅನುಷಾ ಶ್ರೀನಿವಾಸ್, ಎಂ.ಎಸ್.ಉಲ್ಲಾಸ್, ಮುತ್ತೇಶ್ ಗೌಡ, ಎನ್.ದೀಕ್ಷಿತ್, ಎಚ್.ಪಿ.ಮನೋಜ್ ಅವರನ್ನು ಅಭಿನಂದಿಸಲಾಯಿತು.

‘ಇನ್ನೂ ಮೂವರಿಗೆ ಸಚಿವ ಸ್ಥಾನ ಸಿಗಬೇಕಿತ್ತು’

‘ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಸಮುದಾಯದ ಇನ್ನೂ ಮೂವರಿಗೆ ಸ್ಥಾನ ಸಿಗಬೇಕಿತ್ತು. ಮೊದಲ ಹಂತದಲ್ಲಿಯೇ ಚಲುವರಾಯಸ್ವಾಮಿ, ಎಚ್.ಸಿ.ಬಾಲಕೃಷ್ಣ ಅವರೂ ಸಚಿವರಾಗಬೇಕಿತ್ತು’ ಎಂದು ಸ್ಪಟಿಕಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಹೇಳಿದರು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ. ನಂದ ಕಿಶೋರ್ ಮಾಲು

ಹಿರಿಯ ನಿರ್ದೇಶಕರು ಮತ್ತು ಪ್ರಾಜೆಕ್ಟ್ ನಿರ್ದೇಶಕರು
ದಿ ಐಡಿಯಲ್ ಹೋಮ್ಸ್ ಕೋ-ಆಪರೇಟಿವ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್

ಶ್ರೀ ನಂದ ಕಿಶೋರ್ ಮಾಲು ಅವರ ಅಕಾಲಿಕ ನಿಧನಕ್ಕೆ,
ದಿ ಐಡಿಯಲ್ ಹೋಮ್ಸ್ ಕೋ-ಆಪರೇಟಿವ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್, ಬೆಂಗಳೂರು
ಇದರ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ವರ್ಗ ಮತ್ತು ಸದಸ್ಯರಾದ ನಾವು
ನಮ್ಮ ಭಾವಪೂರ್ಣ ಸಂತಾಪವನ್ನು ವ್ಯಕ್ತಪಡಿಸುತ್ತೇವೆ.

ಅವರು ನಿಜಕ್ಕೂ ಒಬ್ಬ ಅಪ್ರತಿಮ ನಾಯಕ, ಮಾರ್ಗದರ್ಶಕ ಮತ್ತು ದೂರದರ್ಶಿತ್ವವುಳ್ಳವರಾಗಿದ್ದರು.
ಅವರ ಸಮರ್ಪಣಾ ಭಾವ, ಪ್ರಾಮಾಣಿಕತೆ ಮತ್ತು ನಿಷ್ಠೆ ನಮ್ಮೆಲ್ಲರಿಗೂ ಒಂದು ಆದರ್ಶ ಮಾನದಂಡವಾಗಿತ್ತು.

ಸರ್ವಶಕ್ತನಾದ ಭಗವಂತನು ಅವರ ಪವಿತ್ರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ ಮತ್ತು
ಈ ದುಃಖದ ಸಮಯದಲ್ಲಿ ಅವರ ಕುಟುಂಬಕ್ಕೆ ಆಘಾತವನ್ನು ಭರಿಸುವ ಶಕ್ತಿಯನ್ನು ನೀಡಲಿ
ಎಂದು ನಾವು ಪ್ರಾರ್ಥಿಸುತ್ತೇವೆ.

ದಿ ಐಡಿಯಲ್ ಹೋಮ್ಸ್ ಕೋ-ಆಪರೇಟಿವ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್
ಐಡಿಯಲ್ ಹೋಮ್ಸ್ ಟೌನ್‌ಶಿಪ್, ಮೈಸೂರು ರಸ್ತೆ, ಬೆಂಗಳೂರು – 560098

₹5.30 ಕೋಟಿ ವಂಚನೆ: ತಂದೆ, ಮಗಳ ಸೆರೆ

ವಿವಿಧ ಇಲಾಖೆಗಳಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಮೋಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಅಭ್ಯರ್ಥಿಗಳನ್ನು ನಂಬಿಸಿ ₹5.30 ಕೋಟಿ ವಂಚಿಸಿದ್ದ ತಂದೆ ಹಾಗೂ ಮಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಆರ್.ಟಿ ನಗರದ ಗಂಗೇನಹಳ್ಳಿಯ ನಿವಾಸಿಗಳಾದ ಎಂ.ಎ.ಮನ್ಸೂರ್ ಅಹಮದ್ ಹಾಗೂ ಅವರ ಪುತ್ರಿ ಎಂ.ಎಂ. ಶಂಶಾದ್ ಬೇಗಂ ಬಂಧಿತರು. ಶಂಶಾದ್ ಬೇಗಂ ಎಂಬಿಎ ಪದವೀಧರೆ. ಆರೋಪಿಗಳಿಂದ ಹಣ ಜಪ್ತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಸಂಗಮೇಶ್ ರಾಚಯ್ಯ ವಸ್ತ್ರದ್ ಅವರು ಕಳೆದ ವರ್ಷದ ನವೆಂಬರ್ 17ರಂದು ಸಿಸಿಬಿ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಾದ ಮಾಹಿತಿ ತಿಳಿಯುತ್ತಿದ್ದಂತೆಯೇ ತಂದೆ ಹಾಗೂ ಮಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಮುಂಬೈ, ಬೆಂಗಳೂರು ಮತ್ತು ಕೋಲ್ಕತ್ತದಲ್ಲಿ ನಕಲಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದ್ದ ಆರೋಪಿಗಳು, ನಿರುದ್ಯೋಗಿಗಳನ್ನು ಗುರಿಯಾಗಿಸಿ ವಂಚಿಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ರೈಲ್ವೆ, ಆದಾಯ ತೆರಿಗೆ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಸೇರಿ ವಿವಿಧ ಇಲಾಖೆಗಳಲ್ಲಿ

ಮುಖ್ಯಾಂಶಗಳು

- ಮುಖಂಡರ ಪರಿಚಯವಿದೆ ಎಂಬುದಾಗಿ ನಂಬಿಸಿ ಕೃತ್ಯ
- ಆರೋಪಿಗಳನ್ನು ಕಸ್ಟಡಿಗೆ ಪಡೆದುಕೊಂಡ ಸಿಸಿಬಿ ಪೊಲೀಸರು

ನೇಮಕಾತಿ ಮಾಡಿಸಿಕೊಡುವ ಭರವಸೆ ನೀಡುತ್ತಿದ್ದರು. ನಂತರ, ನಕಲಿ ನೇಮಕಾತಿ ಪತ್ರಗಳನ್ನು ನೀಡಿ ವಂಚಿಸುತ್ತಿದ್ದರು. ಅಭ್ಯರ್ಥಿಗಳನ್ನು ನಂಬಿಸಲು ಕೆಲವರಿಗೆ ಮೂರು ಅಥವಾ ನಾಲ್ಕು ತಿಂಗಳ ಸಂಬಳವನ್ನು ಸಹ ನೀಡಿದ್ದರು. ಉತ್ತರ ಕರ್ನಾಟಕ ಭಾಗದ ಸುಮಾರು 40ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿಂದ ಹಂತ ಹಂತವಾಗಿ ₹5.30 ಕೋಟಿಗೂ ಹೆಚ್ಚು ಹಣ ಪಡೆದು ವಂಚಿಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

‘ಹೊರ ರಾಜ್ಯದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆ ತರಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಳ್ಳ ಲಾಗಿದೆ. ‘ರಾಜಕೀಯ ಪಕ್ಷಗಳ ಮುಖಂಡರ ಪರಿಚಯವಿದ್ದು, ಅವರ ಮೂಲಕ ಸರ್ಕಾರಿ ಕೆಲಸ ಕೊಡಿಸುತ್ತೇವೆ’ ಎಂಬುದಾಗಿ ಅಭ್ಯರ್ಥಿಗಳನ್ನು


ಮನ್ಸೂರ್


ಶಂಶಾದ್

ನಂಬಿಸುತ್ತಿದ್ದೆವು ಎಂದು ವಿಚಾರಣೆ ವೇಳೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಈ ಪ್ರಕರಣದಲ್ಲಿ ಇನ್ನೂ ಹೆಚ್ಚಿನವರು ಭಾಗಿ ಆಗಿರುವ ಶಂಕೆಯಿದೆ. ಇತರೆ ಆರೋಪಿಗಳ ಪತ್ತೆ ಹಾಗೂ ವಂಚನೆಯ ಮೊತ್ತವನ್ನು ಪತ್ತೆ ಹಚ್ಚುವ ಕಾರ್ಯ ಪ್ರಗತಿಯಲ್ಲಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳಾದ ಮನ್ಸೂರ್ ಅಹಮದ್ ಹಾಗೂ ಶಂಶಾದ್ ಬೇಗಂ ದೂರುದಾರರಿಗೆ ಮೊದಲೇ ಪರಿಚಯವಿದ್ದರು. ನಿರುದ್ಯೋಗಿಗಳಿಗೆ ಕೆಲಸ ಕೊಡಿಸುತ್ತೇವೆ. ಯಾರಾದರೂ ಇದ್ದರೆ ತಿಳಿಸಿ ಎಂಬುದಾಗಿ ಸಂಗಮೇಶ್‌ಗೆ ತಿಳಿಸಿದ್ದರು. ಆರೋಪಿಗಳ ಮಾತು ನಂಬಿದ್ದ ದೂರುದಾರ, ತಮಗೆ ಪರಿಚಯವಿದ್ದ ಅಭ್ಯರ್ಥಿಗಳಿಗೆ ಮಾಹಿತಿ ನೀಡಿದ್ದರು. ಉದ್ಯೋಗದ ಆಸೆಯಿಂದ ತಮ್ಮ ಬಳಿ ಬಂದ ಅಭ್ಯರ್ಥಿಗಳಿಂದ ಹಣ ಪಡೆದು ಆರೋಪಿಗಳು ವಂಚಿಸಿದ್ದಾರೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಅಪರಾಧ ಸುದ್ದಿಗಳು


ತಂದೆಯ ಆಸೆ ಪೂರೈಸಲು ಹೋಗಿ ಹಣ ಕಳೆದುಕೊಂಡ ಪುತ್ರಿ

ಬೆಂಗಳೂರು: ಐಪಿಎಲ್ ಪಂದ್ಯವನ್ನು ವೀಕ್ಷಿಸಬೇಕೆಂಬ ಕ್ಯಾನ್ಸರ್ ಬಾಧಿತ ತಂದೆಯ ಆಸೆ ಪೂರೈಸುವ ಉದ್ದೇಶದಿಂದ ಟಿಕೆಟ್ ಖರೀದಿಸಲು ಯತ್ನಿಸಿದ್ದ ಪುತ್ರಿಯಿಂದ ಸೈಬರ್ ವಂಚಕರು ₹18.40 ಲಕ್ಷ ದೋಚಿದ್ದಾರೆ.

ಆಗ್ನೇಯ ವಿಭಾಗದ ಬಂಡೇಪಾಳ್ಯದ 31 ವರ್ಷದ ಮಹಿಳೆ ಹಣ ಕಳೆದುಕೊಂಡಿದ್ದಾರೆ. ಮಹಿಳೆ ನೀಡಿದ ದೂರಿನ ಮೇಲೆ ಸೈಬರ್ ಅಪರಾಧ ಠಾಣೆಯ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

‘ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯವನ್ನು ವೀಕ್ಷಿಸಬೇಕೆಂದು ದೂರುದಾರೆಯ ತಂದೆ ಆಸೆ ಪಟ್ಟಿದ್ದರು. ತಂದೆಯ ಆಸೆ ಪೂರೈಸಲು ಪುತ್ರಿ ಟಿಕೆಟ್‌ಗಾಗಿ ಅನ್‌ಲೈನ್‌ನಲ್ಲಿ ಹುಡುಕಾಟ ನಡೆಸುತ್ತಿದ್ದರು. ಆಗ ಇನ್‌ಸ್ಟಾಗ್ರಾಂ ಮೂಲಕ ನವನೀತ್ ಕೃಷ್ಣ (ನವ–ಕೃಷ್ಣನ್ ಹೆಸರಿನಲ್ಲಿ ಖಾತೆ) ಎಂಬಾತ ಪರಿಚಯವಾಗಿದ್ದ. ಏಪ್ರಿಲ್ 23ರಂದು ನಡೆದ ಪಂದ್ಯಕ್ಕೆ ಟಿಕೆಟ್ ಒದಗಿಸುವುದಾಗಿ ನಂಬಿಸಿ, ಮುಂದಿನ ಸಂಪರ್ಕಕ್ಕೆ ವಾಟ್ಸ್‌ಆ್ಯಪ್ ಸಂಖ್ಯೆ ನೀಡಿದ್ದ’ ಎಂದು ಸೈಬರ್ ಪೊಲೀಸರು ಹೇಳಿದ್ದಾರೆ.

ಆರೋಪಿಯ ಮಾತು ನಂಬಿದ್ದ ಮಹಿಳೆ, ಎರಡು ಟಿಕೆಟ್ ಕೊಡುವಂತೆ ಕೋರಿ ₹15 ಸಾವಿರ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ಹೆಚ್ಚುವರಿಯಾಗಿ ₹6 ಸಾವಿರ ಪಾವತಿಸುವಂತೆ ವಂಚಕ ಕೇಳಿದ್ದ. ಹೆಚ್ಚುವರಿ ಹಣವನ್ನು ಕ್ರೀಡಾಂಗಣದ ಬಳಿ ಟಿಕೆಟ್ ಕೊಡುವಾಗ ವಾಪಸ್ ನೀಡುವುದಾಗಿಯೂ ನಂಬಿಸಿದ್ದ. ಹೆಚ್ಚುವರಿ ₹6 ಸಾವಿರ ಪಾವತಿಸಿದ ಬಳಿಕ ಯುವರಾಜ್ ಹೆಸರಿನ ವ್ಯಕ್ತಿ ಕರೆ ಮಾಡಿ, ಟಿಕೆಟ್ ಬುಕಿಂಗ್ ವಿವರ ಹಂಚಿಕೊಂಡಿದ್ದ. ಅದಾದ ಮೇಲೆ ಈಗಾಗಲೇ ಬುಕ್ ಮಾಡಿದ್ದ ಟಿಕೆಟ್‌ಗಳು ಸ್ಪಾನ್ಸರ್ ಟಿಕೆಟ್‌ಗಳಾಗಿದ್ದು, ಅದನ್ನು ರದ್ದುಪಡಿಸಲಾಗಿದೆ. ಬೇರೆ ಸ್ಟ್ಯಾಂಡ್‌ನಲ್ಲಿ ಟಿಕೆಟ್ ಕೊಡಿಸುತ್ತೇವೆ. ಇನ್ನೂ ₹12 ಸಾವಿರ ಪಾವತಿಸುವಂತೆ ವಂಚಕರು ಕೇಳಿದ್ದರು. ಕ್ರಿಕೆಟ್ ಪಂದ್ಯ ವೀಕ್ಷಿಸಬೇಕು ಎಂಬ ತಂದೆಯ ಆಸೆ ಪೂರೈಸಲು ಆ ಹಣವನ್ನೂ ದೂರುದಾರೆ ಪಾವತಿಸಿದ್ದರು ಎಂದು ಮೂಲಗಳು ಹೇಳಿವೆ.



‘ಅಕ್ಕಪಕ್ಕದ ಆಸನಗಳು ಸಿಕ್ಕಿಲ್ಲ ಎಂದು ಆರೋಪಿಗಳು ತಿಳಿಸಿದ್ದರು. ಆಗ ಟಿಕೆಟ್ ರದ್ದುಗೊಳಿಸಿ ಹಣ ವಾಪಸ್ ನೀಡುವಂತೆ ಕೋರಿದ್ದರು. ಟಿಕೆಟ್ ರದ್ದುಗೊಳಿಸಲು ₹3 ಸಾವಿರ ಪಾವತಿಸುವಂತೆ ವಂಚಕರು ಕೇಳಿದ್ದರು. ಮರುಪಾವತಿ ಹಾಗೂ ಟಿಕೆಟ್ ರದ್ದುಗೊಳಿಸುವುದಾಗಿ ಭರವಸೆ ನೀಡುತ್ತಲೇ ಮಹಿಳೆ ಹಾಗೂ ಅವರ ತಾಯಿ ಖಾತೆಯಿಂದ ₹ 18.40 ಲಕ್ಷವನ್ನು ಆರೋಪಿಗಳು ವರ್ಗಾವಣೆ ಮಾಡಿಸಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ. ‘ದೂರುದಾರೆಗೆ ನಂಬಿಕೆ ಬರುವಂತೆ ಮಾಡಲು ₹18.40 ಲಕ್ಷದ ಪೈಕಿ ಆರಂಭದಲ್ಲಿ ₹2.40 ಲಕ್ಷ ವಾಪಸ್ ವರ್ಗಾವಣೆ ಮಾಡಿದ್ದರು. ಮತ್ತೆ ಅದೇ ಹಣವನ್ನು ಮರು ವರ್ಗಾವಣೆ ಮಾಡಿಸಿಕೊಂಡಿದ್ದರು. ಅದಾದ ಮೇಲೆ ವಂಚನೆ ನಡೆದಿರುವುದು ಮಹಿಳೆಗೆ ಗೊತ್ತಾಗಿತ್ತು’ ಎಂದು ಮೂಲಗಳು ಹೇಳಿವೆ.

‘ಜೂನ್ 4ರಂದು ದೂರು ನೀಡಿದ್ದಾರೆ. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 318 (ವಂಚನೆ) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

‘ಡಿಜಿಟಲ್ ಅರೆಸ್ಟ್’: ವೃದ್ಧೆಯಿಂದ ₹98.40 ಲಕ್ಷ ದೋಚಿದ ವಂಚಕರು



ಬೆಂಗಳೂರು: ವೃದ್ಧೆಯನ್ನು ‘ಡಿಜಿಟಲ್ ಅರೆಸ್ಟ್’ ಮಾಡುವುದಾಗಿ ಬೆದರಿಸಿದ ಸೈಬರ್ ವಂಚಕರು ₹98.40 ಲಕ್ಷ ದೋಚಿದ್ದು, ಆಗ್ನೇಯ ವಿಭಾಗದ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೊಮ್ಮನಹಳ್ಳಿ ನಿವಾಸಿ ಸ್ವರ್ಣಲತಾ ಅವರು ಹಣ ಕಳೆದುಕೊಂಡಿದ್ದಾರೆ. ಸ್ವರ್ಣಲತಾ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮಾರ್ಚ್ 18ರಂದು ವೃದ್ಧೆಗೆ ಕರೆ ಮಾಡಿದ್ದ ಸೈಬರ್ ವಂಚಕನೊಬ್ಬ, ದೆಹಲಿ ಪೊಲೀಸ್ ಕಚೇರಿಯಿಂದ ಡಿಸಿಪಿ ಭೀಷಮ್ ಸಿಂಗ್ ಎಂದು ಪರಿಚಯಿಸಿಕೊಂಡಿದ್ದ. ಬಳಿಕ, ‘ಅಕ್ರಮ ಹಣ ವರ್ಗಾವಣೆ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದು, ನಿಮ್ಮ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿವೆ. ನಿಮ್ಮನ್ನು ಬಂಧಿಸುವಂತೆ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ ಎಂಬುದಾಗಿ ಹೆದರಿಸಿದ್ದ’ ಎಂದು ಮೂಲಗಳು ಹೇಳಿವೆ.

‘ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಕೆಲವು ಸೂಚನೆಗಳನ್ನು ಪಾಲಿಸದಿದ್ದರೆ ನಿಮ್ಮ ಕುಟುಂಬದವರಿಗೂ ಸಮಸ್ಯೆಯಾಗಲಿದೆ ಎಂದು ಹೇಳಿದ್ದ. ನಂತರ, ಪೊಲೀಸ್ ಕಾನ್‌ಸ್ಟೆಬಲ್ ಸೋಗಿನಲ್ಲಿ ರವಿಕುಮಾರ್ ಎಂಬಾತ ಕರೆ ಮಾಡಿ ‘ನಿಮ್ಮ ದೈನಂದಿನ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಬೇಕು. ವಿಚಾರಣೆಗಾಗಿ ದೆಹಲಿಗೂ ಬರಬೇಕು’ ಎಂದು ವಿಡಿಯೊ ಕರೆಯಲ್ಲಿ ಸೂಚಿಸಿದ್ದ. ಅದಾದ ಮೇಲೆ ಭೀಷಮ್ ಸಿಂಗ್ ವಿಡಿಯೊ ಕರೆ ಮಾಡಿ ಬೆದರಿಸಿ, ವೃದ್ಧೆಯಿಂದ ಹಂತಹಂತವಾಗಿ ಹಣ ದೋಚಲಾಗಿತ್ತು ಎಂದು ಸೈಬರ್ ಠಾಣೆಯ ಮೂಲಗಳು ಹೇಳಿವೆ.


ಸುದ್ದಿ 2 ನಿಮಿಷ

ದರೋಡೆಗೆ ಯತ್ನ: ಮೂವರ ಸೆರೆ

ಬೆಂಗಳೂರು: ಪುಟ್ಟೇನಹಳ್ಳಿ ಸೂಪರ್ ಮಾರ್ಕೆಟ್‌ಗೆ ನುಗ್ಗಿ ದರೋಡೆಗೆ ಯತ್ನಿಸಿದ್ದ ಮೂವರನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಿಲಕ್‌ನಗರದ ನಿವಾಸಿಗಳಾದ ಸೈಯದ್ ಆಸೀಫ್ (22), ಸೈಯದ್ ಸಲೀಂ (26) ಹಾಗೂ ಸಿದ್ದಿಕ್ ಪಾಷಾ(23) ಬಂಧಿತರು.

ಅರಕೆರೆಯ ಮೈಕೊಲೇಔಟ್‌ನ ಬ್ರಿಗೇಡ್ ಮಿಲೇನಿಯಂ ರಸ್ತೆಯ ‘ಎ ಡೈಲಿ ನೀಡ್ಸ್ ಸೂಪರ್ ಮಾರ್ಕೆಟ್’ಗೆ ಜೂನ್ 6ರ ರಾತ್ರಿ 11ರ ಸುಮಾರಿಗೆ ಗ್ರಾಹಕರ ಸೋಗಿನಲ್ಲಿ ಆರೋಪಿಗಳು ಬಂದಿದ್ದರು. ಕ್ಯಾಶ್ ಕೌಂಟರ್‌ನಲ್ಲಿದ್ದ ಹಣವನ್ನು ದೋಚಲು ಆರೋಪಿಗಳು ಯತ್ನಿಸಿದ್ದರು. ಆಗ ಅವರನ್ನು ಕ್ಯಾಶಿಯರ್ ತಡೆದಿದ್ದರು. ಬಳಿಕ ಕ್ಯಾಶಿಯರ್ ಮೇಲೆ ಹಲ್ಲೆ ನಡೆಸಿದ್ದ ಆರೋಪಿಗಳು ಹಣ, ಚಾಕೋಲೆಟ್ ಹಾಗೂ ಸುಗಂಧ ದ್ರವ್ಯಗಳ ಬಾಟಲಿಗಳನ್ನು (ಪರ್ಫ್ಯೂಮ್) ದೋಚಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.



ಸೂಪರ್ ಮಾರ್ಕೆಟ್‌ನ ವ್ಯವಸ್ಥಾಪಕ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮನೆಗೆ ಬಣ್ಣ ಬಳಿಯಲು ಬಂದು ಆಭರಣ ದೋಚಿದರು

ಪೀಣ್ಯ ದಾಸರಹಳ್ಳಿ: ಮನೆಗೆ ಬಣ್ಣ ಬಳಿಯಲು ಬಂದಿದ್ದ ಕಾರ್ಮಿಕರು, ಮನೆಯಲ್ಲಿದ್ದ ₹25 ಲಕ್ಷ ಮೌಲ್ಯದ ಆಭರಣಗಳನ್ನು ದೋಚಿ ಪರಾರಿ ಆಗಿರುವ ಘಟನೆ ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ರಾಮಾಂಜನೇಯ ಬಡಾವಣೆಯಲ್ಲಿ ನಡೆದಿದೆ.

ನಿತ್ಯಾ–ಚಂದ್ರಶೇಖರ್ ದಂಪತಿಯ ಮನೆಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದಾರೆ.

ರಾಮಾಂಜನೇಯ ಬಡಾವಣೆಯಲ್ಲಿ ನಿತ್ಯಾ –ಚಂದ್ರಶೇಖರ್ ದಂಪತಿ ಎರಡು ಅಂತಸ್ತಿನ ಮನೆ ಕಟ್ಟಿಸಿದ್ದರು. ಒಂದು ತಿಂಗಳ ಹಿಂದೆ ಮೊದಲ ಮಹಡಿಯಲ್ಲಿದ್ದ ಬಾಡಿಗೆದಾರರು ಮನೆ ಖಾಲಿ ಮಾಡಿದ್ದರು. ಇದನ್ನು ಗಮನಿಸಿದ್ದ ಪೇಯಿಂಟಿಂಗ್ ಕೆಲಸಗಾರ ಲಿಂಗರಾಜು, ಮನೆಯ ಮಾಲೀಕ ಚಂದ್ರಶೇಖರ್ ಅವರನ್ನು ಭೇಟಿಯಾಗಿ, ‘ನಿಮ್ಮ ಮನೆಗೆ ನಾವೇ ಕಡಿಮೆ ದರದಲ್ಲಿ ಪೇಯಿಂಟಿಂಗ್ ಮಾಡಿಕೊಡುತ್ತೇವೆ’ ಎಂದು ನಂಬಿಸಿ ಮೊಬೈಲ್ ಸಂಖ್ಯೆ ನೀಡಿದ್ದ. ಎರಡು ದಿನಗಳ ಬಳಿಕ ಚಂದ್ರಶೇಖರ್ ಅವರು ಲಿಂಗರಾಜುಗೆ ಕರೆ ಮಾಡಿ ಬಣ್ಣ ಬಳಿಯುವ ಕೆಲಸಕ್ಕೆ ಒಪ್ಪಿಗೆ ನೀಡಿದ್ದರು ಎಂದು ಮೂಲಗಳು ಹೇಳಿವೆ.

ಲಿಂಗರಾಜು ಜೊತೆಗೆ ಪವನ್ ಕುಮಾರ್, ಮಂಜುನಾಥ್ ಮತ್ತು ವೆಂಕಟೇಶ್ ಕೆಲಸಕ್ಕೆ ಬಂದಿದ್ದರು. ಮೊದಲ ಮಹಡಿಯಲ್ಲಿ ಕೆಲಸ ಪೂರ್ಣವಾದ ಮೇಲೆ, ತಾವು ವಾಸವಿದ್ದ ಕೆಳಮಹಡಿಯ ಕಿಟಕಿಗಳಿಗೂ ಬಣ್ಣ ಬಳಿಯುವಂತೆ ಮಾಲೀಕರು ತಿಳಿಸಿದ್ದರು. ಕೆಲಸ ಮಾಡುವ ಸಂದರ್ಭದಲ್ಲಿ ಬೀರುವಿನಲ್ಲಿದ್ದ ಆಭರಣವನ್ನು ಕೆಲಸಗಾರರು ಗಮನಿಸಿದ್ದರು. ಅಳುತ್ತಿದ್ದ ಮಗುವನ್ನು ಸಮಾಧಾನಪಡಿಸಲು ನಿತ್ಯಾ ಅವರು ಬೆಡ್‌ರೂಂನಿಂದ ಹೊರಕ್ಕೆ ತೆರಳಿದ್ದರು. ವಾಪಸ್ ಬರುವಷ್ಟರಲ್ಲಿ, ಕಾರ್ಮಿಕರು 254 ಗ್ರಾಂ ಆಭರಣಗಳನ್ನು ದೋಚಿ ಪರಾರಿ ಆಗಿದ್ದರು ಎಂದು ಮೂಲಗಳು ತಿಳಿಸಿವೆ.

ಮಗು ಹತ್ಯೆ: ತಾಯಿಗಾಗಿ ಶೋಧ

ಪ್ರಿಯಕರನ ವಿಚಾರಣೆ ತೀವ್ರ, ಪ್ರಕರಣದ ತನಿಖೆಗೆ ವಿಶೇಷ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾರ್ಚ್ 24ರಂದು ಆರು ವರ್ಷದ ಹೆಣ್ಣು ಮಗು ಅನುಮಾನಾಸ್ಪದವಾಗಿ ಮೃತಪಟ್ಟ ಪ್ರಕರಣದಲ್ಲಿ ಬಂಧಿತ ಆರೋಪಿ ಜಿ.ಮೋಹನ್ ವಿಚಾರಣೆಯನ್ನು ಪೊಲೀಸರು ತೀವ್ರಗೊಳಿಸಿದ್ದಾರೆ.

ಮತ್ತೊಂದೆಡೆ ಮಗುವಿನ ತಾಯಿ ಪ್ರಿಯಾಂಕಾ ನಾಪತ್ತೆ ಆಗಿದ್ದು, ತನಿಖಾ ತಂಡಕ್ಕೆ ಇನ್ನೂ ಸುಳಿವು ಸಿಕ್ಕಿಲ್ಲ. ಪ್ರಿಯಾಂಕಾ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆರಂಭದಲ್ಲಿ ಬಾಲಕಿಯದ್ದು ಸಹಜ ಸಾವು ಎಂದು ಆರೋಪಿಗಳು ಬಿಂಬಿಸಿದ್ದರು. ಆದರೆ, ಮರಣೋತ್ತರ ಪರೀಕ್ಷೆಯಲ್ಲಿ ಮಗುವಿಗೆ ಒದ್ದು ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಬಯಲಾಗಿತ್ತು. ಕಾಡುಗೋಡಿ ಠಾಣೆಯ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

‘ಕೊಲೆ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಿಯಾಂಕಾ ಹಾಗೂ ಅವರ ಪ್ರಿಯಕರ ಮೋಹನ್


ಜಿ.ಮೋಹನ್

ಸಂಚು ರೂಪಿಸಿರುವುದು ತನಿಖೆ ವೇಳೆ ಕಂಡುಬಂದಿದೆ. ಮಾರ್ಚ್ 24ರಂದು ಕೋಲಾರ ಬಳಿ ಕಾಫಿ ಡೇಗೆ ಇಬ್ಬರೂ ಕಾರಿನಲ್ಲಿ ತೆರಳಿದ್ದರು. ಮಗುವನ್ನೂ ಜೊತೆಯಲ್ಲಿ ಕರೆದೊಯ್ದಿದ್ದರು. ಅಂದೇ ರಾತ್ರಿ ಮಗು ಮೃತಪಟ್ಟಿತ್ತು. ಅಂದು ಮಗು ಹಾಗೂ ಆರೋಪಿ ಧರಿಸಿದ್ದ ಬಟ್ಟೆ ನೀಡುವಂತೆ ಕೇಳಿದ್ದೆವು. ಆದರೆ, ಆರೋಪಿ ಮೋಹನ್ ಬೇರೆ ಬಟ್ಟೆಗಳನ್ನು ನೀಡಿ ಸಾಕ್ಷ್ಯನಾಶ ಪಡಿಸಿರುವುದು ಪತ್ತೆ ಆಗಿದೆ’ ಎಂದು ಪೊಲೀಸರು ಹೇಳಿದರು.

‘ಮಾರ್ಚ್ 24ರಂದು ಪ್ರಿಯಾಂಕಾ ಜನ್ಮದಿನವಿತ್ತು. ಆ ದಿನ ರಾತ್ರಿ ಮಗು ಮೃತಪಟ್ಟಿತ್ತು. ಮಗುವಿಗೆ ಬಿರಿಯಾನಿ ಮತ್ತು ಐಸ್‌ಕ್ರೀಮ್ ಕೊಡಿಸಿದ್ದೆ. ಬಳಿಕ ಕಾರಿನಲ್ಲಿ ಎ.ಸಿ ಹಾಕಿ ಮಲಗಿಸಿದ್ದೆ. ರಾತ್ರಿ ಮನೆಗೆ ಹೋದಾಗ ಮಗು ಚೆನ್ನಾಗಿಯೇ ಇತ್ತು. ಆದರೆ, ಬೆಳಿಗ್ಗೆ ನೋಡುವಷ್ಟರಲ್ಲಿ ಮೃತಪಟ್ಟಿತ್ತು ಎಂದು ಪ್ರಿಯಾಂಕಾ ಕಥೆ ಕಟ್ಟಿದ್ದರು. ಅನುಮಾನಗೊಂಡು ಮಗುವಿನ ತಂದೆ ಪ್ರವೀಣ್, ಮಗಳ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿದ್ದರು. ಮರಣೋತ್ತರ ಪರೀಕ್ಷೆಯಲ್ಲಿ ಮಗುವನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಪತ್ತೆಯಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಪ್ರಿಯಾಂಕಾ ವೃತ್ತಿಯಲ್ಲಿ ವಕೀಲೆ. ಮೋಹನ್ ಅವರು ದಾವಣಗೆರೆಯಲ್ಲಿ ಖಾಸಗಿ ಶಾಲೆ ನಡೆಸುತ್ತಿದ್ದಾರೆ. ಪ್ರಿಯಕರ, ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದಾರೆ. ಪತಿಗಿಂತಲೂ ಪ್ರಿಯಕರ ಹೆಚ್ಚಿನ ಆಸ್ತಿ ಹೊಂದಿದ್ದಾರೆ. ಪ್ರಿಯಕರನೊಂದಿಗೆ ಇದ್ದರೆ ಐಷಾರಾಮಿ ಜೀವನ ನಡೆಸಬಹುದೆಂದು ಪ್ರಿಯಾಂಕಾ ಲೆಕ್ಕಾಚಾರವಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಪ್ರಿಯಕರನ ವಿಲ್ಲಾದಲ್ಲಿ ಚಿಕ್ಕ ಮಗಳೊಂದಿಗೆ ಪ್ರಿಯಾಂಕಾ ವಾಸವಿದ್ದರು. ಮೋಜಿನ ಜೀವನ ಹಾಗೂ ಖಾಸಗಿ ಕ್ಷಣಗಳಿಗೆ ಮಗಳು ಅಡ್ಡಿ ಆಗುತ್ತಾಳೆ ಎಂದು ಭಾವಿಸಿ ಕೊಲೆ ಮಾಡಿರುವ ಶಂಕೆ ಇದೆ. ಮಗುವಿನ ತಂದೆ ನೀಡಿರುವ ದೂರಿನ ಮೇಲೆ ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಶೇಷಾದ್ರಿಪುರ, ಹುಳಿಮಾವು, ಹೆಬ್ಬಾಳದಲ್ಲಿ ನಡೆದ ಘಟನೆ

ಪ್ರತ್ಯೇಕ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಷಾದ್ರಿಪುರ, ಹುಳಿಮಾವು ಹಾಗೂ ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಮೂವರು ಮೃತಪಟ್ಟಿದ್ದಾರೆ.

ಹುಳಿಮಾವು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಟಿಪ್ಪರ್ ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಆರ್.ಆರ್.ನಗರದ ನಿವಾಸಿ, ವಿದ್ಯಾರ್ಥಿ ಚಿರಾಗ್ (19) ಮೃತಪಟ್ಟಿದ್ದಾರೆ.

ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ಸ್ನೇಹಿತೆಗೆ ಸಣ್ಣಪುಟ್ಟ ಗಾಯಗಳಾಗಿದ್ದು ಪಾರಾಗಿದ್ದಾರೆ. ಈ ಸಂಬಂಧ ಚಿರಾಗ್ ಪೋಷಕರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕನಕಪುರ ರಸ್ತೆಯಲ್ಲಿರುವ ಕಾಲೇಜಿನಲ್ಲಿ ಓದುತ್ತಿದ್ದ ಚಿರಾಗ್, ಸ್ನೇಹಿತೆಯ ಜತೆ ಊಟಕ್ಕೆಂದು ಜಿಗಣಿ ಸಮೀಪದ ಹೋಟೆಲ್‌ಗೆ ತೆರಳಿದ್ದರು. ಊಟ ಮಾಡಿಕೊಂಡು ಬರುವಾಗ ಮಧ್ಯಾಹ್ನ 2.30ರ ಸುಮಾರಿಗೆ ಬನ್ನೇರುಘಟ್ಟ ರಸ್ತೆ ಗೊಟ್ಟಿಗೆರೆಯ ನೈಸ್ ಜಂಕ್ಷನ್ ಬಳಿ ಅಪಘಾತ ಸಂಭವಿಸಿದೆ. ಕೆಳಕ್ಕೆ ಬಿದ್ದ ಚಿರಾಗ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಅಪಘಾತದ ನಂತರ ಲಾರಿಯನ್ನು ಸ್ಥಳದಲ್ಲಿಯೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಹುಳಿಮಾವು ಸಂಚಾರ ಪೊಲೀಸರು ಪರಿಶೀಲನೆ ನಡೆಸಿ, ಲಾರಿಯನ್ನು ಜಪ್ತಿ ಮಾಡಿದ್ದಾರೆ. ಪರಾರಿಯಾಗಿರುವ ಚಾಲಕನ ಪತ್ತೆಗೆ ಶೋಧ ನಡೆಸಿದ್ದಾರೆ.

ಬೈಕ್– ಸರಕು ಸಾಗಣೆ ವಾಹನದ ನಡುವೆ ಅಪಘಾತ: ಶೇಷಾದ್ರಿಪುರ ಒಂದನೇ ಮುಖ್ಯರಸ್ತೆಯಲ್ಲಿ ಬೈಕ್ ಹಾಗೂ ಸರಕು ಸಾಗಣೆ ವಾಹನ ನಡುವೆ ಸಂಭವಿಸಿದ ಅಪಘಾತದಲ್ಲಿ ಪ್ಲಂಬರ್ ಕೆಲಸ ಮಾಡುತ್ತಿದ್ದ ರವಿಕುಮಾರ್(36) ಮೃತಪಟ್ಟಿದ್ದಾರೆ.

ರವಿಕುಮಾರ್ ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಮನೆಗೆ ತೆರಳುವಾಗ ದುರ್ಘಟನೆ ನಡೆದಿದೆ. ಸರಕು ಸಾಗಣೆ ವಾಹನವು ಬೈಕ್‌ಗೆ ಎದುರಿನಿಂದ ಬಂದು ಡಿಕ್ಕಿಯಾಗಿದೆ. ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಅಸ್ವಸ್ಥಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಸರಕು ಸಾಗಣೆ ವಾಹನದ ಚಾಲಕನ ಅತಿಯಾದ ವೇಗ ಹಾಗೂ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ. ಘಟನೆ ನಂತರ ಆತ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ. ಘಟನಾ ಸ್ಥಳದ ಸಿ.ಸಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿ ಆಧರಿಸಿ ಆತನ ಪತ್ತೆಗೆ ಕ್ರಮ ಕೈಗೊಂಡಿದ್ದೇವೆ ಎಂದು ಸಂಚಾರ ಪೊಲೀಸರು ಹೇಳಿದ್ದಾರೆ.

ಶೇಷಾದ್ರಿಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜಸ್ಥಾನದ ವ್ಯಕ್ತಿ ಸಾವು: ಹೆಬ್ಬಾಳ ಮೇಲ್ಸೇತುವೆಯಲ್ಲಿ ಬೊಲೆರೊ ವಾಹನ ಮತ್ತು ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಬೊಲೆರೊ ವಾಹನದ ಚಾಲಕ, ರಾಜಸ್ಥಾನದ ಲಕ್ಕಿ ಶೈನ್ (26) ಎಂಬುವರು ಮೃತಪಟ್ಟಿದ್ದಾರೆ.

ಹೆಬ್ಬಾಳ ಮೇಲ್ಸೇತುವೆಯಲ್ಲಿ ಲಾರಿ ಚಾಲಕ ಹಿಮ್ಮುಖವಾಗಿ ವಾಹನ ಚಾಲನೆ ಮಾಡುತ್ತಿದ್ದ. ಅದೇ ಮಾರ್ಗದಲ್ಲಿ ತೆರಳುತ್ತಿದ್ದ ಬೊಲೆರೊ ವಾಹನವು ಲಾರಿಗೆ ಡಿಕ್ಕಿಯಾಗಿ ಲಕ್ಕಿ ಶೈನ್ ಮೃತಪಟ್ಟಿದ್ದಾರೆ. ಬೊಲೆರೊ ವಾಹನದಲ್ಲಿದ್ದ ಸಂದೀಪ್ ಶೈನ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಹೆಬ್ಬಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

₹7.65 ಕೋಟಿ ಮೌಲ್ಯದ ಗಾಂಜಾ ವಶ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಹೈಡ್ರೋಫಿನಿಕ್ ಗಾಂಜಾ ಸಾಗಣೆ ಮಾಡುತ್ತಿದ್ದ ಮೂರು ಪ್ರತ್ಯೇಕ ಪ್ರಕರಣಗಳನ್ನು ಭೇದಿಸಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಒಟ್ಟು ₹7.65 ಕೋಟಿ ಮೌಲ್ಯದ 21.86 ಕೆ.ಜಿ ಹೈಡ್ರೋಫಿನಿಕ್ ಗಾಂಜಾ ವಶಪಡಿಸಿಕೊಂಡಿದ್ದು, ಮೂವರನ್ನು ಬಂಧಿಸಿದ್ದಾರೆ.

ಜೂನ್ 7ರಂದು ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಬಂದಿದ್ದ ಒಬ್ಬ ಪ್ರಯಾಣಿಕನನ್ನು ತಪಾಸಣೆ ನಡೆಸಿದ ವೇಳೆ 5 ಕೆ.ಜಿ ಗಾಂಜಾ ವಶಪಡಿಸಿಕೊಳ್ಳ ಲಾಗಿದೆ. ಇದರ ಮೌಲ್ಯ ₹1.75 ಕೋಟಿ ಎಂದು ಅಂದಾಜಿಸಲಾಗಿದೆ. ಜೂನ್ 5ರಂದು ನಡೆದ ಕಾರ್ಯಾಚರಣೆಯಲ್ಲಿ ಪ್ರಯಾಣಿಕನಿಂದ 10.20 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ಇದರ ಮೌಲ್ಯ ₹3.57 ಕೋಟಿ. ಜೂನ್ 4ರಂದು ಬಂದಿದ್ದ ಮತ್ತೊಬ್ಬ ಪ್ರಯಾಣಿಕನ ಬಳಿಯಿದ್ದ 6.66 ಕೆ.ಜಿ ಗಾಂಜಾವನ್ನು ಜಪ್ತಿ ಮಾಡಲಾಗಿದ್ದು, ಇದರ ಮೌಲ್ಯ ₹2.33 ಕೋಟಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂರು ಪ್ರಕರಣಗಳಲ್ಲಿಯೂ ಆರೋಪಿಗಳ ವಿರುದ್ಧ ಮಾದಕ ವಸ್ತುಗಳ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಸನ: ಬೆಂಗಳೂರಿನ ರೌಡಿಶೀಟರ್ ಕೊಲೆ

ಪ್ರಜಾವಾಣಿ ವಾರ್ತೆ

ಹಾಸನ: ನಗರದ ಚನ್ನಪಟ್ಟಣದ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಎದುರು ಬೆಂಗಳೂರಿನ ರೌಡಿಶೀಟರ್ ಮಂಜೇಶ್ (42) ಎಂಬುವವರನ್ನು ಸೋಮವಾರ ಬೆಳಗಿನ ಜಾವ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ.

ಹಾಸನ ಜಿಲ್ಲೆಯವರಾದ ಮಂಜೇಶ್ ಕುಟುಂಬದೊಂದಿಗೆ ಬೆಂಗಳೂರಿನಲ್ಲಿ ನೆಲಸಿದ್ದು, ಅಲ್ಲಿನ ಪೊಲೀಸ್ ಠಾಣೆಯೊಂದರಲ್ಲಿ ರೌಡಿಶೀಟ್ ದಾಖಲಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮಂಜೇಶ್ ಕೆಲಸದ ನಿಮಿತ್ತ ಹಾಸನಕ್ಕೆ ಬಂದಿದ್ದ ವೇಳೆ, ಹಿಂಬಾಲಿಸಿದ ದುಷ್ಕರ್ಮಿಗಳು ಜಿಲ್ಲಾ ನ್ಯಾಯಾಲಯದ ಸಂಕೀರ್ಣದ ಎದುರು ಮಾರಕಾಸ್ತ್ರಗಳಿಂದ ತಲೆ,


ಮಂಜೇಶ್

ಹೊಟ್ಟೆ, ಸೊಂಟ ಹಾಗೂ ಕೈಗಳ ಮೇಲೆ ಮನಬಂದಂತೆ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ. ಮೃತದೇಹದ ಸಮೀಪ ಸಿಕ್ಕ ದಾಖಲೆಗಳ ಆಧಾರದ ಮೇಲೆ ಗುರುತು ಪತ್ತೆಯಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಹಳೆಯ ದ್ವೇಷ ಅಥವಾ ವೈಯಕ್ತಿಕ ವೈಷಮ್ಯದ ಹಿನ್ನೆಲೆಯಲ್ಲಿ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ಹಾಸನ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪರಿಸರ ದಿನ



ವಿಶ್ವ ಪರಿಸರ ದಿನದ ಅಂಗವಾಗಿ ಆರ್.ವಿ ಬಾಲಕಿಯರ ಪ್ರೌಢಶಾಲೆಯ ಎನ್‌ಸಿಸಿ ಕೆಡೆಟ್‌ಗಳು ಜಯನಗರದ ಪ್ರಮುಖ ಬೀದಿಗಳಲ್ಲಿ ರ‍್ಯಾಲಿ ನಡೆಸಿ ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಜೀವನಶೈಲಿ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು

ಲಂಚ: ಇಬ್ಬರು ಅಧಿಕಾರಿಗಳ ಬಂಧನ

ಬೆಂಗಳೂರು: ನಗರದಲ್ಲಿ ಏಕಕಾಲಕ್ಕೆ ಎರಡು ಇಲಾಖೆಗಳ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು, ಲಂಚ ಪಡೆಯುತ್ತಿದ್ದ ಇಬ್ಬರು ಅಧಿಕಾರಿಗಳನ್ನು ಸೋಮವಾರ ಬಂಧಿಸಿದ್ದಾರೆ.

ಬೆಸ್ಕಾಂನ ದಕ್ಷಿಣ ವಿಭಾಗದ ಉಪಮುಖ್ಯ ವಿದ್ಯುತ್ ಪರಿವೀಕ್ಷಕ ಸಿದ್ದಪ್ಪ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕಿ ವಾಣಿಶ್ರೀ ಬಂಧಿತ ಆರೋಪಿಗಳು. ಸಂಜೀವಿನಿ ನಗರದ ನಿವಾಸಿ, ಗುತ್ತಿಗೆದಾರ ಎನ್. ರಘುರಾಜ್, ಪರಿಚಯಸ್ಥರ ಅಪಾರ್ಟ್‌ಮೆಂಟ್ ಕಟ್ಟಡದ ಗುಣಮಟ್ಟ ತಪಾಸಣೆಗಾಗಿ ಸಿದ್ಧಪ್ಪ ಅವರನ್ನು ಸಂಪರ್ಕಿಸಿದಾಗ ₹20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ರಘುರಾಜ್ ದೂರು ನೀಡಿದ್ದರು. ಲಂಚ ಪಡೆಯುತ್ತಿದ್ದ ವೇಳೆ ಅಧಿಕಾರಿಗಳು ಬಂಧಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಆರ್.ಎಸ್ ಪಾಳ್ಯದ ನಿವಾಸಿ ಆರ್.ಎಂ. ಕಿರಣ್ ಎಂಬುವರು ಮೊಬೈಲ್ ಬಿಡಿಭಾಗಗಳ ಪ್ಯಾಕೇಜಿಂಗ್ ಪರವಾನಗಿ ಮಾಡಿಕೊಡುವಂತೆ ಕೋರಿ ಕಾನೂನು ಮಾಪನಶಾಸ್ತ್ರ ಇಲಾಖೆಯ ವಾಣಿಶ್ರೀ ಅವರನ್ನು ಸಂಪರ್ಕಿಸಿದಾಗ ₹10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಕಿರಣ್ ಅವರ ದೂರು ಆಧರಿಸಿ ಕಾರ್ಯಾಚರಣೆ ನಡೆಸಿದ ಲೋಕಾಯುಕ್ತರು, ₹5 ಸಾವಿರ ಲಂಚ ಪಡೆಯುವ ವೇಳೆ ಅಧಿಕಾರಿಯನ್ನು ಬಂಧಿಸಿದ್ದಾರೆ. ಇಬ್ಬರು ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಅನುಮತಿ ಪಡೆಯದೆ ರಸ್ತೆ ಅಗೆದವರಿಗೆ ದಂಡ ವಿಧಿಸಿದ ಪಾಲಿಕೆ


ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಯಲಹಂಕ: ಉತ್ತರ ನಗರಪಾಲಿಕೆಯ ಜಕ್ಕೂರು ಉಪವಿಭಾಗದ ಅಧಿಕಾರಿಗಳು ಹಾಗೂ ಪ್ರಹರಿ ಸಿಬ್ಬಂದಿ ವಿಶೇಷ ಕಾರ್ಯಾಚರಣೆ ನಡೆಸಿ, ಕಾವೇರಿ ನೀರಿನ ಸಂಪರ್ಕಕ್ಕಾಗಿ ಅನುಮತಿ ಪಡೆಯದೆ ರಸ್ತೆಗಳನ್ನು ಅಗೆದು ಹಾಳುಮಾಡಿದ್ದವರಿಗೆ ದಂಡ ವಿಧಿಸಿದರು.

‘ಕಾವೇರಿ ಸಂಪರ್ಕಕ್ಕೆ ರಸ್ತೆಗಳು ಹಾಳು’ ಎಂಬ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವರದಿಯ ಹಿನ್ನೆಲೆಯಲ್ಲಿ ಎಚ್ಚೆತ್ತ ಅಧಿಕಾರಿಗಳು, ಈ ಕಾರ್ಯಾಚರಣೆ ಕೈಗೊಂಡಿದ್ದರು.

ಜಕ್ಕೂರು ಪರಿಶಿಷ್ಟ ಕಾಲೊನಿಯಲ್ಲಿ ಎರಡು ಕಡೆಗಳಲ್ಲಿ ಕಾಂಕ್ರೀಟ್ ರಸ್ತೆಗಳನ್ನು ಅಗೆದು ಹಾಳುಮಾಡಿದ್ದ ಇಬ್ಬರಿಗೆ ತಲಾ ₹10 ಸಾವಿರ ದಂಡ ವಿಧಿಸಿ, ಸ್ಥಳದಲ್ಲೇ ವಸೂಲಿ ಮಾಡಲಾಯಿತು. ಅಲ್ಲದೆ ಹಾಳಾಗಿದ್ದ ರಸ್ತೆಗಳನ್ನು ದುರಸ್ತಿಗೊಳಿಸಿ


ನಗರ ಪಾಲಿಕೆ ಸಿಬ್ಬಂದಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಿದರು

ಗುಂಡಿಗಳನ್ನು ಮುಚ್ಚಲಾಯಿತು.

ಜಕ್ಕೂರು ಕೆಂಪೇಗೌಡ ವೃತ್ತದಿಂದ ಅಮೃತಹಳ್ಳಿ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲಾಯಿತು.

ಜಕ್ಕೂರು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವರುಣ್‌ಕುಮಾರ್ ಮಾತನಾಡಿ, ‘ರಸ್ತೆ ನಿರ್ಮಾಣಕ್ಕೂ ಮುನ್ನವೇ ಅಗತ್ಯ ನೀರು ಹಾಗೂ ಇತರೆ ಸಂಪರ್ಕಗಳನ್ನು ಪಡೆಯುವಂತೆ ಸಾರ್ವಜನಿಕರಿಗೆ ಸೂಚನೆ ನೀಡಲಾಗಿತ್ತು. ಆದಾಗ್ಯೂ ಕೆಲವರು ನಿರ್ಲಕ್ಷ್ಯವಹಿಸಿ ರಸ್ತೆ ನಿರ್ಮಾಣದ ಬಳಿಕ ಅನುಮತಿ ಪಡೆಯದೆ ರಸ್ತೆಗಳನ್ನು ಅಗೆದು, ನಂತರ ಸಮರ್ಪಕವಾಗಿ ಮುಚ್ಚದ ಕಾರಣ, ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ದೂರುಗಳು ಬಂದಿದ್ದವು’ ಎಂದರು.

‘ಮುಂದಿನ ದಿನಗಳಲ್ಲಿ ಅನುಮತಿ ಪಡೆಯದೆ ರಸ್ತೆಗಳನ್ನು ಅಗೆದರೆ ಯಾವುದೇ ಮುಲಾಜಿಲ್ಲದೆ ನೋಟಿಸ್ ನೀಡಿ ದಂಡ ವಿಧಿಸಲಾಗುವುದು’ ಎಂದು ಅವರು ಎಚ್ಚರಿಸಿದರು.

ರ‍್ಯಾಂಪ್ ಶೀಘ್ರ ತೆರವು: ಜಕ್ಕೂರು-ಯಲಹಂಕ ಮುಖ್ಯರಸ್ತೆಯ ಕೆ.ವಿ.ಬೈರೇಗೌಡ ಸಮುದಾಯ ಭವನದ ಸಮೀಪದಲ್ಲಿ ನಿರ್ಮಾಣವಾಗಿರುವ ಅಪಾರ್ಟ್‌ಮೆಂಟ್‌ನ ಪ್ರವೇಶ ದ್ವಾರದಲ್ಲಿ ಪಾದಚಾರಿ ಮಾರ್ಗದಿಂದ ಹೆಚ್ಚುವರಿಯಾಗಿ ಮುಖ್ಯರಸ್ತೆಗೆ ನಿರ್ಮಿಸಿರುವ ರ‍್ಯಾಂಪ್‌ಅನ್ನು ಶೀಘ್ರದಲ್ಲೇ ತೆರವುಗೊಳಿಸಲಾಗುವುದು ಎಂದರು.

ಕಾರ್ಯಾಚರಣೆಯಲ್ಲಿ ಸಹಾಯಕ ಎಂಜಿನಿಯರ್ ಅಭಿಷೇಕ್ ಗೌಡ, ಕಾರ್ಯ ನಿರೀಕ್ಷಕ ನಾಗರಾಜ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಗಾಂಧೀಜಿ ಹತ್ಯೆ ತನಿಖೆ ವಿಳಂಬ ಪ್ರಶ್ನಿಸಿದ್ದ ಅರ್ಜಿ ವಜಾ, ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧಿ ಹತ್ಯೆಗೆ ಸಂಬಂಧಿಸಿ ಕೇಂದ್ರ ಸರ್ಕಾರವು 1965ರ ವರೆಗೆ ಯಾವ ಕಾರಣಕ್ಕೆ ನ್ಯಾಯಾಂಗ ವಿಚಾರಣಾ ಆಯೋಗವನ್ನು ರಚಿಸಿರಲಿಲ್ಲ ಎಂಬುದರ ತನಿಖೆಗಾಗಿ ಜಂಟಿ ಸಂಸದೀಯ ಸಮಿತಿ ರಚಿಸಲು ಕೇಂದ್ರ ಸರ್ಕಾರಕ್ಕೆ ಆದೇಶಿಸಬೇಕು’ ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಕುರಿತು ನಗರದ ಕೆ.ಎನ್.ಮಂಜುನಾಥ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಅರ್ಜಿದಾರರಿಗೆ ₹10 ಸಾವಿರ ದಂಡ ವಿಧಿಸಿದೆ.

‘ಈ ಹಿಂದೆಯೂ ಇದೇ ಮನವಿ ಸಲ್ಲಿಸಿದ್ದೀರಿ. ಮತ್ತೆ ಸಲ್ಲಿಸಿರುವ ಅರ್ಜಿಯಲ್ಲಿ ಯಾವುದೇ ರೀತಿಯ ಸಾರ್ವಜನಿಕ ಹಿತಾಸಕ್ತಿ ಅಡಗಿಲ್ಲ. ಅರ್ಜಿದಾರರ ಈ ನಡೆಯು ನ್ಯಾಯಾಂಗದ ಅಮೂಲ್ಯ ಸಮಯ ವ್ಯರ್ಥ ಮಾಡುವುದಾಗಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ ದಂಡ ವಿಧಿಸಿ ಆದೇಶಿಸಿತು.

‘ದಂಡದ ಮೊತ್ತವನ್ನು ಮುಂದಿನ ಎರಡು ವಾರಗಳಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಪಾವತಿಸಬೇಕು’ ಎಂದು ಅರ್ಜಿದಾರರಿಗೆ ನಿರ್ದೇಶಿಸಿತು.



ಪ್ರಕರಣವೇನು?

ಗಾಂಧೀಜಿ ಹತ್ಯೆಗೆ ಸಂಬಂಧಿಸಿ 1947ರಿಂದ 1965ರ ವರೆಗೂ, ಅಂದರೆ 17 ವರ್ಷಗಳ ಕಾಲ ನ್ಯಾಯಾಂಗ ವಿಚಾರಣಾ ಆಯೋಗವನ್ನು ರಚಿಸದಿರಲು ಕಾರಣವೇನು ಎಂಬುದನ್ನು ತಿಳಿಯಲು ಜಂಟಿ ಸಂಸದೀಯ ಸಮಿತಿ ರಚಿಸಬೇಕು. 1965ರಲ್ಲಿ ನ್ಯಾಯಾಂಗ ವಿಚಾರಣೆ ಆರಂಭಿಸಿದ ಅಂಶಗಳ ಕುರಿತು ತನಿಖೆ ನಡೆಸಲು ಕೇಂದ್ರ ಸರ್ಕಾರಕ್ಕೆ ಆದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

‘ಕಾಶ್ಮೀರ ವಿಚಾರಕ್ಕೆ ಸಂಬಂಧಿಸಿ ಗಾಂಧೀಜಿ 1947ರ ಡಿಸೆಂಬರ್ 30ರಂದು ವಿಶ್ವಸಂಸ್ಥೆಗೆ ಬರೆದಿದ್ದಾರೆ ಎನ್ನಲಾದ ಪತ್ರ ಕಾಣೆಯಾಗಿದ್ದು, ಅದರ ಬದಲಿಗೆ 1948ರ ಜನವರಿ 1ರ ಮತ್ತೊಂದು ಪತ್ರವನ್ನು ಬಳಸಲಾಗಿದೆ. ಈ ವಿಷಯದ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ತನಿಖೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದೂ ಅರ್ಜಿದಾರರು ಕೋರಿದ್ದರು.



ಪ್ರೆಸ್ಟೀಜ್

ಏನನ್ನಾದರೂ ಯಾವುದಕ್ಕಾದರೂ

ಎಕ್ಸ್‌ಚೇಂಜ್ ಆಫರ್

ಮೇ 1 ರಿಂದ ಜೂನ್ 30 ವರೆಗೆ

ಯಾವುದೇ ಹಳೆಯ ಪ್ರಾಡಕ್ಟ್ ವಿನಿಮಯ ಮಾಡಿಕೊಳ್ಳಿ ಮತ್ತು ಪ್ರಿಸಮ್ ಪ್ಲಸ್ ಮಿಕ್ಸರ್ ಗ್ರೈಂಡರ್‌ಗೆ ಅಪ್‌ಗ್ರೇಡ್ ಮಾಡಿಕೊಳ್ಳಿ

ತರಿತರಿಯಾಗಿ ಅರೆಯುವ ವಿಶಿಷ್ಟ ಮೋಡ್



4 SPEED

ಆಕ್ಸೆಲರೇಶನ್ ನಿಯಂತ್ರಣದ ತಂತ್ರಜ್ಞಾನ



1000W ಶಕ್ತಿಶಾಲಿ ಕಾಪರ್ ಮೋಟಾರ್

ಭಾರತದ ಅತ್ಯಂತ ವಿಶ್ವಾಸಾರ್ಹ ಕಿಚನ್ ಸೊಲ್ಯೂಶನ್ಸ್ ಬ್ರ್ಯಾಂಡ್

TRA 2026*

ಪ್ರೆಸ್ಟೀಜ್ ಕಿಚನ್‌ವೇರ್ ಮತ್ತು ಅಪ್ಲಾಯನ್ಸಸ್ ಮೇಲೆ ಅದ್ಭುತ ವಿನಿಮಯ ಆಫರ್‌ಗಳನ್ನು ಆನಂದಿಸಿ

ಪ್ರಿಮಿಯಂ BLDC ಚಿಮ್ನಿ



ವೆಕ್ಟ್ರಾ ಗ್ಯಾಸ್ ಸ್ಟವ್



ಏರ್‌ಫ್ಲಿಪ್ ಏರ್‌ಫ್ರೈಯರ್



ನಿದರ್ಶನದ ಉದ್ದೇಶಕ್ಕಾಗಿ ಮಾತ್ರ AI-ರೂಪಿತ ಚಿತ್ರಗಳು

ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ ಸ್ಟೋರ್‌ಗಳಿಗೆ ಭೇಟಿ ನೀಡಲು ಸ್ಕ್ಯಾನ್ ಮಾಡಿ/
AFA ಆಫರ್‌ಗಳನ್ನು ಪಡೆಯಲು ಡೀಲರ್ ಔಟ್‌ಲೆಟ್‌ಗಳನ್ನು ಆಯ್ಕೆ ಮಾಡಿ

ವಿನಿಮಯ ಆಫರ್ ಪಡೆಯಲು ಸ್ಕ್ಯಾನ್ ಮಾಡಿ

Shop Online on shop.ttkprestige.com

MADE WITH PRIDE IN INDIA

CUSTOMER CARE NO. 080-60004411

*ನಿಯಮಗಳು ಮತ್ತು ಶರತ್ತುಗಳು ಅನ್ವಯ. ಈ ಕೊಡುಗೆಗಳು ಕೇವಲ ಎಕ್ಸ್‌ಚೇಂಜ್‌ಗೆ ಮಾತ್ರ ಅನ್ವಯಿಸುತ್ತದೆ. ಎಲ್ಲ ಡಿಸ್ಕೌಂಟ್‌ಗಳು ಎಮ್‌ಆರ್‌ಪಿ ಮೇಲೆ ಮಾತ್ರ. ಎಲ್ಲಾ ಡಿಸ್ಕೌಂಟ್‌ಗಳು ಸಂಬಂಧಪಟ್ಟ ಪ್ರಾಡಕ್ಟ್ ಕೆಟಗರಿಗೆ ಅನ್ವಯಿಸುತ್ತವೆ, ಮೇಲೆ ಹೇಳಿರುವ ಪ್ರಾಡಕ್ಟ್‌ಗೆ ಮಾತ್ರ ಅಲ್ಲ. ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ ಸ್ಟೋರ್‌ಗಳಲ್ಲಿ ಮತ್ತು ಆಯ್ದ ಡೀಲರ್ ಮಳಿಗೆಗಳಲ್ಲಿ ಮಾತ್ರ ಸ್ಟಾಕ್ ಮುಗಿಯುವವರೆಗೆ ಲಭ್ಯ. ವಿನಿಮಯ ಬೆಲೆ/ಡಿಸ್ಕೌಂಟ್‌ನ ಶೇಕಡಾವಾರು, ಖರೀದಿ ಮಾಡಿದ ಐಟಂಗಳು ಮತ್ತು ಹಿಂದಿರುಗಿಸಲಾದ ಹಳೆಯ ಐಟಂಗಳ ಮೇಲೆ ಅವಲಂಬಿತವಾಗಿರುತ್ತವೆ. ಉದಾಹರಣೆಗೆ, ನೀವು 10ಲೀ ಅಲ್ಯುಮಿನಿಯಂ ಪ್ರೆಶರ್ ಕುಕ್ಕರ್ ನ ವಿನಿಮಯಕ್ಕೆ ಬದಲಾಗಿ 2ಲೀ ಪಾಪ್ಯುಲರ್ ಸ್ವಚ್ಛ್ ಔಟರ್ ಲಿಡ್ ಪ್ರೆಶರ್ ಕುಕ್ಕರ್ ಅನ್ನು ಖರೀದಿಸಿದರೆ, ನೈಜ ಡಿಸ್ಕೌಂಟ್ ₹545/- ಆಗಿರುತ್ತದೆ. ಯಾವುದೇ ಬ್ರ್ಯಾಂಡ್ ನ ಹಳೆಯ ಸಾಮಾನುಗಳನ್ನು ಸ್ವೀಕರಿಸಲಾಗುತ್ತದೆ. ವಾಸ್ತವಿಕ ಬದಲಾವಣೆ ಕೊಡುಗೆ ಬೆಲೆಯ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು ಆಯ್ದ ಡೀಲರ್ ಅಂಗಡಿಗಳಲ್ಲಿ ಲಭ್ಯವಿರುವ ಏನನ್ನಾದರೂ ಯಾವುದಕ್ಕಾದರೂ ಬದಲಾವಣೆ ಕೊಡುಗೆ ಬೆಲೆ ಪಟ್ಟಿಯನ್ನು ನೋಡಿರಿ. ಹಿಂತಿರುಗಿಸಬಹುದಾದ ಹಳೆಯ ಸಾಮಾನುಗಳೆಂದರೆ ಅಲ್ಯುಮಿನಿಯಮ್/ಸ್ಟೈನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್‌ಗಳು, ಅಲ್ಯುಮಿನಿಯಮ್/ ಸ್ಟೈನ್‌ಲೆಸ್ ಸ್ಟೀಲ್ ಕುಕ್‌ವೇರ್ (ಕನಿಷ್ಠ 400 ಗ್ರಾಂ ಪಾತ್ರೆ ತೂಕ), ಗ್ಯಾಸ್ ಸ್ಟವ್‌ಗಳು (ಕನಿಷ್ಠ 2 ಬರ್ನರ್‌ಗಳು), ಮಿಕ್ಸರ್ ಗ್ರೈಂಡರ್‌ಗಳು (ಬಾಡಿ, ಮೋಟರ್ ಮತ್ತು ಎರಡು ಸ್ಟೈನ್‌ಲೆಸ್ ಸ್ಟೀಲ್ ಜಾರ್‌ಗಳನ್ನು ಒಳಗೊಂಡಿರಬೇಕು), ರೈಸ್ ಕುಕ್ಕರ್‌ಗಳು, ಚಿಮಣಿಗಳು, ಹಾಬ್‌ಟಾಪ್‌ಗಳು, ವೆಟ್ ಗ್ರೈಂಡರ್‌ಗಳು, ಒಟಿಜಿಗಳು, ಕೆಟಲ್, ಟೋಸ್ಟರ್‌ಗಳು, ಇಸ್ತ್ರಿ ಪೆಟ್ಟಿಗೆ, ಮೈಕ್ರೊವೇವ್ ಅವೆನ್, ಜ್ಯೂಸರ್‌ಗಳು, ಬ್ಲೆಂಡರ್‌ಗಳು, ವಾಟರ್ ಪ್ಯೂರಿಫೈಯರ್‌ಗಳು ಮತ್ತು ವಾಕ್ಯೂಮ್ ಕ್ಲೀನರ್‌ಗಳು. ಏನನ್ನಾದರೂ ಯಾವುದಕ್ಕಾದರೂ ಆಫರ್ ಇಂಡಕ್ಷನ್ ಕುಕ್‌ಟಾಪ್‌ಗಳಿಗೆ ಅನ್ವಯಿಸುವುದಿಲ್ಲ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ನಿಯಮಗಳು ಮತ್ತು ಷರತ್ತುಗಳನ್ನು ವಿವರವಾಗಿ ತಿಳಿಯಲು ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ /ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ ಅಥವಾ ನಮ್ಮ ವೆಬ್‌ಸೈಟ್ https://shop.ttkprestige.com/anything-for-anything ಗೆ ಭೇಟಿ ನೀಡಿ. *2026 ಗೆ ಅನುಗುಣವಾಗಿ, TRA ನ ಬ್ರ್ಯಾಂಡ್ ಟ್ರಸ್ಟ್ ವರದಿ.

Prestige® Xclusive

Anekal: Ph: 9902103694; **Ananth Nagar**, Phase 2, Ph: 9945666966; **Attibele**, Ph: 7676231525, 9341221525; **Banaswadi:** Ring Road, Ph: 8041634115; **Banashankari**: 3rd Stage, Ph: 7019710357; Banashankari: Stage 2, BDA Complex, Ph: 8023585086, 9739004750; **Basaveshwaranagar,** Ph: 9739591008; Begur, Ph: 9632832037; **Bilekahalli,** Ph: 8970366139; BTM Layout, Ph: 8040939168; **Byadarahalli,** Ph: 8029908542; Cambridge Layout (Indiranagar), Ph: 8042074468, 9590633111; **Chandapura,** Ph: 6363700578; **Channapatna**, Ph: 9686661294; **Channasandra**, Ph: 8660024504, 9148842838; Chandra Layout, Ph: 9739004750; **Chikkajala,** Ph: 9739360533; CV Raman Nagar, Ph: 9686632558; Devanahalli, Ph: 9845737576; **Dommasandra,** Ph: 9480360656; Electronic City Phase 1, Ph: 9449499992, 9449455556; **Gauribidanur,** Ph: 9731114656; **Gottigere,** Ph: 8431241099; Gubbi, Ph: 9035195120; Hassan, Ph: 9148653593; Hegganahalli, Ph: 8028360289,9845982089; **Hennur** Bande, Ph: 9980097982; **Hennur** HBR Layout, Ph: 9353913746, 7204250679; **Hesarghatta** Road, Ph: 8028370400; **Hosa** Road Junction, Ph: 9845597099; Hoskote, Ph: 9845028859; HSR Layout, Ph: 8025726991; Hulimavu, Ph: 8904654433; **Jangalpalya** Gate, Ph: 8861565029; Jayanagar, Ph: 8026652829, 9845066549, 9611112900; Jayanagar, Ph: 9th Block, Ph: 9945446335, 9591720367; Jigani, Ph: 7337801366; Jnana Bharathi, Ph: 9448255689; JP Nagar, Ph: 8041465855, 9620914799; JP Nagar, 1st Phase, Ph: 9606364009; **Kaggadasapura**, Ph: 9686632558; Kammanahalli, Ph: 8041606044; **Kanakapura** Road, Ph: 9964116888, 8041465855; **Kasturinagar,** Ph: 9886553672; **Kengeri** Satellite Town, Ph: 8028485296; **Konamkunte** Cross, Ph: 8618207299; Koramangala, Ph: 8892270414; KR Puram, Ph: 8217603155, 8861494277; Kumaraswamy Layout, Ph: 9739011254; **Kumbalagodu**, Ph: 8029899038; **Madhugiri,** Ph: 9611552805; **Madanayakanahalli,** Ph: 9141883939; Mahalaxmi Layout, Ph: 9845519390; **Malur**, Ph: 9845028859; Marathahalli, Ph: 9844662664, 9844553557; **Mathikere,** Ph: 9845518824; Meenakshi Layout (Hosa Road), Ph: 8951453571; **Muddenapalya,** Ph: 6361341679; **Mutthanallur** (Dommasandra), Ph: 9480360656; **Nagarbhavi** BDA Complex, Ph: 8023585086, 9739004750; **Nagamangala**, Ph: 9731888018, 8027722090; **Nelamangala** (Weavers Colony), Ph: 9353336255; Rajajinagar, Ph: 8041731224, 9008093715; Rajarajeshwari Nagar, Ph: 9008418800; Ramamurthy Nagar, Ph: 8042049545, 9113548170; RT Nagar, Ph: 8041473989; **Sahakar Nagar**, Ph: 9742779574; **Sanjaynagar,** Ph: 9449920899, 8023414179; **Sarjapura** Road, Ph: 8042038646; **Sarjapura** Town, Ph: 9611423555; Segehalli (Kadugodi), Ph: 8123042234; Sheshadripuram, Ph: 8711090976; Sira, Ph: 8310660400, 8197750285; T. **Dasarahalli,** Ph: 9632077972; TC Palya Road, Ph: 7795381196; **Thanisandra,** Ph: 9686340159; **Tiptur**, Ph: 9164688773, 9164596636; Tumkur: Vidyanagar, Ph: 9164853121; Tumkur: Ashoka Road, Ph: 9740110111; **Uttarahalli,** Ph: 9900759678; **Vidyaranyapura,** Ph: 9845518824; **Vijayanagar,** Ph: 8041330034, 9886850026, 9008266110; **Whitefield,** Ph: 8040907273; Wilson Garden, Ph: 8042194509;Yelahanka New Town, Ph: 8668034376; **Yelahanka Old Town**, Ph: 080-47057914, 7338674086; **Sahakar Nagar**, Ph: 9742779574, 7259323505; **Laggere,** Ph: 9035961732 , 8217441906; Hannur, Ph: 8217587608; Chamarajanagar (Galipur)-7676289995,9036467721, Chikkamagaluru-8660471035,9886256535, Chintamani-9845558018, Channarayapatna, Ph: 9900028411; Hassan, Ph: 9148653593; Kollegal, Ph: 8224254138; Kolar, Ph: 9148913866; Maddur, Ph: 7892332987; Malavalli, Ph: 7829890809, 9886874825; Mandya, Ph: 9916271727; Mysuru: Agrahara, Ph: 8861710392; Mysuru : Hallodekeri, Ph: 8212449105; Mysuru: Hebbal, Ph: 9448274239; Mysuru: Hinkal, Ph: 8214194099, 8884194099; Mysuru: KR Nagar, Ph: 8223359373, 9591684586; Mysuru: Kuvempu Nagar, Ph: 8214246746, 9742350311; Mysuru Siddhartha Layout, Ph: 9513540244; Mysuru - Vivekananda Nagar, Ph: 8711006588, 8214253319; Mysuru - VV Mohalla, Ph: 8214190016; Mysuru – Bhogadi, Ph: 9886868922, 9742350311; Nanjangud, Ph: 7353319683; Narasimhaswamy Nagar, Ph: 9035961732; Franchise Enquires Solicited, Contact: Ayush Kumar Sahu, Ph: 9993010283, Ayush.Sahu@ttkprestige.com

Also Available At: Jayanagar: Sarathy: Ph: 41210047; Vishaals: Ph: 9964197120; Royal Mart: Ph: 8790311104; Aravinda: Ph: 41301989; **Bank Colony**: Vardhaman Ind: Ph: 22428300; Kamal Appliances: Ph: 9886671219; **Banashankari:** Varada Glass & Crockery: Ph: 9980949316; Patel Kitchen Appliances: Ph: 9079061706; Chamundi Ind: Ph: 26712633; **Bilekahalli:** Sree Pooja HA: Ph: 9036919084; **Bommanahalli:** Sri Durga HA: Ph: 9900674018; Atchya Elect: Ph: 9241650196; **Chamarjpet:** Vadiraj Stores: Ph: 41517646; **Devarachikkanahalli:** Sapna HA: Ph: 9738732036; **Electronic City:** Dream Mart HM: Ph: 9148934858; Mahadev HA: Ph: 8904907129; **HOSA RD:** Maharaja KW: Ph: 9036400829; **Hosakote:** Dream Mart HM: Ph: 9964744480; **ISRO Layout:** Bhumi Kitchen: Ph: 9916830850; **JP Nagar:** S R Appliances: Ph: 8618846934; **Kanakapura Rd:** Royal Mart: Ph: 28425777; **Padmanabnagar:** Royal Mart: Ph: 9886088993; **Uthrahalli:** Royal Mart: Ph: 26394114; **Mysore Road:** The Karnataka Metal Industry: Ph: 9449342727; **Ayyappa Nagar (KR Puram):** Top Mart SM: Ph: 8271003463; **Babusapalya:** Karnataka HA: Ph: 8105754544; **Basaveshwarnagar:** Mahaveer HA: Ph: 9844173501; Modern Colln: Ph: 23583440; Aadhinath Kitchen Gal: Ph: 41220555; **Gayathri Ngr:** J.K.Steel: Ph: 23320853; **Giri Nagar**: Vidya Ent: Ph: 9449988650; Matahji HA: Ph: 7019385120: **Bagalgunte**: Royal Mart, Ph: 9538000072; Vinayaka Trd, Ph: 9902084567**; Chandra Layout:** Pavan KW, Ph: 8618028319; Chamunda KW, Ph: 9945598719; Milan HA, Ph: 7411738812**; Ganganagar:** Salem industries, Ph: 7892738872; Patel Ind, Ph: 8050899296; **Hesargatta Main Rd:** Royal Mart, Ph: 28398200**; Horamavu:** Mamtha HA, ph: 8880050050; **HRBR Layout:** Home X, Ph: 8089506085; **Harlurur**: Vinayaka HA, Ph: 7760531454: **Katriguppe:** MK Metal Mart, Ph: 9035779199; **KR Puram:** SRM Elect, Ph: 9845445748; Pooja Ele And MOB, Ph: 9738850503; **Boodhigere Rd**: New Royal Fresh, Ph: 9538038885; **Kamanhalli:** Ramdev Steel, Ph: 7259575732; HM Traders, Ph: 9964797616; **Kasavanahalli:** Mathaji HA, Ph: 8880796036; **Kundanahalli:** New Prakash HA, Ph: 7090444111; **Kengeri:** Alankar Lights, Ph: 8762805452; Pooja HA, Ph: 8290491673, Sri Sai Traders, Ph: 8884041506; **Koramangala:** Sowbhagya Traders, Ph: 7337733887, Pooja Kitchen Gallary, Ph: 8904858089; **KMR SWY Layout**: Patel HA, Ph: 8951979665; Om Rajeshwar HA, Ph: 9620830742; **Laggere:** Top Mart, Ph: 9110246047; **LNPURA:** Arihanth Ent, Ph: 7899633338; **Malleshwaram:** Deviprasad HA, Ph: 23564536; Bright Novelty, Ph: 23343505; **Mathikere:** M.Bhawarlals Inc, Ph: 41724740; Seyon Inc, Ph: 9845917797; Patel Mtl Ind, Ph: 9986894923; **Kadugodi:** Little Wonder, Ph: 9961224224; **Madiwala:** Surya HA, Ph: 9036779360; **Malleshpalya:** Bajrang HA, Ph: 9449526463; New Bheru HA, Ph: 9448680738; Ramdev HA, Ph: 9035175860; Sri Bhagawathi HA, Ph: 9590575427; MAA Ambe HA, Ph: 8884198322; **Magadiroad:** Royal Mart, Ph: 23584498; Mahadev Mtl Ind, Ph: 8867799712; **Annaporneshwari Nagar:** Mahadev Kitchen Gall, Ph: 7483426092; **M S Palya:** Royal Mart, Ph: 8147014079; **B Narayanpura(KR Puram):** Yellow Mart, Ph: 7676726487; **Rajajinagar:** Mahalakshmi Metal House, Ph: 23355994; Rathna Kitchen Wld, Ph: 9980090566; Dhanalakshmi Kitchen World, Ph: 41285801; Jayalakshmi KW, Ph: 9844755146; R S Mart, Ph: 6363602929; Pooja Stl Cent, Ph: 23327014; **RR Nagar:** Milan HA, Ph: 28605619; PKW Kictenware, Ph: 9739207043; **Tavarakere:** Mytri Mart SM, Ph: 9961730564; **T C Palya:** RHK Super Mkt, Ph: 9731668995; Big Day SM, Ph: 8867604818; Karnataka HA, Ph: 8105754544; **Tipsandra:** Pawar HA, Ph: 9980517021; Milan HA, Ph: 9611312919; Ramdev HA, Ph: 7406901545; **Ulsoor:** Aishwaryapranam HA, Ph: 9902788429; Pranam Steel Center: Ph: 9448053781; **Udaynagar:** Mother India, Ph: 9036189765; **Venkatapura:** Pooja KG, Ph: 9900426176; **Vijayanagar:** Vijaylaxmi Kw, Ph: 9845022284; Popular Mtl, Ph: 9449589002; **Vidyarnapura:** Praksh KW, Ph: 8050620877; Mahalakshmi Steel House, Ph: 9663375159; All Seasons HM, Ph: 9946728736; Rajeshwar HA, Ph: 7411380837; **Whitefield**: Rolla HM, Ph: 9148003448; Loyalcity, Ph: 7892565797; Royal Mart: Ph: 7079734574; **Yelahanka:** Royalmart, Ph: 41705760; Mutha Electricals, Ph: 22971920; Sai Kitchen World, Ph: 9632811797; **BTM Layout**: Patel Agencies, Ph: 9482853401; **HSR**:Pavan KW, Ph: 8660147791; Nandi KW, Ph: 8618220896; Deepam HA, Ph: 9900315425**; Vartur Rd**: Kitchen Kettles, Ph: 9148994805; **Sarjapur Rd**: Rolla Hyp Mkt, Ph: 9738828368; Shagun KW, Ph: 7829977747**; Nagarbhavi**: Radhakrishna Ent/RK Kitn, Ph: 9739198531**; Akshay Nagar**: New Ambika, Ph: 9740953176; **Tumkur:** N.R Metal Agency, Ph: 0816-2275003; Kavitha Kitchen Ware, Ph: 9538537166; Surya Metal Store, Ph: 9731351050; Tumkur Trade Centre, Ph: 9901432287; Dharshan Ha, Ph: 9632132567; Sudha Ha, Ph: 9964011253; **Gubbi:** Keerthi Gas Stove, Ph: 9686004169; **Tiptur:** Sri Sai Electronics, Ph: 8861432166; Kumar And Kumar, Ph: 9141609900; **Turuvekere**: Sri Sai Electronics, Ph: 8861432166; Home World, Ph: 9019198500; **Pavgada:** Shivanagere Ha, Ph: 9880768236; Meenakshi Appl, Ph: 9880360326; **Sira:** Swamy Ent, Ph: 9741561491; Lakshmi Sreel, Ph: 9060434807; Mallikarjuna Ha, Ph: 8123206930; **Madhugir**i: Akshya Ha, Ph: 9141786066; Vinayaka Store, Ph: 9900219291; **Kunigal:** Karnataka Metal Stores, Ph: 9448550390; New Karnataka Steel Centre, Ph:08132221548, Karnataka Ha, Ph: 8892197645; **Kgf:** Prakash Ha, Ph: 9845113454; **Bangarpet:** Kumar Stores, Ph: 9845935240, Neerav Gupta Electronics, Ph: 9980984955; **Gauribidanur:** Sri Raju Ha, Ph: 9448249527; Dhighvijaya Elec, Ph: 7204757456; **Kanakapura:** Sri Kabbalamma Ha, Ph: 9880835508; **Kolar:** Rakesh Ele, Ph: 9880634555; Naveen Prakash Ha, Ph: 9844997787; Ratanlok Steel, Ph: 9141229922; Ms Steel Centre, Ph: 9036607192; Roshan Metal Mart, Ph: 9620645288; Sm Enterprises, Ph: 9632889588; Prasad Home Square, Ph: 9886635392; Subramanya(Srivalli), Ph: 9743199651; **Malur:** Tulsi Ha, Ph: 6366050730; **Vijayapura:** Rmcity, Ph: 9845164990; **Devanahalli:** New Sowmya Ele, Ph: 9141335210; **Chintamani:** Lavanya Stores, Ph: 9242498294; Nandi Elct & Ha, Ph: 9008278789; **Chikkaballapur:** Balaji Home Needs, Ph: 8722222537; Sri Satya Elct, Ph: 9845508501; E City, Ph: 9945216493, **Ramnagara**:Vaibhav Ha, Ph: 9845305275**; Bidadi**:Vijay Elect Furniture, Ph: 9731257817.

Also Available At: Pai INTERNATIONAL



ದೇಹದ ನಿರ್ಜಲತ್ವವ ತಡೆಯಿರಿ

• ಡಾ. ಸತ್ಯನಾರಾಯಣ ಭಟ್ ಪಿ.

ಎಲ್ಲೋ ಒಂದೊಮ್ಮೆ ಸುರಿವ ನಾಕು ಹನಿಮಳೆಗೆ ಇಳೆ ಕಾದಿದೆ. ಈ ಬಾರಿಯ ಮಳೆಗಾಲ ಬೇಗನೆ ಶುರು ಎನ್ನುತ್ತದೆ, ಹವಾಮಾನ ಇಲಾಖೆ. ಆದರೆ ರವಿಯ ಪ್ರತಾಪ ದಿನೇ ದಿನೇ ಏರು ಮುಖ. ಈ ಕಾಲದ ಆಹಾರಕ್ರಮ ಹೀಗಿರಲಿ:

- ಹುಣಸೆ ಹಣ್ಣು ಕರಗಿಸಿಕೊಳ್ಳಿರಿ. ಅದಕ್ಕೆ ಬೆಲ್ಲ ಕೂಡಿಸಿರಿ. ನಿಂಬೆಯಂತೆಯೇ ಪಾನಕ ಸಿದ್ಧ.
- **ಬೆಲ್ಲದ ಪಾನಕ:** ಕಾಳು ಮೆಣಸು ಪುಡಿಗೆ ಅದರ ಪ್ರಮಾಣಕ್ಕೆ ಅನುಗುಣವಾಗಿ ಶುದ್ಧ ನೀರನ್ನು ಬೆರಸಿರಿ. ರಾಸಾಯನಿಕ ರಹಿತ ಬೆಲ್ಲ ಕೂಡಿಸಿರಿ. ಶುದ್ಧ ನೀರು ಪ್ರಮಾಣಕ್ಕನುಗುಣ ಸೇರಿಸಿ. ಜಾತ್ರೆಯ ಜನಸಂದಣಿಯಿರಲಿ. ಮನೆ ಬಳಕೆಯ ಮಂದಿಗಾಗಲಿ. ಕಡಿಮೆ ಖರ್ಚಿನ ದಿನದಿನದ ಪಾನಕ ಸಿದ್ಧ. ಕಫದ ಕಾಯಿಲೆ, ಗ್ಯಾಸ್ಟ್ರಿಕ್ ಸಂಗಡ ದಣಿವಡಗಿಸುವ ದ್ರವಾಹಾರ ಸಿದ್ಧ.
- **ಶುಂಠಿ, ಲಿಂಬೆ ಸಹಿತ ಇಕ್ಷು ರಸ:** ಕಬ್ಬಿನ ಹಾಲು ತಾಜಾ ಇರಲಿ. ತಕ್ಷಣಕ್ಕೆ ಎನರ್ಜಿ ಸಿಗುತ್ತದೆ. ಮೂತ್ರ ಪ್ರವೃತ್ತಿ ಸರಾಗ.
- **ಖರ್ಜೂರಾದಿ ಮಂಥ:** ಖರ್ಜೂರ, ದಾಳಿಂಬೆ, ಒಣದ್ರಾಕ್ಷಿ, ಹಳೆಹುಣಸೆ, ಹಸಿ ನೆಲ್ಲಿಕಾಯಿ ಮಿಶ್ರಣದ ದ್ರವಾಹಾರ. ಮಿಕ್ಸಿಗೆ ಹಾಕಿ ಸಿದ್ಧ ಮಾಡಿ ಕುಡಿಯಿರಿ. ಎಲ್ಲ ಸಿಗದಾದರೆ ಒಂದೊಂದನ್ನೂ ಬಳಸಲು ಶಕ್ಯ. ಎಲ್ಲ ಕೂಡಿಸಿದರೆ ಅಮೃತೋಪಮ. ಎಂತಹ ಹಳೆ ಕಾಯಿಲೆಯ ಮಂದಿಗೂ, ಎಳೆಗೂಸಿನಿಂದ ವೃದ್ಧರಿಗೂ ಅತ್ಯಂತ ಚೇತೋಹಾರಿ.
- **ತಿಲಜೀವನ:** ಕರಿ ಎಳ್ಳು ಹಾಲೊಡನೆ ಬೀಸಿದ ಜ್ಯೂಸ್ ಉತ್ತಮ ಶಕ್ತಿದಾಯಕ. ಎಳ್ಳಿನ ಕಷಾಯ ಸಹ ಇಂತಹದೇ ದ್ರವಾಹಾರ. ತಣಿದ ಕಷಾಯಕ್ಕೆ ಬೆಲ್ಲ ಅಥವಾ ಜೇನನ್ನು ಬೆರೆಸಿ.
- **ತೆಂಗಿನ ಕಾಯಿಹಾಲು:** ತಾಜಾ ಕಾಯಿ ತಿರುಳಿ ರುಬ್ಬಿಕೊಳ್ಳಿರಿ. ಹಾಲು ಹಿಂಡಿಕೊಳ್ಳಿರಿ. ಕುಡಿಯಲು ಬಹಳ ಸ್ವಾದಿಷ್ಟ. ಮಕ್ಕಳಿಗೆ, ಹಿರಿಯರಿಗೆ ಮಲಪ್ರವೃತ್ತಿ ಸರಾಗ. ಆರೋಗ್ಯದಾಯಿ.
- **ಎಳನೀರು:** ಬೇಸಿಗೆಯಲ್ಲಿ ಅತ್ಯಂತ ತುಟ್ಟಿಯಾಗುವ ತಾಜಾ ಎಳನೀರು ಅಮೃತೋಪಮ. ಜೇನುಗೂಡಿಸಿ ಕುಡಿದರೆ ಅನುಪಮ ಆರೋಗ್ಯ. ಎಲ್ಲಾ ವಯಸ್ಸಿನವರಿಗೆ ಒಗ್ಗುವಂಥದ್ದು.
- **ಆಮ್ರರಸಾಲ:** ಹಣ್ಣುಗಳ ರಾಜ ಮಾವು. ಹೃದಯದ ಟಾನಿಕ್ ಪಟ್ಟಿಯಲ್ಲಿ ದಾಳಿಂಬೆ, ಮುರುಗಲ, ಅಂಬಟೆ, ದಾಳಿಂಬೆ, ವಾಟೆ ಹುಳಿ, ಕೌಳಿ ಹಣ್ಣು, ದ್ರಾಕ್ಷಿ ಹಣ್ಣು ಮುಂತಾದ ಹತ್ತು ಹಣ್ಣುಗಳಿವೆ. ಮೊದಲನೆಯ ಆಯ್ಕೆ ಮಾವು. ಮಾವಿನ ಕಾಯಿಯ ಬೇಯಿಸಿದ ಜ್ಯೂಸ್ ಅಪ್ಪೆ ಹುಳಿ ಹೆಸರಿನದು. ಹಣ್ಣಿನ ರಸಕ್ಕೆ ರಸಾಲ ಎಂಬರು. ಪಟ್ಟಿಯ ಉಳಿದ ಹಣ್ಣುಗಳೂ ಅಂತಹದೇ ಉಪಕಾರಿ ಗುಣದವು. ಹೃದಯದ ಕಾಯಿಲೆ ತಡೆಯುವ ಶಕ್ತಿ ಇವಕ್ಕಿವೆ. ತಾಜಾ ರಸ ತಯಾರಿಸಿ ಕುಡಿಯುವಾ. ಗುಂಡಿಗೆ ಗಟ್ಟಿ ಮಾಡಿಕೊಳ್ಳುವಾ.
- **ಸೊಗದೆ ಷರಬತ್:** ನಾಮದ ಬೇರು, ನನ್ನಾರಿ, ನಾಮಸೊಗದೆ ಎಂಬ ಹೆಸರಿನ ಅತಿ ಪರಿಮಳದ ಬೇರು ಬಳ್ಳಿ ತಿಳಿಯಿರಿ. ಇದು ಕಾಡಿನ ಮೂಲದ್ದು. ಇದರ ಕಷಾಯ, ಸಕ್ಕರೆ ಪಾಕದಲ್ಲಿ ಬೆರಸಿದ ದ್ರವ ಅಂಗಡಿಗಳಲ್ಲಿ ಲಭ್ಯ. ಎಂತಹದೇ ಉಷ್ಣ, ಉರಿಮೂತ್ರವಿರಲಿ, ಚರ್ಮದ ಗಾದರಿ, ಕೆರೆತಗಳಿರಲಿ. ಬೇಸಿಗೆಯುದ್ದಕ್ಕೆ ಕುಡಿಯಲು ಅನುಪಮ ದ್ರವಾಹಾರ.
- **ಮಾದೀಫಲ ರಸಾಯನ:** ಬರೋಬ್ಬರಿ ಕಿಲೋ ತೂಗಬಲ್ಲ ದೊಡ್ಡ ನಿಂಬೆ ಇದು. ಚಂಡಿಕಾ ಯಾಗದ ಪೂರ್ಣಾಹುತಿಗೆ ಸಲ್ಲುವ ಫಲ. ಮೂಲವ್ಯಾಧಿಯ ಉಪಟಳ ಬೇಸಿಗೆಯಲ್ಲಿ ಅತಿ ಹೆಚ್ಚು. ಗ್ಯಾಸ್ಟ್ರಿಕ್ ಎಂಬ ಶ್ರೀಸಾಮಾನ್ಯರ ಪೆಡಂಭೂತ ವಾಸ್ತವವಾಗಿ ಮೂಲವ್ಯಾಧಿಯ ಮೊದಲ ಲಕ್ಷಣ. ಇಂತಹ ಹಣ್ಣಿನ ತಾಜಾ ಪಾನಕ ತಯಾರಿಸಲಾದೀತು. ನಿತ್ಯಸೇವನೆಗೆ ಅರ್ಹ. ನಿಂಬೆ ಷರಬತ್ ರೂಪದಲ್ಲಿ ಮಾಡಿಕೊಳ್ಳಿರಿ. ನಿತ್ಯ ಕುಡಿಯಿರಿ.
- **ಹೆಸರು ಪಾನಕ:** ನೆನೆ ಹಾಕಿದ ಹಸಿರು ಹೆಸರು ಮಿಕ್ಸಿಯಲ್ಲಿ ರುಬ್ಬಿಕೊಳ್ಳಿರಿ. ತಾಜಾ ಪಾನಕ ಅತಿಶಯ ಗುಣಕಾರಿ. ಎಲ್ಲರಿಗೆ ಅತ್ಯಂತ ಪಥ್ಯತಮ.
- **ಉದ್ದಿನ ಪಾನಕ:** ಶ್ರಮದ ಕೆಲಸ ಮಾಡುವ ಮಂದಿಗೆ ಇದು ಅತ್ಯಂತ ಅವಶ್ಯ. ಕ್ಯಾಲೊರಿ ಹೆಚ್ಚು ನೀಡುತ್ತದೆ. ಬೆಲ್ಲಗೂಡಿಸಿ ನೆನೆದ ಉದ್ದು ಬೀಸಿ ಸಿದ್ಧಗೊಳಿಸಿದ ಉದ್ದಿನ ಪಾನಕ ಕುಡಿದರೆ ದೇಹಕ್ಕೆ ಬಲ ಮತ್ತು ಪುಷ್ಟಿ.
- **ಸಂಬಾರ ಸೌತೆಯ ಪಾನಕ:** ಕರಬೂಜ, ಕಲ್ಲಂಗಡಿ ಪಾನಕ ನಿಮಗೆ ತಿಳಿದಿದೆ. ಮದುವೆ ಮನೆಗಳ ಪುದೀನ ಜ್ಯೂಸಿನಂತಹ ಸ್ವಾಗತ ಡ್ರಿಂಕ್. ಇದು ಸರ್ವೇ ಸಾಮಾನ್ಯ. ಕರಾವಳಿ ಮಂದಿಗೆ ಪರಿಚಿತವಾದ ಹಣ್ಣು ಸಂಬಾರ್ ಸೌತೆಯ ಪಾನಕ ಗೊತ್ತೇ? ಬೀಜ, ಸಿಪ್ಪೆ ಸುಲಿದ ಹಣ್ಣು ಸೌತೆಕಾಯಿಯನ್ನು ಕತ್ತರಿಸಿ ಹೋಳಾಗಿಸಿರಿ ಅಥವಾ ತುರಿಮಣೆಯಲ್ಲಿ ತುರಿಯಿರಿ. ರುಚಿಗೆ ತಕ್ಕ ಬೆಲ್ಲ ಹಾಕಿರಿ. ಅಗ್ಗದ ಎನರ್ಜಿ ಡ್ರಿಂಕ್ ಸಿದ್ಧ.
- **ಬೇಲದ ಹಣ್ಣು, ಕಾಶಿ ಬಿಲ್ಪತ್ರೆ ಹಣ್ಣು ಷರಬತ್:** ಗ್ರಾಮಾಂತರ ಪ್ರದೇಶದ ಕಾಡು ಮರ ಬೇಲ ಮತ್ತು ಬಿಲ್ವ. ಅವನ್ನು ಬಳಸಿ ಸಿದ್ಧಪಡಿಸುವ ತಾಜಾ ಷರಬತ್ತನ್ನು ಸರ್ವ ರೋಗ ಸಂಜೀವಿನಿ ಎಂದು ಕರೆದರೆ ಅಚ್ಚರಿಯಿಲ್ಲ. ಕೋಲ್ಕತ್ತ, ಪಾಟ್ನದಲ್ಲಿ ಬಿಲ್ಪತ್ರೆ ಫಲ ಗುಡ್ಡೆ ಗುಡ್ಡೆ ಹಾಕಿ ಮಾರುವರು. ಅಂತಹ ಬೇಡಿಕೆಯ ಬೇಸಿಗೆ ಪಾನೀಯ ಇವು ಎರಡೂ ಸಹ.
- **ಸತ್ತೂ:** ಉತ್ತರ ಭಾರತದ ಉಷ್ಣಗಾಳಿ ತಡೆಗೆ ಬಡವರ ಪಾನಕ ಮಾದರಿ ಅರಿಯಿರಿ. ಒಂದು ಲೋಟ ನೀರಿಗೆ ಒಂದೇ ಚಮಚೆ ಕಡಲೆ ಹಿಟ್ಟು. ಉಪ್ಪು, ಸಕ್ಕರೆ ಕೂಡಿಸಿ ಕಡೆಗೋಲಿನಿಂದ ಮಥಿಸುತ್ತಾರೆ. ಲೋಟ ತುಂಬ ಕುಡಿದರೆ ಹೊಟ್ಟೆ ತುಂಬುತ್ತದೆ. ಕಡಲೆ ಧಾನ್ಯಕ್ಕೆ ವಿಷಹರ ಗುಣ ಇದೆ ಎಂದು ಕಂಡು ಹಿಡಿದ ಮಹನೀಯ ವಿಷವೈದ್ಯ ಗ್ರಂಥಕಾರನ ಹೆಸರು ಮಂಗರಸ. ಮುಗುಳಿಪುರದ (ಚಿಕ್ಕ ಮುಗುಳೂರು) ಅರಸನೀತ. ಕನ್ನಡದ ಈ ವಿಷವೈದ್ಯ ಗ್ರಂಥವು ವಿಶ್ವದ ಪ್ರಪ್ರಥಮ ಸಂಪೂರ್ಣ ಗ್ರಂಥ. ಕಡಲೆಯ ಬೇಳೆಯ ಕೋಸಂಬರಿಯ ಬಳಕೆ ಬಹುಶಃ ಎಂಟುನೂರು ವರ್ಷ ಕಳೆದರೂ ಜನಮಾನಸದಲ್ಲಿ, ಹಬ್ಬದಡುಗೆಯಲ್ಲಿ ಉಳಿಯಲು ಈ ಗ್ರಂಥದ ಮಾಹಿತಿ ಮೌಖಿಕ ರೂಪದಲ್ಲಿ ಉಳಿದದ್ದು! ಬೇಸಿಗೆಯ ವಿಷ (ಟಾಕ್ಸಿನ್) ಕಳೆಯಲು ಕಡಲೆ ಹಿಟ್ಟಿನ ಪಾನಕ, ಕೋಸಂಬರಿಗಳನ್ನು ಬಳಸಲು ಮರೆಯದಿರಿ.
- **ಕೊತ್ತಂಬರಿ ಕಷಾಯ:** ಮಲೆನಾಡಿಗರ ಮಳೆಗಾಲದ ಪಾನೀಯ. ಇನಿತು ಹಾಲಿಗೆ ನೀರು ಬೆರಸಿರಿ. ದನಿಯಾ ಪುಡಿಗೂಡಿಸಿ ಕುದಿಸಿದ ಪಾನೀಯಕ್ಕೆ ಕಲ್ಲು ಸಕ್ಕರೆ, ಬೆಲ್ಲಗೂಡಿಸಿ ಹದ ಬಿಸಿ ಕುಡಿದರೆ ದಾಹ, ನೀರಡಿಕೆ ಇಂಗೀತು. ಸಾರ್ವಕಾಲಿಕ ಬಳಕೆಗೆ ಯೋಗ್ಯವಾದ ಬಿಸಿ ಪಾನೀಯ. ಬಿಸಿಲುಗಾಲಕ್ಕೂ ಅಮೃತೋಪಮ. ಹೃದಯಕ್ಕೆ ಬಲ; ದೇಹಾರೋಗ್ಯಕ್ಕೆ ಹಿತ.

❖

ಸ್ಕೇಬೀಸ್ ತುರಿಕಜ್ಜಿ

• ಡಾ. ವೀಣಾ ಎನ್. ಸುಳ್ಯ

'ಇಚ್ ಮೈಟ್' (ಸಾರ್ಕೋಪಟ್ಸ್ ಸ್ಕೇಬೀಸ್) ಎಂಬ ಪರಾವಲಂಬಿ ಕ್ರಿಮಿಯಿಂದ ಚರ್ಮಕ್ಕೆ ಬರುವ ಒಂದು ಬಗೆಯ ತುರಿಕಜ್ಜಿ ಸಾಮಾನ್ಯವಾಗಿ ಕಂಡುಬರುವ ಚರ್ಮದ ಸಮಸ್ಯೆಗಳಲ್ಲಿ ಒಂದು. ಹಾಗೆಯೇ ನಿರ್ಲಕ್ಷ್ಯಕ್ಕೆ ಒಳಪಟ್ಟ ಚರ್ಮದ ಸಮಸ್ಯೆಯೂ ಹೌದು. ಒಬ್ಬರಿಂದ ಒಬ್ಬರಿಗೆ ಬಹು ಸುಲಭವಾಗಿ, ವೇಗವಾಗಿ ಹರಡುವುದರಿಂದ ನಿಯಂತ್ರಣ ತುಸು ಕಷ್ಟ. ಕೇವಲ 20 ನಿಮಿಷಗಳ ಸಮಯದ ಸಂಪರ್ಕ ಮಾತ್ರದಿಂದಲೇ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಶಾಲೆಯಲ್ಲಿ ಮಕ್ಕಳಿಂದ ಮಕ್ಕಳಿಗೆ ಹರಡಿ ಮನೆಯಲ್ಲಿರುವ ಎಲ್ಲರಿಗೂ ತನ್ನ ಪ್ರಭಾವವನ್ನು ತೋರಿಸುತ್ತದೆ.

ಪ್ರಪಂಚದಾದ್ಯಂತ ಕಾಣಿಸಿಕೊಳ್ಳುವ ಈ ಸಮಸ್ಯೆಯು ಬಿಸಿ ಉಷ್ಣವಲಯದಲ್ಲಿ, ಜನಸಂಖ್ಯೆ ಸಾಂದ್ರತೆ ಹೆಚ್ಚು ಇರುವಲ್ಲಿ ಹೆಚ್ಚು. ವಸತಿ ಶಾಲೆಗಳಲ್ಲಿ, ಹಾಸ್ಟೆಲ್‌ಗಳಲ್ಲಿ, ಆಶ್ರಮಗಳಲ್ಲಿ, ಜೈಲುಗಳಲ್ಲಿಯೂ ಕಂಡುಬರುತ್ತದೆ. ಯಾವ ವಯಸ್ಸಿನವರಿಗಾದರೂ ಈ ಸಮಸ್ಯೆ ಕಾಡಬಹುದು.

'ಸಾರ್ಕೋಪಟ್ಸ್ ಸ್ಕೇಬೀಸ್' ಎಂಬ ಪರಾವಲಂಬಿ ಕ್ರಿಮಿ ಎಂಟು ಕಾಲುಗಳನ್ನು ಹೊಂದಿರುವ ಮನುಷ್ಯರ ಚರ್ಮದ ಹೊರಪದರದಲ್ಲಿ ಬೆಳೆಯುವ ಸೂಕ್ಷ್ಮಜೀವಿ. ಹೆಣ್ಣುಕ್ರಿಮಿ ಮೊಟ್ಟೆ ಇಟ್ಟ ಮೂರರಿಂದ ಹತ್ತು ದಿನಗಳ ಬಳಿಕ ಮೊಟ್ಟೆ ಒಡೆದು 1-2 ವಾರದಲ್ಲಿ ಲಾರ್ವವಾಗಿ, ವಯಸ್ಕ ಹುಳುವಾಗಿ ಬೆಳೆಯುತ್ತದೆ. ಈ ಹುಳ ಮತ್ತೆ ಚರ್ಮದ ಬೇರೆ ಭಾಗಕ್ಕೆ ಅಥವಾ ಇನ್ನೊಬ್ಬರಿಗೆ ಹರಡುತ್ತದೆ. ವಯಸ್ಕ ಕ್ರಿಮಿ ಚರ್ಮದ ಹೊರಪದರದಲ್ಲಿ ಬಿಲವನ್ನು ಕೊರೆದು, ಮತ್ತೆ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ. 3-4 ವಾರ ದೇಹದಲ್ಲಿ ಜೀವಿಸುವ ಈ ಕ್ರಿಮಿ, ದೇಹದಿಂದ ಹೊರ ಬಂದರೆ 24 ರಿಂದ 36 ಗಂಟೆಗಳಲ್ಲಿ ಸಾಯುತ್ತದೆ.

ಚರ್ಮದ ಒಳಗೆ ಪ್ರವೇಶಿಸಿದ, 4ರಿಂದ 6 ಆರು ವಾರಗಳ ನಂತರ, ಕೀಟ ಕಡಿದಂತೆ ಕಾಣುವ ಸಣ್ಣ ಸಣ್ಣ ಕೆಂಪು ಉಬ್ಬುಗಳು/ದದ್ದುಗಳು ಮೊದಲು ಕಾಣಿಸಿಕೊಳ್ಳುತ್ತವೆ. ಅಲ್ಲಿ ಕಿರಿಕಿರಿಯನ್ನು ಉಂಟುಮಾಡುವುದೇ ಅಲ್ಲದೇ ವಿಪರೀತ ತುರಿಕೆ ಉಂಟಾಗುತ್ತದೆ. ತುರಿಕೆ ರಾತ್ರಿಯ ಸಮಯದಲ್ಲಿ ವಿಪರೀತವಾಗಿ ಕಾಣಿಸಿಕೊಳ್ಳುತ್ತದೆ. ವಯಸ್ಕ ಕ್ರಿಮಿ ಚರ್ಮದ ಮೇಲ್ಪದರದಲ್ಲಿ ಬಿಲವನ್ನು ಕೊರೆದು, ಮತ್ತೆ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ.

ಚರ್ಮದಿಂದ ಚರ್ಮಕ್ಕೆ, ನೇರ ಸಂಪರ್ಕದಿಂದ ಕ್ರಿಮಿ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಮಕ್ಕಳು ಬಳಸುವ ಪೆನ್ನು, ಪೆನ್ಸಿಲ್, ಸ್ಕೇಲ್, ಇರೇಸರ್, ಪುಸ್ತಕಗಳ ಮೂಲಕ ಕ್ರಿಮಿಯು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಹಾಸಿಗೆಯನ್ನು ಹಂಚಿಕೊಂಡಾಗಲು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಮೊದಲ ಬಾರಿಗೆ ಸ್ಕೇಬಿಸ್ ಸಂಪರ್ಕಕ್ಕೆ ಬಂದು, ಕಾಯಿಲೆಯ ಸೂಚನೆ ಕಾಣಿಸಿಕೊಳ್ಳಲು 4 ರಿಂದ 6 ವಾರ ತೆಗೆದುಕೊಂಡರೆ, ಎರಡನೆ ಬಾರಿ ಸಂಪರ್ಕಕ್ಕೆ ಬಂದಾಗ 1ರಿಂದ 2 ವಾರಗಳಲ್ಲಿ ತುರಿಕೆ ಆರಂಭವಾಗಬಹುದು.

ವಿಧಗಳು

ಸಾಮಾನ್ಯ ವಿಧ: ಬೆರಳ ಸಂದುಗಳಲ್ಲಿ ತುರಿಕೆ, ಆರಂಭವಾಗುತ್ತದೆ. ಸಣ್ಣ ಸಣ್ಣ ನೀರಿನ ಗುಳ್ಳೆಗಳು ಮೊದಲಿಗೆ ಕಾಣಿಸಿಕೊಳ್ಳುತ್ತವೆ. ಮತ್ತೆ ಮತ್ತೆ ತುರಿಸುವುದರಿಂದ, ಆ ಗುಳ್ಳೆಗಳು ಒಡೆದು ಚರ್ಮದಲ್ಲಿ ಗಾಯವಾಗುತ್ತದೆ. ಗಾಯಗಳು ಹುಣ್ಣುಗಳಾಗಿ ಬದಲಾಗುತ್ತವೆ. ನಂಜು ಆಗಿ ರಸಿಕೆ ಉಂಟಾಗಬಹುದು. ಕ್ರಿಮಿಯು ಚರ್ಮದ ಕೆಳಗೆ ಓಡಾಡಿದ ಸ್ಥಳದಲ್ಲಿ ಸಣ್ಣಗೆರೆಗಳು ಕಾಣಿಸಿಕೊಳ್ಳುತ್ತವೆ. ದೇಹದಲ್ಲಿ ಸಮಸ್ಯೆಯನ್ನು ಉಂಟುಮಾಡಲು ಸುಮಾರು 10ರಿಂದ 15 ಕ್ರಿಮಿಗಳಷ್ಟೇ ಸಾಕು.

ಗಂಟುಗಳಂತೆ ಕಾಣಿಸಿಕೊಳ್ಳುವುದು: ಕೈ ಬೆರಳು ಕಾಲ ಬೆರಳುಗಳ ನಡುವೆ, ಚರ್ಮದ ಹೊದಿಕೆಗಳಲ್ಲಿ, ಮಣಿಕಟ್ಟು, ತೋಳುಗಳು, ಸೊಂಟದ ಕೆಳಭಾಗ, ತೊಡೆಸಂದುಗಳಲ್ಲಿ ಕಜ್ಜಿ ಮತ್ತು ತುರಿಕೆಗಳು ಕಾಣಿಸಿಕೊಳ್ಳುತ್ತವೆ.

ಕ್ರಸ್ಟೆಡ್ ಸ್ಕೇಬೀಸ್: ತೀವ್ರ ರೂಪದ ಸ್ಕೇಬಿಸ್, ಈ ಸಂದರ್ಭದಲ್ಲಿ ಲಕ್ಷಾಂತರ ಕ್ರಿಮಿಗಳು ದೇಹದಲ್ಲಿದ್ದು ಚರ್ಮದ ಹೊರಪದರ ದಪ್ಪವಾಗಿ ಪುಡಿಪುಡಿಯಾಗಿ ಉದುರಬಹುದು.

ಚಿಕಿತ್ಸೆ

ಮನೆಯಲ್ಲಿರುವ ಎಲ್ಲರೂ ಏಕಕಾಲದಲ್ಲಿ ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕು. ಈ ಕ್ರಿಮಿಯನ್ನು ನಾಶಪಡಿಸುವ ಮಾತ್ರೆಗಳು (ಐವರ್‌ಮೆಕ್ಟಿನ್) ಈಗ ಲಭ್ಯವಿದೆ. ಕ್ರಿಮಿನಾಶಕ ಲೋಷನ್‌ನನ್ನು (ಪ್ರೇಮೆಥ್ರಿನ್) ಸ್ನಾನದ ಬಳಿಕ, ದೇಹವನ್ನು ಮೃದುವಾದ ಬಟ್ಟೆಯಲ್ಲಿ ಒರೆಸಿದ ಬಳಿಕ, ಕುತ್ತಿಗೆಯಿಂದ ಕೆಳಗೆ ಪೂರ್ತಿಯಾಗಿ ಹಚ್ಚಬೇಕು. 12 ಗಂಟೆಗಳ ನಂತರ ಮತ್ತೆ ಸ್ನಾನ ಮಾಡಬೇಕು. ಮೂರು ದಿನಗಳ ಹಿಂದೆ ಉಪಯೋಗಿಸಿದ ಬಟ್ಟೆ, ಟವೆಲ್, ಹಾಸಿಗೆ ಬಟ್ಟೆ ಎಲ್ಲವನ್ನು ಬಿಸಿ ನೀರಿನಲ್ಲಿ ಹಾಕಿ ತೊಳೆಯಬೇಕು. ಬಿಸಿಲಿನಲ್ಲಿ ಒಣಗಿಸಬೇಕು. ಹಾಸಿಗೆ, ದಿಂಬು ಇತ್ಯಾದಿಗಳನ್ನು ಬಿಸಿಲಿನಲ್ಲಿ ಇಡಬೇಕು. ಔಷಧಗಳು ಕ್ರಿಮಿಯನ್ನು ಮಾತ್ರ ನಾಶಪಡಿಸುವುದರಿಂದ, ಮೊಟ್ಟೆಗಳು ಹಾಗೆಯೇ ಉಳಿದಿರುತ್ತವೆ. ಒಡೆದ ಮೊಟ್ಟೆಯಿಂದ ಬಂದ ಕ್ರಿಮಿಗಳನ್ನು ನಾಶ ಮಾಡುವ ಸಲುವಾಗಿ ಒಂದು ವಾರದ ಬಳಿಕ ಮತ್ತೊಮ್ಮೆ ಔಷಧವನ್ನು ಸೇವಿಸುವುದು ಅಗತ್ಯ.

ಒಂದು ವಾರದ ಬಳಿಕ ಮತ್ತೊಮ್ಮೆ ಔಷಧವನ್ನು ದೇಹಕ್ಕೆ ಹಚ್ಚುವುದು ಅಗತ್ಯ. ಮಾತ್ರೆಯನ್ನು ತೆಗೆದುಕೊಂಡ 14 ದಿನಗಳ ಬಳಿಕ ಮತ್ತೊಮ್ಮೆ ತೆಗೆದುಕೊಳ್ಳುವುದು ಒಳ್ಳೆಯದು. ಸ್ಕೇಬೀಸ್ ಇದ್ದಾಗ ಮಕ್ಕಳನ್ನು ಶಾಲೆಗೆ ಕಳುಹಿಸದಿರುವುದು ಒಳ್ಳೆಯದು. ಚಿಕಿತ್ಸೆ ಪ್ರಾರಂಭಿಸಿದ 24 ಗಂಟೆಗಳ ಬಳಿಕ ಶಾಲೆಗೆ ಕಳುಹಿಸಬಹುದು. ಹಿರಿಯರು ಕೂಡ ಚರ್ಮಕ್ಕೆ ಕಾಯಿಲೆ ಬಂದಿದ್ದಾಗ ಹೊರಗಿನ ಕೆಲಸಕ್ಕೆ ಹೋಗದೆ ಇರುವುದು ಒಳ್ಳೆಯದು.

ಚಿಕಿತ್ಸೆ ಸಿಗದಿದ್ದರೆ?

ತುರಿಕೆಯಿಂದ ಒಡೆದ ಚರ್ಮದ ಗಾಯಗಳಲ್ಲಿ ಬ್ಯಾಕ್ಟೀರಿಯಾದಿಂದ ನಂಜು ಉಂಟಾಗಬಹುದು. ಚರ್ಮದ ಒಳಪದರಗಳಿಗೆ ನಂಜು ಹರಡುವುದು (ಸೆಲ್ಯುಲೈಟಿಸ್). ನಂಜು ಶರೀರದಲ್ಲಿ ಹರಡಬಹುದು (ಸೆಪ್ಟಿಸೀಮಿಯಾ). ಮೂತ್ರಪಿಂಡದ ಸಮಸ್ಯೆ ಉಂಟಾಗಬಹುದು (ಗ್ಲಾಮೇರುಲೋ ನೆಫ್ರೈಟಿಸ್). ಕಾಲಾಂತರದಲ್ಲಿ ಹೃದಯದ ಕಾಯಿಲೆಯನ್ನೂ ಉಂಟುಮಾಡಬಹುದು. ಈ ತರಹದ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುವುದರಿಂದ, ಸ್ಕೇಬಿಸ್ ಕಾಯಿಲೆಗೆ ಸಕಾಲದಲ್ಲಿ, ಸರಿಯಾದ ಚಿಕಿತ್ಸೆಯನ್ನು ಕೊಡುವುದು ಅತ್ಯಂತ ಅಗತ್ಯ.

❖



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಸಮಸ್ಯೆ ಮತ್ತು ಪರಿಹಾರ

$x + 3y = 6$ (1)

ಮತ್ತು $2x - 3y = 12$ (2)

ಈ ಸಮೀಕರಣಗಳು ಸ್ಥಿರವೇ ಎಂಬುದನ್ನು ನಕ್ಷೆಯ ಮೂಲಕ ಪರೀಕ್ಷಿಸಿ, ಹೌದು ಎನ್ನುವುದಾದರೆ ನಕ್ಷಾ ಕ್ರಮದಿಂದ ಬಿಡಿಸಿ.

ಪರಿಹಾರ:– ಸಮೀಕರಣ (1) ಮತ್ತು (2)ರ ನಕ್ಷೆ ರಚಿಸಲು ಕೆಳಗಿನ ಕೋಷ್ಟಕದಲ್ಲಿರುವಂತೆ ಎರಡೆರಡು ಪರಿಹಾರವನ್ನು ಕಂಡು ಹಿಡಿದುಕೊಳ್ಳಬೇಕು

$x + 3y = 6$ (1)

ಮತ್ತು $2x - 3y = 12$ (2)


ಈ ಸಮೀಕರಣಗಳು ಸ್ಥಿರವೇ ಎಂಬುದನ್ನು ನಕ್ಷೆಯ ಮೂಲಕ ಪರೀಕ್ಷಿಸಿ, ಹೌದು ಎನ್ನುವುದಾದರೆ ನಕ್ಷಾ ಕ್ರಮದಿಂದ ಬಿಡಿಸಿ.

ಪರಿಹಾರ:– ಸಮೀಕರಣ (1) ಮತ್ತು (2)ರ ನಕ್ಷೆ ರಚಿಸಲು ಕೆಳಗಿನ ಕೋಷ್ಟಕದಲ್ಲಿರುವಂತೆ ಎರಡೆರಡು ಪರಿಹಾರವನ್ನು ಕಂಡು ಹಿಡಿದುಕೊಳ್ಳಬೇಕು

x	0	6
$y = \frac{6-x}{3}$	2	0

x	0	3
$y = \frac{2x-12}{3}$	-4	-2

ಚಿತ್ರದಲ್ಲಿ ತೋರಿಸಿದಂತೆ ಗ್ರಾಫ್ ಹಾಳೆಯ ಮೇಲೆ **A** (0, 2) **B**(6, 0) **P**(0, –4) ಮತ್ತು **Q**(3, –2) ಬಿಂದುಗಳನ್ನು ಗುರುತಿಸಿ **AB** ಮತ್ತು **PQ** ರೇಖೆಗಳುಂಟಾಗುವಂತೆ ಅವುಗಳನ್ನು ಜೋಡಿಸಬೇಕು.



AB ಮತ್ತು **PQ** ಈ ಎರಡು ರೇಖೆಗಳಿಗೂ ಸಾಮಾನ್ಯವಾಗಿರುವಂತೆ **B** (6, 0) ಎಂಬ ಬಿಂದು ಇರುವುದನ್ನು ಗಮನಿಸಬಹುದು ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಗೆ **X** =6 ಮತ್ತು **y** =0 ಎಂಬುದು ಪರಿಹಾರವಾಗಿದೆ ಅಂದರೆ ದತ್ತ ಸಮೀಕರಣ ಜೋಡಿಯು ಸ್ಥಿರವಾಗಿದೆ

2) ಚಂಪಾಳು ಕೆಲವು ಪ್ಯಾಂಟ್ ಮತ್ತು ಲಂಗಗಳನ್ನು ಖರೀದಿಸಲು ಒಂದು ಮಾರಾಟ ಮಳಿಗೆಗೆ ಹೋದಳು. ಪ್ರತಿಯೊಂದನ್ನು ಎಷ್ಟೆಷ್ಟು ಖರೀದಿಸಿದಳೆಂದು ಅವಳ ಗೆಳತಿಯರು ಕೇಳಿದಾಗ ಅವಳು ಹೀಗೆ ಉತ್ತರಿಸಿದಳು. 'ಖರೀದಿಸಿದಂತಹ ಲಂಗಗಳ ಸಂಖ್ಯೆಯು ಪ್ಯಾಂಟ್‌ಗಳ ಸಂಖ್ಯೆಯ ಇಮ್ಮಡಿಗಿಂತ ಎರಡು ಕಡಿಮೆ. ಅಲ್ಲದೆ, ಖರೀದಿಸಿದಂತಹ ಲಂಗಗಳ ಸಂಖ್ಯೆಯು ಪ್ಯಾಂಟುಗಳ ಸಂಖ್ಯೆಯ ನಾಲ್ಕು ಪಟ್ಟಿಗಿಂತ ನಾಲ್ಕು ಕಡಿಮೆ'. ಚಂಪಾ ಎಷ್ಟು ಪ್ಯಾಂಟ್ ಮತ್ತು ಎಷ್ಟು ಲಂಗಗಳನ್ನು ಖರೀದಿಸಿದಳು ಎಂಬುದನ್ನು ಕಂಡುಹಿಡಿಯಲು ಅವಳ ಗೆಳತಿಯರಿಗೆ ಸಹಾಯ ಮಾಡಿ.

ಪರಿಹಾರ: ಪ್ಯಾಂಟ್‌ಗಳ ಸಂಖ್ಯೆಯನ್ನು x ನಿಂದಲೂ, ಲಂಗಗಳ ಸಂಖ್ಯೆಯನ್ನು y ಯಿಂದಲೂ ನಾವು ಗುರುತಿಸೋಣ. ಆಗ ಉಂಟಾಗುವ ಸಮೀಕರಣಗಳೆಂದರೆ,


$y = 2x - 2$ (1)

$y = 4x - 4$ (2)

ಪ್ರತಿಯೊಂದು ಸಮೀಕರಣಕ್ಕೂ ಎರಡೆರಡು ಪರಿಹಾರಗಳನ್ನು ಕಂಡುಹಿಡಿಯುವ ಮೂಲಕ ನಾವು (1) ಮತ್ತು (2)ನೇ ಸಮೀಕರಣಗಳ ನಕ್ಷೆಗಳನ್ನು ರಚಿಸೋಣ.

x	2	0
$y = 2x - 2$	2	-2

x	0	1
$y = 4x - 4$	-4	0



ಎರಡು ಸರಳರೇಖೆಗಳು (1, 0) ಬಿಂದುವಿನಲ್ಲಿ ಛೇದಿಸುತ್ತವೆ. ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಗೆ ಅಪೇಕ್ಷಿತ ಪರಿಹಾರ $x = 1$, $y = 0$ ಅಂದರೆ ಅವಳು ಒಂದು ಪ್ಯಾಂಟ್‌ನ್ನು ಖರೀದಿಸಿದಳು ಮತ್ತು ಅವಳು ಲಂಗವನ್ನು ಖರೀದಿಸಲಿಲ್ಲ.

ಅಭ್ಯಾಸ 3.1

ಕೆಳಗೆ ನೀಡಿರುವ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ನಕ್ಷಾಕ್ರಮದಿಂದ ಅವುಗಳಿಗೆ ಪರಿಹಾರಗಳನ್ನು ಕಂಡಿಹಿಡಿಯಿರಿ.

(i) ***X*** ತರಗತಿಯ 10 ವಿದ್ಯಾರ್ಥಿಗಳು ಗಣಿತ ರಸಪ್ರಶ್ನೆಯಲ್ಲಿ ಭಾಗವಹಿಸಿದರು. ಹುಡುಗರ ಸಂಖ್ಯೆಗಿಂತ, ಹುಡುಗಿಯರ ಸಂಖ್ಯೆಯು 4 ಹೆಚ್ಚಾಗಿದ್ದರೆ, ರಸಪ್ರಶ್ನೆಯಲ್ಲಿ ಭಾಗವಹಿಸಿದ ಹುಡುಗರ ಮತ್ತು ಹುಡುಗಿಯರ ಸಂಖ್ಯೆಗಳನ್ನು ಕಂಡುಹಿಡಿಯಿರಿ.

(ii) 5 ಪೆನ್ಸಿಲು ಮತ್ತು 7 ಪೆನ್ನುಗಳ ಒಟ್ಟು ಬೆಲೆ ₹ 50. ಹಾಗೆಯೇ 7 ಪೆನ್ಸಿಲು ಮತ್ತು 5 ಪೆನ್ನುಗಳ ಒಟ್ಟು ಬೆಲೆ ₹ 46. ಪ್ರತಿಯೊಂದು ಪೆನ್ಸಿಲಿನ ಹಾಗೂ ಪೆನ್ನಿನ ಬೆಲೆಗಳನ್ನು ಕಂಡುಹಿಡಿಯಿರಿ.

ಪರಿಹಾರ: ಹುಡುಗಿಯರ ಸಂಖ್ಯೆ x ಮತ್ತು ಹುಡುಗರ ಸಂಖ್ಯೆ y ಆಗಿರಲಿ

ವಿದ್ಯಾರ್ಥಿಗಳ ಸಂಖ್ಯೆ = 10

$x + y = 10$

$x - y = 4$

(ಮುಂದುವರಿಯುವುದು)

MATHS

Inverse trigonometric functions

37. Solve for x :

$$2\tan^{-1}(\sin x) = \tan^{-1}(2\sec x), x \neq \frac{\pi}{2}$$

Soln : –Consider, L.H.S. $= 2\tan^{-1}(\sin x)$

$= \tan^{-1}(\sin x) + \tan^{-1}(\sin x)$

$= \tan^{-1}\left(\frac{2\sin x}{1-\sin^2 x}\right) = \tan^{-1}\left(\frac{2\sin x}{\cos^2 x}\right)$

$= \tan^{-1}(2\tan x \sec x)$

R.H.S $= \tan^{-1}(2\sec x)$


$\therefore 2\tan x \sec x = 2\sec x$

$\Rightarrow \frac{\tan x}{\cos x} = \frac{1}{\cos x} \Rightarrow \tan x = 1$

$\therefore x = \frac{\pi}{4}$

Muliple Choice Questions

1) The graph shown below represents one of the inverse trigonometric functions. Identify the correct function from the following options



(A) $\sin^{-1}x$ (B) $cosec^{-1}x$

(C) $\cos^{-1}x$ (D) $sec^{-1}x$

Ans:- B

2) The domain of the function defined by $f(x) = \sin^{-1}\sqrt{x-1}$ is

(A) [1, 2] (B) [-1, 1]

(C) [0, 1] (D) [-1,0]

Ans:- C

3) Which value is similar to $\sin^{-1}\sin(6\pi/7)$?

A) $\sin(\sin^{-1}(\pi/7))$ B) $\sin(\cos^{-1}(\pi/7))$

C) $\sin(\sin^{-1}(2\pi/7))$ D) $\sin(coses^{-1}(\pi/7))$

Ans:- A

4)

Statement 1: Principal value of $\cos^{-1}\left(\cos\left(\frac{7\pi}{6}\right)\right)$ is $\frac{5\pi}{6}$

Statement 2: Principal value branch of $\cos^{-1}x$ is $[0, \pi]$ and $\cos^{-1}(\cos x) = x$, if $x \in [0, \pi]$

A) Statement 1 is true and Statement 2 is false.

B) Statement 1 is true and Statement 2 is true, Statement 2 is correct explanation for Statement1

C) Statement 1 is true and Statement 2 is true, Statement 2 is not a correct explanation for Statement 1

D) Statement 1 is false and Statement 2 is false.

Ans:- B

5) Match List I with List II

List I	List II
a) Range of $cot^{-1}x$	i) $\left(-\frac{\pi}{2}, \frac{\pi}{2}\right)$
b) Range of $tan^{-1}x$	ii) $(0, \pi)$
c) Range of $sin^{-1}x$	iii) $\left[-\frac{\pi}{2}, \frac{\pi}{2}\right]$


Choose the correct answer from the options given below

A) a-i , b-ii, c-iii B) a-iii, b-ii, c-i

C) a-ii, b-i, c-iii D) a-iii, b-i, c-ii

Ans:- C

6) The given graph is for which equation?



Ans Code

A) $y = \cos^{-1}x$ **B)** $y = \cot^{-1}x$

C) $y = cosec^{-1}x$ **D)** $y = tan^{-1}x$

Ans:- A

********* *******

MATRICES

1. Write a brief note on matrix.

Ans:- A matrix is an ordered rectangular array of numbers or functions called elements, enclosed within brackets. They are denoted by capital letters A, B, C etc.,

For ex: $A = \begin{bmatrix} 1 & 2 & 3 \\ 4 & 5 & 6 \end{bmatrix}$ is a matrix of 2 rows i.e., the horizontally arranged numbers and 3 columns i.e., the vertically arranged numbers.

The rows are denoted by 'm' and the columns are denoted by 'n', then the order of the matrix is said to be 'm x n' read as m cross n (or) m by n.

Therefore the order of the above matrix is 2 x 3.

In general the matrix is briefly denoted as $[a_{ij}]$; i=1, 2, ...m and j= 1, 2, ...n

Where 'i' represents the number of rows and 'j' represents the number of columns.

2. What is a unit matrix?

Ans:- The matrix of the form $\begin{bmatrix} 1 & 0 \\ 0 & 1 \end{bmatrix}$ is called a unit matrix and is denoted by I.

3. What is a Row matrix?

Ans:- A matrix having only one row is called row matrix.

Eg: $[1 \quad 2 \quad 3]$ is a row matrix of order 1 x 3.

In general, $B = [b_{ij}]_{1 \times n}$ is a row matrix of the order 1 x n.

ಮಂಡ್ಯ ಜಿಲ್ಲಾ ವಕೀಲರ ಸಂಘದ ಪ್ರಸ್ತಾವಕ್ಕೆ ಸರ್ಕಾರ ಅನುಮೋದನೆ

ಸಕ್ಕರೆ ನಾಡಿನಲ್ಲಿ 'ಸಂವಿಧಾನ ಭವನ'

● ಸಿದ್ದು ಆರ್.ಜಿ.ಹಳ್ಳಿ

ಪ್ರಮುಖ ಅಂಶಗಳು
- ಕಟ್ಟಡ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ ಅನುಮೋದನೆ
- ಸಂವಿಧಾನ ರಚನೆ ತಿಳಿಸುವ ಆಕರ್ಷಕ ಗ್ಯಾಲರಿ
- ಸಂವಿಧಾನ ಪ್ರಸ್ತಾವನೆ ಬೃಹತ್ ಗ್ರಂಥದ ಮಾದರಿಯಲ್ಲಿ ಪ್ರವೇಶ ದ್ವಾರ


ಮಂಡ್ಯ: ಸಂವಿಧಾನದ ಆಶಯಗಳನ್ನು ಜನರಿಗೆ ತಲುಪಿಸಲು ಜಿಲ್ಲಾ ವಕೀಲರ ಸಂಘದ ಆವರಣದಲ್ಲಿ ವಿನೂತನ 'ಸಂವಿಧಾನ ಭವನ' ನಿರ್ಮಿಸುವ ಪ್ರಸ್ತಾವಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಇದು ರಾಜ್ಯದ ಮೊದಲ ಸಂವಿಧಾನ ಭವನ ಎಂಬ ಶ್ರೇಯಕ್ಕೆ ಪಾತ್ರವಾಗಲಿದೆ.

ನಗರದ ಅದಾಲತ್ ತೆರಿಗೆ ಇಲಾಖೆ ಕಟ್ಟಡದ ಹಿಂಭಾಗ, ಜಿಲ್ಲಾ ವಕೀಲರ ಸಂಘದ ಗ್ರಂಥಾಲಯ ಕಟ್ಟಡಕ್ಕೆ ಹೊಂದಿಕೊಂಡಂತಿರುವ ನಾಲ್ಕು ಗುಂಟೆ ಜಾಗವನ್ನು ಇದಕ್ಕಾಗಿ ಗುರುತಿಸಲಾಗಿದೆ. ಇಲ್ಲಿ ಸಂವಿಧಾನ ಭವನ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ವಾಚನಾಲಯ ನಿರ್ಮಿಸಲು ಜಿಲ್ಲಾ ವಕೀಲರ ಸಂಘ ಮುಂದಾಗಿದೆ.

ಮಂಡ್ಯ ಜಿಲ್ಲಾ ವಕೀಲರ ಸಂಘ 2025ರ ನವೆಂಬರ್‌ನಲ್ಲಿ ಸಮಾಜ ಕಲ್ಯಾಣ ಸಚಿವರ ಮೂಲಕ ಲೋಕೋಪಯೋಗಿ ಇಲಾಖೆ ಮತ್ತು ಮುಖ್ಯಮಂತ್ರಿ ಅವರಿಗೆ ₹5 ಕೋಟಿ ಮೊತ್ತದ ಪ್ರಸ್ತಾವ ಸಲ್ಲಿಸಿತ್ತು. ಸರ್ಕಾರ ಅನುಮೋದನೆ ನೀಡಿದ ನಂತರ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ₹3 ಕೋಟಿವೆಚ್ಚದಲ್ಲಿ ಕಟ್ಟಡ ಕಾಮಗಾರಿ ಮಾಡಲು ಮುಖ್ಯ ಎಂಜಿನಿಯರ್ (ಸಂಪರ್ಕ ಮತ್ತು ಕಟ್ಟಡ) ಅವರಿಗೆ ಕೆಲವು ನಿಬಂಧನೆಗಳನ್ನು ವಿಧಿಸಿ ನಿರ್ದೇಶನ ನೀಡಿದ್ದಾರೆ.

ಸಕ್ಷಮ ಪ್ರಾಧಿಕಾರದಿಂದ ಅಂದಾಜು ಪಟ್ಟಿಗೆ ಆಡಳಿತಾತ್ಮಕ, ತಾಂತ್ರಿಕ ಅನುಮೋದನೆ ಪಡೆಯಬೇಕು. 2026-27ನೇ ಸಾಲಿನ ಕಟ್ಟಡ ಕಾಮಗಾರಿಗಳ ಅಪೆಂಡಿಕ್ಸ್- 'ಇ' ನಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕು. ಅನುದಾನದ ಮಿತಿಯಲ್ಲೇ ಟೆಂಡರ್ ಪ್ರೀಮಿಯಂ ಕೂಡ ಒಳಗೊಂಡಿರಬೇಕು ಎಂದು ಕೆಲವು ಷರತ್ತು ವಿಧಿಸಲಾಗಿದೆ.

ವಾಚನಾಲಯದಲ್ಲಿ ಕಾನೂನು ಪುಸ್ತಕ, ಸಂವಿಧಾನ ರಚನೆಗೆ ಸಂಬಂಧಿಸಿದ ಕನ್ನಡ, ಆಂಗ್ಲ ಪುಸ್ತಕಗಳಿರಲಿವೆ. ನೂರು ಮಂದಿ ಕುಳಿತುಕೊಳ್ಳಬಹುದಾದ ಆಸನ ಸಾಮರ್ಥ್ಯದ ಸಭಾಂಗಣ ನಿರ್ಮಿಸುವ ಯೋಜನೆ ಇದೆ.



ಸಂವಿಧಾನ ಭವನ (ಎಐ ಚಿತ್ರ)


ಸಂವಿಧಾನ ಪ್ರಸ್ತಾವನೆ ಬೃಹತ್ ಗ್ರಂಥದ ಮಾದರಿಯಲ್ಲಿ ಪ್ರವೇಶ ದ್ವಾರ ನಿರ್ಮಿಸಲಾಗುವುದು. ಸಾರ್ವಜನಿಕರಿಗೆ ಸಂವಿಧಾನ ಓದು ಮತ್ತು ಪ್ರಜಾಪ್ರಭುತ್ವದ ಮಹತ್ವವನ್ನು ಪ್ರಚುರಪಡಿಸುವುದು ಇದರ ಉದ್ದೇಶ
ಟಿ.ಎಸ್.ಸತ್ಯಾನಂದ, ಅಧ್ಯಕ್ಷ, ಮಂಡ್ಯ ಜಿಲ್ಲಾ ವಕೀಲರ ಸಂಘ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ ನಂ. 1, ನರಗುಂದ ಜಿಲ್ಲೆ : ಗದಗ
Tel No. 08377-244236 E-mail : knnlestablishment@gmail.com
ಸಂ:ಕನೀನಿನಿ/ಮಬದಕಾನಿವಿ-1/ಪಿಬಿ/ಟೆಂಡರ/2026-27/304
ದಿನಾಂಕ : 06-06-2026

ಟೆಂಡರ ಪ್ರಕಟಣೆ-2 ನೇಯ ಕರೆ

ಉಲ್ಲೇಖ : 1) ಈ ಕಚೇರಿ ಟೆಂಡರ ಪ್ರಕಟಣೆ ಸಂಖ್ಯೆ:1857 ದಿ:23-03-2026
2) ಈ ಕಚೇರಿ ಮೂಂದೂಡಿಕೆ ಟೆಂಡರ ಪ್ರಕಟಣೆ ಸಂಖ್ಯೆ:56 ದಿ : 10-04-2026
3) ಈ ಕಚೇರಿ ಟೆಂಡರ ಪ್ರಕಟಣೆ ಸಂಖ್ಯೆ:145 ದಿ:06-05-2026

ಉಲ್ಲೇಖ(3) ರಲ್ಲಿ ಕರೆಯಲಾದ ಏತ ನೀರಾವರಿ ಯೋಜನೆಗಳ ನಿರ್ವಹಣೆಯ ಕಾಮಗಾರಿಗಳ ಟೆಂಡರಗಳನ್ನು ಈ ಕೆಳಗಿನಂತೆ ಆಹ್ವಾನಿಸಲಾಗಿದೆ. (1) ಕೆಟಗರಿ-1 ಕಾಮಗಾರಿ ಸಂಖ್ಯೆ: 1 (ಇ.ನಂ.**4290**) (2) ಕೆಟಗರಿ-2(ಎ) ಕಾಮಗಾರಿಗಳ ಸಂಖ್ಯೆ: 1 (ಇ.ನಂ.**4316**) (3) ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾಮಗಾರಿ ಸಂಖ್ಯೆ: 1 (ಇ.ನಂ.**4289**) (4) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **20-06-2026** ರಂದು ಸಂಜೆ 4.00 ಗಂಟೆಯವರೆಗೆ. (5) ಟೆಂಡರ ತೆರೆಯುವ ದಿನಾಂಕ : **22-06-2026** ರಂದು ಬೆಳಿಗ್ಗೆ 11.00 ಗಂಟೆ

ಇತರೆ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬ್‌ಸೈಟ್ ಮುಖೇನ KPPP.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08377-244236 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕನೀನಿನಿ ಮಬದಕಾನಿ ವಿಭಾಗ ನಂ.1 ನರಗುಂದ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/110/2026-27

ಕರ್ನಾಟಕ ಸರ್ಕಾರ
ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101.
ದೂರವಾಣಿ ಸಂಖ್ಯೆ : 08392-273479/278168 ವೆಬ್‌ಸೈಟ್ : www.ballaricity.mrc.gov.in ಇ-ಮೇಲ್: ka.ballari.cc@gmail.com
ಸಂಖ್ಯೆ:ಮನಪಾಬ/ತಾಂತ್ರಿಕ/ತಿ.ಟೆ.ಪ್ರ/ಅಮೃತ್-2.0/2026-27 ದಿನಾಂಕ: 06.06.2026

ತಿದ್ದುಪಡಿ ಟೆಂಡರ್ ಪ್ರಕಟಣೆ ಕಾಲ್-4 (ಕೆ.ಪಿ.ಪಿ.ಪಿ. ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2025-26ನೇ ಸಾಲಿನ ಕೇಂದ್ರ ಪುರಸ್ಕೃತ ಅನುದಾನದ ಅಮೃತ್ 2.0 ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ದಿನಾಂಕ:25.05.2026 ರಂದು ಸಂಖ್ಯೆ:**1) DMA/2025-26 /OW/ Work_Indent 49795/ Call-4-Rs.167.95 Lakhs, 2) DMA/2025-26 /OW/ Work_Indent 49792/Call-4-Rs.62.81 Lakhs, 3) DMA/ 2025-26/OW/Work_Indent 49788/Call-4-Rs.94.37 Lakhs & 4) DMA/2025-26/OW/ Work_Indent 49790/call-4- Rs.52.36 Lakhs** ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ದಿನಾಂಕ:31.05.2026 ರಂದು ವಿಶ್ವವಾಣಿ ಹಾಗೂ ಕನ್ನಡ ಪ್ರಭಾ ಕನ್ನಡ ದಿನಪತ್ರಿಕೆಗಳಲ್ಲಿ ಹಾಗೂ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದು, ಸದರಿ ಟೆಂಡರ್‌ಗಳ ಕಾಮಗಾರಿಗಳನ್ನು ಕೆಲವು ತಾಂತ್ರಿಕ ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳನ್ನು ಮುಂದೂಡಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:15.06.2026 ರ ಸಂಜೆ 5.30 ಗಂಟೆವರೆಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:17.06.2026 ರ ಬೆಳಿಗ್ಗೆ 10:30 ಗಂಟೆಗೆ, ತಾಂತ್ರಿಕ ಬಿಡ್ದ್‌ರಲ್ಲಿ ಅರ್ಹತೆಹೊಂದಿದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ:19.06.2026ರ ಬೆಳಿಗ್ಗೆ 10.30 ಗಂಟೆಗೆ ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/-ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/216

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ದೂರವಾಣಿ : +91-80-22864626, ಇ-ಮೇಲ್: spwireless@ksp.gov.in
ಟೆಂಡರ್ ಸಂಖ್ಯೆ: KSP/2025-26/IND0565/Call-2, ದಿನಾಂಕ: 06.06.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ರಾಜ್ಯ ಗುಪ್ತಚರ ಘಟಕಕ್ಕೆ ಅವಶ್ಯವಿರುವ, **MCS Compliant LTE, LTE+VHF/UHF DMR Hybrid Handheld Radios And Associated Systems** ನೆಟ್‌ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 870.00 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 11.06.2026 ಸಮಯ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 20.06.2026 ಸಮಯ 17.00 ಗಂಟೆ**ಗಳು. ಇತರೆ ಮಾಹಿತಿಯನ್ನು **https://kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು
ವಾಸಾಸಂಇ/ವಾ.ಪ್ರ./1042/ಶಿರಡಿ ಸಾಯಿ/2026-27

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಮುಂದುಡಿಕೆ ಟೆಂಡರ್ ಪ್ರಕಟಣೆ - 1 (ಅಲ್ಪಾವಧಿ)

ಸಂ: ಕಾಪಾಲಿ/ಶಿವಿಶಿ/ಎಇ-1&2/ಜೆಇ-1&2/ಐಎಫ್‌ಟಿ-08/ಮು-01/2026-27
ದಿನಾಂಕ:06-06-2026
ಉಲ್ಲೇಖ:1) ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ-1&2/ಜೆಇ-1&2/ ಐಎಫ್‌ಟಿ-08/2026-27 ದಿನಾಂಕ:26-05-2026

ಉಲ್ಲೇಖಿತ ಟೆಂಡರ್ ಪ್ರಕಟಣೆಯ ಹೊಸನಗರ ತಾಲ್ಲೂಕಿನ ಇಂಡೆಂಟ್ ನಂ.36314, 36312 & 36313, ಸಾಗರ ತಾಲ್ಲೂಕಿನ ಇಂಡೆಂಟ್ ನಂ: 36339, 36346, 36337, 36344 & 36550, ಶಿಕಾರಿಪುರ ತಾಲ್ಲೂಕಿನ ಇಂಡೆಂಟ್ ನಂ: 36348 ಮತ್ತು ಸೊರಬ ತಾಲ್ಲೂಕಿನ ಇಂಡೆಂಟ್ ನಂ: 36318, 36319, 36336 & 36331 ಕಾಮಗಾರಿಗಳ ಟೆಂಡರ್‌ಗಳಿಗೆ ಈ ಹಿಂದೆ ನಿಗಧಿ ಪಡಿಸಲಾದ ದಿನಾಂಕಗಳನ್ನು ತಾಂತ್ರಿಕ ಕಾರಣದಿಂದ ಮುಂದುಡಲಾಗಿದ್ದು, ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ KPP Portal-2 ರಡಿ ಸಲ್ಲಿಸಲು ಈ ಕೆಳಕಂಡಂತೆ ಮರು ನಿಗದಿಪಡಿಸಲಾಗಿದೆ.

ಕ್ರ.ಸಂ. 1.ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮರು ನಿಗಧಿ ಪಡಿಸಿದ ದಿನಾಂಕಗಳು: ದಿ: 06-06-2026 ರಿಂದ ದಿ: 15-06-2026 **ಟೆಂಡರ್ ಸ್ವೀಕೃತಿ ದಿನಾಂಕಗಳು:** ದಿ: 15-06-2026
ಕ್ರ.ಸಂ. 2. ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮರು ನಿಗಧಿ ಪಡಿಸಿದ ದಿನಾಂಕಗಳು: 36336 & 36331 ಕಾಮಗಾರಿಗಳ ದಿ: 09-06-2026 ರಿಂದ ದಿ: 16-06-2026 **ಟೆಂಡರ್ ಸ್ವೀಕೃತಿ ದಿನಾಂಕಗಳು:** ದಿ:16-06-2026

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಸಹಾಯಕ ದೂರವಾಣಿ ಸಂಖ್ಯೆ: 080-23010900/23010901 ರಿಂದ ಮಾಹಿತಿ ಪಡೆಯಬಹುದು.

ಸಹಿ/ ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/32/06/338

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್ಟ್.ಟಿ ಸಂಖ್ಯೆ 06/2026-27 ದಿನಾಂಕ: 05.06.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಒಟ್ಟು 5 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಧಿಸೂಚನೆಯಂತೆ ಕ್ರಮ ಸಂಖ್ಯೆ 1ಕ್ಕೆ ದಿನಾಂಕ: 05.06.2026 ರಂದು ಮತ್ತು ಕ್ರಮ ಸಂಖ್ಯೆ 2 ರಿಂದ 5ಕ್ಕೆ ದಿನಾಂಕ: 06.06.2026 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಟ ರೂ.241.79 ಲಕ್ಷಗಳು ಮತ್ತು ಕನಿಷ್ಟ ಮೊತ್ತ ರೂ.18.64 ಲಕ್ಷಗಳು, ಗರಿಷ್ಟ ಇ.ಎಂ.ಡಿ ಮೊತ್ತ ರೂ. 3,62,700/- ಮತ್ತು ಕನಿಷ್ಟ ಮೊತ್ತ ರೂ.46,600/-, ಗುತ್ತಿಗೆ ಕಾಲಾವಧಿ ಗರಿಷ್ಟ 7-ತಿಂಗಳು ಮತ್ತು ಕನಿಷ್ಟ 1-ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ಕ್ರಮ ಸಂಖ್ಯೆ 1ಕ್ಕೆ ದಿನಾಂಕ: 12.06.2026 ಎಂದು ಹಾಗೂ ಕ್ರಮ ಸಂಖ್ಯೆ 2 ರಿಂದ 5ವರೆಗೆ ದಿನಾಂಕ: 20.06.2026 ರಂದು 16.00 ಗಂಟೆವರೆಗೆ ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR/DDMYS/274/KSMCA/191/2026-27

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಕಾರ್ಯಪಾಲಕ ಅಭಿಯಂತರರು-6 ಕಛೇರಿ, ಕೆರೆಗಳು, ಯೋಜನಾ ಅನುಷ್ಠಾನ ಘಟಕ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು - 560011.
ಸಂಖ್ಯೆ: ಕಾಅ-6/ಕೆರೆಗಳು/ಟೆಂಡರ್/01/2026-27 ದಿನಾಂಕ: 08-06-2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು-6, ಕೆರೆಗಳು ಯೋಜನಾ ಅನುಷ್ಠಾನ ಘಟಕ, ಗ್ರೇಬೆಂಪ್ರಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಯಲ್ಲಿ ನೋಂದಾಯಿತರಾದ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ - ಕೆಡಬ್ಲ್ಯೂ-4)

ಕ್ರ. ಸಂ.	ಕಾಮಗಾರಿಯ ಹೆಸರು
1	ಹೆಬ್ಬಾಳ ಕೆರೆಯ ಅಭಿವೃದ್ಧಿ ಕಾಮಗಾರಿ (**ಹಂತ-2**). **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 1370.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 13,70,000.00**
2	ಹೆಬ್ಬಾಳ ಕೆರೆಯ ಅಭಿವೃದ್ಧಿಗಾಗಿ ಸಲಹಾ ಸೇವೆಯನ್ನು ಒದಗಿಸುವುದು (**ಹಂತ-2**). **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 1370.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,00,000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **10-06-2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **15-06-2026** ರಂದು **15.00 ಗಂಟೆಗೆ** ಮುಖ್ಯ **ಅಭಿಯಂತರರು ರವರ ಕಛೇರಿ, ಕೆರೆಗಳು, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು - 560011 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **18-06-2026** ರಂದು **16.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **19-06-2026** ರಂದು **16.30 ಗಂಟೆಗೆ ಅಥವಾ ಮುಂದಿನ ಕೆಲಸ ದಿನದಂದು.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು-6,
ಕೆರೆಗಳು, ಯೋಜನಾ ಅನುಷ್ಠಾನ ಘಟಕ, ಗ್ರೇಬೆಂಪ್ರಾ.

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-7/ಜೆಇ/2026-27 ದಿನಾಂಕ:- 08.06.2026

ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 7/ ಜೆಇ/2026-27 ದಿನಾಂಕ: 08.06.2026

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ : 4059-80-051-0-60-422 ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ- ಎಸ್‌ಸಿಪಿ ಅಡಿ 1 ಕಾಮಗಾರಿಗೆ ಮೊತ್ತ ರೂ. 100.00 ಲಕ್ಷ. (ಇಂಡೆಂಟ್ ಸಂಖ್ಯೆ 36439) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗೆ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ ದಿನಾಂಕ: 22.06.2026 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 23.06.2026 ಸಂಜೆ 4.30 ಗಂಟೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https:// kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/139/ ಕೆಎಸ್‌ಎಂಸಿಎ/2026-27
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ
ದೂರವಾಣಿ ಸಂ: 08352-259855, ಇ-ಮೇಲ್: ka.vijayapura.dudc@gmail.com
ವೆಬ್‌ಸೈಟ್: www.vijayapuradudc.mrc.gov.in
ಕ್ರ.ಸಂ: ಜಿನಕೋ-1/ಸಿಬ್ಬಂದಿ/ಪೌರಾನೇಪಾ/2025-26 ದಿನಾಂಕ:06.06.2026

ನೇಮಕಾತಿ ಅಧಿಸೂಚನೆ

ಮಾನ್ಯ ಸರ್ಕಾರದ ಪತ್ರ ಸಂಖ್ಯೆ: ನಅಇ/108/GEL/2021(ಇ) ದಿ:07-08-2025 ಹಾಗೂ 12-11-2025 ಹಾಗೂ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಸುತ್ತೋಲೆ ಸಂಖ್ಯೆ: 513641/DMA/ EST2/OTH/8/2021 ದಿನಾಂಕ:18-11-2025 ರನ್ವಯ ವಿಜಯಪುರ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಪೌರಕಾರ್ಮಿಕ ಹುದ್ದೆಗಳನ್ನು ನೇರ ಪಾವತಿ ಮೂಲಕ ಕೆಳಗಿನಂತೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನುಆಹ್ವಾನಿಸಲಾಗಿದೆ

ಪೌರಕಾರ್ಮಿಕರ ನೇರ ಪಾವತಿಗಾಗಿ ಪರಿಗಣಿಸಿದ ಒಟ್ಟು ಹುದ್ದೆಗಳ ಸಂಖ್ಯೆ	ವಿವರ	ದಿನಾಂಕ	ಅರ್ಜಿ ನಮೂನೆ ಪಡೆಯುವ ಹಾಗೂ ಸಲ್ಲಿಸುವ ವಿಳಾಸ
118	ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ	10.06.2026	ಮಹಾನಗರ ಪಾಲಿಕೆ ವಿಜಯಪುರ ಕೇಂದ್ರ ಕಚೇರಿ
	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: (ದೃಢೀಕರಿಸಿದ ದಾಖಲೆಗಳೊಂದಿಗೆ)	15.07.2026	
	ಅರ್ಜಿ ಶುಲ್ಕ	ರೂ. 100/-	

ನೇಮಕಾತಿಗೆ ಬೇಕಾಗುವ ಅರ್ಹತೆಗಳು	ವೇತನ
1. ವಿಜಯಪುರ ಮಹಾನಗರ ಪಾಲಿಕೆಯಲ್ಲಿ ಈ ಹಿಂದೆ ಹೊರಗುತ್ತಿಗೆ/ ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್ ಹಾಗೂ ಹೆಲ್ಪರ್ಸ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ/ಕಾರ್ಯನಿರ್ವಹಿಸಿದ ಅಭ್ಯರ್ಥಿಗಳು. 2. ಪಾಲಿಕೆಯಲ್ಲಿ ಹೊರಗುತ್ತಿಗೆ/ ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಪೌರ ಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ ಪೌರಕಾರ್ಮಿಕರ ಕುಟುಂಬದ ಒಬ್ಬ ಸದಸ್ಯರಿಗೆ ಆದ್ಯತೆ ನೀಡಲಾಗುವುದು. 3. ಪಾಲಿಕೆಯಲ್ಲಿ ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸಿ ಅನುಭವವುಳ್ಳ ಸ್ಥಳೀಯ ಸ್ವಚ್ಛತಾ ಕೆಲಸಗಾರರು. 4. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ Manual Scavengers ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ಥರುಗಳಿಗೆ ಅಥವಾ ಅವರ ಕುಟುಂಬದ ಒಬ್ಬ ಸದಸ್ಯರಿಗೆ. 5. ಮಹಾನಗರ ಪಾಲಿಕೆಯಲ್ಲಿ ಕನಿಷ್ಠ 01 ವರ್ಷಕ್ಕಿಂತ ಕಡಿಮೆಯಿಲ್ಲದೇ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ & ಈ ನಿಯಮಗಳ ಪ್ರಾರಂಭದ ದಿನಾಂಕ ದಿಂದಲೂ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಆದ್ಯತೆ 6. ವಿದ್ಯಾರ್ಹತೆ ಅನ್ವಯಿಸುವುದಿಲ್ಲ. 7. ಮೀಸಲಾತಿ ಅನ್ವಯಿಸುವುದಿಲ್ಲ. 8. ಕನ್ನಡ ಮಾತನಾಡಲು ಗೊತ್ತಿರಬೇಕು. 9. ಕನಿಷ್ಠ:18, ಗರಿಷ್ಠ:50 ವಯೋಮಿತಿ ಒಳಗಿರಬೇಕು. 10. ಮೇಲಿನ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ವೇತನ, ESI, EPF ಗಳ ಬ್ಯಾಂಕ್ ಸ್ಟೇಟಮೆಂಟ್/ ಹಾಜರಾತಿ ಪತ್ರಗಳು ಲಗತ್ತಿಸುವುದು. 11. ಸಕ್ಷಮ ಪ್ರಾಧಿಕಾರದಿಂದ ಪಡೆದ ಸೇವಾ ಪ್ರಮಾಣ ಪತ್ರ ಲಗತ್ತಿಸುವುದು.	ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸಿದ ಕನಿಷ್ಟ ಚಾಲ್ತಿ ವೇತನ

ವಿಶೇಷ ಸೂಚನೆ:
1) ಅಧಿಸೂಚನೆಯನ್ನು ಮಹಾನಗರ ಪಾಲಿಕೆಯ www.vijayapuracity.mrc.gov.in ಅಥವಾ ಸೂಚನಾ ಫಲಕದಲ್ಲಿ ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶದ ವೆಬ್‌ಸೈಟ್ www.vijayapuradudc.mrc.gov.in ನಲ್ಲಿ ವೀಕ್ಷಿಸಬಹುದು.
2) ಈ ನೇಮಕಾತಿಯು ಸರ್ಕಾರ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶ ಮತ್ತು ಸುತ್ತೋಲೆಗಳ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿದೆ.
3) ಸದರಿ ನೇಮಕಾತಿಯ ಅಂತಿಮ ಅಧಿಕಾರವನ್ನು ಅಧ್ಯಕ್ಷರು ಆಯ್ಕೆ ಮತ್ತು ನೇರ ಪಾವತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ ರವರು ಕಾಯ್ದಿರಿಸಿಕೊಂಡಿರುತ್ತಾರೆ

ಸಹಿ/- (ಡಾ.ಆನಂದ.ಕೆ. ಭಾ.ಆ.ಸೇ)
ಅಧ್ಯಕ್ಷರು, ನೇರ ಪಾವತಿ ಪೌರಕಾರ್ಮಿಕರ ನೇಮಕಾತಿ ಆಯ್ಕೆ ಸಮಿತಿ ಹಾಗೂ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ
ವಾಸಾಸಂಇ/ವಿಜಯಪುರ/144/ ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23460460 (5 ಲೈನ್ಸ್), ಫ್ಯಾಕ್ಸ್: 080-23461576, ಇ-ಮೇಲ್: keauthority-ka@nic.in, ವೆಬ್‌ಸೈಟ್: Website: http://kea.kar.nic.in
ಸಂಖ್ಯೆ: ಇಡಿ/ಕೆಇಎ/ನೇ.ವಿ/15/2026 ದಿನಾಂಕ: 05-06-2026

ಪ್ರಕಟಣೆ
ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಮಿಕ್ಕುಳಿದ ವೃಂದದ 3395 ಮತ್ತು ಸ್ಥಳೀಯ ವೃಂದದ 596 ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿ

ಕರ್ನಾಟಕ ರಾಜ್ಯ ಪೊಲೀಸ್ ಲಿಪಿಕ ನೌಕರರ ಸೇವೆಗಳು ಸೇರಿದಂತೆ (ನೇಮಕಾತಿ) ನಿಯಮ 2004 ಮತ್ತು ಅದರ (ತಿದ್ದುಪಡಿ) ನಿಯಮಗಳು 2014, 2016, 2020, 2021 ಮತ್ತು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 44 ಪಿಪಿಎ 2026 ದಿನಾಂಕ: 13.04.2026 ರಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ವೃಂದದ ಹುದ್ದೆಗಳ ನೇರ ನೇಮಕಾತಿಯಲ್ಲಿನ ವಿಧಾನ ಮತ್ತು ಅರ್ಹತೆಯನ್ನು ಪರಿಷ್ಕರಿಸಿದನ್ವಯ ಹಾಗೂ ಪ್ರಚಲಿತ ನೇಮಕಾತಿ ನಿಯಮಗಳ ಪ್ರಕಾರ ಕರ್ನಾಟಕ ರಾಜ್ಯದ, ಪೊಲೀಸ್ ಇಲಾಖೆಯಲ್ಲಿ ಮಿಕ್ಕುಳಿದ ವೃಂದದಲ್ಲಿ ಖಾಲಿ ಇರುವ 3395 (ಆರ್‌ಪಿಸಿ) ಮತ್ತು ಸ್ಥಳೀಯ ವೃಂದದಲ್ಲಿ ಖಾಲಿ ಇರುವ 596 ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಖಾಲಿ ಹುದ್ದೆಗಳ ನೇರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿಕೊಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಪೊಲೀಸ್ ಇಲಾಖೆಯವರು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಮಿಕ್ಕುಳಿದ ವೃಂದ ಮತ್ತು ಸ್ಥಳೀಯ ವೃಂದದ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳಿಗೆ ಪ್ರತ್ಯೇಕವಾಗಿ ಅರ್ಜಿಯನ್ನು ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಕೆಇಎ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು.

a) ಹುದ್ದೆಗಳ ವಿವರ:

ಕ್ರ. ಸಂ.	ಹುದ್ದೆ	ಪುರುಷ	ಮಹಿಳಾ	ಸೇವಾನಿರತ ಪುರುಷ	ಸೇವಾನಿರತ ಮಹಿಳಾ	ತೃತೀಯ ಲಿಂಗ ಅಭ್ಯರ್ಥಿಗಳು	ಒಟ್ಟು ಹುದ್ದೆಗಳ ಸಂಖ್ಯೆ
		ಮಿಕ್ಕುಳಿದ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ					
1.	ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್)	2266	755	257	82	35	3395
		ಸ್ಥಳೀಯ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ					
2.	ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್)	398	133	46	14	5	596

ವೃಂದವಾರು, ವರ್ಗವಾರು, ವಿಭಾಗವಾರು ಹುದ್ದೆಗಳ ವರ್ಗೀಕರಣದ ವಿವರವಾದ ಮಾಹಿತಿಯನ್ನು ಕೆಇಎ ಮತ್ತು ಪೊಲೀಸ್ ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

b) **ವೇತನ ಶ್ರೇಣಿ: ₹. 37500-900-39300-1000-43300-1125-47800-1250-52800-1375-58300-1500-64300-1650-74200-1900-76100**
c) **ಪಿಂಚಣಿ ಸೌಲಭ್ಯ:** ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31.03.2006 ರಂತೆ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ಸೌಲಭ್ಯ ಅನ್ವಯವಾಗುವುದು.
d) **ಶೈಕ್ಷಣಿಕ ವಿದ್ಯಾರ್ಹತೆ** -ಪಿ.ಯು.ಸಿ., ಅಥವಾ ತತ್ಸಮಾನ ವಿದ್ಯಾರ್ಹತೆ.
e) **ಆನ್‌ಲೈನ್ ಅರ್ಜಿ ಸಲ್ಲಿಸಲು ವೇಳಾಪಟ್ಟಿ: ಅಭ್ಯರ್ಥಿಗಳು ON LINE ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿ ತಿಳಿದುಕೊಳ್ಳತಕ್ಕದ್ದು.**

ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	08-06-2026
ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	03-07-2026
ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	04-07-2026

f) ಸ್ಪರ್ಧಾತ್ಮಕ ಪರೀಕ್ಷೆ ವೇಳಾಪಟ್ಟಿ:

ದಿನಾಂಕ / ದಿನ	ವೃಂದ	ಸಮಯ	ವಿಷಯ	ಒಟ್ಟು ಪ್ರಶ್ನೆಗಳು	ಒಟ್ಟು ಅಂಕಗಳು	ಗಂಟೆ / ಅವಧಿ
02.08.2026 ಭಾನುವಾರ	ಮಿಕ್ಕುಳಿದ ವೃಂದ	ಬೆಳಿಗ್ಗೆ 10.30 ರಿಂದ 12.00 ರವರೆಗೆ	ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಭಾರತದ ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ, ಮಾನಸಿಕ ಸಾಮರ್ಥ್ಯ ಮತ್ತು ನೈತಿಕ ಶಿಕ್ಷಣ ಒಳಗೊಂಡ ಸಾಮಾನ್ಯ ಅಧ್ಯಯನ.	100	100	1 ½ ಗಂಟೆ (90 ನಿಮಿಷಗಳು)
02.08.2026 ಭಾನುವಾರ	ಸ್ಥಳೀಯ ವೃಂದ	ಮಧ್ಯಾಹ್ನ 2.30 ರಿಂದ 04.00 ರವರೆಗೆ		100	100	1 ½ ಗಂಟೆ (90 ನಿಮಿಷಗಳು)

ವೃಂದ ಮತ್ತು ನೇಮಕಾತಿ (ತಿದ್ದುಪಡಿ) ನಿಯಮಗಳು, 2020 ರನ್ವಯ ಸದರಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಯು ಅರ್ಹತೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನಿಷ್ಠ 30 ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ.

ಋಣಾತ್ಮಕ ಮೌಲ್ಯಮಾಪನ (Negative Valuation):-
- ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿನ ಪ್ರತಿಯೊಂದು ಪ್ರಶ್ನೆಗೂ 04 ಪರ್ಯಾಯ ಉತ್ತರಗಳಿದ್ದು, ಅಭ್ಯರ್ಥಿಯು ಯಾವುದಾದರೂ ಒಂದು ಸರಿ ಉತ್ತರವನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಪ್ರತಿ ತಪ್ಪು ಉತ್ತರಕ್ಕೆ ನಾಲ್ಕನೇ ಒಂದಂಶದಷ್ಟು **0.25 ಅಂಕಗಳನ್ನು** ಕಳೆಯಲಾಗುವುದು.
- ಒ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ 5ನೇ ಆಯ್ಕೆ / ವೃತ್ತವನ್ನು ನೀಡಿದ್ದು, ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಐದನೇ ಆಯ್ಕೆ/ವೃತ್ತವನ್ನು ಶೇಡ್ ಮಾಡಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿಯಾಗಿ **ಐದು ನಿಮಿಷಗಳನ್ನು** ನೀಡಲಾಗುವುದು. ಯಾವುದೇ ಆಯ್ಕೆಯನ್ನು / ವೃತ್ತವನ್ನು ಶೇಡ್ ಮಾಡಿಲ್ಲದಿದ್ದರೆ, ಪ್ರತಿ ಪ್ರಶ್ನೆಗೆ **0.25 ಅಂಕಗಳನ್ನು** ಕಡಿತಗೊಳಿಸಲಾಗುತ್ತದೆ.

ಗಮನಿಸಿ:
ಎ. ವಯೋಮಿತಿ, ಪಿಂಚಣಿ ಸೌಲಭ್ಯ, ಶೈಕ್ಷಣಿಕ ಅರ್ಹತೆ, ಶುಲ್ಕ ಪಾವತಿ, ಸ್ಪರ್ಧಾತ್ಮಕ ಪರೀಕ್ಷೆಯ ವಿಧಾನ, ದೇಹದಾರ್ಢ್ಯತೆ ಪರೀಕ್ಷೆ, ಸಹಿಷ್ಣುತೆ ಪರೀಕ್ಷೆ, ಅರ್ಹತಾ ಷರತ್ತುಗಳು, ನೇಮಕಾತಿ ವಿಧಾನ ಮುಂತಾದ ಮಾಹಿತಿ ಮತ್ತು ಸೂಚನೆಗಳಿಗಾಗಿ ಅಭ್ಯರ್ಥಿಗಳು ಕೆಇಎ ಮತ್ತು ಪೊಲೀಸ್ ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಿರುವ ವಿವರವಾದ ಅಧಿಸೂಚನೆಯನ್ನು ನೋಡುವುದು.
ಬಿ. ನೇಮಕಾತಿಯ ಎಲ್ಲಾ ಪ್ರಕ್ರಿಯೆಗಳು ಕಾಲಕಾಲಕ್ಕೆ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರಗಳು ಹೊರಡಿಸಿರುವ / ಹೊರಡಿಸುವ ಆದೇಶಗಳು ಮತ್ತು ಪ್ರಚಲಿತ ನಿಯಮಗಳಿಗೆ ಒಳಪಟ್ಟಿರುತ್ತದೆ

ಸಹಿ/- (ಹೆಚ್. ಪ್ರಸನ್ನ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು
DIPR/CP/AAPL/RO1045/2026-27

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in
No. PCB 26 INFRA EPH 2026/930 ದಿನಾಂಕ: 06.06.2026

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ-ದೊಡ್ಡಬಳ್ಳಾಪುರ ತಾಲ್ಲೂಕಿನ ಬಳ್ಳಗೆರೆ, ಕೆಂಚನಪುರ ಮತ್ತು, ಕೊಡಿಗೇಹಳ್ಳಿ ಗ್ರಾಮಗಳಲ್ಲಿ ಒಟ್ಟು 1009.61 ಎಕರೆ (408.57 ಹೆಕ್ಟೇರ್) ಪ್ರದೇಶದಲ್ಲಿ ನಾಲೆಡ್ಜ್, ವೆಲ್ಬಿಂಯಿಗ್ ಮತ್ತು ಇನೊವೇಟಿವ್ ಸಿಟಿ 1ನೇ ಹಂತ (KWIN CITY-1st Phase) ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ರಾಜ್ಯ ಪರಿಸರ ಆಘಾತ ಅಂದಾಜಿಕರಣ ಪ್ರಾಧಿಕಾರ-ಕರ್ನಾಟಕ ಇವರಿಂದ ಯೋಜನಾದಾರರು ಉಲ್ಲೇಖದ ನಿಯಮಗಳನ್ನು (Terms of Reference, TOR) ಪತ್ರ ದಿನಾಂಕ: 17.03.2026 ಕಡತ ಸಂಖ್ಯೆ : SEIAA 32 IND 2025, ಪ್ರಸ್ತಾವನೆ ಸಂಖ್ಯೆ : SIA/KA/INFRA1/555512/2025 ರಂತೆ ಪಡೆದಿರುತ್ತಾರೆ. ಪ್ರವರ್ತಕರ ಪತ್ರ ಸಂಖ್ಯೆ. KIADB/PH/KC/1st Phase/37/2026-27 , ದಿನಾಂಕ 28.04.2026 ರ ಕೋರಿಕೆಯಂತೆ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ- ನೆಲಮಂಗಲ ರವರ ಪತ್ರ ಸಂಖ್ಯೆ: ಕರಾಮಾನಿಮಂ/ಪ್ರಾ.ಕ (ನೆಲಮಂಗಲ)/ ಪರಿಸರ ಸಾರ್ವಜನಿಕ ಆಲಿಕೆ ಸಭೆ/2026-27/149 ದಿನಾಂಕ: 27.05.2026 ರಲ್ಲಿ ತಿಳಿಸಿರುವಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು **ದಿನಾಂಕ: 10ನೇ ಜುಲೈ 2026 ರಂದು ಶುಕ್ರವಾರ ಪೂರ್ವಾಹ್ನ 11 :00 ಗಂಟೆಗೆ** ನಿಗಧಿಪಡಿಸಿರುತ್ತಾರೆ. ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ವಿವರಗಳು ಈ ಕೆಳಕಂಡಂತಿವೆ.

1. ಸಂಸ್ಥೆಯ ಹೆಸರು ಮತ್ತು ವಿಳಾಸ : ಮುಖ್ಯ ಅಭಿಯಂತರರು (ಎಲ್), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನಂ. 2, 2/1 ಮತ್ತು 2/3, ಆಚಾರ್ಯ ತುಳಸಿಮಾರ್ಗ್, 1ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-560 009
2. ಉದ್ದೇಶಿತ ಯೋಜನೆಯ ಸ್ಥಳ : ಬಳ್ಳಗೆರೆ, ಕೆಂಚನಪುರ ಮತ್ತು ಕೊಡಿಗೇಹಳ್ಳಿ ಗ್ರಾಮ, ನೆಲಮಂಗಲ-ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
3. ಯೋಜನೆಯ ಕಾರ್ಯಚಟುವಟಿಕೆ : ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ-ದೊಡ್ಡಬಳ್ಳಾಪುರ ತಾಲ್ಲೂಕಿನ ಬಳ್ಳಗೆರೆ, ಕೆಂಚನಪುರ ಹಾಗೂ ಕೊಡಿಗೆಹಳ್ಳಿ ಗ್ರಾಮಗಳಲ್ಲಿ 1009.61 ಎಕರೆ (408.57 ಹೆಕ್ಟೇರ್) ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ "KWIN City 1ನೇ ಹಂತದ ಕೈಗಾರಿಕಾ ಪ್ರದೇಶ" ಯೋಜನೆಯು ಪರಿಸರ ಪರಿಣಾಮ ಮೌಲ್ಯಮಾಪನ (EIA) ಅಧಿಸೂಚನೆ, 2006ರ ಅನ್ವಯ 7(c), 7(h), 7(da), 8(a) & 3(a) ವಿಭಾಗಗಳಡಿ ಬರುವ 'B1'ವರ್ಗದ ಯೋಜನೆಯಾಗಿದೆ.
4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ: 10ನೇ ಜುಲೈ 2026 ರಂದು ಶುಕ್ರವಾರ, ಸಮಯ: ಪೂರ್ವಾಹ್ನ 11 :00 ಗಂಟೆಗೆ, ಸ್ಥಳ : ಸರ್ವೆ ನಂ. 15/8, 15/7, ಕೊಡಿಗೇಹಳ್ಳಿ ಗ್ರಾಮ, ನೆಲಮಂಗಲ-ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5. ಯೋಜನೆಯ ವೆಚ್ಚ : ರೂ. 2101 ಕೋಟಿ (ಯೋಜನಾ ಮೊತ್ತ)

6. ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ : **(1)** ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, **(2)** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(3)** ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(4)** ತಹಶೀಲ್ದಾರ್ ಕಾರ್ಯಾಲಯ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(5)** ತಾಲ್ಲೂಕು ಪಂಚಾಯತ್ ಕಾರ್ಯಾಲಯ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(6)** ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **(7)** ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ- ಬೆಂಗಳೂರು ಉತ್ತರ ಅರ್ಬನ್ ಇಕೋ ಪಾರ್ಕ್, 1ನೇ ಮಹಡಿ, 100 ಅಡಿ ರಸ್ತೆ, 3ನೇ ಹಂತ, ಪೀಣ್ಯ ಕೈಗಾರಿಕ ಪ್ರದೇಶ, ಬೆಂಗಳೂರು-560058. **(8)** ಪ್ರಾದೇಶಿಕ ಕಛೇರಿ - ನೆಲಮಂಗಲ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, 1ನೇ ಮಹಡಿ, ಅರ್ಬನ್ ಇಕೋ ಪಾರ್ಕ್, 3ನೇ ಮಹಡಿ, 100 ಅಡಿ ರಸ್ತೆ, 3ನೇ ಹಂತ, ಪೀಣ್ಯ ಕೈಗಾರಿಕ ಪ್ರದೇಶ, ಬೆಂಗಳೂರು-560058. **(9)** ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034. **(10)** ರಾಜ್ಯ ಪರಿಸರ ಆಘಾತ ಅಂದಾಜಿಕರಣ ಪ್ರಾಧಿಕಾರ- ಕರ್ನಾಟಕ, 4ನೇ ಗೇಟ್, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001. **(11)** ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ: **https://kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅಂದಂದಿನ ಕೆಲಸಗಳನ್ನು ಅಂದಂದೇ ಮಾಡಿ. ಅದರ ವಿಷಯ ಬಹಳವಾಗಿ ಚಿಂತನೆ ಮಾಡದೆ ಇರಬೇಕು. ಇದೇ ಒಳ್ಳೆಯ ಜೀವನ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪಾದಕೀಯ

ಸರ್ಕಾರಿ ಶಾಲೆಗಳ ದಯನೀಯ ಸ್ಥಿತಿ ಬದಲಾಗದ ಕಥೆ, ಇಚ್ಛಾಶಕ್ತಿ ಕೊರತೆ

ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಸುಮಾರು ಶೇ 60ರಷ್ಟು ಸರ್ಕಾರಿ ಶಾಲೆಗಳು ಮೂಲ ಸೌಕರ್ಯಗಳ ತೀವ್ರ ಕೊರತೆಯಿಂದ ಬಳಲುತ್ತಿರುವುದು ಈವರೆಗೆ ರಾಜ್ಯದಲ್ಲಿ ಆಡಳಿತ ನಡೆಸಿದ ಎಲ್ಲ ಸರ್ಕಾರಗಳು ನಾಚಿಕೆಪಡಬೇಕಾದ ಸಂಗತಿಯಾಗಿದೆ. ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿನ 20 ಸಾವಿರ ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದ ಸುಮಾರು 8 ಸಾವಿರ ಶಾಲಾಕೊಠಡಿಗಳನ್ನು ತುರ್ತಾಗಿ ಗಮನಿಸಬೇಕಾದ ಅಗತ್ಯವಿದೆ. ಅಪಾಯಕರ ಸ್ಥಿತಿಯಲ್ಲಿರುವ ಕೊಠಡಿಗಳನ್ನು ಮುಚ್ಚಲಾಗುವುದರಿಂದ, ಉಳಿದಿರುವ ಸೀಮಿತ ಕೋಣೆಗಳಲ್ಲಿಯೇ ಮಕ್ಕಳು ಕಿಕ್ಕಿರಿದು ಸೇರಿ ಕಲಿಯಬೇಕಾದ ಸ್ಥಿತಿ ರಾಯಚೂರಿನಲ್ಲಿದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ನೂರಾರು ಶಾಲಾಕೊಠಡಿಗಳನ್ನು ನೆಲಸಮ ಮಾಡಲಾಗಿದ್ದು, ಅವುಗಳ ಪುನರ್ ನಿರ್ಮಾಣ ಆಗಬೇಕಾಗಿದೆ. ಪ್ರಯೋಗಾಲಯಗಳು, ಡಿಜಿಟಲ್ ಸವಲತ್ತುಗಳು ಹಾಗೂ ನೈರ್ಮಲ್ಯಕ್ಕೆ ಸಂಬಂಧಿಸಿದ ಮೂಲ ಸೌಕರ್ಯಗಳ ಕೊರತೆಯು ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಕರ್ನಾಟಕ ಸರ್ಕಾರ ಇತ್ತೀಚೆಗಷ್ಟೇ 'ಶಿಕ್ಷಣದ ಗ್ಯಾರಂಟಿ'ಯನ್ನು ಪ್ರಕಟಿಸಿದೆ. ಅಗತ್ಯ ಸಂಖ್ಯೆಯ ಶಿಕ್ಷಕರ ಖಾತರಿ, ಶಾಲಾ ಸೌಕರ್ಯಗಳ ಉನ್ನತೀಕರಣ, ಡಿಜಿಟಲ್ ತರಗತಿಗಳು, ಸಾರಿಗೆ ಸೌಲಭ್ಯ, ಕೌಶಲಾಧಾರಿತ ಶಿಕ್ಷಣ, ಕ್ರೀಡೆ ಮತ್ತು ಕಲಾಪ್ರಕಾರಗಳಿಗೆ ಉತ್ತೇಜನ, ಶೈಕ್ಷಣಿಕ ಬೆಂಬಲ, ಭಾಷಾ ಅಧ್ಯಯನ ಸವಲತ್ತು – ಸರ್ಕಾರ ಒದಗಿಸುವುದಾಗಿ ಹೇಳಿರುವ ಈ ಸವಲತ್ತುಗಳು ಕಾಗದದ ಮೇಲೆ ಆಕರ್ಷಕವಾಗಿವೆ. ಸುರಕ್ಷಿತ ಹಾಗೂ ಅಗತ್ಯ ಪ್ರಮಾಣದ ಮೂಲ ಸೌಕರ್ಯಗಳನ್ನು ಒದಗಿಸದೆ ಹೋದರೆ ಎಲ್ಲವೂ ಘೋಷಣೆಗಳಾಗಿಯಷ್ಟೇ ಉಳಿಯಲಿವೆ.



ಶಿಥಿಲ ಕಟ್ಟಡಗಳಲ್ಲಿ ಮಕ್ಕಳ ವಿದ್ಯಾಭ್ಯಾಸ ಸಾಗುತ್ತಿರುವ ಸಂದರ್ಭದಲ್ಲಿ ಸಮಾನ ಶಿಕ್ಷಣ, ಸಮಾನ ಅವಕಾಶಗಳಂಥ ಮಾತುಗಳಿಗೆ ಯಾವ ಅರ್ಥವೂ ಇಲ್ಲ.

ಅನುದಾನದ ಹಂಚಿಕೆಗೆ ಸಂಬಂಧಿಸಿದಂತೆಯೂ ನಿರ್ಲಕ್ಷ್ಯ ಎದ್ದುಕಾಣಿಸುತ್ತದೆ. ನಿಕಟಪೂರ್ವ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ತವರು ಜಿಲ್ಲೆ ಶಿವಮೊಗ್ಗಕ್ಕೆ ಶೈಕ್ಷಣಿಕ ಮೂಲ ಸೌಕರ್ಯಗಳಿಗಾಗಿ ₹300 ಕೋಟಿ ಅನುದಾನ ದೊರೆತಿದ್ದರೆ, ಉತ್ತರ ಕರ್ನಾಟಕದ ಜಿಲ್ಲೆಗಳು ಅನುದಾನ ಪಡೆಯುವಲ್ಲಿ ಹಿಂದುಳಿದಿವೆ. ಬೆಳಗಾವಿ ವಿಭಾಗದಲ್ಲಿ ಹೊಸ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ₹105 ಕೋಟಿ ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿದ್ದರೆ, ದೊರೆತಿರುವುದು ₹10 ಕೋಟಿ ಮಾತ್ರ. ದುರಸ್ತಿ ಕಾಮಗಾರಿಗಳಿಗಾಗಿ ಸಲ್ಲಿಕೆಯಾಗಿರುವ ₹23 ಕೋಟಿ ಪ್ರಸ್ತಾವಕ್ಕೆ ₹75 ಲಕ್ಷವಷ್ಟೇ ದೊರೆತಿದೆ. ಇಂತಹ ಅಸಮಾನತೆಗಳನ್ನು ಯಾವುದೇ ರೂಪದಲ್ಲಿಯೂ ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ. ಈ ತಾರತಮ್ಯವನ್ನು ರಾಜಕೀಯ ಪ್ರಾತಿನಿಧ್ಯದ ಕೊರತೆಯ ಹಿನ್ನೆಲೆಯಲ್ಲಿಯೂ ನೋಡಲಾಗದು. ಎಸ್. ನಿಜಲಿಂಗಪ್ಪ, ಬಿ.ಡಿ. ಜತ್ತಿ, ಎಸ್.ಆರ್. ಕಂಠಿ, ವೀರೇಂದ್ರ ಪಾಟೀಲ, ಎಸ್.ಆರ್. ಬೊಮ್ಮಾಯಿ, ಧರ್ಮಸಿಂಗ್, ಜಗದೀಶ ಶೆಟ್ಟರ್ ಮತ್ತು ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿ ಈ ಭಾಗವನ್ನು ಪ್ರತಿನಿಧಿಸಿದ್ದಾರೆ. ರಾಷ್ಟ್ರೀಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಲ್ಹಾದ ಜೋಶಿ ಅವರು ಕೂಡ ಈ ಭಾಗದವರೇ ಆಗಿದ್ದಾರೆ. ಇಷ್ಟೊಂದು ರಾಜಕೀಯ ಪ್ರಾತಿನಿಧ್ಯ ಹೊಂದಿರುವ ಪ್ರದೇಶಗಳು ವಿರಳ. ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಯನ್ನು ವೇಗಗೊಳಿಸುವ ಉದ್ದೇಶದಿಂದ ಸಂವಿಧಾನದ 371(ಜೆ) ವಿಧಿಯ ಅಡಿಯಲ್ಲಿ ಈ ಭಾಗಕ್ಕೆ ವಿಶೇಷ ಸಾಂವಿಧಾನಿಕ ಸ್ಥಾನಮಾನ ನೀಡಲಾಗಿದೆ. ರಾಜಕೀಯ ಪ್ರಭಾವ ಹಾಗೂ ಸಾಂವಿಧಾನಿಕ ರಕ್ಷಣಾ ವ್ಯವಸ್ಥೆಯಿದ್ದೂ ಈ ಪ್ರದೇಶಗಳ ಮಕ್ಕಳು ಶಿಥಿಲ ಶಾಲಾ ಕಟ್ಟಡಗಳಲ್ಲೇ ಕಲಿಕೆ ಮುಂದುವರಿಸಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕ ಸೂಚ್ಯಂಕಗಳಲ್ಲೂ ಈ ಭಾಗ ಹಿನ್ನಡೆಯಲ್ಲಿರುವುದನ್ನು ಗಮನಿಸಿದರೆ, ಇಲ್ಲಿನ ಹಿನ್ನಡೆಗೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯೇ ಕಾರಣವಾಗಿರುವುದು ಸ್ಪಷ್ಟವಾಗಿದೆ.

ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಹೊಣೆಗಾರಿಕೆಯು ಸರ್ಕಾರಕ್ಕೆ ಮಾತ್ರ ಸೀಮಿತವಾಗಿರದೆ, ಈ ಪ್ರದೇಶಗಳ ಜನಪ್ರತಿನಿಧಿಗಳಿಗೂ ಸಂಬಂಧಿಸಿದ್ದಾಗಿದೆ. ಕುಸಿಯುವ ಸ್ಥಿತಿಯಲ್ಲಿರುವ ಕಟ್ಟಡಗಳಲ್ಲಿ ಮಕ್ಕಳ ಭವಿಷ್ಯ ಸಿಲುಕಿರುವಾಗ, ಪ್ರಾದೇಶಿಕ ಅಸ್ಮಿತೆಯ ಭಾಷಣಗಳಿಗೆ ಮಾತ್ರ ಶಾಸಕರು ಹಾಗೂ ಸಂಸದರ ಕಾಳಜಿ ಸೀಮಿತವಾಗಬಾರದು. ಅನುದಾನ ಸಾಲದೆ ಇದ್ದಲ್ಲಿ, ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಬೇಕು. ಸ್ಥಳೀಯ ಕೈಗಾರಿಕೆಗಳನ್ನು ಸಕ್ರಿಯಗೊಳಿಸಬೇಕು ಹಾಗೂ ಹೆಚ್ಚುವರಿ ಸಂಪನ್ಮೂಲಗಳಿಗಾಗಿ ನಿರಂತರವಾಗಿ ಪ್ರಯತ್ನಿಸಬೇಕು. ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಸಮಸ್ಯೆಗಳು ಪ್ರಸ್ತುತ ಆಡಳಿತಾತ್ಮಕ ವೈಫಲ್ಯವಾಗಿಯಷ್ಟೇ ಉಳಿಯದೆ, ರಾಜಕೀಯ ವೈಫಲ್ಯದ ಸ್ವರೂಪ ಪಡೆದುಕೊಂಡಿವೆ. ಶೈಕ್ಷಣಿಕ ಪರಿವರ್ತನೆಯ ಬಗ್ಗೆ ಮಾತನಾಡುವ ಸರ್ಕಾರವು, ಪ್ರತಿಯೊಂದು ಮಗುವಿಗೂ ಸುರಕ್ಷಿತವಾಗಿ ಕಲಿಯಲು ಅಗತ್ಯವಾದ ಶಾಲಾ ಕೊಠಡಿ ಇರುವುದನ್ನು ಮೊದಲು ಖಚಿತಪಡಿಸಬೇಕು. ಅದು ಸಾಧ್ಯವಾಗದೆ ಹೋದಲ್ಲಿ ಸಮಾನ ಶಿಕ್ಷಣ, ಸಮಾನ ಅವಕಾಶದ ಭರವಸೆಗಳು ಮರೀಚಿಕೆಯಾಗಿಯೇ ಉಳಿಯಲಿವೆ.

ಚಾಟಿ

ರಸಗೊಬ್ಬರ ಮಾರಾಟ ಅಕ್ರಮ



ರಾಜ್ಯದಲ್ಲಿ ರಸಗೊಬ್ಬರ ಮಾರಾಟವು ಅಕ್ರಮಗಳಿಂದ ಕೂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳ ಕುಮ್ಮಕ್ಕು ಮತ್ತು ಪಾಲುದಾರಿಕೆಯಲ್ಲಿ ಖಾಸಗಿ ಮಾರಾಟಗಾರರು ರೈತರನ್ನು ಸುಲಿಯುತ್ತಿದ್ದಾರೆ. ಬೆಳೆ ರಕ್ಷಿಸಿಕೊಳ್ಳುವ ಅನಿವಾರ್ಯತೆಯಲ್ಲಿ ಕೇಳಿದಷ್ಟು ದುಡ್ಡು ಕೊಟ್ಟು ರೈತ ಅಸಹಾಯಕನಾಗಿ ಗೊಬ್ಬರ ಖರೀದಿಸುವಂತಾಗಿದೆ.

ರವಿ ಕೃಷ್ಣಾರೆಡ್ಡಿ, ಗೌರವಾಧ್ಯಕ್ಷ, ಕೆಆರ್‌ಎಸ್ ರಾಜ್ಯ ಘಟಕ

ಕಿಡಿನುಡಿ



ಕೇಂದ್ರ ಸರ್ಕಾರವು 'ನೀಟ್' ಹಾಗೂ ಸಿಬಿಎಸ್‌ಸಿ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವಲ್ಲಿ ವಿಫಲವಾಗಿದೆ. ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಅಡಕತ್ತರಿಗೆ ಸಿಲುಕಿದೆ. ಹೀಗಿದ್ದರೂ, ನೈತಿಕ ಹೊಣೆ ಹೊರಲು ಶಿಕ್ಷಣ ಸಚಿವರು ಹಿಂಜರಿಯುತ್ತಿರುವುದು ಏಕೆ?

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

25 ವರ್ಷಗಳ ಹಿಂದೆ

ಶನಿವಾರ, 9-6-2001

• ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ

ಬೆಂಗಳೂರು, ಜೂನ್ 8– ರಾಜ್ಯದಲ್ಲಿ ಮಾಲಿನ್ಯ ನಿಯಂತ್ರಿಸಿ ಜನರ ಆರೋಗ್ಯ ಕಾಪಾಡಲು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸುವ ಕಾನೂನನ್ನು ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಪ್ರಕಟಿಸಿದರು.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಪರಿಸರ ಪ್ರಶಸ್ತಿಗಳನ್ನು ವಿತರಿಸಿ ಅವರು ಮಾತನಾಡಿದರು.

ಈ ನಿಷೇಧ ಜಾರಿಗೆ ಬರಲು ಹೊಸ ಕಾನೂನು ರೂಪಿಸಬೇಕೇ ಅಥವಾ ಕಾನೂನಿನಲ್ಲಿ ತಿದ್ದುಪಡಿ ತಂದರೆ ಸಾಕೇ ಎನ್ನುವ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದರು.

75 ವರ್ಷಗಳ ಹಿಂದೆ

ಶನಿವಾರ, 9-6-1951

• ಐ.ಎ.ಎಸ್ ಇತ್ಯಾದಿ ಪರೀಕ್ಷೆಗಳಲ್ಲಿ ಹಿಂದಿ ಸೇರಿಸುವ ಯತ್ನ ವಿಫಲ

ದೆಹಲಿ, ಜೂನ್ 8– ಹಿಂದಿಯನ್ನು ಸರ್ಕಾರಿ ಇಲಾಖೆಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕಾದ ಒಂದು ವಿಷಯವನ್ನಾಗಿ ಮಾತ್ರ ಗೊತ್ತುಮಾಡಬೇಕೆಂದೂ, ಈ ಭಾಷೆಯನ್ನು ಐ.ಎ.ಎಸ್ ಮತ್ತಿತರ ಸ್ಪರ್ಧಾ ಪರೀಕ್ಷೆಗಳಲ್ಲಿ ಒಂದು ವಿಷಯವನ್ನಾಗಿ ಮಾಡಲಾಗದೆಂದೂ ಕೇಂದ್ರ ಸಚಿವ ಸಂಪುಟವು ತೀರ್ಮಾನಿಸಿರುವುದಾಗಿ ಕೇಂದ್ರದ ಗೃಹ ಸಚಿವ ರಾಜಗೋಪಾಲಾಚಾರಿ ಅವರು ಇಂದು ಪಾರ್ಲಿಮೆಂಟಿನಲ್ಲಿ ನುಡಿದರು.

ಐ.ಎ.ಎಸ್ ಮತ್ತು ಇತರ ಪರೀಕ್ಷೆಗಳಲ್ಲಿ ಹಿಂದಿ ಇಲ್ಲದಿರುವ ಬಗ್ಗೆ 21 ಮಂದಿ ಸದಸ್ಯರು ಸೂಚಿಸಿದ್ದ ನಿಲುವಳಿ ಸೂಚನೆಯ ಬಗ್ಗೆ ಮಾತನಾಡುತ್ತಾ ರಾಜಾಜಿ, ಈ ವಿಷಯವನ್ನು ವಿವರಿಸಿದ ಬಳಿಕ ಅಧ್ಯಕ್ಷರು ನಿಲುವಳಿ ಸೂಚನೆ ಅಕ್ರಮ ಎಂಬುದಾಗಿ ತಳ್ಳಿಹಾಕಿದರು.

ಎಸ್‌ಐಆರ್: ವಿಶೇಷವೊ? ವಿಕಾರವೊ?



ವಿಶ್ಲೇಷಣೆ

ದೇವನೂರ ಮಹಾದೇವ

ಸ್ವಾತಂತ್ರ್ಯಾನಂತರ ಅಪಾರ ಬದ್ಧತೆ ಮತ್ತು ಕಾಳಜಿಯಿಂದ ಪ್ರಜಾಪ್ರಭುತ್ವಸೌಧವನ್ನು ಬಲಪಡಿಸುವ ಕೆಲಸ ನಡೆದಿತ್ತು. ಆ ಸೌಧವನ್ನು ಈಗ ದುರ್ಬಲಗೊಳಿಸಲಾಗುತ್ತಿದೆ. 'ಎಸ್‌ಐಆರ್' ಹೆಸರಿನಲ್ಲಿ 'ಮತದಾರರು' ಎನ್ನುವ ಇಟ್ಟಿಗೆಗಳನ್ನೇ ಕಿತ್ತು ಹೊರಗೆ ತೆಗೆದರೆ, ಪ್ರಜಾಪ್ರಭುತ್ವಸೌಧ ಕುಸಿಯದೆ ಇರುವುದೆ? ಸಂವಿಧಾನದ ಬಗ್ಗೆ ನಂಬುಗೆಯುಳ್ಳವರು ನಿದ್ದೆಗೆಡುವ ಕಾಲವಿದು.

'ಮತದಾರರ ಪಟ್ಟಿಗೆ ಹೆಸರು ಸೇರಿಸಿಕೊಳ್ಳುವುದು ಮತದಾರರ ಹಕ್ಕು; ಯಾವ ಮತದಾರರ ಹೆಸರೂ ಕೈಬಿಡದಂತೆ ಪಟ್ಟಿ ತಯಾರಿಸುವುದು, ಮುಖ್ಯ ಚುನಾವಣಾ ಆಯುಕ್ತನಾದ ನನ್ನ ಕರ್ತವ್ಯ' –ಹೀಗೆ ಘೋಷಣೆ ಮಾಡಿದ್ದು, ಭಾರತದ ಪ್ರಪ್ರಥಮ ಮುಖ್ಯ ಚುನಾವಣಾ ಆಯುಕ್ತ ಸುಕುಮಾರ್ ಸೇನ್ ಅವರು. 1950ರಿಂದ ಆರಂಭಿಸಿ ವರ್ಷಾನುಗಟ್ಟಲೆ ಶ್ರಮವಹಿಸಿ ಮತಪಟ್ಟಿ ತಯಾರಿಸುತ್ತಾರೆ. ಆಮೇಲೆ ನಡೆದ ಚುನಾವಣೆಯಂತೂ ರೋಚಕ. ಒಂಟೆ ಮೇಲೆ, ಕುದುರೆ ಮೇಲೆ, ಕತ್ತೆ ಮೇಲೆ ಮತಪೆಟ್ಟಿಗೆಗಳನ್ನು ಮತದಾನ ಕೇಂದ್ರಗಳಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತಾರೆ. ಭಾರತದಲ್ಲಿ ಪ್ರಜಾಪ್ರಭುತ್ವ ಸಾಧ್ಯವೇ ಆಗುವುದಿಲ್ಲ ಎಂದು ವ್ಯಂಗ್ಯವಾಡುತ್ತಿದ್ದ ಜಗತ್ತು ಬೆರಗಾಗುವಂತೆ ಚುನಾವಣೆ ನಡೆಯುತ್ತದೆ.

ಮತದಾರರ ಪಟ್ಟಿ ತಯಾರಿಕೆ ಹಾಗೂ ತದನಂತರ ನಡೆದ ಚುನಾವಣೆಯ ಸಾಹಸದಿಂದ ಭಾರತದ ಪ್ರಜಾಪ್ರಭುತ್ವಕ್ಕೆ ತಳಹದಿ ಹಾಕಿದವರು ಸೇನ್. ಈಗ ನಡೆಯುತ್ತಿರುವ 'ವಿಶೇಷ ತೀವ್ರ ಪರಿಷ್ಕರಣೆ'ಯು ಆ ಕಟ್ಟಿದ ಪ್ರಜಾಪ್ರಭುತ್ವವನ್ನು ಕೆಡವುತ್ತಿದೆ. ಇದನ್ನು ಹೇಗೆ ವಿವರಿಸಲಿ?

ನಮ್ಮ ಕಡೆ ಒಂದು ಮಾತಿದೆ – 'ಗ್ನಾನ' ಅಂತ. ಗ್ನಾನ ಅಂದರೆ– ಜ್ಞಾನ, ಎಚ್ಚರ, ಗಮನ ಅಂತ. ಯಾರಾದರೂ ಎಚ್ಚರವಿಲ್ಲದೆ ಕೆಲಸ ಮಾಡಿದರೆ 'ಗ್ನಾನ ಕೆಟ್ಟದಿಯಾ' ಅಂತ ಬಯ್ತಾರೆ. ಅಂಥವರನ್ನು ಗ್ನಾನಗೆಟ್ಟವರೆಂದು ಹೊಣೆಗಾರಿಕೆಯ ಕೆಲಸ ಕಾರ್ಯಗಳಿಂದ ದೂರ ಇಡುತ್ತಾರೆ.

ವಿಚಿತ್ರ ಅಂದರೆ, ನಮ್ಮ ದೇಶದ ಹಾಲಿ ಚುನಾವಣಾ ಆಯೋಗದ ಆಯುಕ್ತರ ಹೆಸರು– ಜ್ಞಾನೇಶ್‌ಕುಮಾರ್ (ಗ್ನಾನೇಶ್‌ಕುಮಾರ್). ಈ ಹಿಂದೆ ಮುಖ್ಯ ಚುನಾವಣಾ ಆಯುಕ್ತರನ್ನು ಪ್ರಧಾನಿ, ವಿರೋಧ ಪಕ್ಷದ ನಾಯಕ ಹಾಗೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು ಸೇರಿ ಆಯ್ಕೆ ಮಾಡುತ್ತಿದ್ದರು. ಆದರೆ, ನಮ್ಮ ಸಂಸತ್ತು, ಆಯುಕ್ತರನ್ನು ಆಯ್ಕೆ ಮಾಡಲು, ಪ್ರಧಾನಿ ಸೂಚಿಸುವ ಒಬ್ಬ ಕೇಂದ್ರ ಸಚಿವ ಹಾಗೂ ವಿರೋಧ ಪಕ್ಷದ ನಾಯಕ ಎಂದು ಅಸಮತೋಲನದ ತಿದ್ದುಪಡಿ ತಂದುಬಿಟ್ಟಿತು! ಆಯ್ಕೆ ಸಮಿತಿಯಲ್ಲಿ ವಿರೋಧ ಪಕ್ಷದ ಏಕೈಕ ನಾಯಕ ಇದ್ದರೂ ಆಳುವ ಪಕ್ಷದ ಸದಸ್ಯರು ಇಬ್ಬರಾದ್ದರಿಂದ ಏಕಪಕ್ಷೀಯವಾಗಿ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾಗಿ ಜ್ಞಾನೇಶ್‌ಕುಮಾರ್ ಆಯ್ಕೆಯಾಗಿದ್ದಾರೆ. ಹೀಗೆ ಆಯ್ಕೆಯಾದವರು ಚುನಾವಣಾ ಕಮಿಷನರ್ ಹುದ್ದೆ ಒಂದು ಬಗೆಯ ಅತ್ಯಮೂಲ್ಯ ಸಂತಸದ ಪದವಿ. ಈ ಕಮಿಷನರ್ ಹುದ್ದೆಗೆ ಇಬ್ಬರು ಆಪ್ತರಿದ್ದಾರೆ. ಇವರನ್ನು ಆಯ್ಕೆ ಮಾಡಿದ ಮೋದಿ ಮತ್ತು ಅಮಿತ್ ಶಾ, ಅಪ್ಪರಿಂದ ಇಚ್ಛಿಸಿದಂತೆ ಈಗ ಮಗ ನೆರವೇರುತ್ತಿದ್ದಾರೆ. ಅದುವೇ, ಇಂದು ತಲ್ಲಣಗೊಳಿಸುತ್ತಿರುವ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್).'

ಈ ಹಿಂದಿನಿಂದಲೂ ಮತದಾರರ ಪಟ್ಟಿಯ ಪರಿಷ್ಕರಣೆ ಸಹಜವಾಗಿ ನಡೆದುಕೊಂಡು ಬರುತ್ತಿತ್ತು. ಇದು ಅನಿವಾರ್ಯ. ನಿಧನರಾದವರನ್ನು ಮತದಾರರ ಪಟ್ಟಿಯಿಂದ ಕೈಬಿಡಲು ಹಾಗೂ ವಯಸ್ಕರಾದ ಹೊಸ ಮತದಾರರನ್ನು ಪಟ್ಟಿಗೆ ಸೇರಿಸಲು ಜೊತೆಗೆ ವಲಸೆಯಿಂದಾದ ನಾನಾ ಕಾರಣಗಳಿಂದ ಸ್ಥಳ ಬದಲಾವಣೆಯಾದವರ ಪಟ್ಟಿಯನ್ನು ಕ್ರಮಬದ್ಧಗೊಳಿಸಲು ಆಗಾಗ ಪರಿಷ್ಕರಣೆ ಅತ್ಯಗತ್ಯ. ಆದರೆ, ಈಗ ನಡೆಯುತ್ತಿರುವುದು 'ವಿಶೇಷ ತೀವ್ರ ಪರಿಷ್ಕರಣೆ'ಯಂತೆ. ವಿದೇಶಿ ನುಸುಳುಕೋರರನ್ನು ಪತ್ತೆಹಚ್ಚಿ ಹೊರಹಾಕಲು ಈ 'ವಿಶೇಷ' ಅತ್ಯವಶ್ಯಕ ಎಂದು ದೇಶದ ಉದ್ದಗಲಕ್ಕೂ ಪ್ರಚಾರ ಮಾಡಲಾಗಿತ್ತು!

ಈಗಾಗಲೇ, 13 ರಾಜ್ಯ ಹಾಗೂ 3 ಕೇಂದ್ರಾಡಳಿತ ಪ್ರದೇಶಗಳಲ್ಲಿ 'ಎಸ್‌ಐಆರ್' ಜರುಗಿದೆ. ಪರಿಷ್ಕರಣೆ ನಡೆದಿರುವ ಪಶ್ಚಿಮ ಬಂಗಾಳದಲ್ಲಿ ಎಷ್ಟು ಜನ ವಿದೇಶಿ ನುಸುಳುಕೋರರು ಸಿಕ್ಕಿದರು ಎಂದು ಟಿಎಂಸಿ ಪಕ್ಷ ಪ್ರಶ್ನೆ ಮಾಡಿದ್ದಕ್ಕೆ ಚುನಾವಣಾ ಆಯೋಗದ ಉತ್ತರ ಮೌನ! ಬಿಹಾರದಲ್ಲಿ ಎಷ್ಟು ಜನ ವಿದೇಶಿ ನುಸುಳುಕೋರರು ಸಿಕ್ಕಿದ್ದಾರೆ ಎಂದರೆ, ಆಯೋಗದ ಉತ್ತರ 200 ಎಂದು. ಇವರಲ್ಲಿ 194 ಜನ ಬಿಹಾರಕ್ಕೆ ಮದುವೆಯಾಗಿ ಬಂದ ನೇಪಾಳಿ ಮಹಿಳೆಯರಂತೆ! ಬಿಹಾರ ಮತ್ತು ನೇಪಾಳಗಳ ನಡುವೆ ಮದುವೆ ನಂಟು ಹಿಂದಿನಿಂದಲೂ ಇದೆ. ನಮ್ಮ ಸೊಸೆಯಂದಿರನ್ನು ಚುನಾವಣಾ ಆಯೋಗವು ನುಸುಳುಕೋರರು ಎಂದು ಪರಿಗಣಿಸಿಬಿಟ್ಟಿದೆ! ಭಾರತದ ಸಂಸ್ಕೃತಿ, ಪರಂಪರೆ ತಿಳಿಯದವರು ಮಾತ್ರ ಇದನ್ನು ಮಾಡಲು ಸಾಧ್ಯ. ಇದನ್ನು ಸಹಿಸಬಾರದು. 'ನಮ್ಮ ಊರಿನ ಸೊಸೆಯಂದಿರ ಹಕ್ಕು ಕಾಪಾಡುವುದು ಊರೊಟ್ಟಿನ ಕೆಲಸ' ಅಂತ ಪಣ ತೊಟ್ಟು ಊರಿಗೆ ಊರೇ ನಿಲ್ಲಬೇಕಾಗಿದೆ.

ಬೆಟ್ಟ ಅಗೆದು ಇಲಿ ಹಿಡಿದಂತೆ ಇನ್ನು ಉಳಿದ 6 ಜನರು ಬಾಂಗ್ಲಾದೇಶದ ಮುಸ್ಲಿಮರು ಸಿಕ್ಕಿದ್ದಾರಂತೆ. ಆಯ್ತು, ಹೀಗಿರುವ ಆರೇಳು ಜನ ವಿದೇಶಿ ಪ್ರಜೆಗಳನ್ನು ಹುಡುಕಬೇಕಾದವರು ಗುಪ್ತಚರ ಇಲಾಖೆಯವರಲ್ಲವೆ?

ಈಗ ಸರ್ಕಾರ ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಸುಳ್ಳು ಸುದ್ದಿ ಸೃಷ್ಟಿಸುವ ತನ್ನ ಪಟಾಲಂ ಛೂ ಬಿಟ್ಟಿದೆ. ಹೀಗೆ ಒಂದು ಸುದ್ದಿ: 'ಎಸ್‌ಐಆರ್' ತೀವ್ರವಾದ್ದರಿಂದ ಬಾಂಗ್ಲಾದೇಶದ 'ಅಕ್ರಮ ವಲಸಿಗರು' ಘರ್‌ವಾಪ್ಸಿ ಆಗುತ್ತಿದ್ದಾರೆ' ಎಂದು. ಆ ಒಕ್ಕಣೆಯ ಧ್ವನಿಯ ವರಸೆ– 'ಹೇಗಿದೆ ನಮ್ಮ ಮೋದಿ ಕರಾಮತ್ತು' ಎಂಬಂತಿದೆ. ಜೊತೆಗೆ, ಒಂದು ಚಿತ್ರವನ್ನೂ ಬಿತ್ತರಿಸಿದ್ದರು. ಬಡಕಲು ಸಣಕಲಿನವರು ದಾಟುತ್ತಿರುವ ಬಡಕಲು ದೇಹದ ಜನಸಮೂಹ ಅದು. ಆ ಚಿತ್ರವನ್ನು ಫ್ಯಾಕ್ಟ್‌ಚೆಕ್ ಮಾಡುವ ಬೂಮ್‌ಲೈವ್ ತಂಡ ವಿಶ್ಲೇಷಣೆ ಮಾಡಿ, ಇದು ಭಾರತ–ಬಾಂಗ್ಲಾದೇಶದ ಗಡಿಯ ಚಿತ್ರವಲ್ಲ; ಬದಲಿಗೆ ಬಾಂಗ್ಲಾದೇಶದ ಒಳನಾಡಿನಲ್ಲಿರುವ ಖುಲ್ನಾ ಜಿಲ್ಲೆಯ ಮೊಂಗ್ಲಾ ಘಾಟ್‌ನ ಚಿತ್ರ, ಅಲ್ಲಿ ಲಕ್ಷಾಂತರ ಜನ ಪ್ರತಿನಿತ್ಯ ಕೆಲಸಕ್ಕಾಗಿ ಹೋಗಿಬರುವ ದೃಶ್ಯ ಅದು ಎಂದು ವಿವರಣೆ ನೀಡಿದೆ. ಹೀಗಿದ್ದೂ ಪಟಾಲಂನ ಸುಳ್ಳಿನ ಸಾಮ್ರಾಜ್ಯ ಅಬ್ಬರಿಸುತ್ತಿದೆ.

ಆಮೇಲೆ, ಈಗಾಗಲೇ ನಡೆದಿರುವ 13 ರಾಜ್ಯ ಹಾಗೂ 3 ಕೇಂದ್ರಾಡಳಿತ ಪ್ರದೇಶಗಳ 'ಎಸ್‌ಐಆರ್'ನಲ್ಲಿ ಐದಾರು ಕೋಟಿ ಮತದಾರರನ್ನು ಹೊರಗಿಡಲಾಗಿದೆ. ಇದರಲ್ಲಿ ಮದುವೆಯಾಗಿ ಗಂಡನ ಮನೆಗೆ ಬರುವ ಶೇ 66ರಷ್ಟು ಮಹಿಳೆಯರು ಇದ್ದಾರೆ! ಉಳಿದವರು ಹೆಚ್ಚಾಗಿ ಹಳ್ಳಿಗರು, ಹಳ್ಳಿಗಳಿಂದ ಪಟ್ಟಣಕ್ಕೆ ಬಂದು ಸ್ಲಂಗೆ ಸೇರ್ಪಡೆಯಾಗುವ ಸಮೂಹ, ದಲಿತರು, ತಳಸಮುದಾಯಗಳು, ವಲಸೆ ಕಾರ್ಮಿಕರು, ಅಲೆಮಾರಿಗಳು, ಆದಿವಾಸಿಗಳು, ಜೊತೆಗೆ ಅಲ್ಪಸಂಖ್ಯಾತ ಮುಸ್ಲಿಮರ ಮೇಲೆ ದುರ್ಬೀನು ಹಾಕಿ ಕಿತ್ತೆಸೆಯಲು ಹವಣಿಸುತ್ತಿದ್ದಾರೆ.

ಇದನ್ನು ನೋಡಿದಾಗ, ಈಗ ನಡೆಯುತ್ತಿರುವುದು ವಿಶೇಷ ತೀವ್ರ ಪರಿಷ್ಕರಣೆ ಅಲ್ಲ, ಬದಲಿಗೆ ವಿಕಾರ ತೀವ್ರ ಪರಿಷ್ಕರಣೆ ಅನ್ನಿಸುತ್ತದೆ. ಮತದಾರರು ಫಾರಂ ಭರ್ತಿ ಮಾಡಿಕೊಡಬೇಕಂತೆ. ಇದು ಭಾರತದಲ್ಲಿ ಕಷ್ಟದ ಸಮಸ್ಯೆ. ಆಮೇಲೆ 2025ರ ಮತದಾರರ ಪಟ್ಟಿಯನ್ನು 2002ರ ಮತದಾರರ ಪಟ್ಟಿಗೆ ಹೋಲಿಕೆ ಮಾಡುತ್ತಾರಂತೆ. ಈ ಎರಡರ ನಡುವೆ ತಾಳೆ ನೋಡುವಾಗ, ಮತದಾರನ ಹೆಸರಿನ ಕಾಗುಣಿತ ಹಾಗೂ ತಂದೆಯ ಹೆಸರಿನ ಕಾಗುಣಿತ (ಸ್ಪೆಲ್ಲಿಂಗ್) ಒಂದೇ ಇರಬೇಕಂತೆ. ಇದು ಪಾಶ್ಚಾತ್ಯ ಭಾಷೆಗಳಿಗೆ ಸರಿಯಿರಬಹುದು. ಭಾರತದ ಸ್ವದೇಶಿ ಭಾಷೆಗಳಲ್ಲಿ ಉಚ್ಚಾರಣೆಗೆ ತಕ್ಕಂತೆ ಕಾಗುಣಿತ ಇರುತ್ತದೆ. ಸ್ಪೆಲ್ಲಿಂಗ್ ವ್ಯತ್ಯಾಸ ಆಗುತ್ತಿರುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಬೇಕೇ ಹೊರತು ತಪ್ಪು ಹುಡುಕಬಾರದು. ಇದು ದುರಂತ ಪಯಣ. ಜೊತೆಗೆ ಕಾಲ ನಿಗದಿ ಮಾಡಿ ಉಸಿರಾಡುವುದಕ್ಕೂ ಅವಕಾಶವಿಲ್ಲದಂತೆ ಪರಿಷ್ಕರಣೆ ಮಾಡುತ್ತಿರುವುದು ಯಾವ ಕಾರಣಕ್ಕಾಗಿ?

ಇತ್ತೀಚೆಗೆ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಕರ್ನಾಟಕಕ್ಕೆ ಬಂದಿದ್ದಾಗ, ರಾಜ್ಯದ ತನ್ನ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ; 'ಮತದಾರರ 'ವಿಶೇಷ' ತೀವ್ರ ಪರಿಷ್ಕರಣೆಯನ್ನು ನೀವು 'ಸರಿಯಾಗಿ' ಮಾಡಿಸಿದರೆ ಇನ್ನು ಐವತ್ತು ವರ್ಷಗಳ ಕಾಲ ಈ ದೇಶ ಬಿಜೆಪಿ ಆಳ್ವಿಕೆಯಲ್ಲೆ ಇರುತ್ತದೆ' ಎಂದು ಕಿವಿಮಾತು ಹೇಳಿದ್ದಾರೆ. ರಾಜ್ಯದ ಬಿಜೆಪಿ ಘಟಕವು ತನ್ನ 'ಎಸ್‌ಐಆರ್' ಕೈಪಿಡಿಯಲ್ಲಿ ಅಧ್ಯಕ್ಷನ ಅಭಿಪ್ರಾಯವನ್ನು ಮುದ್ರಿಸಿ 'ಸರಿಯಾಗಿ' ಮಾಡಲು ಹೊರಟಿದೆ. ಎಲ್ಲವೂ ಕತ್ತಲಲ್ಲಿ ನಡೆಯುತ್ತಿರುವಂತೆ ಗೋಚರಿಸುತ್ತಿದೆ.

ಪ್ರಪ್ರಥಮ ಚುನಾವಣಾ ಆಯುಕ್ತ ಸುಕುಮಾರ್ ಸೇನ್ ಹುಟ್ಟುಹಾಕಿದ ಪರಂಪರೆಯಲ್ಲಿ ಮತದಾರರನ್ನು ಒಳಗೊಳ್ಳಲು ಕಾಡುಮೇಡು, ಬೆಟ್ಟಗುಡ್ಡ, ಸ್ಲಂಗಳು, ಮರಳುಗಾಡು ಎಲ್ಲೆಡೆಯೂ ಜಾಲಾಡಿದರು. ಮತದಾರರೆಂದರೆ ಪ್ರಜಾಪ್ರಭುತ್ವಸೌಧದ ಇಟ್ಟಿಗೆಗಳು ಎಂಬ ಆಳವಾದ ಶ್ರದ್ಧೆ ಇದ್ದಲ್ಲಿ ಹೀಗೆಲ್ಲಾ ಆಗುತ್ತದೆ. ಆಗ– ಗಾಂಧಿ ವಾತಾವರಣ, ನೆಹರೂ ನಾಯಕತ್ವ, ಅಂಬೇಡ್ಕರ್ ಸಂವಿಧಾನದ ಹಿನ್ನೆಲೆ ಇತ್ತು. ಈಗ– ಹೆಗಡೇವಾರ್, ಗೋಲ್ವಾಲ್ಕರ್, ಸಾವರ್ಕರ್ ಹಿನ್ನೆಲೆಯವರು ಆಳ್ವಿಕೆ ನಡೆಸುತ್ತಿದ್ದಾರೆ. ಇವರು ಪ್ರಜಾಪ್ರಭುತ್ವಸೌಧದ ಮತದಾರ ಇಟ್ಟಿಗೆಗಳನ್ನು ಕಿತ್ತು ಹೊರಹಾಕುತ್ತಿದ್ದಾರೆ. ಪ್ರಜಾಪ್ರಭುತ್ವಸೌಧ ತಂತಾನೆ ಕುಸಿಯದೆ ಇನ್ನೇನು ಆಗುತ್ತದೆ?

ನೋಡಿ, ಮತದಾರರ ಪಟ್ಟಿಯಿಂದ 'ಸತ್ತವರು' ಎಂದು ಕೈಬಿಟ್ಟ ಕೆಲವರು 'ನಾವು ಬದುಕಿದ್ದೇವೆ' ಎಂದು ನ್ಯಾಯಾಂಗದ ಗಮನಕ್ಕೆ ತಂದರೂ, ಅವರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ. ಏನರ್ಥ? ನಿಜವಾಗಿಯೂ ಸತ್ತಿರುವುದು ಯಾರು ಎನ್ನುವುದು ತಿಳಿಯದಾಗಿದೆ.



ವಾಚಕರ ವಾಣಿ

ಸಂಧ್ಯಾ ಸುರಕ್ಷಾ ಪಿಂಚಣಿಗೆ ಅಲೆದಾಟ

ರಾಜ್ಯ ಸರ್ಕಾರವು ಸಂಧ್ಯಾ ಸುರಕ್ಷಾ ಯೋಜನೆಯಡಿ 65 ವರ್ಷ ಮೇಲ್ಪಟ್ಟವರಿಗೆ ಮಾಸಿಕ ₹1,200 ಪಿಂಚಣಿ ನೀಡುತ್ತಿದೆ. ಆದರೆ, ಮೂರು ತಿಂಗಳಿಂದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪಿಂಚಣಿ ಜಮೆಯಾಗಿಲ್ಲ. ಇದರಿಂದ ವಯೋವೃದ್ಧರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಆರೋಗ್ಯ ತಪಾಸಣೆ, ಔಷಧ ಖರೀದಿ ಸೇರಿದಂತೆ ದೈನಂದಿನ ಖರ್ಚಿಗೆ ಕಾಸಿಲ್ಲದೆ ಪರದಾಡುವಂತಾಗಿದೆ. ಪಿಂಚಣಿ ಹಣಕ್ಕಾಗಿ ನಿತ್ಯವೂ ಬ್ಯಾಂಕ್‌ಗಳಿಗೆ ಎಡತಾಕುತ್ತಿದ್ದಾರೆ. ನಕಲಿ ದಾಖಲೆ ಸಲ್ಲಿಸಿ ಪಿಂಚಣಿ ಪಡೆಯುತ್ತಿದ್ದ ವ್ಯಕ್ತಿಗಳ ಸಮೀಕ್ಷೆಯ ನೆಪದಲ್ಲಿ ಅರ್ಹರಿಗೆ ಪಿಂಚಣಿ ಮೊತ್ತ ಜಮೆ ಮಾಡಲಾಗಿಲ್ಲ. ತ್ವರಿತವಾಗಿ ಸಮೀಕ್ಷೆ ಪೂರ್ಣಗೊಳಿಸಿ ಹಣ ಜಮೆ ಮಾಡಬೇಕಿದೆ.

ರಾಮಚಂದ್ರ ಮಂಚಲದೊರೆ, ಗುಬ್ಬಿ

ಪ್ರವೇಶ ಪರೀಕ್ಷೆ: ಪ್ರಾಮಾಣಿಕತೆಯೆ ಕಣ್ಮರೆ

ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಿಂದ ಇತ್ತೀಚೆಗೆ ಐದು ವರ್ಷದ ಕಾನೂನು ಪದವಿ ವ್ಯಾಸಂಗಕ್ಕಾಗಿ ಪ್ರವೇಶ ಪರೀಕ್ಷೆ ನಡೆಯಿತು. ವಿವಿಧೆಡೆಯಿಂದ ಪರೀಕ್ಷಾರ್ಥಿಗಳು ಆಗಮಿಸಿದ್ದರು. ಈ ಪರೀಕ್ಷೆಗಾಗಿ ₹500 ಶುಲ್ಕದೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಿದೆ. ₹25 ನೀಡಿ ವಿ.ವಿ ಗ್ರಂಥಾಲಯ ವಿಭಾಗದಿಂದ ಇಂಗ್ಲಿಷ್ ಮಾಧ್ಯಮದಲ್ಲಿರುವ ಮಾದರಿ ಪ್ರಶ್ನೆಪತ್ರಿಕೆಯನ್ನು ಪಡೆದುಕೊಳ್ಳಬೇಕು. ಕನ್ನಡ ಮಾಧ್ಯಮದಲ್ಲಿ ಪಿಯುಸಿ ಓದಿದ ವಿದ್ಯಾರ್ಥಿಗಳು ಆಂಗ್ಲಭಾಷೆಯಲ್ಲಿರುವ ಈ ಪ್ರಶ್ನೆಪತ್ರಿಕೆ ಬಿಡಿಸಬೇಕಿದೆ. ದ್ವಿಭಾಷೆಯಲ್ಲಿ ಪ್ರಶ್ನೆಪತ್ರಿಕೆ ಇರಬೇಕಿತ್ತಲ್ಲವೇ? ಒಂದೇ ಮಾಧ್ಯಮದಲ್ಲಿರುವ ಪ್ರಶ್ನೆಪತ್ರಿಕೆಯಿಂದ ವಿದ್ಯಾರ್ಥಿಗಳ ನೈಜವಾದ ಜ್ಞಾನವನ್ನು ನಿರ್ಣಯಿಸುವುದಾದರೂ ಹೇಗೆ? ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಇಂಗ್ಲಿಷ್‌ನಲ್ಲಿರುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಬರೆಯುವುದು ಕಷ್ಟಕರವಲ್ಲವೇ? ಪರೀಕ್ಷೆ ಬರೆದವರಿಗೆ ಪ್ರಶ್ನೆಪತ್ರಿಕೆ, ಒಎಂಆರ್ ಶೀಟ್ ನೀಡುವ ವ್ಯವಸ್ಥೆಯೂ ಇಲ್ಲ. ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರವೂ ಇಲ್ಲ. ಹಾಗಿದ್ದರೆ ಪರೀಕ್ಷೆಯ ಪಾರದರ್ಶಕತೆಗೆ ಖಾತರಿ ಏನಿದೆ?

ಶಿವಕುಮಾರ ಬಂಡೋಳಿ, ಯಾದಗಿರಿ

ಖಾತೆ ಬಿಕ್ಕಟ್ಟು: ಅಭಿವೃದ್ಧಿಗೆ ಇಕ್ಕಟ್ಟು

'ಜಿರಲೆಗಳು ಬೇಕಿವೆ!' ಚುರುಮುರಿ ಬರಹವು (ಲೇ: ಸುಮಂಗಲಾ, ಪ್ರ.ವಾ., ಜೂನ್ 8) ರಾಜ್ಯದ ರಾಜಕಾರಣದ ವಾಸ್ತವ ಸ್ಥಿತಿಯನ್ನು ತೆರೆದಿಟ್ಟಿದೆ. ಕೆಲವು ಖಾತೆಗಳಷ್ಟೇ ಹಾಲು ಕರೆಯೋ ಜರ್ಸಿ ಹಸು ಇದ್ದಂಗ' ಎನ್ನುವ ಮಾತು ಸಕಾಲಿಕವಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಖಾತೆಗಾಗಿ ಕಿತ್ತಾಟ ನಡೆಯುತ್ತಿದೆ. ಇದು ಯಾವ ಹಂತಕ್ಕೆ ತಲಪುವುದೋ ತಿಳಿಯದು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬರುವ ವಿಶ್ವಾಸ ಕಾಂಗ್ರೆಸ್ ನಾಯಕರಿಗೆ ಇದ್ದಂತಿಲ್ಲ. ಹಾಗಾಗಿ, ಹೆಚ್ಚು ರೊಕ್ಕ ಸಿಗುವ ಖಾತೆಯ ಮೇಲೆಯೇ ಎಲ್ಲ ಸಚಿವರಿಗೂ ಕಣ್ಣುಬಿದ್ದಿದೆ. ರಾಜ್ಯದ ಅಭಿವೃದ್ಧಿಯು ಯಾರಿಗೂ ಬೇಡವಾಗಿದೆ.

ಎ.ವಿ. ಶಾಮರಾವ್, ಬೆಂಗಳೂರು

ಆರ್ಥಿಕ ಸಮಸ್ಯೆ: ಉಡಾಫೆ ಹೇಳಿಕೆ ಸಲ್ಲ

ಪ್ರಧಾನಮಂತ್ರಿ ಅವರ ಆರ್ಥಿಕ ಸಲಹಾ ಮಂಡಳಿಯ ಸದಸ್ಯರೂ ಮತ್ತು ಪಶ್ಚಿಮ ಬಂಗಾಳದ ರಾಜ್ಯಪಾಲ ಆರ್.ಎನ್. ರವಿ ಅವರ ಪುತ್ರಿಯೂ ಆದ ಶಮಿಕಾ ರವಿ ಅವರು, 'ಡಾಲರ್ ಎದುರು ರೂಪಾಯಿ ವಿನಿಮಯ ಮೌಲ್ಯ ನೂರಾದರೂ ನಾವು ಆತಂಕಪಡಬೇಕಿಲ್ಲ' ಎಂದಿದ್ದಾರೆ. ಅವರ ಪ್ರಕಾರ 100 ಎಂಬುದು ಒಂದು ನಂಬರ್ ಅಷ್ಟೇ. ಪ್ರಸ್ತುತ ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆಯ ಬಗ್ಗೆ ಇಂತಹ ಉಡಾಫೆಯ ಧೋರಣೆ ಸರಿಯಲ್ಲ. ಇದನ್ನು ಸರಿಪಡಿಸುವ ಅಗತ್ಯವೇ ಇಲ್ಲ ಎಂಬುದು ಇದರ ಇಂಗಿತಾರ್ಥವಾದೀತು. ರೂಪಾಯಿ ಮೌಲ್ಯದ ಅಭದ್ರತೆಯಿಂದ ಜನರ ಬದುಕು ದುಃಸ್ಥಿತಿಗೆ ತಲಪುತ್ತದೆ. ಸಮಸ್ಯೆಯನ್ನು ಸರಳೀಕರಿಸುವುದನ್ನು ಬಿಟ್ಟು ಗಂಭೀರವಾಗಿ ಅದರ ಪರಿಹಾರದ ಬಗ್ಗೆ ಸರ್ಕಾರ ಯೋಚಿಸಬೇಕಿದೆ.

ಟಿ.ಆರ್. ಚಂದ್ರಶೇಖರ, ಬೆಂಗಳೂರು.

ಪುಸ್ತಕಗಳ ಖರೀದಿ: ಪಾರದರ್ಶಕತೆ ಏಕಿಲ್ಲ?

ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಲೇಖಕರು, ಪ್ರಕಾಶಕರಿಂದ ನೇರವಾಗಿ ಪುಸ್ತಕಗಳನ್ನು ಖರೀದಿಸುತ್ತಿದ್ದ ಎಲ್ಲ ಯೋಜನೆಗಳು ಇತ್ತೀಚಿನ ವರ್ಷಗಳಲ್ಲಿ ಸ್ಥಗಿತಗೊಂಡಿವೆ. ಆದರೆ, ಜಿಲ್ಲಾ ಮತ್ತು ವಲಯವಾರು ಗ್ರಂಥಾಲಯಗಳ ಪುಸ್ತಕ ಖರೀದಿಯಷ್ಟೆ ನಡೆಯುತ್ತಿದೆ. ವಲಯ ಹಾಗೂ ಜಿಲ್ಲಾ ಗ್ರಂಥಾಲಯಗಳಲ್ಲಿ ಪುಸ್ತಕ ಖರೀದಿಗೆ ಸಾರ್ವಜನಿಕ ಆಹ್ವಾನ, ಆಯ್ಕೆ, ಪೂರೈಕೆ, ಪಾವತಿಗೆ ಸ್ಪಷ್ಟ ನಿಯಮಗಳು ಇಲ್ಲದೇ, ನಿರ್ಬಂಧಗಳಿಲ್ಲದೇ ಪ್ರಕಾಶಕರಿಗೆ ಅನ್ಯಾಯವಾಗುತ್ತಿದೆ.

ರಾಜ್ಯಮಟ್ಟದ ಆಯ್ಕೆ ಸಮಿತಿಯಿಂದ ಪುಸ್ತಕಗಳನ್ನು ಆಯ್ಕೆ ಮಾಡಿದ ಮೇಲೆ ಗ್ರಂಥಾಲಯವು ಎಲ್ಲರಿಗೂ ಸಮಾನ ಅವಕಾಶ ನೀಡಬೇಕಾಗಿತ್ತು. ಆದರೆ, 'ವಿವೇಚನಾ ಕೋಟಾ' ಎಂಬ ಹೆಸರಿನಲ್ಲಿ ತಮಗೆ ಬೇಕಾದ, ಬೇಕಾದವರ ಪುಸ್ತಕ ಖರೀದಿಯಷ್ಟೆ ನಡೆಯುತ್ತಿದೆ. ಇತರರಿಗೆ ಖರೀದಿಯ ಮಾಹಿತಿಗಳೇ ಅಲಭ್ಯ. ಹೊಸ ಪ್ರಕಾಶಕರು ಜಿಲ್ಲಾ ಮತ್ತು ಬೆಂಗಳೂರಿನ ವಲಯ ಗ್ರಂಥಾಲಯಗಳಿಗೆ ಹೋಗಿ ಪುಸ್ತಕ ಖರೀದಿಗೆ ಮನವಿ ಪತ್ರ ನೀಡಿದರೆ 'ಅನುದಾನದ ಕೊರತೆ, ಅನುದಾನವನ್ನು ಪುಸ್ತಕಕ್ಕೆ ವಿನಿಯೋಗಿಸುತ್ತಿಲ್ಲ' ಎಂಬೆಲ್ಲ ಸಬೂಬು ಹೇಳಲಾಗುತ್ತಿದೆ. ಗ್ರಂಥಾಲಯಗಳಿಗೆ ಎಷ್ಟು ಬಾರಿ ಲೇಖಕರು, ಪ್ರಕಾಶಕರು ಎಡತಾಕಲು ಸಾಧ್ಯ? ಸರ್ಕಾರ ಈ ಬಗ್ಗೆ ಗಮನ ನೀಡಿ ಜಿಲ್ಲಾ ಮತ್ತು ವಲಯ ಗ್ರಂಥಾಲಯಗಳ ಖರೀದಿ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಬೇಕು. ಜೊತೆಗೆ, ಆಯ್ಕೆ ಸಮಿತಿ ತಜ್ಞರು ಗ್ರಂಥಾಲಯಕ್ಕಾಗಿ ಆಯ್ಕೆ ಮಾಡಿದ ಆಯ್ಕೆಪಟ್ಟಿಯಲ್ಲಿರುವ ಎಲ್ಲ ಪುಸ್ತಕಗಳ ಪ್ರಕಾಶಕರಿಗೂ ಸಮಾನ ಅವಕಾಶ ಸಿಗುವಂತೆ ಮಾಡಬೇಕು.

ಅಕ್ಷತಾ ಹುಂಚದಕಟ್ಟೆ, ಶಿವಮೊಗ್ಗ; **ಎಂ. ರಾಜೇಶ್ವರಿ,** ಹೊಸಪೇಟೆ; **ರಾಜೇಂದ್ರ ಪ್ರಸಾದ್,** ಮಂಡ್ಯ; **ಹೇಮಾ ಪಟ್ಟಣಶೆಟ್ಟಿ,** ಧಾರವಾಡ; **ಬಸವರಾಜ ಸೂಳಿಬಾವಿ,** ಗದಗ; **ಟಿ.ಎಸ್. ಗೊರವರ,** ರಾಜೂರ; **ಚಾಂದ್ ಪಾಷ,** ಕಲಬುರಗಿ; **ಗುರುಪ್ರಸಾದ್ ಡಿ.ಎನ್.,** ಬೆಂಗಳೂರು; **ಧನಂಜಯ್,** ಬೆಂಗಳೂರು; **ನಿತೇಶ್ ಕುಂಟಾಡಿ,** ಬೆಂಗಳೂರು.

ಚುರುಮುರಿ

ಕೋಳಿ ಮತ್ತು ಅಭಿವೃದ್ಧಿ



• ಡಿ.ಎಸ್. ಲಿಂಗರಾಜು

'ಸಿಎಂ ಮನೆ ಮುಂದೆ ಕೋಳಿ ಕೂದು, ನಿಂಬೇಹಣ್ಣು ಮಡಗಿ ರಂಗೋಲಿ ಇಕ್ಕಿದ್ರಂತೆ. ಆಗದೋರು ಏನೋ ಮಾಡ್ಸಿರಬೇಕು' ಅಂತಂದೆ.

'ಒಳ್ಳೇದು ಕೆಟ್ಟದ್ದೆಲ್ಲಾ ಅಜ್ಜಯ್ಯ ನೋಡಿಕ್ಯತದೆ. ಆದ್ರೆ ಆ ನಾಟಿಕೋಳಿ ತಕ್ಕೋಗಿ ಬಿರಿಯಾನಿ ಮಾಡಿಕ್ಯಂದು ನಿಂಬೇರಸ ಹಿಂಡಿ ಅಡವಾಗಿ ತಿನ್ನದು ಬುಟ್ಟು ಪದಾರ್ಥ ವೇಸ್ಟ್ ಮಾಡಿಬುಟ್ಟವ್ರಲ್ಲಾ ಅಂತ ಯಥೆ' ಅಂತಂದ ತಿಪ್ಪಣ್ಣ.

'ಡಿಕೆಗೆ ಸುಭಿಕ್ಷಾಯೋಗ ಬರಲಿ ಅಂತ ಯಾರೋ ಹರಸಿಕ್ಯಂದು ಕೋಳಿ ಬಲಿ ಕೊಟ್ಟಿರತರೆ ಕನಾ' ತುರೇಮಣೆ ವಿಷಯಾಂತರ ಮಾಡಿದರು.

'ಈಗ ಬೆಂಗಳೂರು ಅಭಿವೃದ್ಧಿ ಖಾತೇನೆ ಯಾರಿಗೂ ಬ್ಯಾಡವಾಗಿ ಸತ್ತ ಕೋಳಿ ಥರ ರೋಡಿಗೆ ಬಿದ್ದದಂತೆ' ಯಂಟಪ್ಪಣ್ಣ ಬೇಜಾರು ಮಾಡಿಕ್ಯತ್ತು.

'ರಾಜ್ಯಸಭೆ ಎಲೆಕ್ಸನ್ ಉಮೇದುವಾರರ ಆದಾಯ ಕಳೆದ ಆರು ವರ್ಸದೇಲಿ 79ರಿಂದ 95 ಪಟ್ಟು ಏರಿಕೆಯಾಗ್ಯದಂತೆ. ಆರು ವರ್ಸಕ್ಕೆ ನೂರೈವತ್ತು ಪಟ್ಟು ಅಭಿವೃದ್ಧಿಯಂಗಾತು ಅಂತ ತಿಳಿದೋರು ಹೇಳ್ರಪ್ಪ?' ಅಂತಂದ ತಿಪ್ಪಣ್ಣ.

'ಯಾರಿಗೂ ಬ್ಯಾಡಾಗಿರೋ ಅಭಿವೃದ್ಧಿ ಖಾತೆ ನನಗಾರೂ ಕೊಟ್ರೆ ಕುಣ್ಕಂದು ನಿಭಾಯಿಸ್ತೀನಿ' ಯಂಟಪ್ಪಣ್ಣ ಕುಣಕಂದು ಎದ್ದಿತು.

'ನಿನ್ನ ಬಾಯಿಗೀಟು ಕ್ರಿಪ್ಟೋ ಕರೆನ್ಸಿ ಹಾಕ. ನಿನ್ನ ಅಭಿವೃದ್ಧಿ ತಕಂದು ಸರ್ಕಾರಕೇನಾಗಬಕು. ಕಾಂತರಾಜಣ್ಣನ ವರದೀಲಿ 1,300 ಜಾತಿಗಳ ಹೆಸರೇಳವ್ರೆ. ಜಾತಿಗೊಬ್ಬನಂಗೆ 1,300 ಮಿನಿಸ್ಟರ್ ಮಾಡಿದ್ರೆ ಎಲ್ಲಾರೂ ಅಭಿವೃದ್ಧಿ ಆತರೆ' ಅಂತಂದೆ.

'ಮೂವತ್ತುನಾಲ್ಕು ಪೋರ್ಟ್‌ಪೋಲಿಯೋದಲ್ಲಿ ತಿಂಗಳಿಗೊಬ್ಬನ್ನ ಮಿನಿಸ್ಟ್ರು ಮಾಡಿ 'ಅಂಗಳದಲ್ಲಿ ತಿಂಗಳ ಮಂತ್ರಿ' ಅಂತ ಹೊಸ ಯೋಜನೆ ಸುರು ಮಾಡಬೈದು' ತಿಪ್ಪಣ್ಣ ಐಡಿಯಾ ಕೊಟ್ಟ.

'ಹೂಕಲಾ. ಕಂಟ್ರಾಕ್ಟರುಗಳು, ಅಧಿಕಾರಿಗಳ ಸಭೆ ಕರೆದು ಆ ತಿಂಗಳ ಬಾಬತ್ತು ಬರೂದೇನದೆ ಅದುನ್ನೆಲ್ಲಾ ಗೋರಿಕ್ಯಂದರೆ ಎಲ್ಲಾರ ಅಭಿವೃದ್ಧಿನೂ ಆತದೆ. ಆಮೇಲೆ ತಿಂಗಳ ಕೊನೇಲಿ ಏಟು ಚಿನ್ನದ ಮೊಟ್ಟೆ ಬಂದವೆ ಅಂತ ಲೆಕ್ಕ ಹಾಕಬೈದು' ಅಂತು ತುರೇಮಣೆ.

ಸಂಗತ


ಯುದ್ಧ! ಚಿಣ್ಣರಿಗೆ ಬೇಕು ಭಯರಹಿತ ಅರಿವು

ವಿಶ್ವವನ್ನು ಒಂದಲ್ಲಾ ಒಂದು ಬಗೆಯಲ್ಲಿ ಆವರಿಸಿರುವ ಯುದ್ಧಗಳಿಗೆ ಸಂಬಂಧಿಸಿದ ಅರಿವು ಮಕ್ಕಳಿಗೆ ಅಗತ್ಯ. ಆ ಅರಿವು 'ಪಾಲನೆ ಪೋಷಣೆ' ಭಾಗವಾಗಿ ತಲಪಬೇಕು.

• ಕೆ. ನರಸಿಂಹಮೂರ್ತಿ

ಯುದ್ಧದಂಥ ಬಿಕ್ಕಟ್ಟುಗಳು ದೊಡ್ಡವರಲ್ಲಷ್ಟೇ ಅಲ್ಲ, ಮಕ್ಕಳಲ್ಲೂ ಆತಂಕ, ಉದ್ವೇಗ, ಭಯವನ್ನು ಮೂಡಿಸುತ್ತವೆ. ಅಂಥ ಸನ್ನಿವೇಶಗಳಲ್ಲಿ ಪೋಷಕರೇ ಸರಿಯಾದ ಮಾಹಿತಿ–ವಿವರಣೆಗಳ ಮೂಲಕ ಅವರಲ್ಲಿ ಧೈರ್ಯ, ವಿಶ್ವಾಸವನ್ನು ಮೂಡಿಸಬೇಕು. ಅದು ಅನಿವಾರ್ಯವೂ ಹೌದು. ಸುರಕ್ಷತೆಯ ಭಾವನೆಯನ್ನು ಯಾರಲ್ಲಿ ಕಂಡುಕೊಳ್ಳಬಹುದು ಎಂದು ಮಕ್ಕಳೂ ಹುಡುಕಾಡುತ್ತಿರುತ್ತಾರೆ. ಆ ಹುಡುಕಾಟದ ದಾರಿಯಲ್ಲಿ ಮೊದಲು ಸಿಗುವವರೇ ಹೆತ್ತವರು. ಮಕ್ಕಳ ಸಂತೋಷವನ್ನೇ ಸದಾ ಬಯಸುವ ಪೋಷಕರಿಗಾಗಿ ಈ ಯುದ್ಧಗಳ ಕಾಲದಲ್ಲಿ 'ಯುನಿಸೆಫ್' ಇತ್ತೀಚೆಗೆ ಕೆಲವು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಯುದ್ಧ ಮತ್ತು ಅದರ ದುಷ್ಪರಿಣಾಮಗಳ ಕುರಿತು ಮಕ್ಕಳಿಗೆ ಏನನ್ನಾದರೂ ಹೇಳುವ ಮುನ್ನ ಅವರಿಗೆ ಆ ಬಗ್ಗೆ ಏನು ಗೊತ್ತಿದೆ ಎಂಬುದನ್ನು ಅರಿತುಕೊಳ್ಳುವುದು ಮುಖ್ಯ; ಅದನ್ನು ಅರಿಯಲು ಸರಿಯಾದ ಸ್ಥಳ, ಸಮಯವನ್ನು ಆಯ್ಕೆ ಮಾಡಿಕೊಳ್ಳಬೇಕು. ಮನೆಯಲ್ಲಿ ಎಲ್ಲರೂ ಸೇರಿ ಊಟ–ತಿಂಡಿ ಮಾಡುವಾಗ, ವಾಕಿಂಗ್ ಹೋಗುವಾಗ ಅಂಥ ವಿಷಯಗಳನ್ನು ಮಾತನಾಡಬೇಕು. ರಾತ್ರಿ ಮಲಗುವ ಸಮಯ ಅದಕ್ಕೆ ಸೂಕ್ತ ಅಲ್ಲವೇ ಅಲ್ಲ. ಮೊದಲು ಅವರಿಗೆ ಏನನ್ನಿಸುತ್ತಿದೆ ಎಂದು ಸಾವಧಾನದಿಂದ ಕೇಳಬೇಕು. ಅವರಲ್ಲಿ ಯಾವ ಭಾವನೆ ಇದೆ ಎಂಬುದನ್ನು ಅರ್ಥೈಸಿಕೊಳ್ಳಬೇಕು; ಕೊಂಚ ದೊಡ್ಡ ಮಕ್ಕಳಾದರೆ ಕತೆ ಹೇಳುವ ಮೂಲಕವೂ ಸಂವಾದವನ್ನು ಆರಂಭಿಸಬಹುದು. ಒಟ್ಟಿನಲ್ಲಿ ಅಲ್ಲೊಂದು ಮುಕ್ತ ಸಂವಾದಕ್ಕೆ ಸ್ಥಳವಿರಬೇಕು. ಮಕ್ಕಳು ಹಿಂಜರಿಕೆ ಬಿಟ್ಟು ಮಾತನಾಡುವಂಥ ವಾತಾವರಣವಿರಬೇಕು.



ಮಕ್ಕಳು ಜಗತ್ತಿನ ಆಗುಹೋಗುಗಳನ್ನು ಹೇಗೆ ಗ್ರಹಿಸುತ್ತಿದ್ದಾರೆ? ಅವರು ಏನನ್ನು ನೋಡಿದ್ದಾರೆ, ನೋಡುತ್ತಿದ್ದಾರೆ? ಏನನ್ನು ಕೇಳಿಸಿಕೊಂಡಿದ್ದಾರೆ ಎಂಬುದನ್ನೂ ಅರಿಯಬೇಕು, ಟಿ.ವಿ, ಇಂಟರ್ನೆಟ್, ಸ್ನೇಹಿತರು, ಶಾಲೆ ಇತ್ಯಾದಿ ಮೂಲಕ ಅವರ ಗ್ರಹಿಕೆಗಳು ಹೇಗೆ ರೂಪುಗೊಂಡಿವೆ ಎಂಬುದರತ್ತಲೂ ಗಮನ ಹರಿಸಬೇಕು. ಅಂದಹಾಗೆ, ಇವೆಲ್ಲವೂ ಒಂದೇ ಬಾರಿಗೆ ಸಾಧ್ಯವಾಗುವುದಿಲ್ಲ.

ಯುದ್ಧ ನಡೆದರೆ ನಾವೆಲ್ಲ ಸತ್ತು ಹೋಗುತ್ತೇವೆಯೆ? ಬಾಂಬ್ ದಾಳಿಯಿಂದ ನಮ್ಮ ಮನೆಗಳೂ ನಾಶವಾಗುತ್ತವೆಯೆ? ಆಕಾಶ ನಮ್ಮ ಮೇಲೆ ಬಿದ್ದುಬಿಡುತ್ತದೆಯೆ? ಇಂಥ ಪ್ರಶ್ನೆಗಳನ್ನು ಮಕ್ಕಳು ಕೇಳಿದಾಗ ತಾಳ್ಮೆಯಿಂದ ಉತ್ತರಿಸಬೇಕು. ಅವರ ಸಂಕಟಗಳ ಮೂಲ ಯಾವುದು ಎಂದು ತಿಳಿದುಕೊಂಡರೆ ಮಾತ್ರ ಇದು ಸಾಧ್ಯವಾಗುತ್ತದೆ. ಬೇರೆ ಬೇರೆ ದೇಶಗಳಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿಹೇಳಲು ಅಪಾರ ತಾಳ್ಮೆಯ ಜೊತೆಗೆ ತಿಳಿವಳಿಕೆಯೂ ಇರಬೇಕು.

ತಮ್ಮ ಮಕ್ಕಳು ಏನು ಎಂಬುದು ಪೋಷಕರಿಗಷ್ಟೇ ಗೊತ್ತಿರುತ್ತದೆ. ಹೀಗಾಗಿ, ಅವರ ವಯಸ್ಸಿಗೆ ತಕ್ಕಂತೆ ಸಂವಾದ ನಡೆಸುವುದು ಮುಖ್ಯ. ಪೋಷಕರು ಮತ್ತು ಮಕ್ಕಳ ನಡುವಿನ ಪ್ರಶ್ನೋತ್ತರಕ್ಕೆ, ಮಕ್ಕಳನ್ನು ಆತಂಕ–ಒತ್ತಡದಿಂದ ಹೊರತರುವಂಥ ಗುಣವಿರಬೇಕು. ಯುದ್ಧವನ್ನು ತಡೆಯಲು, ಯುದ್ಧದ ದುಷ್ಪರಿಣಾಮಗಳನ್ನು ತಡೆಯಲು ಸಾಕಷ್ಟು ಮಂದಿ ಶ್ರಮವಹಿಸುತ್ತಿದ್ದಾರೆ ಎಂದು ಹೇಳಿದರೆ ಮಾತ್ರ ಅವರಲ್ಲಿರುವ ಆತಂಕ, ಉದ್ವೇಗಗಳು ಕಡಿಮೆಯಾಗಬಹುದು. ಜನರ ಕಷ್ಟಕ್ಕೆ ನೆರವಾಗುತ್ತಿರುವ ಸಹಜೀವಿಗಳ ಕುರಿತು ಮಾಹಿತಿ ನೀಡಬೇಕು. ಸಾಧ್ಯವಾದರೆ ಅಂತವರ ಬಗ್ಗೆ ಕತೆಗಳನ್ನು ಹೆಕ್ಕಿ ಹೇಳಬೇಕು. ಯುದ್ಧವನ್ನು ವಿರೋಧಿಸುವ ಜನ, ಯುದ್ಧದ ಪರಿಣಾಮಗಳನ್ನು ತಗ್ಗಿಸಲು ಪ್ರಯತ್ನಿಸುತ್ತಿರುವ ಜನರೂ ಜಗತ್ತಿನಲ್ಲಿ ಇದ್ದಾರೆ ಎಂಬುದನ್ನು ಉದಾಹರಣೆಗಳ ಮೂಲಕ ಹೇಳಲು ಪೋಷಕರಿಗೆ ಸಾಧ್ಯವಾದರೆ ಇನ್ನೂ ಚೆನ್ನ.

ಇಡೀ ಜಗತ್ತಿನ ಕಡೆಗೆ ದ್ವೇಷ, ಆತಂಕ, ಭಯದ ಬದಲು ಕರುಣೆ, ಅನುಕಂಪದಿಂದ ನೋಡುವುದನ್ನು ಮಕ್ಕಳು ಕಲಿಯುವಂತಾಗಬೇಕು. ಯಾವುದೇ ದೇಶವನ್ನು, ದೇಶದ ಜನರನ್ನು ದ್ವೇಷಿಸದಂಥ ಮನಃಸ್ಥಿತಿಯನ್ನು ರೂಢಿಸಿಕೊಳ್ಳುವಂತಾಗಬೇಕು, ಎಲ್ಲರಿಗೂ ಒಳಿತಾಗಬೇಕು, ಎಲ್ಲರೂ ಸುರಕ್ಷಿತರಾಗಿರಬೇಕು ಎಂಬ ಸದ್ಭಾವನೆಯೂ ಅವರಲ್ಲಿ ಮೂಡಬೇಕು. ಅದಕ್ಕೆ ಬೇಕಾಗಿರುವುದೇ ಮುಕ್ತ ಸಂವಾದ. ಪೋಷಕರೇ ಆ ಮುಕ್ತ ಸಂವಾದದ ನಿರ್ಮಾತೃಗಳಾಗಬೇಕು.

ಯುದ್ಧ, ಬಿಕ್ಕಟ್ಟುಗಳು ಮುಂದುವರಿದಿರುವಂತೆ ಅವು ಮಕ್ಕಳಲ್ಲಿ ಎಂಥ ಭಾವನೆಗಳನ್ನು ಮೂಡಿಸುತ್ತಿವೆ ಎಂಬುದನ್ನೂ ನಿರಂತರವಾಗಿ ಗಮನಿಸುತ್ತಲೇ ಇರುವುದು ಮರೆಯಬಾರದ ಜವಾಬ್ದಾರಿ. ಅದಕ್ಕೆ ತಕ್ಕಂಥ ಮಾತುಕತೆಗಳೂ ನಿರಂತರವಾಗಿ ನಡೆಯುತ್ತಿರಬೇಕು. ಅದಕ್ಕೆ ಇರುವ ಮದ್ದು ಎಂದರೆ ಸುದ್ದಿಗಳ ಮಹಾಪೂರದೊಳಗೆ ಅವರು ಕೊಚ್ಚಿಹೋಗದಂತೆ ಎಚ್ಚರ ವಹಿಸಬೇಕು. ಮನೆಯಲ್ಲಿ ಸುದ್ದಿವಾಹಿನಿಗಳ ಅಬ್ಬರವನ್ನು ಸಾಧ್ಯವಾದಷ್ಟೂ ತಗ್ಗಿಸಬೇಕು. ಏನನ್ನು ಓದಬೇಕು, ನೋಡಬೇಕು ಎನ್ನುವುದರ ಮಾರ್ಗದರ್ಶನ ಮಕ್ಕಳಿಗೆ ಅಗತ್ಯ.

ಮನೆಯಲ್ಲಿ ಆತಂಕ ಹುಟ್ಟಿಸುವ ಸುದ್ದಿಗಳನ್ನು ಕೇಳುವ, ನೋಡುವ ಅವಕಾಶಗಳನ್ನು ತಪ್ಪಿಸಲು ಹಲವು ದಾರಿಗಳಿವೆ. ಮಕ್ಕಳನ್ನು ಅವರ ಆಸಕ್ತಿಯ ವಿಷಯಗಳ ಕಲಿಕೆಯತ್ತ ಗಮನ ಹರಿಸಲು ಹೇಳಬಹುದು. ಸಾಮಾನ್ಯಜ್ಞಾನ ಹೆಚ್ಚಿಸಿಕೊಳ್ಳುವ ಚಟುವಟಿಕೆಗಳಲ್ಲಿ ತೊಡಗಿಸಬಹುದು. ಆಟಕ್ಕೆ, ವಾಕಿಂಗ್‌ಗೆ ಕರೆದೊಯ್ಯಬಹುದು. ಸಾಹಿತ್ಯದ ಓದಿನಲ್ಲಿ ತೊಡಗಿಸಬಹುದು. ಒಟ್ಟಿನಲ್ಲಿ, ಬದುಕು ಬರ್ಬರವಾಗಿರುವುದರ ಜೊತೆಗೆ ಸುಂದರವಾಗಿಯೂ ಇದೆ. ಬೆಳೆಯಲು, ಬದುಕಲು ಅವಕಾಶಗಳಿವೆ ಎಂಬ ತಿಳಿವು ಮೂಡಿಸುವುದು ಮುಖ್ಯ.

ಮಕ್ಕಳಿಗಾಗಿ ಇಷ್ಟೆಲ್ಲ ಮಾಡಬೇಕಾದ ಪೋಷಕರು ತಮ್ಮ ಬಗ್ಗೆಯೂ ಕಾಳಜಿ ವಹಿಸಲೇಬೇಕು. ಅವರ ಮನಃಸ್ಥಿತಿ ಚೆನ್ನಾಗಿದ್ದರೆ ಮಕ್ಕಳೂ ಚೆನ್ನಾಗಿರುತ್ತಾರೆ. ಯುದ್ಧದಂಥ ಬಿಕ್ಕಟ್ಟಿನ ಪರಿಸ್ಥಿತಿಗಳ ಬಗ್ಗೆ ಪೋಷಕರ ಮನವೂ ತಿಳಿಯಾಗಿ ಇರಬೇಕು. ದ್ವೇಷರಹಿತವಾಗಿರಬೇಕು. ಆಗ ಮಕ್ಕಳಲ್ಲೂ ಶಾಂತ, ಸೌಹಾರ್ದ ಭಾವ ಮೂಡುವುದರೊಂದಿಗೆ ಅವರ ತಿಳಿವಳಿಕೆಯೂ ಹೆಚ್ಚಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಾಗತಿಕ ಟೂರ್ನಿಗೆ ಇನ್ನು ಎರಡೇ ದಿನ

ವಿಶ್ವಕಪ್ ಫುಟ್‌ಬಾಲ್ ಏನೇನು ಹೊಸತು?

ಜೂನ್ 11–ಜುಲೈ 19

ಫುಟ್‌ಬಾಲ್ ಪ್ರೇಮಿಗಳು ಬಹುಕಾತರದಿಂದ ಕಾಯುತ್ತಿರುವ 23ನೇ ಫಿಫಾ ವಿಶ್ವಕಪ್ ಟೂರ್ನಿ ಜೂನ್ 11ರಿಂದ ಜುಲೈ 19ರವರೆಗೆ ಅಮೆರಿಕ–ಕೆನಡಾ–ಮೆಕ್ಸಿಕೊ ಜಂಟಿ ಆತಿಥ್ಯದಲ್ಲಿ ನಡೆಯುತ್ತಿದೆ. ಪಶ್ಚಿಮ ಏಷ್ಯಾದ ಯುದ್ಧದ ಬಿಸಿ ಇನ್ನೂ ಆರಿಲ್ಲ. ಆದರೆ, ಫುಟ್‌ಬಾಲ್ ಕಾವು ವ್ಯಾಪಕವಾಗಿದೆ. ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧದ ಬಿಕ್ಕಟ್ಟು ಮುಂದುವರಿದಿದ್ದರೂ, ಇರಾನ್ ತಂಡ ಅಮೆರಿಕದ ನೆಲದಲ್ಲಿ ಫುಟ್‌ಬಾಲ್ ಆಡಲಿದೆ. ಹಲವು ಹೊಸತುಗಳಿಗೆ ಈ ಬಾರಿಯ ಟೂರ್ನಿ ಸಾಕ್ಷಿಯಾಗಲಿದೆ. ಈ ಫುಟ್‌ಬಾಲ್ ವಿಶ್ವಕಪ್‌ನ ಪ್ರಮುಖ ವಿಶೇಷಗಳು ಇಲ್ಲಿವೆ



48 ತಂಡಗಳು | 39 ದಿನಗಳು | 16 ಕ್ರೀಡಾಂಗಣ | 104 ಪಂದ್ಯಗಳು

ಲಯೊನೆಲ್ ಮೆಸ್ಸಿ

• ನಾಗೇಶ್ ಶೆಣೈ ಪಿ.

ದಕ್ಷಿಣ ಕೆರಿಬಿಯನ್ ಸಮುದ್ರದ ದ್ವೀಪ ಕ್ಯುರಸಾವೊದ ಹೆಸರು ಕೇಳಿದವರು ವಿರಳ. ವೆನೆಜುವೆಲಾದಿಂದ 40 ಕಿ.ಮೀ. ದೂರದಲ್ಲಿರುವ ಈ ದ್ವೀಪ ಸುದ್ದಿಯಾಗಿದ್ದು ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆದಿದ್ದರಿಂದ. ವಿಶ್ವಕಪ್‌ನಲ್ಲಿ ಹೆಚ್ಚು ರಾಷ್ಟ್ರಗಳಿಗೆ ಪ್ರಾತಿನಿಧ್ಯ ನೀಡುವ ಮತ್ತು ಕ್ರೋಢೀಕರಿಸುವ ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಕ್ರಮದಿಂದಾಗಿ 23ನೇ ವಿಶ್ವಕಪ್‌ನಲ್ಲಿ ದಾಖಲೆಯ 48 ತಂಡಗಳು ಕಣಕ್ಕಿಳಿಯಲಿವೆ.

ಈ ನಿರ್ಧಾರದಿಂದ ವಿವಿಧ ಖಂಡಗಳಿಂದ ಭಾಗವಹಿಸುವ ತಂಡಗಳ ಸಂಖ್ಯೆ ಹೆಚ್ಚಿದೆ. 2022ರ ಕತಾರ್ ವಿಶ್ವಕಪ್‌ನಲ್ಲಿ ಎಎಫ್‌ಸಿ (ಏಷ್ಯನ್ ಫುಟ್‌ಬಾಲ್ ಒಕ್ಕೂಟ) ವಲಯದ ವ್ಯಾಪ್ತಿಯ ತಂಡಗಳ ಸಂಖ್ಯೆ ಆರು ಇತ್ತು. ಅದು ಈ ವಿಶ್ವಕಪ್‌ನಲ್ಲಿ ಒಂಬತ್ತಕ್ಕೆ ಏರಿದೆ. ಆಫ್ರಿಕಾ ಫುಟ್‌ಬಾಲ್ ವಲಯದಲ್ಲಿ (ಸಿಎಎಫ್) ಈ ಹಿಂದೆ ಐದು ತಂಡಗಳು ಆಡಿದ್ದರೆ, ಈ ವಿಶ್ವಕಪ್‌ನಲ್ಲಿ 10ಕ್ಕೆ ಏರಿದೆ.

ನೆದರ್ಲೆಂಡ್ಸ್‌ನ ಭಾಗವಾಗಿದ್ದರೂ ಸ್ವಾಯತ್ತವಾಗಿರುವ ಕ್ಯುರಸಾವೊ ತಂಡವು ಅರ್ಹತೆ ಪಡೆದಿದ್ದು 'ಉತ್ತರ ಅಮೆರಿಕ, ಮಧ್ಯ ಅಮೆರಿಕ ಮತ್ತು ಕೆರಿಬಿಯನ್ ವಲಯ ಫುಟ್‌ಬಾಲ್ ಒಕ್ಕೂಟ'ದ (CONCACAF) ಮೂಲಕ. ಹೈಟಿ ಮತ್ತು ಪನಾಮಾ ಕೂಡ ಈ ಭಾಗದಿಂದ ಅರ್ಹತೆ ಪಡೆದಿವೆ. ಈ ವಲಯದಲ್ಲೇ ಬರುವ ಇನ್ನೂ ಮೂರು ದೇಶಗಳು- ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ- 2026ರ ವಿಶ್ವಕಪ್ ಆತಿಥ್ಯವನ್ನು ಜಂಟಿಯಾಗಿ ವಹಿಸಿರುವುದರಿಂದ ಅವು ನೇರ ಪ್ರವೇಶ ಪಡೆದಿವೆ.

ನಾಲ್ಕು ಹೊಸ ತಂಡ: ಕ್ಯುರಸಾವೊ ಜೊತೆಗೆ ಇನ್ನೂ ಮೂರು ತಂಡಗಳು (ಕೇಪ್ ವರ್ದೆ, ಜಮೈಕಾ ಮತ್ತು ಉಜ್ಬೇಕಿಸ್ತಾನ) ಪದಾರ್ಪಣೆ ಮಾಡುತ್ತಿವೆ. ಫಿಫಾದಲ್ಲಿ ಆರು ಒಕ್ಕೂಟಗಳಿದ್ದು, ಪ್ರತಿಯೊಂದು ತಂಡ ತನ್ನ ಒಕ್ಕೂಟದ ವ್ಯಾಪ್ತಿಯಲ್ಲಿರುವ ಇತರ ತಂಡಗಳ ಜೊತೆ ಆಡಿ ಅರ್ಹತೆ ಪಡೆಯುತ್ತವೆ. ಕ್ಯುರಸಾವೊ ಅರ್ಹತೆ ಪಡೆಯುವ ಹಾದಿಯಲ್ಲಿ ಟ್ರಿನಿಡಾಡ್, ಅರುಬಾ, ಸೇಂಟ್ ಲೂಸಿಯಾ, ಹೈಟಿ, ಬರ್ಮುಡಾ ಮತ್ತು ಜಮೈಕಾ ತಂಡಗಳನ್ನು ಸೋಲಿಸಿದ್ದು ಚಾರಿತ್ರಿಕ ಸಾಧನೆ. ಈ ದೇಶದ ಜನಸಂಖ್ಯೆ ಕೇವಲ 1.80 ಲಕ್ಷ. ಈ ದೇಶದ ಆಟಗಾರರು ನೆದರ್ಲೆಂಡ್ಸ್‌ನಲ್ಲೇ ಹೆಚ್ಚು ಆಡುತ್ತಿದ್ದು, ಈಗ ತಮ್ಮ ತವರು ತಂಡವನ್ನು ಪ್ರತಿನಿಧಿಸಲಿದ್ದಾರೆ.

ಹೆಚ್ಚಿದ ತಂಡಗಳು: ಉರುಗ್ವೆಯಲ್ಲಿ ನಡೆದ ಮೊದಲ ವಿಶ್ವಕಪ್‌ನಲ್ಲಿ 13 ತಂಡಗಳು ಭಾಗವಹಿಸಿದ್ದವು. ನಂತರ ಈ ಸಂಖ್ಯೆಯಲ್ಲಿ ಸ್ವಲ್ಪ ವ್ಯತ್ಯಾಸಗಳಾದವು. 1954ರಿಂದ 1978ರವರೆಗೆ ತಲಾ 16 ತಂಡಗಳು ಭಾಗವಹಿಸಿದ್ದವು. 1982ರ ಸ್ಪೇನ್ ವಿಶ್ವಕಪ್‌ನಿಂದ ಆರಂಭವಾಗಿ 1994 ಅಮೆರಿಕದ ವಿಶ್ವಕಪ್‌ವರೆಗೆ 24 ತಂಡಗಳು ಜಾಗತಿಕ ಫುಟ್‌ಬಾಲ್ ಹಬ್ಬದಲ್ಲಿ ಆಡಿದ್ದವು. 1998ರ ಫ್ರಾನ್ಸ್ ವಿಶ್ವಕಪ್‌ನಲ್ಲಿ ಮೊದಲ ಬಾರಿ 32 ತಂಡಗಳು ಪಾಲ್ಗೊಂಡವು. 2022ರ ಕತಾರ್ ವಿಶ್ವಕಪ್‌ವರೆಗೆ ಈ ಪರಂಪರೆ ಮುಂದುವರಿಯಿತು. ಈಗ ಮೊದಲ ಬಾರಿ ಈ ಸಂಖ್ಯೆ 50ರ ಹತ್ತಿರ ತಲುಪಿದೆ.

ಈ ಬಾರಿ ತಂಡಗಳನ್ನು 12 ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಪಂದ್ಯಗಳ ಸಂಖ್ಯೆ 64ರಿಂದ 104ಕ್ಕೆ ಏರಿಕೆಯಾಗುತ್ತಿದೆ. ಇದರ ಹಿಂದೆ, ಜಾಹೀರಾತು, ಪ್ರಸಾರ ಹಕ್ಕು, ಪ್ರಾಯೋಜಕತ್ವದ ಮೂಲಕ ಆದಾಯ ಹೆಚ್ಚಿಸುವ ಉದ್ದೇಶವಿದೆ.

ಗುಣಮಟ್ಟದ ಮೇಲೆ ಪರಿಣಾಮ ಸಾಧ್ಯತೆ: ಹೆಚ್ಚು ತಂಡಗಳಿಗೆ ಸ್ಥಾನ ನೀಡುವ ಬಗ್ಗೆ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಪ್ರತಿ ಗುಂಪಿನಲ್ಲಿರುವ ತಂಡಗಳ ಪೈಕಿ ದುರ್ಬಲವೆನಿಸುವ ತಂಡಗಳು, ಪ್ರಬಲ ತಂಡಗಳ ಎದುರು ಸೋಲದಂತೆ ರಕ್ಷಣಾತ್ಮಕ ಆಟಕ್ಕೆ ಮೊರೆಹೋಗುವ ಸಾಧ್ಯತೆ ಹೆಚ್ಚು. ಇದರಿಂದ ಪಂದ್ಯಗಳ ಗುಣಮಟ್ಟದ ಮೇಲೆ ಪರಿಣಾಮವಾಗಬಹುದು ಎಂಬುದು ಒಂದು ಆಕ್ಷೇಪ.

1998ರ ನಂತರ ಮೊದಲ ಬಾರಿ ಮಾದರಿಯಲ್ಲಿ ಬದಲಾವಣೆಯಾಗುತ್ತಿದೆ. ಈ ಬಾರಿ ಪ್ರತಿ ಗುಂಪಿನಲ್ಲಿ ನಾಲ್ಕು ತಂಡಗಳಿದ್ದು, ಮೊದಲ ಎರಡು ಸ್ಥಾನ ಪಡೆಯುವ ತಂಡಗಳ ಜೊತೆಗೆ ಉತ್ತಮ ಪ್ರದರ್ಶನ ನೀಡಿದ ಮೂರನೇ ಸ್ಥಾನದ ಎಂಟು ತಂಡಗಳು 32ರ ಸುತ್ತಿಗೆ ಅರ್ಹತೆ ಪಡೆಯಲಿವೆ.

ಎರಡು ವಿರಾಮ

ಈ ಬಾರಿಯ ಕ್ವಾರ್ಟರ್‌ಫೈನಲ್ ಸೇರಿ ಎಲ್ಲ ನಾಕೌಟ್ ಪಂದ್ಯಗಳ ಪೂರ್ವಾರ್ಧ ಮತ್ತು ಉತ್ತರಾರ್ಧದ ಅವಧಿಯಲ್ಲಿ ತಲಾ ಮೂರು ನಿಮಿಷಗಳ ಅವಧಿಯ ಒಂದೊಂದು ಪಾನೀಯ ವಿರಾಮ ಗಳಿರುತ್ತವೆ. ಪಂದ್ಯ ಆರಂಭವಾಗಿ 22ನೇ ನಿಮಿಷ ಮತ್ತು 67ನೇ ನಿಮಿಷ ಈ 'ನೀರಡಿಕೆ' ವಿರಾಮ ನೀಡಲಾಗುತ್ತದೆ. ತಂಡದ ತರಬೇತುದಾರರಿಗೆ ತಂತ್ರ ಬದಲಾವಣೆಯ ಮಾರ್ಗದರ್ಶನ ನೀಡಲು ಅವಕಾಶವೂ ಸಿಗುತ್ತದೆ. ಜೊತೆಗೆ ಈ ವೇಳೆ ಜಾಹೀರಾತು ಪ್ರಸಾರ ಮಾಡಲು ಫಿಫಾ ಅವಕಾಶ ನೀಡಿದೆ.

ಭಾಗವಹಿಸುವ ಗುಂಪುವಾರು ತಂಡಗಳು

ಗುಂಪು	ತಂಡಗಳು
ಎ	ಜೆಕ್ ರಿಪಬ್ಲಿಕ್, ಮೆಕ್ಸಿಕೊ, ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ
ಬಿ	ಕೆನಡಾ, ಬೋಸ್ನಿಯಾ– ಹರ್ಜೆಗೋವಿನಾ, ಕತಾರ್, ಸ್ವಿಟ್ಜರ್ಲೆಂಡ್
ಸಿ	ಬ್ರೆಜಿಲ್, ಹೈಟಿ, ಮೊರೊಕ್ಕೊ, ಸ್ಕಾಟ್ಲೆಂಡ್
ಡಿ	ಆಸ್ಟ್ರೇಲಿಯಾ, ಪರಗ್ವೆ, ಟರ್ಕಿ, ಅಮೆರಿಕ,
ಇ	ಕ್ಯುರಸಾವೊ, ಇಕ್ವೆಡಾರ್, ಜರ್ಮನಿ, ಐವರಿಕೋಸ್ಟ್
ಎಫ್	ನೆದರ್ಲೆಂಡ್ಸ್, ಜಪಾನ್, ಸ್ವೀಡನ್, ಟ್ಯುನೀಶಿಯಾ
ಜಿ	ಬೆಲ್ಜಿಯಂ, ಈಜಿಪ್ಟ್, ಇರಾನ್, ನ್ಯೂಜಿಲೆಂಡ್
ಎಚ್	ಕೇಪ್ ವರ್ದೆ, ಸೌದಿ ಅರೇಬಿಯಾ, ಸ್ಪೇನ್, ಉರುಗ್ವೆ
ಐ	ಫ್ರಾನ್ಸ್, ನಾರ್ವೆ, ಸೆನೆಗಲ್, ಇರಾಕ್
ಜೆ	ಅಲ್ಜೀರಿಯಾ, ಅರ್ಜೆಂಟೀನಾ, ಆಸ್ಟ್ರಿಯಾ, ಜೋರ್ಡಾನ್
ಕೆ	ಕೊಲಂಬಿಯಾ, ಜಮೈಕಾ, ಪೋರ್ಚುಗಲ್, ಉಜ್ಬೇಕಿಸ್ತಾನ
ಎಲ್	ಕ್ರೊವೇಷ್ಯಾ, ಇಂಗ್ಲೆಂಡ್, ಘಾನಾ, ಪನಾಮಾ

ಅಂಕಿ ಆಟ...

3 ವಿಶ್ವಕಪ್ ಇತಿಹಾಸದಲ್ಲಿ ಇದೇ ಮೊದಲ ಬಾರಿ ಮೂರು ರಾಷ್ಟ್ರಗಳು ಈ ಟೂರ್ನಿಯನ್ನು ಹಮ್ಮಿಕೊಳ್ಳುತ್ತಿವೆ

6 ಲಯೊನೆಲ್ ಮೆಸ್ಸಿ, ಗಿಲೆರ್ಮೊ ಓಚಾವೊ ಮತ್ತು ಕ್ರಿಸ್ಟಿಯಾನೊ ರೊನಾಲ್ಡೊ ಅವರಿಗೆ ಇದು ದಾಖಲೆಯ ಆರನೇ ವಿಶ್ವಕಪ್ ಆಗಲಿದೆ

13 ಅರ್ಜೆಂಟೀನಾದ ಸೂಪರ್‌ಸ್ಟಾರ್ ಲಯೊನೆಲ್ ಮೆಸ್ಸಿ ವಿಶ್ವಕಪ್‌ನಲ್ಲಿ ಹೊಡೆದಿರುವ ಗೋಲುಗಳ ಸಂಖ್ಯೆ. ಫ್ರಾನ್ಸ್‌ನ ತಾರೆ ಕೈಲಿಯನ್ ಎಂಬಾಪೆ (12 ಗೋಲು) ನಂತರದ ಸ್ಥಾನದಲ್ಲಿದ್ದಾರೆ. ವಿಶ್ವಕಪ್ ದಾಖಲೆ ಜರ್ಮನಿಯ ಮಿರೋಸ್ಲಾವ್ ಕ್ಲೋಸ್ (16) ಹೆಸರಿನಲ್ಲಿದೆ

41 ಪೋರ್ಚುಗಲ್‌ನ ದಿಗ್ಗಜ ಕ್ರಿಸ್ಟಿಯಾನೊ ರೊನಾಲ್ಡೊ ಅವರ ವಯಸ್ಸು (ವಿಶ್ವಕಪ್ ಆರಂಭವಾಗುವಾಗ) 41 ವರ್ಷ 126 ದಿನ. ಅವರು ವಿಶ್ವಕಪ್ ಪಂದ್ಯ ಆಡಿದಲ್ಲಿ ಈ ಸಾಧನೆಗೆ ಪಾತ್ರರಾದ ನಾಲ್ಕನೇ ಅತಿ ಹಿರಿಯ ಆಟಗಾರ ಎನಿಸಲಿದ್ದಾರೆ

17 ಹಾಲಿ ವಿಶ್ವಕಪ್‌ನಲ್ಲಿ ಆಡಲಿರುವ ಅತಿ ಕಿರಿಯ ಆಟಗಾರ ಗಿಲ್ಬರ್ಟೊ ಮೊರಾ. ಮೆಕ್ಸಿಕೊ ತಂಡದಲ್ಲಿರುವ ಅವರ ವಯಸ್ಸು 17 ವರ್ಷ 246 ದಿನ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಕಾಲೇಜಿನ ಶುಲ್ಕ ಕಟ್ಟಲು ನೆರವಾಯಿತು



ಇತರರು ಮಾಡುವ ಸಣ್ಣಪುಟ್ಟ ಸಹಾಯಗಳೂ ಕಷ್ಟದ ಸಮಯದಲ್ಲಿ ಕೈಹಿಡಿಯುತ್ತವೆ. ಹಾಗೆಯೇ 'ಪ್ರಜಾವಾಣಿ' ವಿದ್ಯಾರ್ಥಿವೇತನ ಕಾಲೇಜಿನ ಶುಲ್ಕ ಕಟ್ಟಲು ನೆರವು ನೀಡಿತು. ಆ ಸಮಯಕ್ಕೆ ಅದು ಹುಲ್ಲುಕಡ್ಡಿಯಂತೆ ಆಸರೆ ಒದಗಿಸಿತು. ಇಂತಹ ವಿದ್ಯಾರ್ಥಿ ವೇತನಗಳು ಬಡ ಮಕ್ಕಳಿಗೆ ಅನುಕೂಲಕರ. ಈ ಮಾದರಿ ಹೀಗೆಯೇ ಮುಂದುವರಿಯಲಿ.

ಸ್ವಾತಿ ಡಿ., ದಾವಣಗೆರೆ

ಉನ್ನತ ಶಿಕ್ಷಣಕ್ಕೆ ಸಹಾಯ



ಮನೆಯಲ್ಲಿ ಹಣಕಾಸಿನ ತೊಂದರೆಯಿತ್ತು. 'ಪ್ರಜಾವಾಣಿ ಸ್ಕಾಲರ್‌ಶಿಪ್'ನಿಂದ ಕಾಲೇಜು ಶುಲ್ಕ ಪಾವತಿಗೆ ಅನುಕೂಲವಾಯಿತು. ಭವಿಷ್ಯದಲ್ಲಿ ನಾನೂ ಬೇರೆಯವರಿಗೆ ಸಹಾಯ ಮಾಡುವೆ. ಹಣಕಾಸಿನ ನೆರವು ನೀಡಿದ ಪ್ರಜಾವಾಣಿಗೆ ಧನ್ಯವಾದ.

ಚಂದನಾ ಆರ್. ಸಂಗನಾಳ, ಹುಬ್ಬಳ್ಳಿ

ನಿಂದನೆ ಶಿಸ್ತುಕ್ರಮ ಇನ್ನಷ್ಟು ಬಿಗಿ

- ಪಂದ್ಯಗಳ ವೇಳೆ ಎದುರಾಳಿ ಆಟಗಾರನ ವಿರುದ್ಧ ಜನಾಂಗೀಯ ನಿಂದನೆ, ತಾರತಮ್ಯ, ಅವಮಾನ ಮಾಡಿದರೆ ವಿಶ್ವಕಪ್‌ನಲ್ಲಿ ಕಠಿಣ ಕ್ರಮ ಕಾದಿದೆ. ಫಿಫಾ ಮತ್ತು ಐಎಫ್‌ಎಬಿ (ಅಂತರರಾಷ್ಟ್ರೀಯ ಫುಟ್‌ಬಾಲ್ ಸಂಸ್ಥೆ ಮಂಡಳಿ) ಕಟ್ಟುನಿಟ್ಟಿನ ಕ್ರಮಗಳನ್ನು ರೂಪಿಸಿದ್ದು ಈ ವಿಶ್ವಕಪ್‌ನಲ್ಲಿ ಜಾರಿಗೆ ತರಲಾಗುತ್ತಿದೆ. ಬಾಯಿಗೆ ಕೈ, ಶರ್ಟ್ ಅಡ್ಡವಾಗಿಟ್ಟುಕೊಂಡು ಅವಾಚ್ಯ, ನಿಂದನೀಯ ಪದಗಳನ್ನು ಪ್ರಯೋಗಿಸುವ ಆಟಗಾರರಿಗೆ 'ರೆಡ್ ಕಾರ್ಡ್' ಪ್ರದರ್ಶಿಸಲು (ಹೊರಕಳಿಸಲು) ರೆಫ್ರಿಗೆ ವಿವೇಚನಾ ಅಧಿಕಾರ ನೀಡಲಾಗಿದೆ
- ನಿಂದನೆ ನಿಲ್ಲಿಸುವಂತೆ ರೆಫ್ರಿ ಸಂಕೇತ ನೀಡಿದ ಬಳಿಕವೂ ನಿಂದನೆ ಮುಂದುವರಿದಲ್ಲಿ ಪಂದ್ಯ ಸ್ಥಗಿತಗೊಳಿಸಬಹುದಾಗಿದೆ
- ಪಂದ್ಯಗಳ ನಂತರವೂ ತಪ್ಪೆಸಗಿದ ಆಟಗಾರನ ವಿರುದ್ಧ ಫಿಫಾ ಅಥವಾ ಯುಇಎಫ್‌ಎ (ಯುರೋಪಿನ ಒಕ್ಕೂಟ) ಅಮಾನತು, ಭಾರಿ ದಂಡದಂಥ ಶಿಕ್ಷೆ ವಿಧಿಸಬಹುದಾಗಿದೆ
- ಪಂದ್ಯದ ವೇಳೆ ರೆಫ್ರಿ ತೀರ್ಪು ಪ್ರತಿಭಟಿಸಿ 'ಫೀಲ್ಡ್' ತೊರೆಯುವ ಆಟಗಾರನಿಗೆ, ಅಥವಾ ಆಟಗಾರನಿಗೆ ಆ ರೀತಿಯ ಪ್ರಚೋದನೆ ನೀಡುವ ಕೋಚಿಂಗ್ ಸಿಬ್ಬಂದಿಗೂ ರೆಡ್ ಕಾರ್ಡ್ ಶಿಕ್ಷೆ ಎದುರಾಗಲಿದೆ



ನೇಮರ್

ದಿಗ್ಗಜರ ಮೇಲೆ ಕಣ್ಣು



ಕೈಲಿಯನ್ ಎಂಬಾಪೆ

ದಿಗ್ಗಜರಾದ ಲಯೊನೆಲ್ ಮೆಸ್ಸಿ (ಅರ್ಜೆಂಟೀನಾ- ನಾಯಕ), ಕ್ರಿಸ್ಟಿಯಾನೊ ರೊನಾಲ್ಡೊ (ಪೋರ್ಚುಗಲ್- ನಾಯಕ), ಕೈಲಿಯನ್ ಎಂಬಾಪೆ (ಫ್ರಾನ್ಸ್- ನಾಯಕ), ಯುವತಾರೆ ಲಮಿನ್ ಯುಮಾಲ್ (ಸ್ಪೇನ್), ಹ್ಯಾರಿ ಕೇನ್ (ಇಂಗ್ಲೆಂಡ್- ನಾಯಕ), ವಿನೀಷಿಯಸ್ ಜೂನಿಯರ್ (ಬ್ರೆಜಿಲ್), ಮೊಹಮದ್ ಸಲಾ (ಈಜಿಪ್ಟ್- ನಾಯಕ), ಅಂಟ್ವಾನ್ ಸೆಮೆನ್ಯೊ (ಘಾನಾ), ಆರ್ದಾ ಗುಲೇರ್ (ಟರ್ಕಿ), ಅರ್ಲಿಂಗ್ ಹಾಲಂಡ್ (ನಾರ್ವೆ) ಅವರ ಆಟದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಬ್ರೆಜಿಲ್‌ನ ಭರವಸೆ ನೇಮರ್ ಗಾಯಾಳಾಗಿದ್ದರೂ ತಂಡದಲ್ಲಿದ್ದು ಅವರ ಆಡುವರೇ ಎಂಬ ಕುತೂಹಲವಂತೂ ಇದೆ.



ಕ್ರಿಸ್ಟಿಯಾನೊ ರೊನಾಲ್ಡೊ

ಇರಾನ್ ವೀಸಾ ವಿವಾದ

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಇನ್ನೂ ನಿಂತಿಲ್ಲ. ವಿಶ್ವಕಪ್‌ನಲ್ಲಿ ಭಾಗವಹಿಸಲಿರುವ ತಂಡಗಳ ಪಟ್ಟಿಯಲ್ಲಿ ಇರಾನ್ ಕೂಡ ಇದೆ. ಅಮೆರಿಕದಲ್ಲೂ ಪಂದ್ಯಗಳು ಆಯೋಜನೆಯಾಗಿರುವುದರಿಂದ ಅಲ್ಲಿಗೆ ಹೋಗಿ ಇರಾನ್ ಆಡುವುದೇ ಮತ್ತು ಅಮೆರಿಕ ಇರಾನ್‌ಗೆ ಆಡಲು ಅವಕಾಶ ನೀಡುವುದೇ ಎಂಬ ಕುತೂಹಲವಿತ್ತು. ಅದಕ್ಕೀಗ ತೆರೆ ಬಿದ್ದಿದೆ. ಅಮೆರಿಕವು, ಇರಾನ್ ಆಟಗಾರರಿಗೆ ಮತ್ತು 'ಆಯ್ದ ನೆರವು ಸಿಬ್ಬಂದಿ'ಗೆ ಮಾತ್ರ ವೀಸಾ ನೀಡಿದೆ. ತಾಂತ್ರಿಕ ಸಲಹೆಗಾರರಿಗೆ, ಇರಾನ್ ಫುಟ್‌ಬಾಲ್ ಸಂಸ್ಥೆ ಮುಖ್ಯಸ್ಥರಿಗೆ ವೀಸಾ ನಿರಾಕರಿಸಲಾಗಿದೆ.

ಇರಾನ್, ಮೆಕ್ಸಿಕೊವನ್ನು ನೆಲೆಯಾಗಿಟ್ಟುಕೊಂಡು ಪಂದ್ಯಗಳನ್ನು ಆಡುವ ದಿನ ಅಮೆರಿಕಕ್ಕೆ ತೆರಳಲಿದೆ. ಮೆಕ್ಸಿಕೊದ ಗಡಿ ಪಟ್ಟಣವಾದ ತಿಜುವಾನದಲ್ಲಿ ತಂಡ ವಾಸ್ತವ್ಯ ಹೂಡಲಿದೆ. ಇದಕ್ಕೆ ಮೊದಲು ಅರಿಝೋನಾದ ಟಸ್ಕನ್‌ನಲ್ಲಿ ಇರಾನ್‌ಗೆ ನೆಲೆ ಎಂದು ನಿಗದಿಪಡಿಸಲಾಗಿತ್ತು. ಈಗ ನೀಡಿರುವ ವೀಸಾ ಪ್ರಕಾರ, ಪಂದ್ಯದ ದಿನ ಇರಾನ್ ತಂಡವು ಅಮೆರಿಕಕ್ಕೆ ಬಂದು ಪಂದ್ಯ ಆಡಿ ಅದೇ ದಿನ ಮೆಕ್ಸಿಕೊದ ನೆಲೆಗೆ ಮರಳಬೇಕಾಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಕ್ರೋಚ್ ಜನತಾ ಪಾರ್ಟಿಯ (ಸಿಜೆಪಿ) ಪದಾಧಿಕಾರಿಗಳು ಇತ್ತೀಚೆಗೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಅಣ್ಣಾ ಹಜಾರೆ ಅವರು ಕೂಡ ಭಾಗವಹಿಸಿದ್ದಾರೆ ಎಂದು ಪ್ರತಿಪಾದಿಸುತ್ತಾ, ಮೂವರು ಯುವಕರೊಂದಿಗೆ ಅಣ್ಣಾ ಹಜಾರೆ ಅವರು ನಿಂತಿರುವ ಚಿತ್ರವೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಮಾಹಿತಿ.



ಅಣ್ಣಾ ಹಜಾರೆ ಅವರು ಮೇ 24ರಂದು ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿ, ಸಿಜೆಪಿಗೆ ಬೆಂಬಲ ವ್ಯಕ್ತಪಡಿಸಿದ್ದರು. ಸರ್ಕಾರವು ಇಂತಹ ಯುವಕರನ್ನು ಬೆಂಬಲಿಸಿ, ಅವರ ಭಾಗವಹಿಸುವಿಕೆಗೆ ಉತ್ತೇಜನ ನೀಡಬೇಕೇ ವಿನಾ, ಅವರನ್ನು ನಿರ್ಲಕ್ಷಿಸಬಾರದು ಎಂದು ಹೇಳಿದ್ದರು. ಆದರೆ, ಪತ್ರಿಕಾಗೋಷ್ಠಿಯಲ್ಲಿ ಅವರು ಭಾಗವಹಿಸಿಲ್ಲ. ಇತ್ತೀಚೆಗೆ ಸಿಜೆಪಿ ನಡೆಸಿದ ಮೊದಲ ಅಧಿಕೃತ ಸುದ್ದಿಗೋಷ್ಠಿಯ ಚಿತ್ರಗಳನ್ನು ಗೋಷ್ಠಿಯಲ್ಲಿ ಭಾಗವಹಿಸಿದ್ದ ಕೆಲವು ಪತ್ರಕರ್ತರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದರು. ಅದರಲ್ಲಿ ಹಜಾರೆ ಅವರ ಚಿತ್ರ ಇರಲಿಲ್ಲ. ಅಲ್ಲದೇ, ಸಿಜೆಪಿ ಸದಸ್ಯರು ಮಾಡಿದ ಸುದ್ದಿಗೋಷ್ಠಿಯ ವಿಡಿಯೊ ಕೂಡ ಲಭ್ಯವಿದ್ದು, ಅದರಲ್ಲೂ ಹಜಾರೆಯವರು ಕಂಡು ಬರಲಿಲ್ಲ. ಅನುಮಾನ ಬಂದು, ಚಾಟ್‌ಜಿಪಿಟಿಯ ಮೂಲಕ ಸಿಜೆಪಿ ನಡೆಸಿದ ಪತ್ರಿಕಾಗೋಷ್ಠಿಯ ಮೂಲ ಚಿತ್ರಕ್ಕೆ ಹಜಾರೆಯವರ ಫೋಟೊವನ್ನು ಸೇರಿಸಲು ಪ್ರಯತ್ನಿಸಿದಾಗ, ಚಾಟ್‌ಜಿಪಿಟಿ ಸೃಷ್ಟಿಸಿದ ಚಿತ್ರವು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರವನ್ನೇ ಹೋಲುತ್ತಿತ್ತು. ಹಾಗಾಗಿ, ಇದು ಎಐ ಟೂಲ್‌ಗಳನ್ನು ಬಳಸಿ ಸೃಷ್ಟಿಸಿರುವ ಚಿತ್ರವಾಗಿರುವ ಸಾಧ್ಯತೆಯೇ ಹೆಚ್ಚು ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು



ದೀಪಾ ಹಿರೇಗುತ್ತಿ

ಪುಟ್ಟ ದೀಪದ ಬೆಳಕು

ಒಂದು ಹಳೆಯ ದೇವಾಲಯದ ಹೊರಾಂಗಣದ ಮೂಲೆಯಲ್ಲಿ ಒಂದು ಪುಟ್ಟ ದೀಪ ತೂಗುತ್ತಿತ್ತು. ಅದು ಬಹಳ ಹಳೆಯ ದೀಪವಾಗಿದ್ದರಿಂದ ಅದನ್ನು ಹಾಗೆಯೇ ಇಟ್ಟಿದ್ದರು. ಅದರ ಸುತ್ತಮುತ್ತಲೂ ದಾನಿಗಳು ನೀಡಿದ್ದ ದೊಡ್ಡ ದೊಡ್ಡ ಆಕರ್ಷಕ ದೀಪಗಳು ಹೊಳೆಯುತ್ತಿದ್ದವು. ಹಬ್ಬಗಳ ಸಮಯದಲ್ಲಿ ಪ್ರಕಾಶಮಾನವಾಗಿ ಹೊಳೆಯುವ ದೊಡ್ಡ ಹಿತ್ತಾಳೆಯ ದೀಪಗಳ ಪಕ್ಕದಲ್ಲಿ ಈ ಪುಟ್ಟ ದೀಪ ಮಸುಕಾಗಿ ಕಾಣಿಸುತ್ತಿತ್ತು. ಆದರೂ ದೇವಾಲಯವನ್ನು ಸ್ವಚ್ಛಗೊಳಿಸುತ್ತಿದ್ದ ಮಹಿಳೆಯೊಬ್ಬರು ಈ ದೀಪಕ್ಕೆ ಯಾವಾಗಲೂ ಎಣ್ಣೆಯನ್ನು ತುಂಬಿ, ಬತ್ತಿಯನ್ನು ಸರಿಯಾಗಿ ಹಾಕಿ ಇಡುತ್ತಿದ್ದರು. ಆದರೆ ತನ್ನ ಕಡೆ ಜನರು ಗಮನ ಹರಿಸುವುದಿಲ್ಲವಲ್ಲ ಎಂದು ಆ ದೀಪ ನೊಂದುಕೊಳ್ಳುತ್ತಿತ್ತು.

ಒಂದು ಮಳೆಗಾಲದ ರಾತ್ರಿ, ದಾರಿಹೋಕನೊಬ್ಬ ಮಳೆಯಲ್ಲಿ ನೆನೆದು ನಡುಗುತ್ತಾ ದೇವಾಲಯಕ್ಕೆ ಬಂದನು. ಬಿರುಗಾಳಿಯಿಂದ ಮುಖ್ಯ ದೀಪಗಳು ಆರಿಹೋಗಿದ್ದವು. ವಿದ್ಯುತ್ ಹೋದ ಕಾರಣಕ್ಕೆ ಬೀದಿ ದೀಪಗಳೂ ಉರಿಯುತ್ತಿರಲಿಲ್ಲ. ದೇವಾಲಯದ ಅಂಗಳ ಕತ್ತಲಿನಿಂದ ಆವೃತವಾಗಿತ್ತು. ವಿಶ್ರಾಂತಿ ಪಡೆಯಲು ಸ್ಥಳ ಹುಡುಕುತ್ತಾ ಆ ಪ್ರಯಾಣಿಕ ದೇವಾಲಯದ ಹತ್ತಿರಕ್ಕೆ ಬರುತ್ತಿದ್ದ. ಆದರೆ ಕತ್ತಲೆಯಲ್ಲಿ ಏನೂ ಕಾಣದೇ ಅಲ್ಲಿಯೇ ನಿಂತಿದ್ದ. ಅಷ್ಟು ಹೊತ್ತಿಗೆ ದೇವಾಲಯ ಸ್ವಚ್ಛಗೊಳಿಸಲೆಂದು ಬಂದು ಮಳೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಮಹಿಳೆ ಆ ಪುಟ್ಟ ದೀಪವನ್ನು ಹಚ್ಚಿದರು. ದೊಡ್ಡ ದೀಪಗಳನ್ನು ಹಚ್ಚಲು ಎಣ್ಣೆ ಇರಲಿಲ್ಲ. ಪುಟ್ಟ ದೀಪದ ಕಿರು ಬೆಳಕು ಒದ್ದೆಯಾದ ಕಲ್ಲುಗಳ ಮೇಲೆ ಹರಡಿ, ಹತ್ತಿರದ ಒಂದು ಬೆಂಚನ್ನು ಬೆಳಗಿಸಿತು. ಪ್ರಯಾಣಿಕ ಆ ಬೆಂಚಿನ ಮೇಲೆ ಕುಳಿತು ವಿಶ್ರಾಂತಿ ಪಡೆಯಲಾರಂಭಿಸಿದ. ಕಾರ್ಗತ್ತಲೆಯಲ್ಲಿ ಕೊಂಚ ಬೆಳಕನ್ನು ಕಂಡಿದ್ದೇ ಬೀದಿ ನಾಯಿಯೊಂದು ಬಂದು ಮಲಗಿತು. ಮತ್ತಿಬ್ಬರು ಊರಿನವರೇ ಅಲ್ಲಿಗೆ ಬಂದು ಕುಳಿತರು.

ಮಳೆ ನಿಂತು ವಿದ್ಯುತ್ ಬಂದಿತು. ಬೀದಿ ದೀಪಗಳು ಉರಿದವು. 'ಈ ಸಣ್ಣ ದೀಪದಿಂದ ತುಂಬಾ ಪ್ರಯೋಜನವಾಯಿತು, ನೀವಿದನ್ನು ಹಚ್ಚಿದ್ದು ಒಳ್ಳೆಯದಾಯಿತು' ಅಂದರು ಆ ಮಹಿಳೆಗೆ ಎಲ್ಲರೂ. 'ದೀಪ ಚಿಕ್ಕದಾದರೇನು, ಕತ್ತಲೆಯನ್ನು ಓಡಿಸಲು ಸಾಕಲ್ಲ' ಎಂದರು ನಗುತ್ತ ಮಹಿಳೆ. ಇದನ್ನೆಲ್ಲ ನೋಡುತ್ತಿದ್ದ ಆ ದೀಪ ತಾನು ಪ್ರಯೋಜನಕ್ಕೆ ಬಂದೆನಲ್ಲ ಎಂದು ಖುಷಿಪಟ್ಟಿತು. ದೊಡ್ಡ ದೀಪಗಳನ್ನು ನೋಡಿ ಅದು ಪಡುತ್ತಿದ್ದ ಕೀಳರಿಮೆ ಈಗ ಮಾಯವಾಗಿತ್ತು. ಗಾತ್ರಕ್ಕಿಂತ ಮಾಡುವ ಯೋಗ್ಯ ಕೆಲಸದಿಂದ ಗುರುತಿಸಿಕೊಳ್ಳಬಹುದೆಂಬ ಬಹುದೊಡ್ಡ ಪಾಠವನ್ನು ಅದು ಕಲಿತಿತ್ತು.

ನಾವು ಬಹಳ ಸಂದರ್ಭದಲ್ಲಿ ದೊಡ್ಡ ಸಂಗತಿಗಳಿಗೆ ಎಷ್ಟು ಮಹತ್ವ ಕೊಡುತ್ತೇವೆಂದರೆ ಸಣ್ಣ ಸಣ್ಣ ಸಂಗತಿಗಳನ್ನು ಗುರುತಿಸುವುದೇ ಇಲ್ಲ. ಯಾವುದೋ ದೇಶದ ಯಾರೋ ಒಬ್ಬರು ಮಾಡಿದ ಒಳ್ಳೆಯ ಕೆಲಸದ ವಿಡಿಯೊವನ್ನು ಹಂಚುತ್ತೇವೆ. ಆದರೆ ಅಪ್ಪ ಅಮ್ಮ ಊರಿಗೆ ಹೋದಾಗ ತಿಂಡಿ ಕೊಟ್ಟ ಪಕ್ಕದ ಮನೆಯವರು, ಶಾಲೆ ತಪ್ಪಿದಾಗ ಹೋಂವರ್ಕ್ ಮಾಡಲು ಸಹಾಯ ಮಾಡಿದ ಗೆಳತಿ, ಕಚೇರಿಯಲ್ಲಿ ಕೆಲಸ ಹಂಚಿಕೊಳ್ಳುವ ಸಹೋದ್ಯೋಗಿ ಇಂತಹವರ ಸಹಾಯವನ್ನು ಅದೇನು ಮಹಾ ಎಂದು ಮರೆತು ಬಿಡುತ್ತೇವೆ. ಎವರೆಸ್ಟ್ ಹತ್ತಿದವರದ್ದು ಸಾಧನೆಯೇ. ಆದರೆ ಬಸ್ ಹತ್ತುವಾಗ ಚೀಲ ಹಿಡಿದು ಸಹಾಯ ಮಾಡಿದವರದ್ದೂ ಒಂದು ಪುಟ್ಟ ಸಾಧನೆಯೇ. ಬದುಕಿನಲ್ಲಿ ದೊಡ್ಡ ಕಾರ್ಯಗಳಷ್ಟೇ ಮಹತ್ವದ್ದಲ್ಲ, ಸಣ್ಣಸಣ್ಣ ಒಳ್ಳೆಯ ಕೆಲಸಗಳೂ ಅನೇಕ ಜನರ ಬದುಕಿಗೆ ಬೆಳಕಾಗಬಹುದು, ಒಂದು ಪುಟ್ಟ ದೀಪವೂ ಅನೇಕರಿಗೆ ಕತ್ತಲಲ್ಲಿ ದಾರಿತೋರಿಸಿದಂತೆ, ಭಯ ಪಡದಂತೆ ಧೈರ್ಯ ತುಂಬಿದಂತೆ. ❖

ಪದಬಂಧ 6428


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಹಾರವನ್ನು ಸೇವಿಸದಿರುವುದು (4)
3.ಅವನ ಹೆಮ್ಮೆ ಹೀಗೆ ಬಂದಿದೆ (4)
5.ಬಿರುಸು ಅಥವಾ ಒರಟು ಎಂದರೂ ಸರಿ! (3)
6.ಪುರಿಯಲ್ಲಿರುವ ಶತ್ರು ಕಾಣಿಸುತ್ತಿದ್ದಾನೆಯೇ (2)
7.ಕೆಲಸಕ್ಕೆ ಬಾರದ ಮಾತಿದು (5)
10.ಕನಸಲ್ಲಿ ಕಾಣಿಸಿದ ಕೊಳೆ (2)
12.ಒನಪು ತೋರುವಾಗಿನ ಸ್ಮರಣೆ (3)
14.ಈತ ಅದೃಷ್ಟವಿಲ್ಲದವನು (4)
15.ವನದಲ್ಲಿನ ಬೆಳವಣಿಗೆ! (4)

ಮೇಲಿಂದ ಕೆಳಕ್ಕೆ

1.ಉರಿಯೊಳಗಿರುವ ಗೊಡವೆ ಕಾಣುತ್ತಿದೆಯೇ? (4)
2.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
3.ಹಿರಿಯ ಸಹೋದರನಿವನು (2)
4.ಅದೇ ತಾನೆ ಅರಳಿದ ಹೂವು (4)
5.ಜಾಗಟೆ ಬಾರಿಸುತ್ತಾ ಮಾಡಿದ ಗದ್ದಲ! (3)
7.ಬಿನ್ನಾಣವನ್ನು ಹೀಗೆ ತೋರಿರಿ (3)
8.ಬೆಳ್ಳಿ ಹಬ್ಬವಿದು (5)
9.ಮನದೊಳಗಿರುವ ಕುಲ (4)
11.ನೆಮ್ಮದಿ ಈ ರೀತಿ ಬಂದಿದೆ (4)
13.ಇಷ್ಟರಲ್ಲೇ ಕಾಣಿಸಿಕೊಂಡಿರುವ ಅಪೇಕ್ಷೆ! (2)



6427ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜನಗಣತಿ 4.ಕುಲ 5.ಲಡಿ 6.ಹವನ 8.ಅಸ್ತವ್ಯಸ್ತ 9.ವೀರಭಟ 10.ಅವಕಾಶ 11.ರಕ್ಷಾಪತ್ರ 12.ಲವಣ 14.ಲಾಭ 16.ದಾಡಿ 17.ವಸತಿಗೃಹ

ಮೇಲಿಂದ ಕೆಳಕ್ಕೆ: 1.ಜಲ 2.ಗಡವ 3.ತಿಲ 6.ಹಸ್ತಕೌಶಲ 7.ನವೀಕರಣ 13.ವರ್ಧಂತಿ 15.ಭವ 16.ದಾಹ

ಸುಡೊಕು 6811

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3		2	1		4		6	7
	1			8				
7	9		6		2	5		4
2	7				3			5
				4		2	9	
			9					1
	4	1	2				8	
9					8			
	6			5		4		9

6810 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಜೂನ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ನವಮಿ ಗಂ. 26-35 ನಕ್ಷತ್ರ: ಪೂರ್ವಾಭಾದ್ರ ಗಂ. 9-40 ಯೋಗ: ಪ್ರೀತಿ ಗಂ. 8-19 ಕರಣ: ತೈತಿಲ ಗಂ.15-06, ವೃಷಭ ಮಾಸದ 26 ನೇ ದಿನ. ಮಳೆ ನಕ್ಷತ್ರ : ಮೃಗಶಿರ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ,ಸೂರ್ಯೋದಯ : 06-07 ಸೂರ್ಯಾಸ್ತ : 06-53,ಮುಸ್ಲಿಂ ದಿನಾಂಕ : 23 ದುಲ್ ಹಿಜ್ಜಾ ,ಅದೃಷ್ಟ ಸಂಖ್ಯೆ : 8, 5

ಮೇಷ: ಖಾಸಗಿ ಉದ್ಯೋಗಿಗಳು ಆದಾಯ ಏರಿಕೆಯ ವಿಚಾರವನ್ನು ಮೇಲಧಿಕಾರಿಗಳಲ್ಲಿ ಪ್ರಸ್ತಾಪಿಸಬಹುದು. ಧೈರ್ಯದಿಂದ ಎಲ್ಲರೆದುರು ಸತ್ಯವಾದವನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಹಿರಿಯರ ಮಾತಿನ ಬಗ್ಗೆ ಗಮನವಿರಲಿ.

ವೃಷಭ: ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗಬಹುದು. ಮುಂದೆ ಎದುರಾಗುವ ತೊಂದರೆಯನ್ನು ಮೊದಲೇ ಊಹಿಸಿಕೊಂಡು ಪರಿಹಾರ ಕಂಡುಕೊಳ್ಳಿ.

ಮಿಥುನ: ಸಂಬಂಧಿಕರಿಗಾಗಿ ಅಥವಾ ಆಪ್ತ ಸ್ನೇಹಿತನಿಗಾಗಿ ಸಮಯ ಮತ್ತು ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ಬರುವುದು. ಸಮಯ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳಬಹುದು.

ಕರ್ಕಾಟಕ: ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಸಕಾಲ. ಆಹಾರ ಪದಾರ್ಥದ ಬೆಳೆಯನ್ನು ಬೆಳೆದ ಕೃಷಿಕರಿಗೆ ಲಾಭ ಸಿಗುವುದು. ಸ್ವಯಂ ಉದ್ಯೋಗಸ್ಥರಿಗೆ ಸಹಾಯ ಅನಿವಾರ್ಯವಾಗುತ್ತದೆ.

ಸಿಂಹ: ಮದುವೆಯ ವಿಷಯಕ್ಕೆ ಸಂಬಂಧಿಸಿದಂತೆ ತಾಯಿಯ ಮತ್ತು ಅಣ್ಣಂದಿರ ಮನಸೆಳೆಯುವಲ್ಲಿ ಯಶಸ್ವಿಯಾಗುವಿರಿ. ಅಧಿಕಾರಿಗಳ ಒಪ್ಪಂದದಿಂದ ಕಾರ್ಯಭಾರ ಅಧಿಕವಾಗಬಹುದು. ಧನ ಸಂಪಾದನೆ ಆಗುವುದು.

ಕನ್ಯಾ: ಯೋಜನೆಗಳನ್ನು ಕದಿಯುವವರು ಇರುವುದರಿಂದ ಆಲೋಚನೆಯನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳಬೇಡಿ. ಶಿಕ್ಷಣ ವೃತ್ತಿಯಲ್ಲಿರುವವರಿಗೆ ಅನುಭವ ಸಿಗಲಿದೆ. ಪ್ರವಾಹ ಪರಿಹಾರ ಧನ ಕೈ ಸೇರಲಿದೆ.

ತುಲಾ: ಉದ್ಯೋಗಕ್ಕೆ ಸಂಬಂಧಿಸಿದಂತೆ ಹೊಸ ಜನರ ಸಂಪರ್ಕ ಧನ ಲಾಭ ತರಲಿದೆ. ವಿದ್ಯಾರ್ಜನೆಯಲ್ಲಿ ಉತ್ತಮ ಹಂತ ತಲುಪಲು ಸಾಧ್ಯ. ಸಂತಾನದ ಶುಭ ಸುದ್ದಿ ಕೇಳಿ ಸಂತಸ ಪಡುವಿರಿ.

ವೃಶ್ಚಿಕ: ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತ ಎನಿಸಿ ಅದರಂತೆ ನಡೆದು ವ್ಯವಹಾರದಲ್ಲಿ ಲಾಭವನ್ನು ಹೊಂದುವಿರಿ. ಸಜ್ಜನರ ಒಡನಾಟದಿಂದ ಕೆಲಸಗಳಿಗೆ ಪುಷ್ಟಿ ದೊರೆಯಲಿದೆ. ಪತ್ನಿಯ ಆರೋಗ್ಯ ಸುಧಾರಿಸುವುದು.

ಧನು: ಸರಕು ಸಾಗಣೆದಾರರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬಂದರೂ ಕಾರ್ಯದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಮಾಡುವ ಆಲೋಚನೆಯನ್ನು ಕಾರ್ಯರೂಪಕ್ಕೆ ತನ್ನಿರಿ.

ಮಕರ: ಅತಿ ಖರ್ಚು ಮಾಡುವ ಮನಸ್ಥಿತಿಯನ್ನು ಹೊಂದಿದವರಿಗೆ ಹಣದ ಮೌಲ್ಯದ ಅರಿವಾಗುವುದು. ಈಗಾಗಲೇ ತೆಗೆದುಕೊಂಡ ನಿರ್ಧಾರದ ಬಗ್ಗೆ ಅನುಮಾನಗಳು ಎದುರಾಗಲಿವೆ. ಕಟ್ಟುಪಾಡಿಗೆ ಸಿಕ್ಕಿಕೊಳ್ಳಬೇಡಿ.

ಕುಂಭ: ಜೀವನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಅನಿವಾರ್ಯತೆ ಕಂಡುಬರಲಿದೆ. ಗಣ್ಯ ವ್ಯಕ್ತಿಗಳಿಗೆ ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ ಲಭಿಸಲಿದೆ.

ಮೀನ: ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ವ್ಯವಹಾರಗಳಲ್ಲಿ ಧನಲಾಭ ಕಾಣುವಿರಿ. ನ್ಯಾಯಾಲಯದಲ್ಲಿದ್ದ ಸಮಸ್ಯೆಗಳಿಗೆ ಉತ್ತರ ಸಿಗಲಿದೆ.

ಗುಂಡಣ್ಣ



ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ




ಅತ್ಯುತ್ತಮ ಪೋಷಕ ನಟ ಸ್ಪರ್ಧೆಯಲ್ಲಿ....

4ನೇ ಆವೃತ್ತಿ ಜೂನ್ 19ಕ್ಕೆ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ ‘ಅತ್ಯುತ್ತಮ ಪೋಷಕ ನಟ’ ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ.

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ರಂಗಾಯಣ ರಘು




‘ಸನ್ ಆಫ್ ಮುತ್ತಣ್ಣ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ‘ಶಾಖಾಹಾರಿ’ ಸಿನಿಮಾ ಬಳಿಕ ‘ಅಭಿನಯಾಸುರ’ ಎಂಬ ಬಿರುದು ಪಡೆದಿರುವ ರಂಗಾಯಣ ರಘು ಅವರು ಚಿತ್ರರಂಗದಲ್ಲಿ ಮೂರೂವರೆ ದಶಕಗಳನ್ನು ಪೂರೈಸಿದ್ದಾರೆ. ಖಳನಾಯಕ, ಹಾಸ್ಯ, ಪೋಷಕ ಹಾಗೂ ಸಿನಿಮಾದ ಮುಖ್ಯಭೂಮಿಕೆಯ ಪಾತ್ರಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಇವರ ಭಿನ್ನವಾದ ಪಾತ್ರ ಪೋಷಣೆಯೇ ಪ್ರೇಕ್ಷಕರನ್ನು ಸೆಳೆಯುವ ಪ್ರಮುಖ ವಿಷಯ. ರಂಗಭೂಮಿ ಹಿನ್ನೆಲೆಯ ಇವರು ‘ಸುಗ್ಗಿ’ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಇಲ್ಲಿಯವರೆಗೂ 250ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ‘ಸೈನೈಡ್’, ‘ದುನಿಯಾ’, ‘ಗಾಳಿಪಟ’, ‘ಶಾಖಾಹಾರಿ’ ಸಿನಿಮಾಗಳ ಮೂಲಕ ಜನರು ಇವರನ್ನು ಗುರುತಿಸಿಸುವುದು ಹೆಚ್ಚು. 2007ರಲ್ಲಿ ‘ದುನಿಯಾ’ ಚಿತ್ರದಲ್ಲಿನ ನಟನೆಗಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ‘ಪ್ರೇಮದ ಊರಲಿ’ ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಇವರ ಸಿನಿಬ್ಯಾಂಕ್‌ನಲ್ಲಿ ಹಲವು ಸಿನಿಮಾಗಳಿವೆ.

ಶರತ್ ಲೋಹಿತಾಶ್ವ




‘ರೋಣ’ ಹಾಗೂ ‘ಎಲ್ಲೋ ಜೋಗಪ್ಪ ನಿನ್ನರಮನೆ’ ಸಿನಿಮಾಗಳಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಬಹುಭಾಷಾ ನಟ ಶರತ್ ಲೋಹಿತಾಶ್ವ ಅವರು ನಟ ದಿವಂಗತ ಲೋಹಿತಾಶ್ವ ಅವರ ಪುತ್ರ. ಕಿರುತೆರೆ ಹಾಗೂ ರಂಗಭೂಮಿಯ ಹಿನ್ನೆಲೆಯಿಂದ ಬಂದ ಇವರು ಸದ್ಯ ಕನ್ನಡದಲ್ಲಿ ಸಾಲು ಸಾಲು ಸಿನಿಮಾಗಳನ್ನು ಮಾಡುತ್ತಿದ್ದಾರೆ. ‘ಆ ದಿನಗಳು’, ‘ಸಾರಥಿ’, ‘ಎದೆಗಾರಿಕೆ’, ‘ಕಡ್ಡಿಪುಡಿ’, ‘ಟಗರುಪಲ್ಯ’, ‘ಭುವನಂ ಗಗನಂ’, ‘ಕುಲದಲ್ಲಿ ಕೀಳ್ಯಾವುದೋ’, ‘ಮಾರುತ’, ‘ಅಜ್ಞಾತವಾಸಿ’, ‘ಮ್ಯಾಕ್ಸ್’, ‘ಜಿಎಸ್‌ಟಿ’ ಹೀಗೆ ಹಲವು ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ. 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದ ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಇವರು ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ‘ಪಿದಾಯಿ’ ಸಿನಿಮಾ ಎರಡನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದಿತ್ತು. ಕೋಲ್ಕತ್ತ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೂ ಈ ಸಿನಿಮಾ ಆಯ್ಕೆಯಾಗಿತ್ತು. ಅವರು ನಟಿಸಿರುವ ‘ಬಲರಾಮನ ದಿನಗಳು’, ‘ಕ್ಲಾಸ್ ಆಫ್ ಮೈಸೂರು’, ‘ವೇಷಗಳು’ ಚಿತ್ರ ಇನ್ನಷ್ಟೇ ಬಿಡುಗಡೆಯಾಗಬೇಕಿವೆ.

ಪೂರ್ಣಚಂದ್ರ ಮೈಸೂರು



‘ಎಕ್ಕ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ರಂಗಭೂಮಿ ಹಾಗೂ ಕಿರುಚಿತ್ರಗಳಲ್ಲಿ ನಟಿಸಿದ ಅನುಭವದೊಂದಿಗೆ ಚಿತ್ರರಂಗಕ್ಕೆ ಕಾಲಿಟ್ಟ ಇವರು ‘ಆರ್ಕೆಸ್ಟ್ರಾ ಮೈಸೂರು’, ‘ಬಡವ ರಾಸ್ಕಲ್’, ‘ಪಾಪ್‌ಕಾರ್ನ್ ಮಂಕಿ ಟೈಗರ್’, ‘ಫ್ಯಾಮಿಲಿ ಡ್ರಾಮಾ’, ‘ಡೇರ್‌ಡೆವಿಲ್ ಮುಸ್ತಾಫಾ’, ‘ಮರ್ಯಾದೆ ಪ್ರಶ್ನೆ’, ‘ಎಕ್ಕ’ ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿದ್ದಾರೆ. ‘ಮರ್ಯಾದೆ ಪ್ರಶ್ನೆ’ ಇವರ ನಟನೆಯ ಸಾಮರ್ಥ್ಯವನ್ನು ಪರಿಚಯಿಸಿದ ಸಿನಿಮಾ. ಭಿನ್ನ ಪಾತ್ರಗಳನ್ನು ನಿಭಾಯಿಸಲು ಹಾತೊರೆಯುವ ಇವರು ‘ಎಕ್ಕ’ ಸಿನಿಮಾದಲ್ಲಿ ‘ಡ್ಯಾಡಿ’ಯಾಗಿ ಮಿಂಚಿದವರು. ಭಿನ್ನವಾದ ಹಾವಭಾವ, ಸಂಭಾಷಣೆಯಿಂದ ‘ಡ್ಯಾಡಿ’ ಪಾತ್ರಕ್ಕೆ ಜೀವತುಂಬಿದರು. ‘ಅಣ್ಣಫ್ರಂ ಮೆಕ್ಸಿಕೋ’, ‘ಹೆಗ್ಗಣ ಮುದ್ದು’ ಇನ್ನಷ್ಟೇ ಬಿಡುಗಡೆಯಾಗಬೇಕಿರುವ ಇವರ ಸಿನಿಮಾಗಳು. ನಟನೆಯ ಜೊತೆಗೆ ನಿರ್ದೇಶನಕ್ಕೂ ಇಳಿದಿರುವ ಇವರ ಚೊಚ್ಚಲ ಸಿನಿಮಾ ‘ಮದರ್ ಪ್ರಾಮಿಸ್’ ಬಿಡುಗಡೆಗೆ ಸಜ್ಜಾಗುತ್ತಿದೆ.

ದೀಪಕ್ ರೈ ಪಾಣಾಜೆ



‘ಸು ಫ್ರಮ್ ಸೋ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ‘ಕಾಂತಾರ’ ಸಿನಿಮಾದಲ್ಲಿನ ‘ಸುಂದರ’ ಎಂಬ ಪಾತ್ರದಲ್ಲಿ ಜನರನ್ನು ಹೊಟ್ಟೆ ಹುಣ್ಣಾಗುವಷ್ಟು ನಗಿಸಿದ್ದ ಇವರು ಪುತ್ತೂರಿನವರು. ನಂದಿಕೇಶ್ವರ ನಾಟಕ ಸಂಘ, ಶಾರದಾ ಆರ್ಟ್ಸ್ ಮಂಜೇಶ್ವರ, ಮಸ್ಕಿರಿ ಕುಡ್ಲ ಮುಂತಾದ ನಾಟಕ ತಂಡದಲ್ಲಿ ಗುರುತಿಸಿಕೊಂಡಿದ್ದಾರೆ. ‘ಅಜ್ಜಿನ ಗೌಜಿ’ ಇವರು ನಟಿಸಿದ ಮೊದಲ ನಾಟಕ. ಯಕ್ಷಗಾನದಲ್ಲೂ ಹೆಜ್ಜೆ ಹಾಕಿದ್ದಾರೆ. ‘ಸೂಪರ್ ಮರ್ಮಯೆ’ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದರು. ‘ಒಂದು ಮೊಟ್ಟೆಯ ಕಥೆ’, ‘ಗರುಡ ಗಮನ ವೃಷಭ ವಾಹನ’, ‘ಹರಿಕಥೆ ಅಲ್ಲ ಗಿರಿಕಥೆ’, ‘ದೂರದರ್ಶನ’, ‘ಜಂಗಲ್ ಮಂಗಲ್’ ಸೇರಿದಂತೆ 70ಕ್ಕೂ ಅಧಿಕ ಕನ್ನಡ ಹಾಗೂ ತುಳು ಸಿನಿಮಾಗಳಲ್ಲಿ ನಟಿಸಿದ್ದಾರೆ. ‘ಶಾಂತಂ ಪಾಪಂ’ ಹಾಗೂ ‘ಗಟ್ಟಿಮೇಳ’ ಧಾರಾವಾಹಿಗಳಲ್ಲೂ ನಟಿಸಿದ್ದಾರೆ. ತೆಲುಗು, ಕೊಂಕಣಿ ಭಾಷೆಗಳ ಸಿನಿಮಾದಲ್ಲೂ ಬಣ್ಣಹಚ್ಚಿದ್ದಾರೆ. ‘ಮಜಾ ಭಾರತ’, ‘ಬಲೆ ತೆಲಿಪಾಲೆ’ ಸೇರಿದಂತೆ 600ಕ್ಕೂ ಅಧಿಕ ಕಾಮಿಡಿ ಶೋಗಳನ್ನು ನಡೆಸಿಕೊಟ್ಟಿದ್ದಾರೆ. ‘ಕಾಂತಾರ: ಅಧ್ಯಾಯ 1’ರಲ್ಲೂ ನಟಿಸಿದ್ದಾರೆ.

ಗುಲ್ಶನ್ ದೇವಯ್ಯ




‘ಕಾಂತಾರ: ಅಧ್ಯಾಯ 1’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಕರ್ನಾಟಕದವರೇ ಆದ ಇವರು ಮಿಂಚಿದ್ದು ಹಿಂದಿ ಸಿನಿಮಾಗಳಲ್ಲಿ. ‘ದಟ್ ಗರ್ಲ್ ಇನ್ ಎಲ್ಲೋ ಬೂಟ್ಸ್’ ಸಿನಿಮಾ ಮೂಲಕ ತಮ್ಮ ಬಣ್ಣದ ಪಯಣ ಆರಂಭಿಸಿದ್ದ ಇವರು ‘ಧಮ್ ಮಾರೋ ಧಮ್’, ‘ಶೈತಾನ್’, ‘ರಾಮ್ ಲೀಲಾ’, ‘ಹಂಟರ್’, ‘ಕಮಾಂಡೊ 3’ ಸೇರಿದಂತೆ ಹಲವು ಹಿಂದಿ ಸಿನಿಮಾಗಳಲ್ಲಿ ನಟಿಸಿದ್ದಾರೆ. ‘ಶೈತಾನ್’ ಸಿನಿಮಾದಲ್ಲಿನ ನಟನೆ ಇವರಿಗೆ ಹೆಸರು ತಂದಿತ್ತು. ‘ಕಾಂತಾರ: ಅಧ್ಯಾಯ 1’ರ ಮೂಲಕ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಟ್ಟ ಇವರು ‘ಕುಲಶೇಖರ’ ಎಂಬ ಪಾತ್ರವನ್ನು ನಿಭಾಯಿಸಿದ್ದರು.

ಪ್ರಸನ್ನ ಶೆಟ್ಟಿ



‘ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ‘ಸಂಚಾರಿ’ ತಂಡದೊಂದಿಗೆ ತಮ್ಮ ಕಲಾ ಪಯಣ ಆರಂಭಿಸಿದ ಇವರು ನಟನಾಗಿ, ಬರಹಗಾರರಾಗಿ ಹಾಗೂ ನಿರ್ದೇಶಕರಾಗಿ ಗುರುತಿಸಿಕೊಂಡವರು. ಬಣ್ಣದ ಲೋಕದಲ್ಲಿ 12 ವರ್ಷಗಳ ಅನುಭವ ಹೊಂದಿರುವ ಇವರು ಮಂಗಳೂರು ಮೂಲದವರು. ಕಿರುತೆರೆಯಲ್ಲಿ ‘ಮದುಮಗಳು’, ‘ಕ್ಷಮ’, ಶಾಂತಂ ಪಾಪಂ’ ಧಾರಾವಾಹಿಗಳಲ್ಲಿ ನಟಿಸಿರುವ ಇವರು ‘ಅಲ್ಲಮ’, ‘ನಾನು ಅದು ಮತ್ತು ಸರೋಜ’, ‘ಫ್ಯಾನ್’, ‘ಆರಾರಿರಾರೋ’ ಸಿನಿಮಾಗಳಲ್ಲಿ ನಟಿಸಿದ್ದಾರೆ. ‘ಅರ್ಥ’, ‘ಐ ಆ್ಯಮ್ ಇನ್ ಯು’ ಮುಂತಾದ ಕಿರುಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ಹರ್ಷಿಲ್ ಕೌಶಿಕ್



‘ಅನಾಮಧೇಯ ಅಶೋಕ್ ಕುಮಾರ್’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಬೆಂಗಳೂರಿನ ಇವರು ರಂಗಭೂಮಿಯಿಂದ ಸಿನಿಮಾ ಲೋಕಕ್ಕೆ ಹೆಜ್ಜೆ ಇಟ್ಟವರು. 2011ರಲ್ಲಿ ರಂಗಭೂಮಿಗೆ ಹೆಜ್ಜೆ ಇಟ್ಟ ಇವರು 2018ರಲ್ಲಿ ‘ಚಮಕ್’ ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟರು. ‘ಆಚಾರ್ ಆ್ಯಂಡ್ ಕೋ’, ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾಗಳಲ್ಲಿ ಇವರು ನಟಿಸಿದ್ದಾರೆ. ಜಾಹೀರಾತುಗಳಿಗೆ ದನಿ ನೀಡುವ ಕಲಾವಿದರಾಗಿ, ಡಬ್ಬಿಂಗ್ ಆರ್ಟಿಸ್ಟ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ. ತಮಿಳಿನಲ್ಲಿ ವೆಬ್ ಸರಣಿಯೊಂದರಲ್ಲಿ ನಟಿಸಿರುವ ಇವರು ಎರಡು ಸಿನಿಮಾಗಳಲ್ಲಿ ಮುಖ್ಯಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ‘ಫಾದರ್ಸ್ ಡೇ’ ಹಾಗೂ ‘ಆಗುಂಬೆ ವಿಡಿಯೊ’ ಸಿಜಿಮಾ ಜುಲೈ–ಆಗಸ್ಟ್‌ನಲ್ಲಿ ತೆರೆಕಾಣಲಿದೆ. ಇವರ ಇನ್ನೆರಡು ಸಿನಿಮಾಗಳು ಶೂಟಿಂಗ್ ಹಂತದಲ್ಲಿವೆ.

Fashion Partner: TRENDS
Mobility Partner: Akshaya Motors
Banking Partner: ಕೆನರಾ ಬ್ಯಾಂಕ್ केनरा बैंक Canara Bank A Government of India Undertaking, Together We Can
Wardrobe Partner: MALLESHWARAM Sudarshan Silks
Mobile Partner: HUMAN MOBILE DEVICES HMD
Knowledge Partner: GM UNIVERSITY DAVANAGERE
Travel Partner: ಅಡಿಗಾಸ್ ಯಾತ್ರಾ
Associate Sponsors: Amruth ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್; ಅಡ್‌ಕರ್ ನಂಬಿಕೆ. ನಿರಂತರ.; The Janatha Co-operative Bank Ltd., Malleswaram, Bangalore; Bindu
Audit Partner: EY
Television Partner: Z ಕನ್ನಡ

27	21	07
ವಿಭಾಗಗಳಲ್ಲಿ ಪ್ರಶಸ್ತಿ	ತಾಂತ್ರಿಕ ತೀರ್ಪುಗಾರರು	ಮುಖ್ಯ ತೀರ್ಪುಗಾರರು

ಬೆಳಗಾವಿ, ಕರಾವಳಿಯಲ್ಲಿ ಮಳೆಯ ಅಬ್ಬರ

ಧಾರಾಕಾರ ಮಳೆ: ತೇಲಿಹೋದ ವಾಹನಗಳು, ಹಲವೆಡೆ ಉರುಳಿದ ಮರಗಳು

ಪ್ರಜಾವಾಣಿ ವಾರ್ತೆ

ಬೆಳಗಾವಿ/ಕಾರವಾರ: ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸೋಮವಾರ ಧಾರಾಕಾರ ಮಳೆ ಸುರಿಯಿತು. ಗಂಟೆ ಕಾಲ ಸುರಿದ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿತು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಚನ್ನಮ್ಮನ ಕಿತ್ತೂರು, ಯರಗಟ್ಟಿ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಮೂರು ಗಂಟೆಗೂ ಹೆಚ್ಚು ಹೊತ್ತು ಸುರಿದ ಮಳೆಯಿಂದ ಹಲವೆಡೆ ಮರ, ವಿದ್ಯುತ್ ಕಂಬಗಳು ಉರುಳಿದವು. ಬೈಕ್, ಆಟೊ, ಟ್ರ್ಯಾಕ್ಟರ್, ಕಾರುಗಳು ತೇಲಿದವು.

ಬೈಲಹೊಂಗಲದಲ್ಲಿ ಗುಡುಗು, ಸಿಡಿಲು ಸಹಿತ ಆರಂಭವಾದ ಮಳೆ ಬಳಿಕ ಬಿರುಸು ಪಡೆಯಿತು. ಬಸ್ ನಿಲ್ದಾಣದ ಚರಂಡಿಗಳು ತುಂಬಿದವು. ರಭಸಕ್ಕೆ ಚಾಲನೆಯಲ್ಲಿದ್ದ ಟ್ರ್ಯಾಕ್ಟರ್ ಹಿಂದಕ್ಕೆ ಜರಿದು ಕಾರಿಗೆ ಡಿಕ್ಕಿ ಹೊಡೆಯಿತು.

ಇಂಚಲ ರಸ್ತೆ, ಆನೆ ಅಗಸಿ ಮುಂತಾದ ಪ್ರದೇಶಗಳಲ್ಲಿ ಮನೆ ಮುಂದೆ ನಿಲ್ಲಿಸಿದ್ದ ಹತ್ತಾರು ಬೈಕುಗಳು, ಆಟೊಗಳು ನೀರಿನಲ್ಲಿ ತೇಲಿದವು. ಎಪಿಎಂಸಿ ಬಳಿ ಬೃಹತ್ ಮರ ರಸ್ತೆಗೆ ಉರುಳಿತು. ರಸ್ತೆಗಳಲ್ಲಿ ನೀರು ಹರಿದು, ರಸ್ತೆ ಬದಿಯ ನೂರಾರು ಮನೆಗಳಿಗೆ ನುಗ್ಗಿತು.

ಚನ್ನಮ್ಮನ ಕಿತ್ತೂರು ಪಟ್ಟಣದಲ್ಲೂ ಸೋಮವಾರದ ಸಂತೆಗೆ ತಂದಿದ್ದ ತರಕಾರಿ, ದಿನಸಿಗಳು ನೀರುಪಾಲಾದವು. ಸಂತೆ ಅರ್ಧಕ್ಕೆ ನಿಂತಿತು. ಸವದತ್ತಿ ಪಟ್ಟಣದಲ್ಲಿ ರಸ್ತೆಗಳಲ್ಲಿ ನೀರು ಎರಡು ಅಡಿಯಷ್ಟು ನಿಂತಿದ್ದು, ಪ್ರಯಾಣಿಕರಿದ್ದ ಮೂರು ಟಂಟಂ ವಾಹನಗಳು ನೀರಿನ ರಭಸಕ್ಕೆ ಸಿಕ್ಕಿ ಹಿಂದಕ್ಕೆ ಜರಿದು ಹೋದವು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಭಟ್ಕಳ, ಹೊನ್ನಾವರ ಭಾಗದಲ್ಲಿ ವ್ಯಾಪಕ ಮಳೆ ಸುರಿದರೆ ಉಳಿದ ತಾಲ್ಲೂಕುಗಳಲ್ಲಿ ಸಾಧಾರಣವಾಗಿತ್ತು.


ಭಟ್ಕಳ ತಾಲ್ಲೂಕು ಆಸ್ಪತ್ರೆ ಆವರಣಕ್ಕೆ ನೀರು ನುಗ್ಗಿತು. ಭಟ್ಕಳ ನಗರ, ಹೊನ್ನಾವರ ಪಟ್ಟಣದ ಮುಖ್ಯ ರಸ್ತೆಗಳು ಜಲಾವೃತಗೊಂಡಿದ್ದವು. ಕಾರವಾರ, ಅಂಕೋಲಾ ಭಾಗದಲ್ಲಿ ಆಗಾಗ ಮಳೆ ಸುರಿದರೆ, ಶಿರಸಿ, ಸಿದ್ದಾಪುರ ಭಾಗದಲ್ಲಿ ಕೆಲ ತಾಸು ರಭಸದ ಮಳೆ ಸುರಿಯಿತು.

ಮಳೆಯ ಹಿನ್ನೆಲೆಯಲ್ಲಿ ಅಂಕೋಲಾ ತಾಲ್ಲೂಕಿನ ಅಚವೆ ಗ್ರಾಮದ ವಿಭೂತಿ ಜಲಪಾತಕ್ಕೆ ಪ್ರವಾಸಿಗರಿಗೆ ನಿಷೇಧ ಹೇರಲಾಗಿದೆ.

ದಕ್ಷಿಣ ಕನ್ನಡದಲ್ಲಿ ಬಿರುಸು: ಮಂಗಳೂರು (ವರದಿ): ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಧಾರಾಕಾರ ಮಳೆಯಾಗಿದೆ. ನಸುಕಿನಲ್ಲೇ ಶುರುವಾದ ಮಳೆ ಬೆಳಿಗ್ಗೆವರೆಗೂ ಸುರಿಯಿತು. ಸಂಜೆ 4 ಗಂಟೆ ಬಳಿಕ ಒಂದೂವರೆ ಗಂಟೆ ಧಾರಾಕಾರ ಮಳೆ ಸುರಿಯಿತು.

ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಶೃಂಗೇರಿ, ಕಳಸ, ಕೊಪ್ಪ, ನರಸಿಂಹರಾಜಪುರ, ಚಿಕ್ಕಮಗಳೂರು ನಗರದಲ್ಲಿ ಮಧ್ಯಾಹ್ನದ ನಂತರ ಸಾಧಾರಣ ಮಳೆ ಸುರಿಯಿತು.





ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದಲ್ಲಿ ಸೋಮವಾರ ಮಳೆ ನೀರಿನಲ್ಲಿ ಕೊಚ್ಚಿಹೋದ ಬೈಕ್‌ಗಳು (ಎಡಚಿತ್ರ – ರವಿಕುಮಾರ ಹುಲಕುಂದ) ಭಟ್ಕಳ ನಗರದ ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು

ಐದು ಜಿಲ್ಲೆಗೆ ‘ರೆಡ್ ಅಲರ್ಟ್’

ಬೆಂಗಳೂರು: ರಾಜ್ಯದ ಹಲವೆಡೆ ಮಂಗಳವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಿಗೆ ‘ರೆಡ್ ಅಲರ್ಟ್’ ನೀಡಿದೆ.

ಕೊಡಗು, ಹಾಸನ, ಬೆಳಗಾವಿ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದ್ದು, ಈ ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಘೋಷಿಸಿದೆ.

ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಗದಗ, ರಾಯಚೂರು, ಬಾಗಲಕೋಟೆ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಬಹುದು. ಕರಾವಳಿಯಲ್ಲಿ ಪ್ರತಿ ಗಂಟೆಗೆ 50 ರಿಂದ 60 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರ ಪ್ರದೇಶಗಳಿಗೆ ಇಳಿಯದಂತೆ ಸೂಚಿಸಲಾಗಿದೆ.

ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ. ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಉಷ್ಣಾಂಶ 29 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 21 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ 9, ಕೊಪ್ಪಳ ಜಿಲ್ಲೆಯ ಕಾರಟಗಿ, ಬೆಳಗಾವಿ ಜಿಲ್ಲೆಯ ಕಿತ್ತೂರು, ಬಾಗಲಕೋಟೆ ಜಿಲ್ಲೆಯ ಲೋಕಾಪುರದಲ್ಲಿ ತಲಾ 8 ಹಾಗೂ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ 7 ಸೆಂ.ಮೀ ಮಳೆ ದಾಖಲಾಗಿದೆ.



ಪ್ರವಾಹದಂತೆ ಹರಿದ ಮಳೆ ನೀರಿನಲ್ಲೇ ಈಶ್ವರ ಶಿಲೇದಾರ ಧರಣಿ ನಡೆಸಿದರು

ಹರಿವ ನೀರಿನಲ್ಲೇ 3 ತಾಸು ಧರಣಿ

ಪ್ರಜಾವಾಣಿ ವಾರ್ತೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಪಟ್ಟಣದಲ್ಲಿ ಸೋಮವಾರ ಭಾರಿ ಮಳೆಯಿಂದ ಕುಲಕರ್ಣಿ ಗಲ್ಲಿ, ಪಾಟೀಲ ಗಲ್ಲಿ, ಕೋಲಕಾರ ಗಲ್ಲಿ ಪ್ರದೇಶದ ಮನೆಗಳಿಗೆ ನೀರು ನುಗ್ಗಿತು. ಬೇಸರಗೊಂಡ ಸ್ಥಳೀಯ ನಿವಾಸಿ, ಈಶ್ವರ ಶಿಲೇದಾರ ಪ್ರವಾಹದ ರೀತಿ ಹರಿಯುತ್ತಿದ್ದ ಮಳೆಯ ನೀರಿನಲ್ಲೇ, 3 ತಾಸು ಧರಣಿ ನಡೆಸಿದರು.

ಯೂಟ್ಯೂಬರ್ ಆಗಿರುವ ಅವರ ವಿಡಿಯೊ ಹಾಗೂ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಹರಿದಾಡಿದವು.

ರಸ್ತೆ, ಚರಂಡಿ ದುರಸ್ತಿ ಮಾಡಿಸಿ, ಮಳೆ ನೀರು ಹರಿದುಹೋಗಲು ಅನುಕೂಲ ಮಾಡುವಂತೆ ಮಳೆಗಾಲ ಮುನ್ನವೇ ನಗರಸಭೆ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಆದರೂ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದರು. ಸೋಮವಾರದ ಮಳೆಯಿಂದ ತಮ್ಮ ಬದುಕೇ ಅಸ್ತವ್ಯಸ್ತವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಅಧಿಕಾರಿಗಳ ಬೇಜವಾಬ್ದಾರಿಯೇ ಈ ಸ್ಥಿತಿಗೆ ಕಾರಣ’ ಎಂದು ಟೀಕಿಸಿದ ಅವರು, ರಸ್ತೆಯಲ್ಲಿದ್ದ ವಿದ್ಯುತ್ ಕಂಬಕ್ಕೆ ತಾಗಿ ಕುಳಿತರು. ಅವರ ತಲೆ ಎತ್ತರಕ್ಕೆ ನೀರು ರಭಸವಾಗಿ ಹರಿಯುತ್ತಿದ್ದರೂ ಸ್ಥಳ ಬಿಟ್ಟು ಕದಲಲಿಲ್ಲ.

ನಗರಸಭೆ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ, ಪುರಸಭೆ ಮಾಜಿ ಅಧ್ಯಕ್ಷ ವಿಜಯ ಬೋಳನ್ನವರ ಅವರು, ‘ಸಮಸ್ಯೆ ಪರಿಹಾರಕ್ಕೆ ಶೀಘ್ರ ಕ್ರಮಕೈಗೊಳ್ಳಲಾಗುವುದು. ಧರಣಿ ಕೈಬಿಡಿ’ ಎಂದು ಕೋರಿದರು. ಮನವಿಗೆ ಸ್ಪಂದಿಸಿದ ಅವರು ಧರಣಿ ಪ್ರತಿಭಟನೆ ನಿಲ್ಲಿಸಿದರು.



ಮಾಧವಿ ಭಂಡಾರಿ



ಬಿ.ಟಿ.ಜಾಹ್ನವಿ



ವಿಜಯಾ

ಶಂಕರಮ್ಮ ಬಳಿಗಾರ್ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2025ನೇ ಸಾಲಿನ ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ಪ್ರಶಸ್ತಿ ಘೋಷಿಸಿದ್ದು, ಕಾವ್ಯ ವಿಭಾಗ-ಮಾಧವಿ ಭಂಡಾರಿ ಕೆರೆಕೋಣ, ಗದ್ಯ ವಿಭಾಗ-ಬಿ. ಟಿ. ಜಾಹ್ನವಿ, ಸಂಕೀರ್ಣ ವಿಭಾಗ - (ಶಿಕ್ಷಣ ಕ್ಷೇತ್ರ) ಪ್ರೊ. ವಿಜಯಾ ಬಿ. ಕೋರಿಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ಮೂರು ವಿಭಾಗಗಳನ್ನು ಒಳಗೊಂಡಿದ್ದು, ಆಯಾ ವಿಭಾಗದಲ್ಲಿ ಸಾಧನೆಗೈದ ಲೇಖಕಿಯರಿಗೆ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಯು ತಲಾ ₹10,000 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ತಿಳಿಸಿದ್ದಾರೆ.

ಆಯ್ಕೆ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮನು ಬಳಿಗಾರ್, ಆರ್. ಸುನಂದಮ್ಮ ಹಾಗೂ ಸುಮಾ ಸತೀಶ್ ಇದ್ದರು. ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜುಲೈ 11 ರಂದು ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ಟ್ಯಾಂಕಿನಲ್ಲಿ ಮುಳುಗಿ ಬಾಲಕಿ ಸಾವು

ಬಾಗಲಕೋಟೆ: ನವನಗರದ ಸೆಕ್ಟರ್ ನಂ.38ರಲ್ಲಿ ನೀರಿನ ಟ್ಯಾಂಕಿನಲ್ಲಿ ಬಿದ್ದು ಅಮೀನಾ ಪಠಾಣ ಎಂಬ 18 ತಿಂಗಳ ಬಾಲಕಿ ಸೋಮವಾರ ಮೃತಪಟ್ಟಿದ್ದಾಳೆ.

‘ತೌಶಿಫಾ ಮತ್ತು ಶಗುಫ್ತಾ ಪಠಾಣ ದಂಪತಿಯ ಪುತ್ರಿ ಅಮೀನಾ, ಎದುರುಮನೆಗೆ ಆಟವಾಡಲು ಹೋಗಿದ್ದಾಗ ಅವಘಡ ಸಂಭವಿಸಿದೆ’ ಎಂದು ನವನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬ್ಲ್ಯಾಕ್‌ಮೇಲ್‌ಗೆ ಬೆದರಿ ಮನೆಯಲ್ಲೇ ಕದ್ದ ಬಾಲಕ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಬಲವಂತಕ್ಕೆ ಸಿಗರೆಟ್ ಸೇದಿದ್ದ ಬಾಲಕನನ್ನು ಬ್ಲ್ಯಾಕ್‌ಮೇಲ್ ಮಾಡಿ ಆತನ ಮನೆಯಿಂದಲೇ ನಗದು, ಚಿನ್ನಾಭರಣ ತರಿಸಿಕೊಂಡು ವಂಚಿಸಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ತೆಗ್ಗಿನ ಓಣಿಯ ನವೀನ್ ಕಲಾಲ್ ಹಾಗೂ ಬಸವರಾಜ ಅಂಗಡಿ ಬಂಧಿತರು ಎಂದು ಕುಷ್ಟಗಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳು 17 ವರ್ಷದ ಬಾಲಕನನ್ನು ಕರೆದೊಯ್ದು ಆತನಿಗೆ ಸಿಗರೆಟ್ ಸೇದುವ ಚಟ ಬೆಳೆಸಿ ಮೊಬೈಲ್‌ನಲ್ಲಿ ವಿಡಿಯೊ ಮಾಡಿದ್ದರು. ಪೋಷಕರಿಗೆ ವಿಡಿಯೊ ತೋರಿಸುತ್ತೇವೆ ಎಂದು ಬ್ಲಾಕ್‌ಮೇಲ್ ಮಾಡಿದ್ದರು. ಹೆದರಿದ ಬಾಲಕ, ₹60 ಸಾವಿರ ನಗದು, ಹಂತಹಂತವಾಗಿ ಎಂಟು ಬಾರಿ ಮನೆಯಲ್ಲಿದ್ದ 13 ತೊಲೆ ಚಿನ್ನದ ಒಡವೆ ತಂದುಕೊಟ್ಟಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಒಡವೆ, ನಗದು ನಾಪತ್ತೆಯಾಗಿದ್ದ ಶಂಕೆಯಿಂದ ಪಾಲಕರು ವಿಚಾರಿಸಿದಾಗ ಬಾಲಕ ವಿಷಯ ತಿಳಿಸಿದ್ದ. ಪಾಲಕರು ಆರೋಪಿಗಳ ವಿರುದ್ಧ ಜೂ. 4ರಂದು ಠಾಣೆಗೆ ದೂರು ನೀಡಿದ್ದರು. ಚಿನ್ನಾಭರಣ ಜಪ್ತಿ ಮಾಡಿರುವ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದಾರೆ.

‘ಶಕ್ತಿ’ಗೆ ಶೀಘ್ರ ಸ್ಮಾರ್ಟ್ ಕಾರ್ಡ್

ಒಂದನೇ ಪುಟದಿಂದ....

ಸಾರಿಗೆ ನಿಗಮಗಳ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಗಳ ಜೊತೆ ಸಭೆ ನಡೆಸಿ ಮಾಹಿತಿ ಪಡೆದ ಸಚಿವರು ಶಕ್ತಿ ಯೋಜನೆ ಜಾರಿಯಾದ ನಂತರ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 40ರಷ್ಟು ಹೆಚ್ಚಳವಾಗಿದೆ’ ಎಂದರು.

1,000 ಬಸ್ ಖರೀದಿ: ‘ರಾಜ್ಯ ಸರ್ಕಾರದ ಅನುದಾನದಲ್ಲಿ ಒಂದು ಸಾವಿರ ಬಸ್‌ಗಳನ್ನು ಖರೀದಿಸಲಾಗುವುದು ಇದೇ ವೇಳೆ, ಕೇಂದ್ರದ ಅನುದಾನದಲ್ಲಿ ನಾಲ್ಕು ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಬಸ್‌ಗಳನ್ನು ಖರೀದಿಸಿ ನಾಲ್ಕೂ ನಿಗಮಗಳಿಗೆ ಹಂಚಿಕೆ ಮಾಡಲಾಗುವುದು’ ಎಂದೂ ಬೈರತಿ ಸುರೇಶ್ ತಿಳಿಸಿದರು.

ಮದ್ಯ: ವಯಸ್ಸು ಖಾತ್ರಿಗೆ ಗುರುತುಪತ್ರ

ಒಂದನೇ ಪುಟದಿಂದ...

ಬೆಂಗಳೂರಿನ 4,093 ವಿದ್ಯಾರ್ಥಿಗಳ ಜೀವನಶೈಲಿ ಕುರಿತು ನಡೆಸಿದ ಅಧ್ಯಯನವು ಗಂಭೀರ ಕಳವಳ ಹುಟ್ಟುಹಾಕಿದೆ. ಪ್ರತಿ ಮೂವರಲ್ಲಿ ಒಬ್ಬರು ಮದ್ಯ ಅಥವಾ ತಂಬಾಕು ಸೇವನೆ ಮಾಡುತ್ತಿದ್ದು, ಅವರ ಆರೋಗ್ಯ ಅಪಾಯದಲ್ಲಿದೆ. ಮದ್ಯಪಾನವನ್ನು ಆರಂಭಿಸುವ ಸರಾಸರಿ ವಯಸ್ಸು 17 ವರ್ಷ ಎನ್ನುವುದು ಆತಂಕದ ವಿಷಯ. ಕೆಲವು ಪ್ರಕರಣಗಳಲ್ಲಿ ಎಂಟು ವರ್ಷದ ಮಕ್ಕಳು ಮದ್ಯಪಾನ ಮಾಡಿರುವ ಅಂಶವೂ ಇದೆ ಎಂದು ವಿವರ ನೀಡಿದ್ದಾರೆ.

‘ಸ್ಮಾರ್ಟ್’ನಿಂದ ನಕಲಿ ಕಾರ್ಡ್‌ಗೆ ಕಡಿವಾಣ

ಒಂದನೇ ಪುಟದಿಂದ...

‘ಸರ್ಕಾರ ನೀಡಲಿರುವ ಸ್ಮಾರ್ಟ್ ಕಾರ್ಡ್ ಮೆಟ್ರೊ ಸಹಿತ ಬೇರೆ ಸಾರಿಗೆಗಳಲ್ಲಿಯೂ ಬಳಕೆಯಾಗಲಿದೆ. ಆಧಾರ್ ಕಾರ್ಡ್‌ನಂತೆ ತೋರಿಸಿ ಟಿಕೆಟ್ ಪಡೆಯುವ ಬದಲು, ಇಟಿಎಂನಲ್ಲಿ ಸ್ವೈಪ್ ಮಾಡಿ ಟಿಕೆಟ್ ಪಡೆಯುವ ವ್ಯವಸ್ಥೆ ಇದಾಗಿದೆ. ‘ಶಕ್ತಿ’ ಸ್ಮಾರ್ಟ್ ಕಾರ್ಡ್ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಕೂಡಾ ಆಗಿರುತ್ತದೆ. ಇದರಲ್ಲಿ ಪ್ರಯಾಣಿಕರ ಮಾಹಿತಿ ಇರುವ ಚಿಪ್ ಅಳವಡಿಕೆಯಾಗಿರುತ್ತದೆ. ಸ್ಮಾರ್ಟ್ ಚಿಪ್‌ನಲ್ಲಿ ಫಲಾನುಭವಿಗಳ ಇ–ಕೆವೈಸಿ ಮಾಡಲಾಗುತ್ತದೆ. ಇದರಿಂದ ಉಚಿತವಾಗಿ ಯಾರು ಪ್ರಯಾಣಿಸುತ್ತಿದ್ದಾರೆ ಎಂಬ ಮಾಹಿತಿ ದೊರೆಯಲಿದೆ. ಹೀಗಾಗಿ, ನಕಲಿ ಕಾರ್ಡ್ ತೋರಿಸಿ ಪ್ರಯಾಣಿಸಲು ಸಾಧ್ಯವಿಲ್ಲ’ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

‘ನಿರ್ಭಯ’ಕ್ಕೆ ಹೆಚ್ಚು ಆದ್ಯತೆ

‘ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದ್ದು, ಖಾಸಗಿ ವಾಹನಗಳಲ್ಲಿ ‘ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಸಿಸ್ಟಮ್’ ಅಳವಡಿಕೆಯನ್ನು ಕ್ಷಿಪ್ರಗತಿಯಲ್ಲಿ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಸಚಿವ ಬೈರತಿ ಸುರೇಶ್ ಹೇಳಿದರು.

ತಮ್ಮ ಓಡಾಟಕ್ಕೆ ಮಹಿಳೆಯರು ಬಳಸುವ ವಾಣಿಜ್ಯ ಕಾರುಗಳು, ಟ್ಯಾಕ್ಸಿಗಳು ಸೇರಿದಂತೆ ಇತರೆ ವಾಹನಗಳಿಗೆ ವಾಹನದ ನೈಜ-ಸಮಯದ ಸ್ಥಳ ಗುರುತಿಸಲು ಮತ್ತು ಅದರ ಚಲನವಲನಗಳ ಮೇಲ್ವಿಚಾರಣೆ ಮಾಡಲು ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಸಿಸ್ಟಮ್ ಅಳವಡಿಸಲಾಗುತ್ತಿದೆ. ಇದುವರೆಗೆ 1 ಲಕ್ಷಕ್ಕೂ ಹೆಚ್ಚು ವಾಹನಗಳಿಗೆ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಉಳಿದ 4 ಲಕ್ಷದಿಂದ 5 ಲಕ್ಷ ವಾಹನಗಳಿಗೆ ಮುಂದಿನ 3–4 ತಿಂಗಳಲ್ಲಿ ಈ ಸಿಸ್ಟಮ್ ಅಳವಡಿಸಬೇಕು’ ಎಂದು ಅಧಿಕಾರಿಗಳಿಗೆ ಆದೇಶ ನೀಡಿದರು.

ಬಿಜೆಪಿ– ಆರ್‌ಎಸ್‌ಎಸ್ ವಿರುದ್ಧ ಹೋರಾಟ

‘ಇಂಡಿಯಾ’ ಸಭೆಯಲ್ಲಿ ಹಲವು ನಿರ್ಣಯ • ಮತ ಲೂಟಿ ವಿರುದ್ಧ ಸಿಜೆಐಗೆ ಪತ್ರ • ಪ್ರಧಾನ್ ರಾಜೀನಾಮೆಗೆ ಒತ್ತಡ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಲು ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಮುಖ್ಯವೆಂದು ಪ್ರತಿಪಾದಿಸಿದ ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟ, ಬಿಜೆಪಿ ಮತ್ತು ಆರ್‌ಎಸ್‌ಎಸ್ ದಾಳಿಯನ್ನು ಒಗ್ಗೂಡಿ ಎದುರಿಸಲು ಪ್ರತಿಜ್ಞೆ ಮಾಡಿತು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಮತ ಲೂಟಿ ವಿಷಯ ಕುರಿತು ಭಾರತದ ಮುಖ್ಯ ನ್ಯಾಯಮೂರ್ತಿಗೆ (ಸಿಜೆಐ) ಪತ್ರ ಬರೆಯಲು ಹಾಗೂ ‘ನೀಟ್‌-ಯುಜಿ’, ಸಿಬಿಎಸ್‌ಇ ಪರೀಕ್ಷೆಗಳ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಡ ಹೇರಲು ಮೈತ್ರಿಕೂಟ ನಿರ್ಣಯ ಕೈಗೊಂಡಿದೆ.

ವಿರೋಧ ಪಕ್ಷಗಳ ‘ಇಂಡಿಯಾ’ ಕೂಟದಲ್ಲಿನ ಕೆಲ ಪಕ್ಷಗಳ ಭಿನ್ನಾಭಿಪ್ರಾಯದ ನಡುವೆಯೇ ಇಲ್ಲಿನ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಸೋಮವಾರ ಕೂಟದ ಸಭೆ ನಡೆಯಿತು. ಅದರಲ್ಲಿ ಭಾಗವಹಿಸಿದ್ದ ನಾಯಕರು, ಕೇಂದ್ರ ಸರ್ಕಾರದ ವಿರುದ್ಧ ಕೈಗೊಳ್ಳಬೇಕಾದ ಹೋರಾಟಗಳ ಕುರಿತು ಸುಮಾರು ಎರಡೂವರೆ ತಾಸು ಸಮಗ್ರವಾಗಿ ಚರ್ಚಿಸಿದರು.

ಸರ್ವಪಕ್ಷಗಳ ಸಭೆಗೆ ಆಗ್ರಹ: ದೇಶದ ಅನಿಶ್ಚಿತ ಆರ್ಥಿಕ ಪರಿಸ್ಥಿತಿ, ಬೆಲೆ ಏರಿಕೆ, ನಿರುದ್ಯೋಗ, ರೈತರು ಮತ್ತು ದಮನಿತರ ಸಮಸ್ಯೆಗಳ ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ಸರ್ವಪಕ್ಷಗಳ ಸಭೆ ಕರೆಯಬೇಕು ಎಂದು ಸಭೆಯಲ್ಲಿದ್ದ ನಾಯಕರು ಆಗ್ರಹಿಸಿದರು.

‘ಪ್ರತಿ ಎರಡು ತಿಂಗಳಿಗೊಮ್ಮೆ ನಿಯಮಿತವಾಗಿ ವಿಪಕ್ಷಗಳ ನಾಯಕರು ಸಭೆ ಸೇರಿಸಲೂ ನಿರ್ಧರಿಸಲಾಯಿತು. ಅದರಂತೆ ಮುಂದಿನ ಸಭೆ ಆಗಸ್ಟ್‌ನಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿದ್ದು, ದಿನಾಂಕವನ್ನು ನಿಗದಿಪಡಿಸಲಾಗುವುದು’ ಎಂದು ಸಭೆಯ ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸಭೆಯಲ್ಲಿ ಭಾಗವಹಿಸಿದ್ದ ಮೈತ್ರಿ ಕೂಟದ 22 ಪಕ್ಷಗಳ ನಾಯಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಐದು ಪ್ರಮುಖ ವಿಷಯಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಯಿತು ಎಂದು ಅವರು ವಿವರಿಸಿದರು.

ಅದರಂತೆ ಎಸ್‌ಐಆರ್, ಮತ ಲೂಟಿ ಕುರಿತು ಶೀಘ್ರದಲ್ಲಿಯೇ ಸಿಜೆಐಗೆ ಪತ್ರ ಬರೆಯಲಾಗುವುದು ಎಂದ ಅವರು, ‘ಮುಂಗಾರು ಅಧಿವೇಶನದಲ್ಲಿ ಸುಗಮ ಸಮನ್ವಯಕ್ಕಾಗಿ ವಿರೋಧ ಪಕ್ಷದ ನಾಯಕರ ಕೊಠಡಿಯಲ್ಲಿ ಸಭೆ ಸೇರಲು ನಿರ್ಧರಿಸಲಾಯಿತು’ ಎಂದರು.

ಒಗ್ಗಟ್ಟು ಬಲಪಡಿಸಲು ಕರೆ: ಇದಕ್ಕೂ ಮುನ್ನ ಸಭೆಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ‘ಮೋದಿ ಸರ್ಕಾರದ ದುರಾಡಳಿತದಿಂದ ದೇಶ ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವಸ್ಥೆ ಮತ್ತು ವಿದೇಶಾಂಗ ನೀತಿ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ವಿಪಕ್ಷಗಳ ಒಗ್ಗಟ್ಟನ್ನು ಬಲಪಡಿಸಬೇಕಿದೆ’ ಎಂದು ಕರೆ ನೀಡಿದರು. ಲೋಕಸಭೆಯಲ್ಲಿ ಒಗ್ಗಟ್ಟಿನಿಂದ ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯನ್ನು ಸೋಲಿಸಿದ್ದನ್ನು ಅವರು ಸ್ಮರಿಸಿದರು.

‘ಸಂವಿಧಾನದ ಮೇಲೆ ದಾಳಿ ಮುಂದುವರಿದಿದೆ. ರಾಜಕೀಯ ವಿರೋಧಿಗಳಿಗೆ ಕಿರುಕುಳ ನೀಡಲು, ಬೆದರಿಸಲು ತನಿಖಾ ಸಂಸ್ಥೆಗಳನ್ನು ನಿರಂತರವಾಗಿ ಸಾಧನಗಳನ್ನಾಗಿ ಬಳಸಲಾಗುತ್ತಿದೆ. ರಾಜ್ಯಗಳಲ್ಲಿನ ಬಿಜೆಪಿಯೇತರ ಸರ್ಕಾರಗಳ ವಿರುದ್ಧ ತಾರತಮ್ಯ ಮಾಡಲಾಗುತ್ತಿದೆ’ ಎಂದು ಅವರು ಆರೋಪಿಸಿದರು.

‘ದೇಶದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಹೊಸ ಹೂಡಿಕೆಗಳು ಬರುತ್ತಿಲ್ಲ, ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ’ ಎಂದು ಕಿಡಿಕಾರಿದ ಅವರು, ‘ಕೇಂದ್ರ ಸರ್ಕಾರವು ದೇಶದ ಪರೀಕ್ಷಾ ವ್ಯವಸ್ಥೆಯನ್ನು ಹಾಳು ಮಾಡಿದೆ. ಲಕ್ಷಾಂತರ ಯುವ ಜನರ ಭರವಸೆಗಳು ಮತ್ತು ಆಕಾಂಕ್ಷೆಗಳನ್ನು ನಾಶ ಮಾಡಿದೆ’ ಎಂದು ದೂರಿದರು.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಟಿಎಂಸಿ ಮತ್ತು ಡಿಎಂಕೆಯಂತಹ ಪ್ರಾದೇಶಿಕ ಪಕ್ಷಗಳ ಸೋಲಿನ ನಂತರ ಎದುರಾಗಿರುವ ಆಂತರಿಕ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು, ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಎದುರಿಸಲು ಕಾರ್ಯತಂತ್ರ ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಮುಂಬರುವ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಮತ್ತು 2029ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸಮರ್ಥವಾಗಿ ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಭೆಯಲ್ಲಿ ಸಮಾಲೋಚಿಸಲಾಯಿತು ಎಂಬುದು ಗೊತ್ತಾಗಿದೆ.

ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಸತತ 12 ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ ಈ ಸಭೆ ನಡೆದಿದೆ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸೋಲು ಮತ್ತು ದೇಶದಲ್ಲಿ ಕೇಸರಿ ಅಲೆಯನ್ನು ಎದುರಿಸಲು ವಿರೋಧ ಪಕ್ಷಗಳು ಒಟ್ಟಾಗಿ ಸೇರುವ ಅಗತ್ಯವಿದೆ ಎಂದು ಟಿಎಂಸಿ ಒತ್ತಾಯಿಸಿತ್ತು.

ಹಾಜರಿದ್ದ ಪ್ರಮುಖ ನಾಯಕರು

ಸಭೆಯಲ್ಲಿ ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಆರ್‌ಜೆಡಿಯ ತೇಜಸ್ವಿ ಯಾದವ್, ನ್ಯಾಷನಲ್ ಕಾನ್ಫರೆನ್ಸ್‌ನ ಒಮರ್ ಅಬ್ದುಲ್ಲಾ, ಪಿಡಿಪಿಯ ಮೆಹಬೂಬಾ ಮುಫ್ತಿ, ಎನ್‌ಸಿಪಿ (ಎಸ್‌ಪಿ) ನಾಯಕಿ ಸುಪ್ರಿಯಾ ಸುಳೆ, ಸಿಪಿಐನ ಡಿ. ರಾಜಾ, ಸಿಪಿಎಂನ ಜಾನ್ ಬ್ರಿಟ್ಟಾಸ್ ಪಾಲ್ಗೊಂಡಿದ್ದರು. ಶಿವಸೇನಾ (ಯುಬಿಟಿ)ಯ ಉದ್ಧವ ಠಾಕ್ರೆ, ಜೆಎಂಎಂನ ಹೇಮಂತ್ ಸೊರೇನ್ ವರ್ಚುವಲ್ ಆಗಿ ಸಭೆಗೆ ಹಾಜರಾಗಿದ್ದರು. ‘ಇಂಡಿಯಾ’ ಕೂಟದಿಂದ ಹೊರಗುಳಿದಿರುವ ಡಿಎಂಕೆ ಮತ್ತು ಎಎಪಿ ಈ ಸಭೆಯಲ್ಲಿ ಭಾಗವಹಿಸಲಿಲ್ಲ.

ಬಿಜೆಪಿ, ಎಎಪಿ ಟೀಕೆ

‘ಇಂಡಿಯಾ’ ಮೈತ್ರಿಕೂಟವನ್ನು ಟೀಕಿಸಿರುವ ಬಿಜೆಪಿ, ‘ಅದು ದೃಢನಿಶ್ಚಯ ಹೊಂದಿಲ್ಲದ ಕೂಟ. ವಿಪಕ್ಷಗಳ ಮೈತ್ರಿಯಲ್ಲಿ ಒಳಸ್ಫೋಟವಿದೆ. ಕಾಂಗ್ರೆಸ್‌ಗೆ ಡಿಎಂಕೆ, ಜೆಎಂಎಂ, ಎಡ ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿವೆ’ ಎಂದು ಹೇಳಿದೆ. ಪ್ರಾದೇಶಿಕ ಪಕ್ಷಗಳ ಜತೆ ಮೈತ್ರಿ ಮಾಡಿಕೊಳ್ಳುವ ಕಾಂಗ್ರೆಸ್ ಉದ್ದೇಶವನ್ನು ಎಎಪಿ ಕೂಡ ಪ್ರಶ್ನಿಸಿದೆ.



‘ಇಂಡಿಯಾ’ ಸಭೆಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದರು —ಪಿಟಿಐ ಚಿತ್ರ

ರಾಹುಲ್ ಗುರಿಯಾಗಿಸಿ ಪೋಸ್ಟರ್: ಯುವ ಕಾಂಗ್ರೆಸ್ ಕಿಡಿ

‘ಇಂಡಿಯಾ’ ಮೈತ್ರಿಕೂಟದ ಸಭೆಗೂ ಮುನ್ನ ದೆಹಲಿಯ ವಿವಿಧೆಡೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿ ಅಳವಡಿಸಲಾಗಿದ್ದ ಪೋಸ್ಟರ್‌ಗಳನ್ನು ದೆಹಲಿ ಯುವ ಕಾಂಗ್ರೆಸ್ ಘಟಕ ತೆರವುಗೊಳಿಸಿ, ಆಕ್ರೋಶ ವ್ಯಕ್ತಪಡಿಸಿದೆ.

ರಾಜಧಾನಿಯ ಪ್ರಮುಖ ವೃತ್ತಗಳು, ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್ ಮತ್ತು ಹೋರ್ಡಿಂಗ್‌ಗಳನ್ನು ಪ್ರದರ್ಶಿಸಲಾಗಿತ್ತು. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷದ ಬಗ್ಗೆ ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್, ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಸೇರಿದಂತೆ ವಿವಿಧ ವಿಪಕ್ಷಗಳ ನಾಯಕರು ನೀಡಿದ್ದ ಹೇಳಿಕೆಗಳನ್ನು ಪೋಸ್ಟರ್‌ಗಳಲ್ಲಿ ಬಿತ್ತರಿಸಲಾಗಿತ್ತು.

‘ಈ ಪೋಸ್ಟರ್‌ಗಳು ರಾಜಕೀಯ ಪ್ರೇರಿತವಾಗಿದ್ದು, ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಸುವ ಯತ್ನವಾಗಿದೆ. ಅದನ್ನು ಯುವ ಕಾಂಗ್ರೆಸ್ ಸಹಿಸುವುದಿಲ್ಲ’ ಎಂದು ಭಾರತೀಯ ಯುವ ಕಾಂಗ್ರೆಸ್‌ನ ದೆಹಲಿ ಘಟಕದ ಅಧ್ಯಕ್ಷ ಅಕ್ಷಯ್ ಲಕ್ರಾ ಆಕ್ರೋಶ ವ್ಯಕ್ತಪಡಿಸಿದರು.

‘ಬಿಜೆಪಿ ಮತ್ತು ಎಎಪಿ ಪಕ್ಷಗಳು ಈ ರೀತಿ ಅಗ್ಗದ ರಾಜಕೀಯ ತಂತ್ರ ಬಳಸುತ್ತಿವೆ. ಇಂತಹ ಪ್ರಚೋದನಕಾರಿ ಕ್ರಿಯೆಗೆ ನಾವು ಸೂಕ್ತ ರೀತಿಯಲ್ಲೇ ಪ್ರತಿಕ್ರಿಯಿಸುತ್ತೇವೆ. ಅವರು ಅರ್ಥ ಮಾಡಿಕೊಳ್ಳುವ ಭಾಷೆಯಲ್ಲಿಯೇ ಉತ್ತರಿಸುತ್ತೇವೆ’ ಎಂದು ಲಕ್ರಾ ಹೇಳಿದರು.

ಕೇಂದ್ರ, ಸಿಬಿಎಸ್‌ಇಗೆ ಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): 12ನೇ ತರಗತಿ ಪರೀಕ್ಷೆಯ ಒಎಸ್‌ಎಂ (ಆನ್ ಸ್ಕ್ರೀನ್ ಮಾರ್ಕಿಂಗ್) ವ್ಯವಸ್ಥೆ ಅಳವಡಿಕೆಯಲ್ಲಿ ವ್ಯಾಪಕ ಅಕ್ರಮ ನಡೆದಿದ್ದು, ಸ್ವತಂತ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ (ಎನ್‌ಎಸ್‌ಯುಐ) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್, ಈ ಕುರಿತು ತನ್ನ ಅಭಿಪ್ರಾಯ ತಿಳಿಸುವಂತೆ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಗೆ (ಸಿಬಿಎಸ್‌ಇ) ತಿಳಿಸಿದೆ.

ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್‌ಎಸ್‌ಯುಐ) ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ನಡೆಸಿದ ರಜಾಕಾಲದ ನ್ಯಾಯಪೀಠದ ನ್ಯಾಯಮೂರ್ತಿಗಳಾದ ನೀನಾ ಬನ್ಸಲ್ ಕೃಷ್ಣ ಹಾಗೂ ಮಧು ಜೈನ್, ಈ ಕುರಿತು ತಮ್ಮ ಪ್ರತಿಕ್ರಿಯೆಗಳನ್ನು ಜೂನ್ 12ರ ಒಳಗಾಗಿ ಸಲ್ಲಿಸುವಂತೆ ಸಿಬಿಎಸ್‌ಇ ಹಾಗೂ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿ ನೋಟಿಸ್ ಜಾರಿಮಾಡಿದೆ.

‘ವಿದ್ಯಾರ್ಥಿಗಳು ಮರು ಮೌಲ್ಯಮಾಪನ ಸಲ್ಲಿಸುವ ಹಾಗೂ ಉತ್ತರ ಪತ್ರಿಕೆಯನ್ನು ಪಡೆಯುವ ಪೋರ್ಟಲ್ ಅನ್ನು ಜೂನ್ 7ರಂದೇ ಸ್ಥಗಿತಗೊಳಿಸಲಾಗಿದೆ. ಈ ವ್ಯವಸ್ಥೆಯನ್ನು ಒಂದು ತಿಂಗಳ ಕಾಲ ತೆರೆದಿಡಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದರು.

ಇದಕ್ಕೆ ಉತ್ತರಿಸಿದ ಸಿಬಿಎಸ್‌ಇ ಪರ ವಕೀಲ ಎಂ.ಎ.ನಿಯಾಜ್, ‘ಪೋರ್ಟಲ್ ಅನ್ನು ಮುಚ್ಚುವ ಗಡುವನ್ನು ಅಧಿಕಾರಿಗಳು ಕಾಲಕಾಲಕ್ಕೆ ವಿಸ್ತರಿಸಿದ್ದಾರೆ. ವಿದ್ಯಾರ್ಥಿಗಳ ಕುಂದುಕೊರತೆ ಹಾಗೂ ಸಮಸ್ಯೆಯನ್ನು ಬಗೆಹರಿಸಲಾಗಿದೆ’ ಎಂದು ನ್ಯಾಯಪೀಠದ ಗಮನಸೆಳೆದರು.

‘ರಾಜಕೀಯ ಪಕ್ಷವೊಂದರ ವಿದ್ಯಾರ್ಥಿ ಘಟಕವು ಪಿಐಎಲ್ ಸಲ್ಲಿಸಿದೆ. ಶಿಕ್ಷಣ ವ್ಯವಸ್ಥೆಯನ್ನು ರಾಜಕೀಯಕರಣಗೊಳಿಸಲು ಅವಕಾಶ ನೀಡುವುದಿಲ್ಲ’ ಎಂದು ತಿಳಿಸಿದರು.

ಇದಕ್ಕೆ ಉತ್ತರಿಸಿದ ಎನ್‌ಎಸ್‌ಯುಐ ಪರ ಹಾಜರಾಗಿದ್ದ ವಕೀಲ ರಿಶವ್ ರಂಜನ್, ಅಪ್ರಾಪ್ತ ವಯಸ್ಸಿನವರ ಪರವಾಗಿ ಪಿಐಎಲ್ ಸಲ್ಲಿಸಲಾಗಿದೆ. ರಾಜಕೀಯ ಪಕ್ಷದೊಂದಿಗೆ ನಂಟು ಹೊಂದಿದೆ ಎಂಬ ಕಾರಣಕ್ಕೆ ಅರ್ಜಿ ಅನರ್ಹಗೊಳಿಸಬೇಕಿಲ್ಲ ಎಂದು ಗಮನಸೆಳೆದರು.

ಎರಡೂ ಕಡೆಯ ವಾದ ಆಲಿಸಿದ ನ್ಯಾಯಪೀಠ, ಈ ಕುರಿತಂತೆ ಕೇಂದ್ರ ಸರ್ಕಾರ, ಸಿಬಿಎಸ್‌ಇಗೆ ನೋಟಿಸ್ ಜಾರಿಗೊಳಿಸಿ, ಉತ್ತರಿಸುವಂತೆ ಕೇಳಿದೆ.

1.6 ಲಕ್ಷ ವಿದ್ಯಾರ್ಥಿಗಳಿಂದ ಅರ್ಜಿ

ನವದೆಹಲಿ (ಪಿಟಿಐ): ‘12ನೇ ತರಗತಿಯ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಪೋರ್ಟಲ್ ಈಗ ಸಮರ್ಪಕವಾಗಿದ್ದು, ನಿಗದಿತ ಅರ್ಜಿ ಸಲ್ಲಿಕೆಯ ಅವಧಿ ಮುಗಿದಿದೆ. ಈ ಸಂದರ್ಭದಲ್ಲಿ 3.8 ಲಕ್ಷಕ್ಕೂ ಹೆಚ್ಚು ಉತ್ತರ ಪತ್ರಿಕೆಗಳನ್ನು ಪಡೆದುಕೊಳ್ಳಲು 1.6 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ’ ಎಂದು ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ತಿಳಿಸಿದೆ.

‘ಸರ್ಕಾರದ ತಾಂತ್ರಿಕ ಸಂಸ್ಥೆಗಳು ಹಾಗೂ ಐಐಟಿ ತಂಡದ ಮೇಲ್ವಿಚಾರಣೆಯಲ್ಲಿ ಜೂನ್ 2ರಿಂದ 7ರ ನಿಗದಿತ ಅವಧಿಯಲ್ಲಿ ಪರಿಶೀಲನೆ ಹಾಗೂ ಮರುಮೌಲ್ಯಮಾಪನ ವಿಭಾಗವು ಸಂಪೂರ್ಣವಾಗಿ ಕಾರ್ಯನಿರ್ವಹಿಸಿದೆ’ ಎಂದು ಸಂಸ್ಥೆಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

‘ದುರುದ್ದೇಶಪೂರ್ವಕವಾಗಿ ಸೇವೆಗೆ ತಡೆಯೊಡ್ಡುವವರು ಹಾಗೂ ಸೈಬರ್ ಅಪಾಯ ಎಸಗುವವರನ್ನು ಎದುರಿಸಲು ಇಡೀ ತಂಡ ನಿರಂತರವಾಗಿ ಸಕ್ರಿಯವಾಗಿತ್ತು. ಯಾವುದೇ ಸಮಸ್ಯೆ ಎದುರಾದರೂ ನೆರವಾಗಲು ವಿದ್ಯಾರ್ಥಿಗಳಿಗೆ ಸಹಾಯವಾಣಿ ಹಾಗೂ ಕುಂದುಕೊರತೆ ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು’ ಎಂದು ಮಂಡಳಿ ತಿಳಿಸಿದೆ. ಫಲಿತಾಂಶದ ಬಳಿಕವೂ ಸೇವೆಯನ್ನು ಪಡೆಯಲು ವಿದ್ಯಾರ್ಥಿಗಳು ತೊಂದರೆ ಅನುಭವಿಸಿದ್ದಾರೆ ಎಂಬ ಆರೋಪಗಳ ಕುರಿತಂತೆ ಸಿಬಿಎಸ್‌ಇ ಈ ಸ್ಪಷ್ಟನೆ ನೀಡಿದೆ.

ಬಾಡಿಗೆದಾರರಿಂದ ಪರಿಸರ ಮಾಲಿನ್ಯ ಭೂಮಾಲೀಕ ಹೊಣೆಯಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ಬಾಡಿಗೆದಾರರು ನಿರ್ಮಿಸಿರುವ ರಾಸಾಯನಿಕ ಘಟಕದಿಂದ ಪರಿಸರಕ್ಕೆ ಉಂಟಾಗುವ ಹಾನಿಗೆ ಭೂಮಾಲೀಕರು ಹೊಣೆಗಾರರಲ್ಲ ಎಂಬ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ(ಎನ್‌ಜಿಟಿ) ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿ ಹಿಡಿದಿದೆ.

ನ್ಯಾಯಮಂಡಳಿ ಆದೇಶವನ್ನು ಪ್ರಶ್ನಿಸಿ ಗುಜರಾತ್ ಮಾಲಿನ್ಯ ನಿಯಂತ್ರಣ ಮಂಡಳಿ(ಜಿಪಿಸಿಬಿ) ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸತೀಶ್ ಚಂದ್ರ ಶರ್ಮ ಮತ್ತು ಸಂಜೀವ್ ಸಚ್‌ದೇವ ಅವರ ನ್ಯಾಯಪೀಠವು, 2025ರ ನವೆಂಬರ್ 14ರಂದು ನ್ಯಾಯಮಂಡಳಿ ನೀಡಿದ್ದ ಆದೇಶದ ವಿಚಾರದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದೆ.

ಸೂರತ್‌ನ ಜಗ್‌ಮೋಹನ್ ಲಚಿರಾಮ್ ಜಾಲಾನ್ ಎಂಬವರಿಗೆ ಸೇರಿದ ಭೂಮಿಯಲ್ಲಿ, ಮಾರ್ಗಸೂಚಿಗಳನ್ನು ಪಾಲಿಸದೇ ರಾಸಾಯನಿಕ ಉತ್ಪಾದನೆ ಮಾಡುತ್ತಿದ್ದ ಘಟಕವನ್ನು ಜಿಪಿಸಿಬಿ ಮುಚ್ಚಿಸಿತ್ತು. ಜಾಗದ ಮಾಲೀಕ ಜಾಲಾನ್ ಅವರಿಗೆ ₹25 ಲಕ್ಷ ದಂಡ ವಿಧಿಸಿತ್ತು.

‘2020ರಲ್ಲಿ ಒಪ್ಪಂದದ ಅಡಿಯಲ್ಲಿ ಖಾಸಗಿ ಕಂಪನಿಯ ನಿರ್ದೇಶಕರೊಬ್ಬರಿಗೆ ಭೂಮಿಯನ್ನು ಬಾಡಿಗೆಗೆ ನೀಡಿದ್ದು, ಅವರು ಪರವಾನಗಿ ಪಡೆಯದೇ ಘಟಕ ನಿರ್ವಹಿಸುತ್ತಿದ್ದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ’ ಎಂದು ವಾದಿಸಿದ ಜಾಲಾನ್, ಬಾಡಿಗೆದಾರರ ವಿರುದ್ಧ ದೂರು ದಾಖಲಿಸಿದ್ದರು ಮತ್ತು ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಗುಜರಾತ್ ಹೈಕೋರ್ಟ್ ನಿರ್ದೇಶನದಂತೆ ತನ್ನ ನಿರ್ಧಾರವನ್ನು ಮರುಪರಿಶೀಲಿಸಿದ ಮಾಲಿನ್ಯ ಮಂಡಳಿಯು ದಂಡ ವಿಧಿಸಿರುವುದನ್ನು ಸಮರ್ಥಿಸಿಕೊಂಡಿತ್ತು.

ಈ ಕುರಿತು ವಿಚಾರಣೆ ನಡೆಸಿದ್ದ ಎನ್‌ಜಿಟಿ, ‘ಬಾಡಿಗೆಗೆ ನೀಡಲಾದ ಭೂಮಿಯಲ್ಲಿದ್ದ ಘಟಕದಿಂದ ಉಂಟಾದ ಪರಿಸರ ಹಾನಿಗೆ ಮಾಲೀಕ ಜಾಲಾನ್ ಅವರಿಂದ ದಂಡ ಪಾವತಿ ಮಾಡಿಸಿಕೊಳ್ಳುವಂತಿಲ್ಲ’ ಎಂದು ಆದೇಶಿಸಿತ್ತು.

‘ವಿವಾಹವಾಗದ ಮಾತ್ರಕ್ಕೆ ವ್ಯಕ್ತಿ ವಂಚಕನಲ್ಲ’

ನವದೆಹಲಿ (ಪಿಟಿಐ): ‘ವಿವಾಹವಾಗದ ಇಬ್ಬರು ವಯಸ್ಕರು ಪರಸ್ಪರ ಒಪ್ಪಿತ ಪ್ರೇಮ ಸಂಬಂಧದಲ್ಲಿ ಇದ್ದಾರೆ ಎನ್ನುವುದು ವ್ಯಕ್ತಿಯೊಬ್ಬರ ನಡತೆ ಸರಿಯಿಲ್ಲ ಎನ್ನುವುದನ್ನು ನಿರ್ಧರಿಸುವ ಮಾನದಂಡವಾಗಬಾರದು’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ನೆರೆ ಮನೆಯ ಮಹಿಳೆಯೊಂದಿಗೆ ನಾಲ್ಕು ವರ್ಷ ಪ್ರೇಮ ಸಂಬಂಧದಲ್ಲಿ ಇದ್ದು, ಬಳಿಕ ಮದುವೆ ಆಗಲಿಲ್ಲ ಎನ್ನುವ ಕಾರಣಕ್ಕೆ ವ್ಯಕ್ತಿಯೊಬ್ಬರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಾದ ಕಾರಣ ಆ ವ್ಯಕ್ತಿಯನ್ನು ಪೊಲೀಸ್ ಕಾನ್‌ಸ್ಟೆಬಲ್ ಆಗಿ ನೇಮಿಸಲು 2014ರಲ್ಲಿ ತೆಲಂಗಾಣ ರಾಜ್ಯ ಮಟ್ಟದ ಪೊಲೀಸ್ ನೇಮಕಾತಿ ಮಂಡಳಿಯು ನಿರಾಕರಿಸಿತ್ತು.

ವ್ಯಕ್ತಿಯ ಪರವಾಗಿ ಈಗಾಗಲೇ ತೆಲಂಗಾಣ ಹೈಕೋರ್ಟ್‌ನಲ್ಲಿ ತೀರ್ಪು ನೀಡಿತ್ತು. ಈ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.



ನ್ಯಾಯಮೂರ್ತಿಗಳಾದ ಮನಮೋಹನ್ ಮತ್ತು ಮನೋಜ್ ಮಿಶ್ರಾ ಅವರ ಪೀಠ ಅರ್ಜಿಯ ವಿಚಾರಣೆ ನಡೆಸಿತು. ‘ಎಲ್ಲ ಸಂಬಂಧಗಳು ಮದುವೆಯಲ್ಲಿಯೇ ಕೊನೆಗೊಳ್ಳುವುದಿಲ್ಲ. ಮದುವೆ ಆಗಲಿಲ್ಲ ಎನ್ನುವ ಕಾರಣಕ್ಕೆ ವ್ಯಕ್ತಿಯನ್ನು ವಂಚಕ ಎನ್ನಲಾಗದು. ವ್ಯಕ್ತಿಯನ್ನು ಕಾನ್‌ಸ್ಟೆಬಲ್ ಆಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಮತ್ತೊಮ್ಮೆ ಯೋಚಿಸಿ’ ಎಂದು ಪೀಠ ಸೂಚಿಸಿತು.

1 ಸ್ಥಾನಕ್ಕೆ ಕಾಂಗ್ರೆಸ್‌–ಜೆಡಿಎಸ್ ಜಿದ್ದಾ ಜಿದ್ದಿ

ಒಂದನೇ ಪುಟದಿಂದ...

ಜೆಡಿಎಸ್ ಲೆಕ್ಕಾಚಾರವೇನು?: ಬಿಜೆಪಿ ಬಳಿ 62 ಮತಗಳಿದ್ದು, ಇಬ್ಬರು ಅಭ್ಯರ್ಥಿಗಳಿಗೆ ತಲಾ 29 ರಂತೆ ಹಂಚಿಕೆ ಮಾಡಿದರೆ, 4 ಮತಗಳು ಉಳಿಯುತ್ತವೆ. ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ 1 ಮತ್ತು ಜನಾರ್ದನ ರೆಡ್ಡಿಯವರ 1 ಮತ ಸಿಕ್ಕಿದರೆ ಒಟ್ಟು 6 ಮತಗಳು ಸಿಗುತ್ತವೆ. ಇದರಿಂದ ಜೆಡಿಎಸ್‌ನ ಬಲ 18ರ ಜತೆಗೆ 6 ಸೇರಿ 24 ಆಗುತ್ತದೆ. ಉಳಿದ ನಾಲ್ಕು ಮತಗಳನ್ನು ಒಂದು ವೇಳೆ ಬಿಜೆಪಿ ಉಚ್ಚಾಟಿತ ಎಸ್‌.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್ ಅವರ ಮತಗಳ ಜತೆಗೆ, ಕಾಂಗ್ರೆಸ್‌ನಿಂದ ಒಂದೆರಡು ಮತಗಳನ್ನು ಸೆಳೆಯಲು ಸಾಧ್ಯವೇ ಎಂಬ ಲೆಕ್ಕಾಚಾರದಲ್ಲಿದ್ದಾರೆ.

ಈಚೆಗಷ್ಟೇ ಮುಖ್ಯಮಂತ್ರಿಯಾಗಿ ಅಧಿಕಾರ ಪದಗ್ರಹಣ ಮಾಡಿರುವ ಡಿ.ಕೆ.ಶಿವಕುಮಾರ್ ಅವರು ತಮ್ಮ ಆಪ್ತ ವಿನಯ್ ಕಾರ್ತಿಕ್ ಅವರನ್ನು ಗೆಲ್ಲಿಸಿಕೊಂಡು ಬರುವುದಾಗಿ ಶಪಥ ಮಾಡಿದ್ದಾರೆ. ಹೀಗಾಗಿ ಕಾಂಗ್ರೆಸ್‌ನ ಮತ ಸೆಳೆಯುವ ಸಾಧ್ಯತೆ ತೀರಾ ಕಷ್ಟ ಎನ್ನಲಾಗುತ್ತಿದೆ. ಅಲ್ಲದೇ, ಎಚ್‌.ಡಿ.ಕುಮಾರಸ್ವಾಮಿ ಜತೆ ಮುನಿಸಿಕೊಂಡಿರುವ ಜಿ.ಟಿ.ದೇವೇಗೌಡ ಅವರು ಮತದಾನದಿಂದ ದೂರ ಉಳಿಬಹುದು. ಇದರಿಂದ ಹಿನ್ನಡೆ ಆಗಬಹುದು ಎಂಬ ಆತಂಕವೂ ಜೆಡಿಎಸ್ ಅಭ್ಯರ್ಥಿಯನ್ನು ಕಾಡಿದೆ.

ಕಾಂಗ್ರೆಸ್ ತನ್ನ ನಾಲ್ಕು ಅಭ್ಯರ್ಥಿಗಳಿಗೆ ತಲಾ 28ರಂತೆ ಹಂಚಿಕೆ ಮಾಡಿದರೆ 112 ಆಗುತ್ತದೆ. ಹೆಚ್ಚುವರಿಯಾಗಿ 23 ಉಳಿಯುತ್ತದೆ. ಕಾಂಗ್ರೆಸ್ ಜತೆ ಗುರುತಿಸಿಕೊಂಡಿರುವ ದರ್ಶನ್ ಪುಟ್ಟಣ್ಣಯ್ಯ 1, ಪಕ್ಷೇತರರು 2 ಸೇರಿ ಒಟ್ಟು 26 ಆಗುತ್ತದೆ. ಬಿಜೆಪಿ ಉಚ್ಚಾಟಿತ ಇಬ್ಬರು ಶಾಸಕರು ಮತ ಹಾಕದೇ ಇದ್ದರೆ ಹೆಚ್ಚುವರಿಯಾಗಿ ಎರಡು ಅಥವಾ ಮೂರು ಮತಗಳು ಕಾಂಗ್ರೆಸ್‌ನ ಐದನೇ ಅಭ್ಯರ್ಥಿಗೆ ಅಗತ್ಯ. ವಿಧಾನಸಭೆ 224 ಸದಸ್ಯ ಬಲ ಹೊಂದಿದ್ದು, ವಿನಯಕುಲಕರ್ಣಿ ಸದಸ್ಯತ್ವ ಅನರ್ಹಗೊಂಡಿದೆ. ಡಿ. ಸುಧಾಕರ್ ನಿಧನರಾಗಿದ್ದಾರೆ. ಹೀಗಾಗಿ, 2 ಸ್ಥಾನಗಳು ತೆರವಾಗಿವೆ.

ಚದುರಂಗ ಆಟದಂತೆ– ಡಿಕೆಶಿ

‘ರಾಜಕಾರಣದಲ್ಲಿ ಚದುರಂಗದ ಆಟ ಆಡುವಾಗ ಯಾರಾದರೂ ಯಾವ ರೀತಿ ಕಾಯಿ ನಡೆಸುತ್ತಾರೆ ಎಂದು ಹೇಳುತ್ತಾರೆಯೇ? ಯಾರು ಹೇಳುವುದಿಲ್ಲ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ವಿನಯ್ ಕಾರ್ತಿಕ್ ಸ್ಪರ್ಧೆ, ಜೆಡಿಎಸ್ ಹೆಚ್ಚುವರಿ ಅಭ್ಯರ್ಥಿ ಸ್ಪರ್ಧೆ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಅವರು, ‘ಯಾವ ಕಾಯಿ ಯಾವಾಗ ನಡೆಸಬೇಕು ಎಂಬುದು ಗೊತ್ತಿದೆ’ ಎಂದರು.

‘ನಮ್ಮ ಅಭ್ಯರ್ಥಿ ಗೆಲ್ಲುವ ವಿಶ್ವಾಸವಿದೆ’

‘ಪರಿಷತ್ ಚುನಾವಣೆಗೆ ಜೆಡಿಎಸ್‌ನವರು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದಾರೆ. ರಾಜಕೀಯದಲ್ಲಿ ಇವೆಲ್ಲ ಬೇಕಾಗುತ್ತದೆ. ರಾಜಕೀಯ ಮಾಡುವುದು ಎಂದರೆ ಇದೇನೆ. ಆದರೆ, ನಮಗೆ ನಮ್ಮ ಅಭ್ಯರ್ಥಿ ಗೆಲ್ಲುವ ವಿಶ್ವಾಸ ಇದೆ’ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.

‘ನಾವು ಐದನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. ನಮ್ಮ ಐದೂ ಅಭ್ಯರ್ಥಿಗಳು ಗೆಲ್ಲುವ ಸಂಖ್ಯೆ ನಮ್ಮ ಬಳಿ ಇದೆ. ಈಗಾಗಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಎಲ್ಲ ಶಾಸಕರ ಜೊತೆ ಮಾತನಾಡಿದ್ದಾರೆ. ಜೆಡಿಎಸ್ ಬಳಿ ಸಂಖ್ಯೆಯೇ ಇಲ್ಲ. ಹೀಗಾಗಿ, ಅವರು ಆತ್ಮಸಾಕ್ಷಿಯ ಮತ ಎಂದು ಹೇಳುತ್ತಿದ್ದಾರೆ’ ಎಂದರು.

ನೀಟ್ ಪ್ರಶ್ನೆಪತ್ರಿಕೆ ರವಾನೆಗೆ ಸೇನಾ ಕಾಪ್ಟರ್

ಪ್ರಜಾವಾಣಿ ವಾರ್ತೆ

ನವದೆಹಲಿ: ನೀಟ್‌-ಯುಜಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ರವಾನಿಸಲು ಮಿಗ್‌–17 ಸೇನಾ ಹೆಲಿಕಾಪ್ಟರ್‌ಗಳನ್ನು ಬಳಸಿಕೊಳ್ಳಲು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ನೀಟ್‌-ಯುಜಿ ಪ್ರಶ್ನೆಪತ್ರಿಕೆಗಳನ್ನು ಭಾರತೀಯ ವಾಯುಪಡೆಯ ಸಹಕಾರದಲ್ಲಿ ಸಾಗಿಸಲು ಚಿಂತನೆ ನಡೆಸಲಾಗಿದೆ ಎಂದು ಕಳೆದ 10 ದಿನಗಳ ಹಿಂದೆ ಕೇಂದ್ರ ಸರ್ಕಾರ ತಿಳಿಸಿತ್ತು. ಭಾರತೀಯ ವಾಯುಪಡೆಯ ಮಿಗ್‌– 17 ಹೆಲಿಕಾಪ್ಟರ್‌ಗಳು ದೇಶದ 18 ಪ್ರದೇಶಗಳಿಂದ ಪರೀಕ್ಷಾ ಕೇಂದ್ರ ಗಳಿಗೆ ಪ್ರಶ್ನೆ ಪತ್ರಿಕೆಗಳ ಕಟ್ಟುಗಳನ್ನು ಕೊಂಡೊಯ್ಯಲಿವೆ.

ಕಂಬನಿ

ಪಿಟಿಐ ಚಿತ್ರ:



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಹರ್ ರೆಜಿಮೆಂಟ್‌ನ ಸಿಪಾಯಿ ಜಂಜಾಲ್ ಪ್ರವೀಣ್ ಪ್ರಭಾಕರ್ ಅವರಿಗೆ ಮರಣೋತ್ತರವಾಗಿ ಕೀರ್ತಿ ಚಕ್ರ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಸ್ವೀಕರಿಸುವ ವೇಳೆ ಭಾವುಕರಾದ ಜಂಜಾಲ್ ಅವರ ತಾಯಿಯನ್ನು ಮುರ್ಮು ಅವರು ಸಂತೈಸಿದರು

ಕಾನ್‌ಸ್ಟೆಬಲ್ ನೇಮಕ: ನಾಳೆಯಿಂದ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಧಿಸೂಚನೆ ಹೊರಡಿಸಿದ್ದು, ಜೂನ್ 10ರಿಂದ ಅರ್ಜಿ ಪ್ರಕ್ರಿಯೆ ಆರಂಭವಾಗಲಿದೆ.

ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು ಅಗತ್ಯ ದಾಖಲೆಗಳನ್ನು ಸಿದ್ಧ ಮಾಡಿಟ್ಟುಕೊಳ್ಳಬೇಕು. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಒಳಮೀಸಲಾತಿ ಪ್ರಕಾರ ತಮಗೆ ಅನ್ವಯವಾಗುವ ಎಸ್‌ಸಿ-ಎ, ಎಸ್‌ಸಿ-ಬಿ ಮತ್ತು ಎಸ್‌ಸಿ-ಸಿ ಜಾತಿ ಪ್ರಮಾಣ ಪತ್ರಗಳ ಆರ್‌ಡಿ ಸಂಖ್ಯೆ ನಮೂದಿಸುವುದು ಕಡ್ಡಾಯ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌.ಪ್ರಸನ್ನ ಹೇಳಿದ್ದಾರೆ.

ಅರ್ಜಿ ಜತೆ ಅಪ್‌ಲೋಡ್ ಮಾಡುವ ಅಭ್ಯರ್ಥಿಗಳ ಭಾವಚಿತ್ರ 50ಕೆಬಿ ಒಳಗಿರಬೇಕು. 596 ಹುದ್ದೆಗಳು ಕಲ್ಯಾಣ ಕರ್ನಾಟಕ ಹಾಗೂ 3,395 ಹುದ್ದೆಗಳು ಉಳಿಕೆ ಮೂಲಕ ವೃಂದಕ್ಕೆ ಸೇರಿವೆ. ಅರ್ಜಿ ಸಲ್ಲಿಸಲು ಜುಲೈ 3 ಕೊನೆ ದಿನ.

ವಿಶಾಖಪಟ್ಟಣಂ ಉಕ್ಕು ಸ್ಥಾವರದಲ್ಲಿ ಬೆಂಕಿ: 9 ಸಾವು

ಹೈದರಾಬಾದ್: ಆಂಧ್ರ ಪ್ರದೇಶದ ಅನಕಾಪಲ್ಲಿ ಜಿಲ್ಲೆಯ ವಿಶಾಖಪಟ್ಟಣಂ ಉಕ್ಕಿನ ಸ್ಥಾವರದಲ್ಲಿ (ವಿಎಸ್‌ಪಿ) ಸೋಮವಾರ ಸಂಜೆ ಬೆಂಕಿ ಅವಘಡ ಸಂಭವಿಸಿದೆ. ಘಟನೆಯಲ್ಲಿ 9 ಕಾರ್ಮಿಕರು ಮೃತಪಟ್ಟಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಉಕ್ಕನ್ನು ಕರಗಿಸುವ ಘಟಕದಲ್ಲಿನ ಉಷ್ಣ ನಿರೋಧಕ ಕೊಳಗದಿಂದ ದ್ರವ ರೂಪದ ಲೋಹ ಸೋರಿಕೆಯಾಗಿರುವ ಪರಿಣಾಮ ಬೆಂಕಿ ಅವಘಡ ಸಂಭವಿಸಿದೆ ಎನ್ನಲಾಗಿದೆ.ಘಟನೆ ನಡೆದಾಗ 20 ಕಾರ್ಮಿಕರು ಸ್ಥಳದಲ್ಲಿದ್ದರು. ಈ ಪೈಕಿ ಹಲವರಿಗೆ ಗಾಯಗಳಾಗಿದ್ದು, 9 ಮಂದಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ಮೃತಪಟ್ಟಿರುವವರು ಕಾರ್ಖಾನೆಯ ಕಾರ್ಮಿಕರೋ, ಹೊರಗುತ್ತಿಗೆ ನೌಕರರೋ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಕಾರ್ಮಿಕ ಸಂಘಟನೆ ತಿಳಿಸಿದೆ. ಅವಘಡಕ್ಕೆ ನಿಜವಾದ ಕಾರಣ ಪತ್ತೆಹಚ್ಚಲು ಸೂಕ್ತ ತನಿಖೆ ನಡೆಸಬೇಕೆಂದೂ ಆಗ್ರಹಿಸಿದೆ.

ಜೂನ್ 13ರೊಳಗಾಗಿ ಪ್ರಧಾನ್ ರಾಜೀನಾಮೆ ನೀಡಬೇಕು: ಸಿಜೆಪಿ ಸಂಸ್ಥಾಪಕ

ಹಲವು ರಾಜ್ಯಗಳಲ್ಲಿ ಪ್ರತಿಭಟನೆ: ದೀಪ್ಕೆ

ಛತ್ರಪತಿ ಸಂಭಾಜಿನಗರ (ಪಿಟಿಐ): ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಜೂನ್ 13ರೊಳಗಾಗಿ ರಾಜೀನಾಮೆ ನೀಡದಿದ್ದರೆ ದೇಶದ ವಿವಿಧ ರಾಜ್ಯಗಳ ನಗರಗಳಲ್ಲಿ ಪ್ರತಿಭಟನೆ ನಡೆಸುವುದಾಗಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ಎಚ್ಚರಿಕೆ ನೀಡಿದರು.


ಅಭಿಜೀತ್ ದೀಪ್ಕೆ

‘ಸಿಜೆಪಿ ಆಂದೋಲನವು ಶಾಂತಿಯುತವಾಗಿರುತ್ತದೆ ಮತ್ತು ಅದನ್ನು ನೆರೆಯ ದೇಶಗಳಲ್ಲಿ(ಬಾಂಗ್ಲಾದೇಶ ಮತ್ತು ನೇಪಾಳ) ನಡೆದ ಹೋರಾಟದ ಜೊತೆ ಸಮೀಕರಿಸಬೇಕಾಗಿಲ್ಲ. ಸಿಜೆಪಿಯು ಜೆನ್‌-ಝೀಗಳಿಗಾಗಿಯೇ ಇರುವಂತಹದ್ದು ಮತ್ತು ಇದು ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಬಂಧ ಹೊಂದಿಲ್ಲ’ ಎಂದು ದೀಪ್ಕೆ ಸ್ಪಷ್ಟಪಡಿಸಿದರು.

‘ಜೂನ್ 13ರೊಳಗೆ ಪ್ರಧಾನ್ ರಾಜೀನಾಮೆ ನೀಡದಿದ್ದರೆ ಹೋರಾಟವನ್ನು ತೀವ್ರಗೊಳಿಸುವುದಾಗಿ ಈ ಹಿಂದೆಯೇ ಹೇಳಿದ್ದೆ. ಆ ಮಾತಿಗೆ ಪೂರಕವಾಗಿ, ಪ್ರಧಾನ್ ರಾಜೀನಾಮೆ ನೀಡದಿದ್ದರೆ ವಿವಿಧ ನಗರ ಮತ್ತು ರಾಜ್ಯಗಳಿಗೆ ಭೇಟಿ ನೀಡಿ ಪ್ರತಿಭಟನೆ ನಡೆಸುತ್ತೇನೆ’ ಎಂದು ದೀಪ್ಕೆ ಸಾಮಾಜಿಕ ಜಾಲತಾಣ ‘ಎಕ್ಸ್’ ಮೂಲಕ ತಿಳಿಸಿದರು.



‘ರಾಜ್ಯಗಳಲ್ಲಿ ಪ್ರತಿಭಟನೆ ನಡೆಸಿದ ಬಳಿಕವೂ ಪ್ರಧಾನ್ ರಾಜೀನಾಮೆ ನೀಡದಿದ್ದರೆ, ನಾವು ಮತ್ತೆ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ದೇಶದ ಮೂಲೆ ಮೂಲೆಗಳಿಂದ ಬರುವ ವಿದ್ಯಾರ್ಥಿಗಳು ನವದೆಹಲಿಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಲಿದ್ದಾರೆ’ ಎಂದರು.

‘ಪ್ರಧಾನ್ ರಾಜೀನಾಮೆ ನೀಡುವವರೆಗೂ ಹೋರಾಟ ನಿಲ್ಲದು. ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡಿದ್ದಕ್ಕೆ ಅವರು ನೈತಿಕ ಹೊಣೆ ಹೊರಬೇಕು’ ಎಂದು ಆಗ್ರಹಿಸಿದರು.

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

An ISO-9001:2015 & 14001:2015 Company

ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com

ದಿನಾಂಕ: 08.06.2026

ಟೆಂಡರ್ ಪ್ರಕಟಣೆ


ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (https://kppp.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2026-27/SE0245	2026–27ನೇ ಹಣಕಾಸು ವರ್ಷಕ್ಕೆ ಹೈದರಾಬಾದ್‌ನಲ್ಲಿರುವ ಕೆಎಸ್‌ಡಿಎಲ್ ಮಾರ್ಕೆಟಿಂಗ್ ಶಾಖೆಗಳಿಗೆ ಹಣಕಾಸು ವಿಮರ್ಶೆ ಮತ್ತು ಲೆಕ್ಕಪತ್ರ ಸೇವೆಗಳನ್ನು ಒದಗಿಸಲು ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳ ನೇಮಕಾತಿಗಾಗಿ ಆಸಕ್ತಿ ಅಭಿವ್ಯಕ್ತಿ ಪಡಿಸುವಿಕೆ(EOI)	ಸೇವೆಗಳು	06-06-2026	15-06-2026
2	KSDL/2026-27/SE0233/ CALL-2	ಮೈಸೂರ್ ಸ್ಯಾಂಡಲ್ ರೋಸ್ ಬಾತ್ ಟ್ಯಾಬ್ಲೆಟ್ 150 ಗ್ರಾಂ (ಎಸ್)ನ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ	ಸೇವೆಗಳು	06-06-2026	15-06-2026
3	KSDL/2026-27/SE0234/ CALL-2	ಮೈಸೂರ್ ಸ್ಯಾಂಡಲ್ ಜಾಸ್ಮಿನ್ ಬಾತ್ ಟ್ಯಾಬ್ಲೆಟ್ 150 ಗ್ರಾಂ (ಎಸ್)ನ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ	ಸೇವೆಗಳು	06-06-2026	15-06-2026
4	KSDL/2026-27/SE0235/ CALL-2	ಮೈಸೂರ್ ಸ್ಯಾಂಡಲ್ ಲ್ಯಾವೆಂಡರ್ ಬಾತ್ ಟ್ಯಾಬ್ಲೆಟ್ 150 ಗ್ರಾಂ (ಎಸ್)ನ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ.	ಸೇವೆಗಳು	06-06-2026	15-06-2026
5	KSDL/2026-27/SE0236/ CALL-2	SJR ಗಾಗಿ ರೋಸ್ ಬಾತ್ ಟ್ಯಾಬ್ಲೆಟ್ 150 ಗ್ರಾಂ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ.	ಸೇವೆಗಳು	06-06-2026	15-06-2026
6	KSDL/2026-27/SE0237/ CALL-2	SJR ಗಾಗಿ ಜಾಸ್ಮಿನ್ ಬಾತ್ ಟ್ಯಾಬ್ಲೆಟ್ 150 ಗ್ರಾಂ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ.	ಸೇವೆಗಳು	06-06-2026	15-06-2026
7	KSDL/2026-27/SE0238/ CALL-2	ಗಿಫ್ಟ್ ಪ್ಯಾಕ್‌ಗಾಗಿ ರೋಸ್ ಬಾತ್ ಟ್ಯಾಬ್ಲೆಟ್ 150 ಗ್ರಾಂನ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ.	ಸೇವೆಗಳು	06-06-2026	15-06-2026
8	KSDL/2026-27/SE0239/ CALL-2	ಗಿಫ್ಟ್ ಪ್ಯಾಕ್‌ಗಾಗಿ ಜಾಸ್ಮಿನ್ ಬಾತ್ ಟ್ಯಾಬ್ಲೆಟ್ 150 ಗ್ರಾಂನ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ.	ಸೇವೆಗಳು	06-06-2026	15-06-2026
9	KSDL/2026-27/SE0240/ CALL-2	ಗಿಫ್ಟ್ ಪ್ಯಾಕ್‌ಗಾಗಿ ಲ್ಯಾವೆಂಡರ್ ಬಾತ್ ಟ್ಯಾಬ್ಲೆಟ್ 150 ಗ್ರಾಂನ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ.	ಸೇವೆಗಳು	06-06-2026	15-06-2026
10	KSDL/2026-27/SE0241/ CALL-2	ಮೈಸೂರ್ ಸ್ಯಾಂಡಲ್ ಹರ್ಬಲ್ ಕೇರ್ 100 ಗ್ರಾಂನ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ.	ಸೇವೆಗಳು	06-06-2026	15-06-2026
11	KSDL/2026-27/SE0242/ CALL-2	ಮೈಸೂರ್ ಕಾರ್ಬೋಲಿಕ್ ಸೋಪ್ – 150 ಗ್ರಾಂ ಉತ್ಪಾದನಾ ಚಟುವಟಿಕೆ (ಪರಿವರ್ತನೆ)ಯನ್ನು ಹೊರಗುತ್ತಿಗೆ ನೀಡಲು ಉತ್ಪಾದಕರ ಆಯ್ಕೆ	ಸೇವೆಗಳು	06-06-2026	15-06-2026
12	KSDL/2026-27/IND1261	ಟಾಪ್ ಪ್ಲೇಟ್ ಮತ್ತು ಸೆಪರೇಟರ್‌ನೊಂದಿಗೆ ಕೊಕನಟ್ ಆಯಿಲ್ 150 ಎಂಎಲ್ ಕಾರೋಗೇಟೆಡ್ ಬಾಕ್ಸ್‌ನ ಖರೀದಿ.	18000 ಸಂ.	08-06-2026	22-06-2026
13	KSDL/2026-27/IND1262	ಸುಚಿ ಸಂಭ್ರಮ ಕಾಂಬಿ ಪ್ಯಾಕ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	14500 ಸಂ.	08-06-2026	22-06-2026
14	KSDL/2026-27/IND1263	ಸೆಪರೇಟರ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಕೊಕನಟ್ ಆಯಿಲ್ 100 ಎಂಎಲ್ ಕಾರೋಗೇಟೆಡ್ ಬಾಕ್ಸ್‌ನ ಖರೀದಿ.	22000 ಸಂ.	08-06-2026	22-06-2026

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,366
ಇಂದಿನ ಅಂತ್ಯ:	23,123
ದಿನದ ಕನಿಷ್ಠ:	23,070
	▼ 243

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹630
	12 ಕ್ಕೆ	₹86
ಮೈಸೂರು:	100 ಕ್ಕೆ	₹640

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹260.50
ಆರ್‌ಎಸ್‌ಎಸ್-5	₹253.50
ಗುಡ್ ಲಾಟ್	₹220

ರಾಮನಗರ ರೇಷ್ಮೆಗೂಡು (10 ಕೆ.ಜಿಗೆ)

ಮಿಶ್ರತಳಿ(ಸಿ.ಬಿ)	₹355-700
ದ್ವಿತಳಿ (ಬಿ.ವಿ)	₹398-822

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1610)
ಸೋಯಾ (ರಿಫೈನ್ಡ್)	₹1495 (1485)
ಸೂರ್ಯಕಾಂತಿ (ರಿಫೈನ್ಡ್)	₹1650 (1645)
ಪಾಮೋಲಿನ್	₹1470 (1480)

ಮುದ್ರೆಮನೆ ಕಾಫಿ (50 ಕೆ.ಜಿಗೆ)

ಎಪಿ	₹22500
ಎಸಿ	₹14000
ಆರ್‌ಪಿ	₹18050
ಆರ್‌ಸಿ	₹9525

ಮುಂಬೈ ಧಾರಣೆ (ಶೇಂಗಾ)

08-06-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಪಾಮ್ ವಾರದ ಡೆಲಿವರಿ	1468 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1555)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,400 (1,51,00)
ಬೆಳ್ಳಿ ಕೆ.ಜಿಗೆ	2,45,000 (2,46,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹32000-32000
ಚಳ್ಳಕೆರೆ	₹14500-14500
ತಿಪಟೂರು	₹29800-33326
ಬಂಟ್ವಾಳ	₹7000-8500
ಪುತ್ತೂರು	₹5000-14500

ಕಾಂಗ್ರೆಸ್ ಆರೋಪಿಸುತ್ತಿರುವಂತೆ ಬಿಜೆಪಿಯು ದೇವೇಗೌಡರಿಗೆ ರಾಜ್ಯಸಭೆ ಚುನಾವಣೆ ಟಿಕೆಟ್ ನೀಡದೆ ಅವಮಾನಿಸಿದೆಯೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸಾವಯವ ಗೊಬ್ಬರ ಖರೀದಿ ಹೆಚ್ಚಳ

11 ಲಕ್ಷ ಟನ್‌ಗೆ ಜಿಗಿದ ಸಾವಯವ ಗೊಬ್ಬರ ಖರೀದಿ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಪ್ರಸಕ್ತ ಮುಂಗಾರು ಹಂಗಾಮಿನ ಬಿತ್ತನೆ ಅವಧಿಯಲ್ಲಿ ದೇಶದ ರೈತರು 11.17 ಲಕ್ಷ ಟನ್‌ನಷ್ಟು ಸಾವಯವ ಗೊಬ್ಬರ ಖರೀದಿಸಿದ್ದಾರೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ 3.2 ಲಕ್ಷ ಟನ್‌ನಷ್ಟು ಸಾವಯವ ಗೊಬ್ಬರ ಖರೀದಿಸಿದ್ದರು. ಇದಕ್ಕೆ ಹೋಲಿಸಿದರೆ ಈ ಬಾರಿ ಖರೀದಿ ಪ್ರಮಾಣ ಮೂರೂವರೆ ಪಟ್ಟು ಹೆಚ್ಚಳವಾಗಿದೆ. ರೈತರು ರಾಸಾಯನಿಕ ಗೊಬ್ಬರದ ಬದಲು ಸಾವಯವ ಗೊಬ್ಬರ ಬಳಕೆಗೆ ಒತ್ತು ನೀಡುತ್ತಿರುವುದನ್ನು ಇದು ಸೂಚಿಸುತ್ತಿದೆ ಎಂದು ಹೇಳಿದೆ.

ದೇಶದಲ್ಲಿ ರಸಗೊಬ್ಬರ ದಾಸ್ತಾನು ಕೂಡ ಉತ್ತಮ ಮಟ್ಟದಲ್ಲಿ ಇದ್ದು, ಲಭ್ಯತೆಯಲ್ಲಿ ಸಮಸ್ಯೆ ಉಂಟಾಗಿಲ್ಲ ಎಂದು ಕೇಂದ್ರವು ಪುನರುಚ್ಚರಿಸಿದೆ. ರಸಗೊಬ್ಬರದ ಅಗತ್ಯಮಟ್ಟದ ಪೂರೈಕೆ ಖಚಿತಪಡಿಸಿಕೊಳ್ಳಲು ಕಾಲಕಾಲಕ್ಕೆ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- ಪ್ರಸ್ತುತ 45 ಕೆ.ಜಿ ತೂಕದ ಯೂರಿಯಾ ಚೀಲದ ದರ ₹242
- 50 ಕೆ.ಜಿಯ ಡೈ- ಅಮೋನಿಯಂ ಫಾಸ್ಫೇಟ್ ಚೀಲಕ್ಕೆ ₹1,350
- ರಸಗೊಬ್ಬರ ಸಬ್ಸಿಡಿಗೆ ₹1.71 ಲಕ್ಷ ಕೋಟಿ ಹಂಚಿಕೆ



ದೇಶದಲ್ಲಿ ರಸಗೊಬ್ಬರ ಲಭ್ಯತೆಯಲ್ಲಿ ಸಮಸ್ಯೆ ಉಂಟಾಗಿಲ್ಲ. ಸರ್ಕಾರವು ಎಲ್ಲ ಸಬ್ಸಿಡಿ ಬಿಲ್‌ಗಳನ್ನು ಬಜೆಟ್ ಅನುದಾನಕ್ಕೆ ಅನುಗುಣವಾಗಿ ಪಾವತಿಸುತ್ತಿದೆ

ಅಪರ್ಣಾ ಎಸ್. ಶರ್ಮಾ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ

‘ಪ್ರಸಕ್ತ ಮುಂಗಾರು ಅವಧಿಗೆ ದೇಶದಲ್ಲಿ 383.9 ಲಕ್ಷ ಟನ್ ರಸಗೊಬ್ಬರ ಅಗತ್ಯವಿದೆ ಎಂದು ಕೃಷಿ ಸಚಿವಾಲಯ ಮರು ಅಂದಾಜಿಸಿದೆ. ಈಗ ದೇಶದಲ್ಲಿ 197.56 ಲಕ್ಷ ಟನ್ ರಸಗೊಬ್ಬರ ದಾಸ್ತಾನು ಇದೆ. ಇದು ಒಟ್ಟು ಬೇಡಿಕೆಯ ಪೈಕಿ ಶೇ 51ಕ್ಕಿಂತ ಹೆಚ್ಚು’ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಅಪರ್ಣಾ ಎಸ್. ಶರ್ಮಾ ಹೇಳಿದ್ದಾರೆ.

ಮುಂಗಾರು ಹಂಗಾಮಿಗೆ 86.65 ಲಕ್ಷ ಟನ್ ರಸಗೊಬ್ಬರ ಖರೀದಿಯಾಗಿದ್ದು, ಇದು ಒಟ್ಟು ಅವಶ್ಯಕತೆಯ ಶೇ 22.57ರಷ್ಟಿದೆ. ದೇಶದಲ್ಲಿ ರಸಗೊಬ್ಬರ ಉತ್ಪಾದನೆ ಮತ್ತು ಆಮದು ಮುಂದುವರಿದಿದೆ. ಜೂನ್ ತಿಂಗಳಲ್ಲಿ ಇದುವರೆಗೆ 25 ಲಕ್ಷ ಟನ್‌ಗೂ ಅಧಿಕ ಯೂರಿಯಾ, ಡಿಎಪಿ ಮತ್ತು ಪಿಕೆಎಸ್ ಆಮದಾಗಿದ್ದು, ಅವು ಬಂದರುಗಳಲ್ಲಿವೆ. 17 ಲಕ್ಷ ಟನ್ ಯೂರಿಯಾ ಖರೀದಿ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಕಳೆದ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಒಟ್ಟು ರಸಗೊಬ್ಬರ ಅಗತ್ಯದ ಶೇ 73ರಷ್ಟನ್ನು ದೇಶೀಯ ಉತ್ಪಾದನೆಯ ಮೂಲಕವೇ ಪೂರೈಸಲಾಯಿತು. ಸ್ಥಳೀಯ ಬೇಡಿಕೆ ಪೂರೈಸಲು ಯೂರಿಯಾ ಮತ್ತು ಡೈ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಅನ್ನು ದೊಡ್ಡ ಮಟ್ಟದಲ್ಲಿ ಆಮದು ಮಾಡಿಕೊಳ್ಳಲಾಗುತ್ತದೆ.

2021ರಲ್ಲಿ ದೇಶದಲ್ಲಿ ಯೂರಿಯಾ, ಡಿಎಪಿ, ಎನ್‌ಪಿಕೆ, ಎಸ್‌ಎಸ್‌ಪಿ ಸೇರಿದಂತೆ ರಸಗೊಬ್ಬರ ಉತ್ಪಾದನೆಯು 433.29 ಲಕ್ಷ ಟನ್‌ನಷ್ಟಿತ್ತು. ಅದು ಕಳೆದ ವರ್ಷದ ವೇಳೆಗೆ 524.62 ಲಕ್ಷ ಟನ್‌ಗೆ ಹೆಚ್ಚಳವಾಗಿದೆ.

2014-15ರಲ್ಲಿ ಯೂರಿಯಾ ಉತ್ಪಾದನೆ 225 ಲಕ್ಷ ಟನ್‌ನಷ್ಟಿತ್ತು. ಅದು 2024-25ರ ವೇಳೆಗೆ 306.67 ಲಕ್ಷ ಟನ್‌ಗೆ ಹೆಚ್ಚಳವಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ 100 ಲಕ್ಷ ಟನ್‌ಗೂ ಅಧಿಕ ಯೂರಿಯಾವನ್ನು ಆಮದು ಮಾಡಿಕೊಳ್ಳಲಾಗಿದೆ ಎಂದು ಕೇಂದ್ರ ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಸಗೊಬ್ಬರ ಸಬ್ಸಿಡಿಗೆ ಕೇಂದ್ರವು ₹1.71 ಲಕ್ಷ ಕೋಟಿ ಹಂಚಿಕೆ ಮಾಡಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ದರಗಳು ಹೆಚ್ಚಾದಂತೆ ಆಮದು ವೆಚ್ಚ ಹೆಚ್ಚಾಗುವ ಸಾಧ್ಯತೆಯಿದೆ.

ಸುದ್ದಿ 2 ನಿಮಿಷ

ಮತ್ತೆ ಯುದ್ಧ, ನಿಲ್ಲದ ಕುಸಿತ

ನವದೆಹಲಿ/ಮುಂಬೈ (ಪಿಟಿಐ): ಕಚ್ಚಾ ತೈಲ ದರ ಏರಿಕೆ ಮತ್ತು ಪಶ್ಚಿಮ ಏಷ್ಯಾದಲ್ಲಿ ಮತ್ತೆ ತೀವ್ರಗೊಂಡ ಬಿಕ್ಕಟ್ಟಿನ ಕಾರಣದಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 719 ಅಂಶ ಇಳಿಕೆಯಾಗಿ, 73,524ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 243 ಅಂಶ ಕಡಿಮೆಯಾಗಿ, 23,123ಕ್ಕೆ ಕೊನೆಗೊಂಡಿದೆ.

ಷೇರುಪೇಟೆ ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ₹6.31 ಲಕ್ಷ ಕೋಟಿಯಷ್ಟು ಕರಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 4.10ರಷ್ಟು ಹೆಚ್ಚಳವಾಗಿದ್ದು, ಪ್ರತಿ ಬ್ಯಾರಲ್ ಬೆಲೆ 96.91 ಡಾಲರ್ ಆಗಿದೆ.

ಏಷ್ಯಾದ ಷೇರುಪೇಟೆಗಳಾದ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್‌ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಮುಂದುವರಿದಿದೆ. ಇದು ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಗೆ ಮತ್ತಷ್ಟು ಅಡಚಣೆ ಉಂಟು ಮಾಡಲಿದೆ ಎಂಬ ಆತಂಕ ಹೆಚ್ಚಿಸಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.



ವಿದೇಶಿ ಬಂಡವಾಳದ ಹೊರಹರಿವು ಮತ್ತು ಡಾಲರ್ ಎದುರು ರೂಪಾಯಿ ಮೌಲ್ಯದ ಇಳಿಕೆಯು ಹೂಡಿಕೆದಾರರ ಮೇಲೆ ಪರಿಣಾಮ ಬೀರಿವೆ. ತಂತ್ರಜ್ಞಾನ ಮತ್ತು ಸೆಮಿಕಂಡಕ್ಟರ್ ವಲಯದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ತಿಳಿಸಿದ್ದಾರೆ.

ಭಾರತದ ನಾವಿಕರಿದ್ದ ಹಡಗಿನಲ್ಲಿ ಬೆಂಕಿ

ನವದೆಹಲಿ: ಒಮಾನ್ ಕರಾವಳಿಯಲ್ಲಿ ಭಾರತದ 24 ನಾವಿಕರಿದ್ದ ತೈಲ ಟ್ಯಾಂಕರ್ ಮೇಲೆ ಸೋಮವಾರ ಶಂಕಿತ ಡ್ರೋನ್ ಅಥವಾ ಕ್ಷಿಪಣಿ ದಾಳಿ ನಡೆದ ಬೆನ್ನಲ್ಲೇ ಹಡಗಿನ ಎಂಜಿನ್ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಮಡಗಾಸ್ಕರ್ ಬಾವುಟ ಹೊಂದಿದ್ದ ಎಂ.ಟಿ ಮೆರಿವೆಕ್ಸ್ ಹಡಗು ಒಮಾನ್ ಕರಾವಳಿಯ ದುಖ್ಮ್ ಬಂದರಿನಿಂದ 15 ನಾಟಿಕಲ್ ಮೈಲಿ ದೂರದಲ್ಲಿದ್ದಾಗ ಘಟನೆ ನಡೆದಿದೆ.

‘ಟ್ಯಾಂಕರ್‌ನಲ್ಲಿ ಯಾವುದೇ ತೈಲ ಇರಲಿಲ್ಲ ಹಾಗೂ ಹೊರ್ಮುಜ್ ಜಲಸಂಧಿಯಿಂದ ಸಾಕಷ್ಟು ದೂರದಲ್ಲಿತ್ತು. ಎಲ್ಲ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ’ ಎಂದು ಜಲ ಸಾರಿಗೆ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

‘ಸಿಬ್ಬಂದಿ ಸುರಕ್ಷತೆ ಖಚಿತಪಡಿಸಲು ವಿದೇಶಾಂಗ ಸಚಿವಾಲಯ, ನೌಕಾಪಡೆ, ರಕ್ಷಣಾ ಇಲಾಖೆಯ ಜೊತೆ ಸಂವಹನ ನಡೆಸಿವೆ. ಹೆಚ್ಚಿನ ಮಾಹಿತಿ ಇನ್ನಷ್ಟೇ ಬರಬೇಕಿದೆ’ ಎಂದು ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯದ ನಿರ್ದೇಶಕ ಓಪೇಶ್ ಕುಮಾರ್ ಶರ್ಮಾ ತಿಳಿಸಿದ್ದಾರೆ.

ಘಟನೆಗೆ ನಿಖರವಾದ ಕಾರಣವನ್ನು ಅಧಿಕಾರಿಗಳು ಖಚಿತಪಡಿಸಿಲ್ಲ. ಆದರೆ ಇದು ಡ್ರೋನ್ ಅಥವಾ ಕ್ಷಿಪಣಿ ದಾಳಿಯಿಂದ ಉಂಟಾದ ಅವಘಡ ಎಂದು ಮೂಲಗಳು ವಿವರಿಸಿವೆ. ಹಡಗು ನಿಗಾ ದತ್ತಾಂಶಗಳ ಪ್ರಕಾರ, ಹಡಗು ಮಸ್ಕತ್‌ನ ದಕ್ಷಿಣ ಭಾಗದಲ್ಲಿ ಹಡಗುಕಟ್ಟೆಯಲ್ಲಿ ನಿಂತಿತ್ತು.

ಇರಾನ್‌ನ ಪೆಟ್ರೋಕೆಮಿಕಲ್ ಘಟಕಗಳ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿ ಹಾಗೂ ಅದಕ್ಕೆ ಕ್ಷಿಪಣಿಗಳ ಮೂಲಕ ಇರಾನ್ ಪ್ರತ್ಯುತ್ತರ ನೀಡುತ್ತಿರುವ ಸಂದರ್ಭದಲ್ಲೇ ಈ ಘಟನೆ ಸಂಭವಿಸಿದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಿಪ್ಪು	30999-34029	ರಾಶಿ	32099-61570	ಬೆಟ್ಟೆ	41299-48389
ಕೋಕ	18029-33019	ಸಿಪ್ಪೆಗೋಟು	8209-22219	ಬಿಳಿಗೋಟು	25009-35399
ಫ್ಯಾಕ್ಟರಿ	12069-25889	ಸರಕು	55219-79229	ಚಾಲಿ	43800-48299
ಹಳೆಚಾಲಿ	46099-47898	ಬೆಟ್ಟೆ	46109-58609	ಕೆಂಪುಗೋಟು	23299-36879
ಹೊಸಚಾಲಿ	41099-47609	ರಾಶಿ	44599-54029	ರಾಶಿ	50599-52909
ಪುತ್ತೂರು		ಗೊರಬಲು	38589-41111	**ಯಲ್ಲಾಪುರ**	
ಕೋಕ	20000-33500	**ಸಿದ್ದಾಪುರ**		ಆಪಿ	58899-58899
ಹೊಸತು	30000-47000	ಬಿಳಿಗೋಟು	26109-34109	ಬಿಳಿಗೋಟು	20000-35199
ಹಳತು	49000-55000	ಚಾಲಿ	40000-47839	ಚಾಲಿ	37599-48141
ಸಾಗರ		ಕೋಕ	23699-32699	ಕೋಕ	12909-29499
ಬಿಳಿಗೋಟು	19101-32299	ಕೆಂಪುಗೋಟು	33669-36000	ಕೆಂಪುಗೋಟು	18899-37199
ಚಾಲಿ	30499-42019	ರಾಶಿ	48699-52929	ರಾಶಿ	50299-55599
ಕೋಕ	12899-34199	ತಟ್ಟಿಬೆಟ್ಟೆ	38639-46899	ತಟ್ಟಿಬೆಟ್ಟೆ	38000-48769
ಕೆಂಪುಗೋಟು	20999-41099				

‘ಎಲ್‌ಐಸಿ ಕಚೇರಿಯೇ ಗೊತ್ತಿಲ್ಲ’

ರಾಜೇಶ್ ಎಕ್ಸ್‌ಪೋರ್ಟ್ಸ್‌ನ ಅಧ್ಯಕ್ಷ ರಾಜೇಶ್ ಮೆಹ್ತಾ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ವಿಚಾರಣೆ ಎದುರಿಸುತ್ತಿರುವ ರಾಜೇಶ್ ಎಕ್ಸ್‌ಪೋರ್ಟ್ಸ್ ಕಂಪನಿಯ ಷೇರುಗಳನ್ನು ಎಲ್‌ಐಸಿ 20 ವರ್ಷಗಳ ಅವಧಿಯಲ್ಲಿ ಖರೀದಿಸಿದೆ ಎಂದು ಕಂಪನಿಯ ಅಧ್ಯಕ್ಷ ರಾಜೇಶ್ ಮೆಹ್ತಾ ಹೇಳಿದ್ದಾರೆ.

ಕಂಪನಿಯು ಕಳೆದ ಕೆಲವು ವರ್ಷಗಳಿಂದ ಒಟ್ಟು ₹15 ಲಕ್ಷ ಕೋಟಿಯಷ್ಟು ತಪ್ಪು ಲೆಕ್ಕ ನೀಡಿದೆ ಎಂದು ಮಧ್ಯಂತರ ಆದೇಶದಲ್ಲಿ ಸೆಬಿ ಹೇಳಿದೆ.

ಕಂಪನಿಯಲ್ಲಿ ಹೂಡಿಕೆ ಮಾಡಲು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಕೈಗೊಂಡ ತೀರ್ಮಾನಕ್ಕೂ ತಮಗೂ ಸಂಬಂಧವಿಲ್ಲ ಎಂದು ಮೆಹ್ತಾ ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

‘ಎಲ್‌ಐಸಿ ನಮ್ಮ ಕಂಪನಿಯ ಷೇರುಗಳನ್ನು ನಿನ್ನೆ ಅಥವಾ ಕಳೆದ ವರ್ಷ ಖರೀದಿಸಿಲ್ಲ. ಖರೀದಿಯು ಬಹುಕಾಲದಿಂದ ಆಗಿದೆ. ಷೇರುಗಳನ್ನು ನಿಗಮವು ಮುಕ್ತ ಮಾರುಕಟ್ಟೆಯಿಂದ ಖರೀದಿಸಿದೆ’ ಎಂದು ಮೆಹ್ತಾ ಹೇಳಿದ್ದಾರೆ. ಕಂಪನಿಯಲ್ಲಿ ಎಲ್‌ಐಸಿಯ ಪಾಲು ಶೇ 10.80ರಷ್ಟು ಇದೆ.

ತಾವಾಗಲಿ ಕಂಪನಿಯ ಇತರ ಪ್ರವರ್ತಕರಾಗಲಿ ಎಲ್‌ಐಸಿಯ ತೀರ್ಮಾನದಲ್ಲಿ ಭಾಗಿಯಲ್ಲ ಎಂದು ಮೆಹ್ತಾ ಸ್ಪಷ್ಟಪಡಿಸಿದ್ದಾರೆ. ‘ಪ್ರವರ್ತಕರು ಯಾರೂ ತಮ್ಮ ಷೇರನ್ನು ಎಲ್‌ಐಸಿಗೆ ಮಾರಾಟ ಮಾಡಿಲ್ಲ. ಕಂಪನಿಯ ಷೇರುಗಳನ್ನು ಎಲ್‌ಐಸಿ ಖರೀದಿಸಿದಾಗ ಪ್ರವರ್ತಕರು ಯಾವುದೇ ಬಗೆಯಲ್ಲಿ ಲಾಭ ಮಾಡಿಕೊಂಡಿಲ್ಲ’ ಎಂದಿದ್ದಾರೆ.

‘ಎಲ್‌ಐಸಿ ಕಚೇರಿ ಎಲ್ಲಿದೆ ಎಂಬುದೂ ನಮಗೆ ಗೊತ್ತಿಲ್ಲ... ಮುಕ್ತ ಮಾರುಕಟ್ಟೆಯಲ್ಲಿ ಎಲ್‌ಐಸಿ ಷೇರು ಖರೀದಿಸಿದ್ದು, ಇದು ವಾಣಿಜ್ಯಕ ಅಂಶಗಳನ್ನು ಆಧರಿಸಿ ನಿಗಮವೇ ಕೈಗೊಂಡ ತೀರ್ಮಾನ’ ಎಂದು ಮೆಹ್ತಾ ತಿಳಿಸಿದ್ದಾರೆ.

25 ಲಕ್ಷ ವಾಹನ ಮಾರಾಟ: ಎಫ್‌ಎಡಿಎ

ನವದೆಹಲಿ (ಪಿಟಿಐ): ದೇಶದ ರಿಟೇಲ್ ಮಾರುಕಟ್ಟೆಯಲ್ಲಿ ಮೇ ತಿಂಗಳಿನಲ್ಲಿ 25.31 ಲಕ್ಷ ವಾಹನಗಳು ಮಾರಾಟವಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಸೋಮವಾರ ತಿಳಿಸಿದೆ.

ಕಳೆದ ವರ್ಷದ ಇದೇ ತಿಂಗಳಿನಲ್ಲಿ 23.10 ಲಕ್ಷ ವಾಹನಗಳು ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ವಾಹನಗಳ ಮಾರಾಟ ಶೇ 9.55ರಷ್ಟು ಹೆಚ್ಚಳವಾಗಿದೆ. ವಿದ್ಯುತ್ ಚಾಲಿತ ವಾಹನಗಳ ಮಾರಾಟವು ಇದೇ ಮೊದಲ ಬಾರಿಗೆ ಶೇ 11ಕ್ಕಿಂತ ಜಾಸ್ತಿ ಆಗಿದೆ ಎಂದು ತಿಳಿಸಿದೆ.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನಿಂದಾಗಿ ಇಂಧನ ದರ ಹೆಚ್ಚಳವಾಗಿದೆ. ಹೀಗಾಗಿ, ಹೆಚ್ಚು ಇಂಧನ ದಕ್ಷತೆ ಇರುವ ಮತ್ತು ಪರ್ಯಾಯ ಇಂಧನ ಬಳಸುವ ವಾಹನಗಳ ಬಗ್ಗೆ ಹೆಚ್ಚಿನ ಜನರು ಮಾಹಿತಿ ಪಡೆದಿದ್ದಾರೆ ಎಂದು ತಿಳಿಸಿದೆ.

ಕಳೆದ ವರ್ಷದ ಮೇ ತಿಂಗಳಿನಲ್ಲಿ 3.26 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟವಾಗಿದ್ದವು. ಇದು ಈ ಬಾರಿ 4.02 ಲಕ್ಷಕ್ಕೆ ಏರಿಕೆಯಾಗಿದ್ದು, ಶೇ 23ರಷ್ಟು ಹೆಚ್ಚಳವಾಗಿದೆ.

ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 7.52ರಷ್ಟು ಹೆಚ್ಚಳವಾಗಿ, 18.44 ಲಕ್ಷ ವಾಹನಗಳು ಮಾರಾಟವಾಗಿವೆ. ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ಮಾರಾಟದ ಪಾಲು ಶೇ 6.11ರಿಂದ ಶೇ 9.25ಕ್ಕೆ ಏರಿಕೆಯಾಗಿದೆ. ತ್ರಿಚಕ್ರ ವಾಹನಗಳು ಮಾರಾಟವು 1.07 ಲಕ್ಷದಿಂದ 1.11 ಲಕ್ಷಕ್ಕೆ ಹೆಚ್ಚಳವಾಗಿದೆ. ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ 5.29ರಷ್ಟು ಏರಿಕೆಯಾಗಿದ್ದು, 83,823 ಮಾರಾಟವಾಗಿವೆ ಎಂದು ತಿಳಿಸಿದೆ.

‘ಮೇ ತಿಂಗಳಿನಲ್ಲಿ ದೇಶದಲ್ಲಿ ಪ್ರಯಾಣಿಕ ವಾಹನ, ತ್ರಿಚಕ್ರ ವಾಹನ ಹಾಗೂ ಟ್ರ್ಯಾಕ್ಟರ್‌ಗಳ ಮಾರಾಟವು ಏರಿಕೆ ಕಂಡಿದೆ’ ಎಂದು ಒಕ್ಕೂಟದ ಅಧ್ಯಕ್ಷ ಸಿ.ಎಸ್. ವಿಘ್ನೇಶ್ವರ ಹೇಳಿದ್ದಾರೆ.

ಮದುವೆ ಋತು ಮತ್ತು ಜಿಎಸ್‌ಟಿ ಪರಿಷ್ಕರಣೆಯು ಕೂಡ ವಾಹನಗಳ ಮಾರಾಟ ಹೆಚ್ಚಳಕ್ಕೆ ಕಾರಣವಾದವು ಎಂದು ಡೀಲರ್‌ಗಳು ತಿಳಿಸಿದ್ದಾರೆ.

‘ಏಕಾಂಗಿ’ ಮಹಿಳೆಯರ ಸಂಖ್ಯೆ ಏರಿಕೆ

ದೇಶದಲ್ಲಿಯೇ ಕರ್ನಾಟಕಕ್ಕೆ ಮೂರನೇ ಸ್ಥಾನ: ಸಮೀಕ್ಷೆಯಲ್ಲಿ ಬಹಿರಂಗ

• ಶೆಮಿನ್ ಜಾಯ್


ನವದೆಹಲಿ: ಪತಿಯ ಸಾವು, ವಿಚ್ಛೇದನ ಮೊದಲಾದ ಕಾರಣಗಳಿಂದ ಹೆಚ್ಚಿನ ಮಹಿಳೆಯರು ಉಳಿದ ಜೀವನವನ್ನು ಏಕಾಂಗಿಯಾಗಿ ಬದುಕುವ ಪ್ರವೃತ್ತಿ ಭಾರತದಲ್ಲಿ ಹೆಚ್ಚುತ್ತಿದೆ. ತಮಿಳುನಾಡು, ಕೇರಳ ಹಾಗೂ ಕರ್ನಾಟಕದಲ್ಲಿಯೇ ಇಂತಹವರ ಸಂಖ್ಯೆ ಹೆಚ್ಚುತ್ತಿದ್ದು, ಮೊದಲ ಮೂರು ಸ್ಥಾನಗಳಲ್ಲಿ ಈ ರಾಜ್ಯಗಳ ಜನರಿದ್ದಾರೆ ಎಂದು ಇತ್ತೀಚೆಗಿನ ‘ಮಾದರಿ ನೋಂದಣಿ ಸಮೀಕ್ಷೆ’ಯಿಂದ (ಎಸ್‌ಆರ್‌ಎಸ್) ಗೊತ್ತಾಗಿದೆ.


ಎಸ್‌ಆರ್‌ಎಸ್ ಸಾಂಖ್ಯಿಕ ವರದಿ 2024ರ ಪ್ರಕಾರ, ತಮಿಳುನಾಡಿನಲ್ಲಿ ವಿಚ್ಛೇದಿತರಾದವರು ಅಥವಾ ವಿಧವೆಯರ ಸಂಖ್ಯೆ ಇಡೀ ದೇಶದಲ್ಲಿಯೇ ಗರಿಷ್ಠವಾಗಿದ್ದು, ಶೇಕಡ 11.6ರಷ್ಟಿದೆ. ನಂತರದ ಸ್ಥಾನದಲ್ಲಿ ಕೇರಳ (ಶೇ 10.4) ಹಾಗೂ ಕರ್ನಾಟಕ (ಶೇ 8.6) ಇವೆ.

ಬಾಲಕಿಯರ ಮದುವೆ ಹೆಚ್ಚಳ: ದೇಶದಲ್ಲಿ ಶೇಕಡ 2.1ರಷ್ಟು ಬಾಲಕಿಯರು ಕಾನೂನು ನಿಗದಿಪಡಿಸಿದ್ದಕ್ಕಿಂತ ವಯಸ್ಸಿಗಿಂತಲೂ ಮೊದಲೇ ಮದುವೆಯಾಗುತ್ತಿದ್ದಾರೆ.

ಉಳಿದಂತೆ 18ರಿಂದ 20ನೇ ವಯಸ್ಸಿಗೆ ಶೇಕಡ 24.5ರಷ್ಟು ತರುಣಿಯರು ವಿವಾಹ ಆಗುತ್ತಿದ್ದು, 21ರ ನಂತರ ವಿವಾಹವಾಗು-ತ್ತಿರುವವರ ಸಂಖ್ಯೆ ಶೇ 73.5ರಷ್ಟಿದೆ.

ಗ್ರಾಮೀಣ ಭಾಗದಲ್ಲಿ ಈ ಪ್ರಮಾಣವು ಕ್ರಮವಾಗಿ ಶೇ 2.4, ಶೇ 27.4 ಹಾಗೂ ಶೇ 70.2ರಷ್ಟಿದೆ.





ನಗರ ಭಾಗದಲ್ಲಿ ಶೇ 1.1, ಶೇ 16.6 ಹಾಗೂ ಶೇ 82.2ರಷ್ಟಿದೆ.

2024ರಲ್ಲಿ ದೇಶದಾದ್ಯಂತ ಯುವತಿಯರ ಮದುವೆಯ ಸರಾಸರಿ ವಯಸ್ಸು 23.1ರಷ್ಟಿದೆ. ಗ್ರಾಮೀಣ ಭಾಗದಲ್ಲಿ ಸರಾಸರಿ ವಯಸ್ಸು 22.6ರಷ್ಟಿದ್ದರೆ, ನಗರ ಭಾಗದಲ್ಲಿ 24.4ರಷ್ಟಿದೆ.

ಕರ್ನಾಟಕದಲ್ಲಿ ಯುವತಿಯರ ಮದುವೆಯ ಸರಾಸರಿ ವಯಸ್ಸು 24.8 ವರ್ಷ ಇದ್ದರೆ, ಕೇರಳದಲ್ಲಿ 25.1 ವರ್ಷ ಇದೆ.

ಆಧಾರ: ಎಸ್‌ಆರ್‌ಎಸ್ ಸಾಂಖ್ಯಿಕ ವರದಿ

‘ಭಾರತ–ಚೀನಾ ಎದುರಾಳಿಗಳಲ್ಲ, ಪಾಲುದಾರರು’

ಬೀಜಿಂಗ್ (ಪಿಟಿಐ): ‘ಭಾರತ ಮತ್ತು ಚೀನಾ ದೇಶಗಳು ತಾವು ಎದುರಾಳಿಗಳಲ್ಲ, ಪರಸ್ಪರ ಸಹಕಾರದ ಪಾಲುದಾರರು ಮತ್ತು ಪರಸ್ಪರರಿಗೆ ಒದಗುವ ಅವಕಾಶಗಳು ಅಭಿವೃದ್ಧಿಯೇ ಹೊರತು ಬೆದರಿಕೆಗಳಲ್ಲ ಎಂಬ ಸಮರ್ಪಕ ರಚನಾತ್ಮಕ ತಿಳಿವಳಿಕೆಗೆ ಬದ್ಧವಾಗಿ ನಿಲ್ಲಬೇಕು’ ಎಂದು ಚೀನಾದ ವಿದೇಶಾಂಗ ಇಲಾಖೆ ವಕ್ತಾರ ಲಿನ್ ಜಿಯಾನ್ ಸೋಮವಾರ ಹೇಳಿದ್ದಾರೆ.



ಲಿನ್ ಜಿಯಾನ್

ಭಾರತ–ಚೀನಾ ಸಂಬಂಧ ಸುಧಾರಣೆಯ ಕುರಿತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಗುರುವಾರ ಸಂದರ್ಶನವೊಂದ-ರಲ್ಲಿ ನೀಡಿದ್ದ ಹೇಳಿಕೆ ಕುರಿತಂತೆ ಲಿನ್ ಅವರು ಪತ್ರಕರ್ತರಿಗೆ ಪ್ರತಿಕ್ರಿಯಿಸಿದರು.

‘ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್ ಇಬ್ಬರೂ ಪರಸ್ಪರರ ಹಿತದೃಷ್ಟಿಯಿಂದ ಗಡಿ ಸೇರಿದಂತೆ ಎಲ್ಲ ವಿಚಾರಗಳನ್ನು ಬಗೆಹರಿಸಿಕೊಳ್ಳುತ್ತಿದ್ದಾರೆ’ ಎಂದು ಪುಟಿನ್ ಪ್ರಶಂಸಿಸಿದ್ದರು.

ಇರಾನ್–ಇಸ್ರೇಲ್ ಸಂಘರ್ಷ ಶಮನ

ಒಂದನೇ ಪುಟದಿಂದ...

‘ಇರಾನ್‌ನ ದಾಳಿಗಳಿಂದ ಯಾರಿಗೂ ಹಾನಿಯಾಗಿಲ್ಲ. ಇಸ್ರೇಲ್ ಪ್ರತೀಕಾರ ತೀರಿಸಿಕೊಳ್ಳುವುದಿಲ್ಲ ಎಂದು ಭಾವಿಸುತ್ತೇನೆ’ ಎಂದು ತಿಳಿಸಿದ್ದಾರೆ.

‘ಇಸ್ರೇಲ್ ಪ್ರತಿದಾಳಿ ಮಾಡಿದರೆ, ಅದು 47 ವರ್ಷಗಳು ಅಥವಾ ಹಿಂದಿನ 3 ಸಾವಿರ ವರ್ಷಗಳ ಸಂಘರ್ಷದಂತೆ ಮುಂದುವರಿಯುತ್ತಲೇ ಇರುತ್ತದೆ. ಅಮೆರಿಕ ಒಂದು ಒಪ್ಪಂದಕ್ಕೆ ಸನ್ನಿಹಿತವಾಗಿದೆ. ಆದರೆ, ಹೆಚ್ಚುತ್ತಿರುವ ಉದ್ವಿಗ್ನತೆಯು ಈ ಪ್ರಯತ್ನಕ್ಕೆ ಧಕ್ಕೆ ಉಂಟುಮಾಡಬಹುದು’ ಎಂದು ಎಚ್ಚರಿಕೆ ನೀಡಿದ್ದಾರೆ.

‘ಇಸ್ರೇಲ್, ಇರಾನ್ ಪರಸ್ಪರ ದಾಳಿ ನಡೆಸಿವೆ. ನಮಗೆ ಇನ್ನೊಂದು ದಾಳಿ ಬೇಕಾಗಿಲ್ಲ’ ಎಂದು ಹೇಳಿದ್ದಾರೆ.

‘ಇರಾನ್‌ನೊಂದಿಗೆ ಅಮೆರಿಕ ಮಾಡಿಕೊಳ್ಳುವ ಯಾವುದೇ ಒಪ್ಪಂದವನ್ನು ನೆತನ್ಯಾಹು ಒಪ್ಪಿಕೊಳ್ಳಬೇಕಾಗುತ್ತದೆ’ ಎಂದು ಟ್ರಂಪ್ ಅವರು ‘ಫೈನಾನ್ಷಿಯಲ್ ಟೈಮ್ಸ್’ಗೆ ತಿಳಿಸಿದ್ದಾರೆ.

ಬೈರೂತ್ ಮೇಲೆ ಇಸ್ರೇಲ್ ಭಾನುವಾರ ನಡೆಸಿದ ದಾಳಿಯನ್ನು ಟ್ರಂಪ್ ಟೀಕಿಸಿದ್ದಾರೆ. ‘ಇದರಿಂದ ನನಗೆ ಬೇಸರವಾಗಿದೆ’ ಎಂದು ಹೇಳಿದ್ದಾರೆ.

ರೂಪಾಯಿ ಮೌಲ್ಯ 43 ಪೈಸೆ ಇಳಿಕೆ

ಮುಂಬೈ / ನವದೆಹಲಿ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರದ ವಹಿವಾಟಿನಲ್ಲಿ 43 ಪೈಸೆ ಇಳಿಕೆಯಾಗಿದೆ. ವಹಿವಾಟಿನ ಅಂತ್ಯಕ್ಕೆ ರೂಪಾಯಿ ಮೌಲ್ಯ 95.61 ಆಗಿದೆ.

ಕಚ್ಚಾ ತೈಲ ದರ ಏರಿಕೆ ಮತ್ತು ಡಾಲರ್ ಮೌಲ್ಯ ಸದೃಢತೆಯಿಂದ ರೂಪಾಯಿ ಮೌಲ್ಯ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಚಿನ್ನ, ಬೆಳ್ಳಿ ದರ ಇಳಿಕೆ: ದೆಹಲಿಯ ಚಿನಿವಾರ ಪೇಟೆಯಲ್ಲಿ ಶೇ 99.9ರಷ್ಟು ಶುದ್ಧತೆಯ ಚಿನ್ನದ ದರವು 10 ಗ್ರಾಂಗೆ ₹1,100 ಕಡಿಮೆಯಾಗಿದ್ದು, ₹1,58,800ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹5 ಸಾವಿರ ಇಳಿಕೆಯಾಗಿ, ₹2,55,700 ಆಗಿದೆ.

ಲಯೋಸೆಲ್ ಘಟಕಕ್ಕೆ ₹3,094 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಿತ್ಯ ಬಿರ್ಲಾ ಸಮೂಹಕ್ಕೆ ಸೇರಿದ ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ದಾವಣಗೆರೆ ಜಿಲ್ಲೆಯ ಹರಿಹರದಲ್ಲಿನ ಲಯೋಸೆಲ್ ಉತ್ಪಾದನಾ ಘಟಕದಲ್ಲಿ ₹3,094 ಕೋಟಿ ಹೂಡಿಕೆ ಮಾಡಲು ತೀರ್ಮಾನಿಸಿದೆ.

ಘಟಕದ ವಿಸ್ತರಣೆಯು ಎರಡು ಹಂತಗಳಲ್ಲಿ ಆಗಲಿದೆ. ಮೊದಲ ಹಂತವು 2028ರಲ್ಲಿ, ಎರಡನೆಯ ಹಂತವು 2030ರಲ್ಲಿ ಕಾರ್ಯ ಆರಂಭಿಸುವ ನಿರೀಕ್ಷೆ ಇದೆ ಎಂದು ಸಮೂಹದ ಪ್ರಕಟಣೆ ತಿಳಿಸಿದೆ.

ಇಸ್ರೇಲ್ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಎಚ್ಚರಿಕೆ

ಇರಾನ್–ಇಸ್ರೇಲ್ ದಾಳಿ, ಪ್ರತಿದಾಳಿ

ದುಬೈ (ಎಪಿ): ಇಸ್ರೇಲ್ ಮೇಲೆ ಇರಾನ್ ಸೋಮವಾರ ಕ್ಷಿಪಣಿ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಪಶ್ಚಿಮ ಹಾಗೂ ಮಧ್ಯ ಇರಾನ್ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಸಂಬಂಧ ಏಪ್ರಿಲ್ 8ರಂದು ಕದನ ವಿರಾಮ ಏರ್ಪಟ್ಟ ನಂತರ, ಮೊದಲ ಬಾರಿಗೆ ದಾಳಿ–ಪ್ರತಿದಾಳಿ ನಡೆದಿವೆ.

ಇಸ್ಫಹಾನ್, ಕರಾಜ್, ತಬ್ರಿಜ್ ಮತ್ತು ಟೆಹರಾನ್‌ನಲ್ಲಿ ಸ್ಫೋಟಗಳ ಶಬ್ದ ಕೇಳಿಬಂದಿದೆ ಎಂದು ಇರಾನ್‌ನ ದೂರದರ್ಶನ ವರದಿ ಮಾಡಿದೆ. ಇಸ್ರೇಲ್ ದಾಳಿಯ ನಂತರ ಟೆಹರಾನ್‌ನ ಇಮಾಮ್ ಖೊಮೇನಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಲಿನ ವಾಯುಪ್ರದೇಶವನ್ನು ಇರಾನ್ ಮುಚ್ಚಿದೆ.

ಮಹಶಹರ್ ನಗರದ ಪೆಟ್ರೋಕೆಮಿಕಲ್ ಕಾರ್ಖಾನೆ, ಬ್ಯಾಲಿಸ್ಟಿಕ್ ಕ್ಷಿಪಣಿಗಳಿಗೆ ಅಗತ್ಯವಿರುವ ಉಪಕರಣಗಳನ್ನು ತಯಾರಿಸುವ ತಾಣ ಹಾಗೂ ಟ್ರಕ್ ಆಧಾರಿತ ಕ್ಷಿಪಣಿ ಉಡಾವಣಾ ಕೇಂದ್ರಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದೆ ಎಂದು ಇರಾನ್ ಹೇಳಿದೆ.

ಇರಾನ್ ನಡೆಸಿದ ಕ್ಷಿಪಣಿ ದಾಳಿಗೆ ಪ್ರತಿಯಾಗಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ದಕ್ಷಿಣ ಬೈರೂತ್‌ನ ಉಪನಗರಗಳ ಮೇಲೆ ಇಸ್ರೇಲ್ ದಾಳಿ ಮಾಡಿದ ನಂತರ, ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಭಾನುವಾರ ಎಚ್ಚರಿಸಿತ್ತು. ಇಸ್ರೇಲ್ ಪ್ರತಿದಾಳಿ ನಡೆಸಿದಾಗ, ಇರಾನ್ ಮತ್ತೆ ಕ್ಷಿಪಣಿ ಹಾರಿಸಿದೆ.

‘ಇಸ್ರೇಲ್‌ನಲ್ಲಿರುವ ಎರಡು ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ’ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ತಿಳಿಸಿದೆ.

ಹುಥಿ ಬಂಡುಕೋರರ ದಾಳಿ: ಇಸ್ರೇಲ್ ಮೇಲೆ ದಾಳಿ ನಡೆಸಿರುವುದಾಗಿ ಯೆಮೆನ್‌ನ ಇರಾನ್ ಬೆಂಬಲಿತ ಹುಥಿ ಬಂಡುಕೋರರು ಸೋಮವಾರ ತಿಳಿಸಿದ್ದಾರೆ.

ಕೆಂಪು ಸಮುದ್ರದಲ್ಲಿ ಇಸ್ರೇಲ್‌ಗೆ ಸೇರಿದ ಹಡಗುಗಳನ್ನು ಗುರಿಯಾಗಿಸಿ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಇದು ಕೆಂಪು ಸಮುದ್ರ ಜಲಮಾರ್ಗವನ್ನು ಮಾತ್ರವಲ್ಲದೆ, ಆಡೆನ್ ಕೊಲ್ಲಿ ಮತ್ತು ಅವುಗಳನ್ನು ಸಂಪರ್ಕಿಸುವ ಕಿರಿದಾದ ಬಾಬ್ ಎಲ್-ಮಾಂಡೆಬ್ ಜಲಸಂಧಿಯನ್ನು ಸಹ ಅಪಾಯಕ್ಕೆ ದೂಡಿದೆ.

ಗಾಜಾ ಪಟ್ಟಿಯಲ್ಲಿ ಇಸ್ರೇಲ್–ಹಮಾಸ್ ಯುದ್ಧದ ಸಮಯದಲ್ಲಿ ಹುಥಿಗಳು ಇದೇ ರೀತಿಯ ಬೆದರಿಕೆ ಹಾಕಿದ್ದರು. 100ಕ್ಕೂ ಹೆಚ್ಚು ದಾಳಿಗಳಲ್ಲಿ ಒಂಬತ್ತು ನಾವಿಕರನ್ನು ಹತ್ಯೆ ಮಾಡಿದ್ದರು. ನಾಲ್ಕು ಹಡಗುಗಳನ್ನು ಮುಳುಗಿಸಿದ್ದರು.



ದಕ್ಷಿಣ ಲೆಬನಾನ್‌ನ ನಗರವೊಂದರ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಿಂದ ಕಟ್ಟಡಗಳು ನೆಲಸಮವಾಗಿವೆ

—ಎಎಫ್‌ಪಿ ಚಿತ್ರ

ರಾಜತಾಂತ್ರಿಕತೆ, ರಕ್ಷಣೆ ಎಂಬುದು ರಾಷ್ಟ್ರೀಯ ಶಕ್ತಿಯ ಎರಡು ರೆಕ್ಕೆಗಳು. ನಾವು ಯುದ್ಧಭೂಮಿ, ಮಾತುಕತೆ ಎರಡನ್ನೂ ಬಿಟ್ಟಿಲ್ಲ. ಯಾವುದೇ ಬೆದರಿಕೆಯನ್ನು ಎದುರಿಸಲು ಹಿಂದೆ ಸರಿಯುವುದಿಲ್ಲ

ಮಸೌದ್ ಪೆಜೆಶ್ಕಿಯಾನ್, ಇರಾನ್ ಅಧ್ಯಕ್ಷ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಐದನೇ ವರ್ಷದ ಪುಣ್ಯ ಸ್ಮರಣೆ



ಕೆ.ಎಸ್. ಜಗದೀಶ್ ರೆಡ್ಡಿ
ಕಸವನಹಳ್ಳಿ


"ನೀವು ನಮ್ಮೊಂದಿಗೆ ಇಲ್ಲದಿದ್ದರೂ, ನಿಮ್ಮ ನೆನಪುಗಳು ಯಾವತ್ತೂ ನಮ್ಮೊಂದಿಗೆ ಇರುತ್ತವೆ."

ಇಂತಿ ದುಃಖತಪ್ತರು:
ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರು.

ಚಿರಸ್ಮರಣೆ



ದಿ|| ಕೆ. ಹಿರಣ್ಯಗೌಡರು
ಗಾಂಡ್ಲಹಳ್ಳಿ, ಶ್ರೀನಿವಾಸಪುರ ತಾ|| ಕೋಲಾರ ಜಿಲ್ಲೆ.
ಇಂದಿಗೆ ನೀವು ನಮ್ಮನ್ನಗಲಿ 19 ವರ್ಷಗಳಾದವು ನಿಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ ಎಂದು ಆಶಿಸುವ, ತಮ್ಮ ದುಃಖತಪ್ತ ಪತ್ನಿ ಚೌಡಮ್ಮ ಮತ್ತು ಮಕ್ಕಳು. ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು



ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಸೂರಜ್ ಎಂ. ಎನ್. ಹೆಗ್ಡೆ
ಎಐಸಿಸಿ ಕಾರ್ಯದರ್ಶಿ,
ತಮಿಳುನಾಡು ಮತ್ತು ಪುದುಚೇರಿಯ ಉಸ್ತುವಾರಿ,
ಮತ್ತು ರಾಜ್ಯ ಗ್ಯಾರಂಟಿ ಪ್ರಾಧಿಕಾರ ಉಪಾಧ್ಯಕ್ಷರು.

ದಿ.07.06.2026ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಇವರ ಅಂತ್ಯಕ್ರಿಯೆಯನ್ನು ದಿ.09.06.2026ರಂದು ಮಧ್ಯಾಹ್ನ 01:00 ಗಂಟೆಗೆ ಹೆಬ್ಬಾಳದ ಚಿತಾಗಾರದಲ್ಲಿ ನೆರವೇರಿಸಲಾಗುವುದು.

-: ದುಃಖತಪ್ತರು :-
ಕುಟುಂಬವರ್ಗದರು ಮತ್ತು ಬಂಧುಮಿತ್ರರು
ಮೊ: 9845379977

ಓಂ ಶಾಂತಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

ವ್ಯಾಪಾರ

Business to Business

Business

ಶೂನ್ಯದಿಂದ ಶೂನ್ಯದವರಿಗೆ. ನೊಂದವರ ಜನ ಸೇವಾ ಟ್ರಸ್ಟ್ (ರಿ) ಶೇಷಾದ್ರಿಪುರಂ ಬೆಂಗಳೂರು. ಗೋಲ್ಡ್ ಚಿಟ್ ಫಂಡ್ 1ಲಕ್ಷದಿಂದ - 5 ಲಕ್ಷ , 10ಲಕ್ಷದವರಿಗೆ ಮತ್ತು 1 ಲಕ್ಷದಿಂದ - 5 ಲಕ್ಷದವರಿಗೆ , ಸ್ವಂತ ಮನೆ, ಮತ್ತು ಬಿಸಿನೆಸ್, ಲೋನ್ ಕೂಡಲಾಗುವುದು. ಸಂಪರ್ಕಿಸಿ : 9036316959

ಭವಿಷ್ಯ

Astrology

ಕೆಲಸ ಆದ ನಂತರ ಹಣ ಸ್ತ್ರೀ ವಶೀಕರಣ, ಪುರುಷವಶೀಕರಣ, ಪ್ರೀತಿ ಪ್ರೇಮ ವಿಚಾರ ಇಷ್ಟಪಟ್ಟವರು ನಿಮ್ಮಂತೆಯಾಗಲು 7ಗಂಟೆಗಳಲ್ಲಿ ಪರಿಹಾರ ಸ್ತ್ರೀಯರಿಗೆ ವಿಶೇಷ ಪರಿಹಾರ 9972295444.

'ವಶೀಕರಣ ಸ್ಪೆಷಲಿಸ್ಟ್' ಸ್ತ್ರೀಪುರುಷ ಪ್ರೇಮಕಲಹ, ಪ್ರೀತಿಯಲ್ಲಿ ನಂಬಿಮೋಸ, ಪ್ರೇಮವಿಚಾರ, ಇಷ್ಟಪಟ್ಟ ಸ್ತ್ರೀಪುರುಷ ವಶೀಕರಣ, 11ಗಂಟೆಗಳಲ್ಲಿ ಗ್ಯಾರಂಟಿ ಪರಿಹಾರ. 9845304251

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತ ಯೋಗ ತಂಡಕ್ಕೆ ಸಮಗ್ರ ಪ್ರಶಸ್ತಿ

ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ ತೆರೆ; 102 ಚಿನ್ನದ ಪದಕ ಗೆದ್ದ ಆತಿಥೇಯರು

• ಬಾಲರಾಜ್ ಎಸ್.

ಡಬ್ಲ್ಯುವೈಸಿ 2026 ಪದಕ ಪಟ್ಟಿ

ರಾಷ್ಟ್ರ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	102	9	3	114
ಜಪಾನ್	3	3	5	11
ಅರ್ಜೆಂಟೀನಾ	2	3	0	5
ಸಿಂಗಪುರ	2	2	3	7
ನೇಪಾಳ	1	36	15	52
ಉಜ್ಬೇಕಿಸ್ತಾನ	1	13	11	25
ಜಾಂಬಿಯಾ	1	5	8	14
ಇಂಡೊನೇಷ್ಯಾ	1	2	4	7
ರಷ್ಯಾ	1	1	2	4
ಅಮೆರಿಕ	1	0	4	5

ಅಹಮದಾಬಾದ್: ಇತಿಹಾಸ ಪ್ರಸಿದ್ಧ ಕಾಂಕಡಿಯಾ ಕೆರೆಯ ತಟದಲ್ಲಿರುವ 'ಏಕ ಅರೇನಾ'ದಲ್ಲಿ ಐದು ದಿನ ನಡೆದ ಮೊತ್ತಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ (ಡಬ್ಲ್ಯುವೈಸಿ 2026) ಸೋಮವಾರ ತೆರೆಬಿತ್ತು. ಆತಿಥೇಯ ಭಾರತ ತಂಡವು ನಿರೀಕ್ಷೆಯಂತೆ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

79 ದೇಶಗಳ 500ಕ್ಕೂ ಅಧಿಕ ಯೋಗಪಟುಗಳು ಈ 'ಯೋಗಾಸನ ಸಂಭ್ರಮ'ದಲ್ಲಿ ಉತ್ಸಾಹದಿಂದ ಭಾಗಿಯಾದರು. ಜಗತ್ತಿಗೆ ಯೋಗದ ಮಹತ್ವ ಪರಿಚಯಿಸಿದ ಭಾರತವು 'ಸ್ವರ್ಣ ಶತಕ' (102) ಸಾಧಿಸಿತು. 9 ಬೆಳ್ಳಿ ಸೇರಿ 114 ಪದಕಗಳನ್ನು ಗೆದ್ದು ಪದಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿತು. ಜಪಾನ್ ತಲಾ 3 ಚಿನ್ನ, ಬೆಳ್ಳಿಯೊಂದಿಗೆ ರನ್ನರ್ಸ್‌ಅಪ್ ಆಯಿತು.

ಕಣಿವೆ ರಾಷ್ಟ್ರ ನೇಪಾಳ 1 ಸ್ವರ್ಣ, 36 ಬೆಳ್ಳಿ ಸೇರಿ 52 ಪದಕಗಳನ್ನು ಗೆದ್ದು ಗಮನ ಸೆಳೆಯಿತು. ಉಜ್ಬೇಕಿಸ್ತಾನದ ಸ್ಪರ್ಧಿಗಳು 1 ಚಿನ್ನ, 13 ಬೆಳ್ಳಿ ಹಾಗೂ 11 ಕಂಚಿನ ಪದಕಗಳನ್ನು ಜಯಿಸಿದರು.

ಭಾರತದ ಪ್ರಾಚೀನ ಪರಂಪರೆಯ ಭಾಗವಾಗಿದ್ದ ಯೋಗಾಸನ, ಜಾಗತಿಕ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆಯಾಗಿ ರೂಪುಗೊಳ್ಳುತ್ತಿರುವುದಕ್ಕೆ ಈ ಚಾಂಪಿಯನ್‌ಷಿಪ್ ಸಾಕ್ಷಿಯಾಯಿತು. ಒಲಿಂಪಿಕ್ ಆಂದೋಲನದ ಭಾಗವಾಗಿಸುವ ಪ್ರಯತ್ನಕ್ಕೆ ಬಲ, ಹುಮ್ಮಸ್ಸು ತುಂಬಿತು.

ಸಾಂಪ್ರದಾಯಿಕ ಯೋಗಾಸನ (ವೈಯಕ್ತಿಕ), ಫಾರ್ವರ್ಡ್ ಬೆಂಡಿಂಗ್, ಬ್ಯಾಕ್ ಬೆಂಡಿಂಗ್, ಕಾಲುಗಳ ಸಮತೋಲನ (ಲೆಗ್ ಬ್ಯಾಲೆನ್ಸ್), ಕೈಗಳ ಸಮತೋಲನ (ಹ್ಯಾಂಡ್ ಬ್ಯಾಲೆನ್ಸ್), ಟ್ವಿಸ್ಟಿಂಗ್ ಬಾಡಿ, ಸುಪೈನ್, ಕಲಾತ್ಮಕ (ವೈಯಕ್ತಿಕ), ಕಲಾತ್ಮಕ (ಡಬಲ್ಸ್), ಕಲಾತ್ಮಕ (ಗುಂಪು), ಲಯಬದ್ಧ ಯೋಗಾಸನ (ಡಬಲ್ಸ್) ಹಾಗೂ ಸಾಂಪ್ರದಾಯಿಕ ಯೋಗಾಸನ (ಗುಂಪು) ಸ್ಪರ್ಧೆಗಳು ಇದ್ದವು. ಫಲಿತಾಂಶದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಎಲೆಕ್ಟ್ರಾನಿಕ್ ಸ್ಕೋರಿಂಗ್ ವ್ಯವಸ್ಥೆ ಪರಿಚಯಿಸಲಾಗಿತ್ತು.

ಸಮಾರೋಪ ಸಮಾರಂಭದಲ್ಲಿ ವರ್ಚುವಲ್ ಆಗಿ ಮಾತನಾಡಿದ ಯೋಗ ಗುರು ಬಾಬಾ ರಾಮದೇವ್, 'ಈ ಚಾಂಪಿಯನ್‌ಷಿಪ್‌ನೊಂದಿಗೆ ಯೋಗಾಸನದ ಜಾಗತಿಕ ಅಭಿಯಾನ ಆರಂಭವಾಗಿದೆ. ಇಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರೂ ಯೋಗಾಸನದ ರಾಯಭಾರಿಯಾಗಿದ್ದಾರೆ' ಎಂದರು.

ಭಾರತದ ಪ್ರಾಬಲ್ಯ: ಭಾರತದ ಯೋಗಪಟುಗಳು ಅಂತಿಮದಿನವೂ ಪದಕಬೇಟೆ ಮುಂದುವರಿಸಿದರು. 'ಯೋಗಾಸನ ಲೋಕ'ದಲ್ಲಿ ಅಂಬೆಗಾಲು ಇಡುತ್ತಿರುವ ಜಪಾನ್, ಅರ್ಜೆಂಟೀನಾ, ಸಿಂಗಪುರದ ಸ್ಪರ್ಧಿಗಳೂ ಪೈಪೋಟಿ ನೀಡಿದರು. ಸೀನಿಯರ್ ಮಹಿಳೆಯರ 'ಹ್ಯಾಂಡ್ ಬ್ಯಾಲೆನ್ಸ್' ಸ್ಪರ್ಧೆಯಲ್ಲಿ ಶಿಲ್ಪಾ ದಾಸ್ 45.79 ಸ್ಕೋರ್‌ನೊಡನೆ ಭಾರತಕ್ಕೆ ಚಿನ್ನ ಗೆದ್ದುಕೊಟ್ಟರು. ಕಜಾಕಸ್ತಾನದ ಐಝುನ್ ಕುವಾನಿಶ್‌ಬಯೇವಾ (39.69) ಹಾಗೂ ನೇಪಾಳದ ಚಡ್ಯನ್ ಪಾರಿಯರ್ (35.05) ಕ್ರಮವಾಗಿ ರಜತ ಹಾಗೂ ಕಂಚು ಜಯಿಸಿದರು.

'ಟ್ವಿಸ್ಟಿಂಗ್ ಬಾಡಿ' ಸ್ಪರ್ಧೆಯ ಸೀನಿಯರ್ ಪುರುಷರ ವಿಭಾಗದಲ್ಲಿ ಶುಭಜೀತ್ ಕರ್ಮಾಕರ್ (45.42) ಹಾಗೂ ಸೀನಿಯರ್ ಮಹಿಳೆಯರ ವಿಭಾಗದಲ್ಲಿ ಮಧುವರ್ಮಾ (44.08) ಸ್ವರ್ಣಕ್ಕೆ ಕೊರಳೊಡ್ಡಿದರು. ಸೀನಿಯರ್ ಮಹಿಳೆಯರ 'ಸುಪೈನ್' ಸ್ಪರ್ಧೆಯಲ್ಲಿ ರಿಯಾ ಚಿನ್ನಕ್ಕೆ ಮುತ್ತಿಟ್ಟರು.



ಸಮಗ್ರ ಪ್ರಶಸ್ತಿ ಗೆದ್ದ ಭಾರತದ ಯೋಗಪಟುಗಳು ಮತ್ತು ಕೋಚ್ ಸಿಬ್ಬಂದಿ ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಸಾಯ್ ಚಿತ್ರ

ವಿರಾಟ್ ಅಭಿಮಾನಿ ನಬಿಲಾಗೆ ಪಂಚ ಪದಕ

ಅರ್ಜೆಂಟೀನಾದ ನಬಿಲಾ ಸೋಲ್ ಬರಾಝಾ ಅವರು ಎರಡು ಚಿನ್ನ ಹಾಗೂ ಮೂರು ಬೆಳ್ಳಿ ಸೇರಿ ಐದು ಪದಕಗಳನ್ನು ಗೆದ್ದು ಅಮೋಘ ಸಾಧನೆ ಮೆರೆದರು. ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದ ಅರ್ಜೆಂಟೀನಾದ ಏಕೈಕ ಯೋಗಪಟುವಾಗಿದ್ದ ಅವರು, ತಮ್ಮ ದೇಶವು ಪದಕಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆಯಲು ಕಾರಣರಾದರು.

ತಾರಾ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರ ಹುಟ್ಟೂರು ರೊಸಾರಿಯೊ ಸಮೀಪದ ಹಳ್ಳಿಯೊಂದರಲ್ಲಿ ಜನಿಸಿದ ನಬಿಲಾ, ಯೋಗ ಕಲಿಯಲಿಕ್ಕಾಗಿಯೇ ಐದು ವರ್ಷಗಳ ಹಿಂದೆ ರಿಷಿಕೇಶಕ್ಕೆ ಬಂದಿದ್ದರು. ಸದ್ಯ ಕೊಲಂಬಿಯಾದಲ್ಲಿ 'ಯೋಗ ಗುರು'ವಾಗಿ ಬದುಕು ಕಟ್ಟಿಕೊಂಡಿರುವುದಾಗಿ ಹೇಳಿದರು. ತಾವು ವಿರಾಟ್ ಕೊಹ್ಲಿ ಅವರ ಅಭಿಮಾನಿ ಎಂದೂ ಹೇಳಿಕೊಂಡರು.

30 ವರ್ಷ ವಯಸ್ಸಿನ ನಬಿಲಾ 'ಟ್ವಿಸ್ಟಿಂಗ್ ಬಾಡಿ' ಹಾಗೂ 'ಬ್ಯಾಕ್‌ಬೆಂಡಿಂಗ್' ಸ್ಪರ್ಧೆಗಳಲ್ಲಿ ಸ್ವರ್ಣ ತಮ್ಮದಾಗಿಸಿಕೊಂಡರು.

'ಈ ಬಾರಿ ಅರ್ಜೆಂಟೀನಾದ ಏಕೈಕ ಪ್ರತಿನಿಧಿಯಾಗಿ ಭಾಗವಹಿಸಿದ್ದೇನೆ. ಭವಿಷ್ಯದಲ್ಲಿ ನನ್ನೊಂದಿಗೆ ಹಲವರು ಕೂಡಿಕೊಳ್ಳುವ ವಿಶ್ವಾಸವಿದೆ' ಎಂದರು.

ಗ್ರ್ಯಾಂಡ್‌ಮಾಸ್ಟರ್ ಜೊತೆ ಆಡಿದ ಚೀಫ್ ಮಿನಿಸ್ಟರ್

ಪ್ರಜ್ಞಾನಂದಗೆ ₹50 ಲಕ್ಷ ಬಹುಮಾನ


ಚೆನ್ನೈ (ಪಿಟಿಐ): ಓಸ್ಲೊದಲ್ಲಿ ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿ ಗೆದ್ದುಕೊಂಡ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರನ್ನು ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಸೋಮವಾರ ಸಚಿವಾಲಯದಲ್ಲಿ ನಡೆದ ಸಮಾರಂಭದಲ್ಲಿ ₹50 ಲಕ್ಷ ಬಹುಮಾನ ನೀಡಿ ಗೌರವಿಸಿದರು.

ಮುಖ್ಯಮಂತ್ರಿ ವಿಜಯ್ ಅವರು ಸಚಿವಾಲಯದ ತಮ್ಮ ಕಚೇರಿಯಲ್ಲಿ 20 ವರ್ಷ ವಯಸ್ಸಿನ ಗ್ರ್ಯಾಂಡ್‌ಮಾಸ್ಟರ್ ಜೊತೆ ಒಂದು ಆಟವನ್ನೂ ಆಡಿದರು. ಆಟದಲ್ಲಿ ಸಂಪೂರ್ಣ ಮಗ್ನರಾಗಿದ್ದ ಮುಖ್ಯಮಂತ್ರಿ ಬೇಗನೇ 'ಚೆಕ್‌ಮೇಟ್'ಗೆ ಒಳಗಾದರು. ಮುಖ್ಯಮಂತ್ರಿ ಅವರು ತಮ್ಮತ್ತ ನೋಡಿದ ಪ್ರಜ್ಞಾನಂದ ಕಡೆ ಮುಗುಳ್ನಕ್ಕು ಮೆಚ್ಚುಗೆ ವ್ಯಕ್ತಪಡಿಸಿದರು. ಕ್ರೀಡಾಭಿವೃದ್ಧಿ ಸಚಿವ ಆಧವ್ ಅರ್ಜುನ್ ಅವರೂ ಕುತೂಹಲದಿಂದ 'ಪಂದ್ಯ' ವೀಕ್ಷಿಸಿದರು.

ಪ್ರಜ್ಞಾನಂದ ಅವರು ನಾರ್ವೆ ಟೂರ್ನಿ ಗೆದ್ದ ಭಾರತದ ಮೊದಲ ಆಟಗಾರ ಎನಿಸಿದ್ದರು. ವಿಜಯ್ ಅವರು ಪ್ರಜ್ಞಾನಂದ ಮತ್ತು ಅವರ ಪೋಷಕರನ್ನು ಭೇಟಿಯಾದ ವಿಡಿಯೊವನ್ನು ತಮಿಳುನಾಡು ಸರ್ಕಾರ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ.

'ಮುಖ್ಯಮಂತ್ರಿ ಚೆಸ್ ಆಡುತ್ತಾರೆಂದು ನಾನು ನಿರೀಕ್ಷಿಸಿರಲಿಲ್ಲ. ಅವರು ಚೆನ್ನಾಗಿ ಆಡಿದರು. ಸುಮಾರು 15 ನಿಮಿಷ ಆಡಿದ ನಂತರ ನಾನು ಗೆದ್ದೆ' ಎಂದು ಪ್ರಜ್ಞಾನಂದ ಮಾಧ್ಯಮದವರಿಗೆ ತಿಳಿಸಿದರು. ಚೆಸ್ ಬೋರ್ಡ್ ತರುವಂತೆ ಮತ್ತು ತಮ್ಮ ಜೊತೆ ಪಂದ್ಯ ಆಡಲಾಗುವುದೆಂದು ಮೊದಲೇ ತಮಗೆ ತಿಳಿಸಲಾಗಿತ್ತು ಎಂದರು.

'ನಾರ್ವೆ ಟೂರ್ನಿಯ ಯಶಸ್ಸು ತಮ್ಮ ಚೆಸ್ ಬದುಕಿನ ಅತಿ ದೊಡ್ಡ ಸಾಧನೆ' ಎಂದು ಪ್ರಜ್ಞಾನಂದ ಬಣ್ಣಿಸಿದ್ದಾರೆ. ಈ ಟೂರ್ನಿಯಲ್ಲಿ ವಿಶ್ವದ ಅತಿ ಪ್ರಬಲ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರೂ ಆಡಿದ್ದರು. ಅವರನ್ನು ಅವರ ತವರಿನಲ್ಲೇ ಪ್ರಜ್ಞಾನಂದ ಅವರು ಎರಡು ಸಲ ಸೋಲಿಸಿದ್ದು ಗಮನ ಸೆಳೆದಿತ್ತು.



ನಾರ್ವೆ ಚೆಸ್ ಟೂರ್ನಿ ಪ್ರಶಸ್ತಿ ಗೆದ್ದ ಆರ್.ಪ್ರಜ್ಞಾನಂದ ಅವರಿಗೆ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರು ₹50 ಲಕ್ಷ ಬಹುಮಾನದ ಚೆಕ್ ನೀಡಿ ಗೌರವಿಸಿದರು ಎಕ್ಸ್ ಚಿತ್ರ

ಚಾಂಪಿಯನ್ನರಿಗೆ ಗೌರವ

ಎಕ್ಸ್ ಚಿತ್ರ


ಜಪಾನ್‌ನಲ್ಲಿ ಈಚೆಗೆ ನಡೆದ 18 ವರ್ಷದೊಳಗಿನವರ ಏಷ್ಯಾ ಕಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತ ಪುರುಷರ ಹಾಕಿ ತಂಡವನ್ನು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಸೋಮವಾರ ನವದೆಹಲಿಯ ಸಾಯ್ ಪ್ರಧಾನ ಕಚೇರಿಯಲ್ಲಿ ಸನ್ಮಾನಿಸಿದರು. ಇದೇ ವೇಳೆ ತಂಡಕ್ಕೆ ₹ 61.5 ಲಕ್ಷದ ಬಹುಮಾನದ ಚೆಕ್ ಹಸ್ತಾಂತರಿಸಿದರು

ಆರ್ಚರಿ ವಿಶ್ವಕಪ್ ಟೂರ್ನಿ ಇಂದಿನಿಂದ

ಅಂತಾಲ್ಯ (ಟರ್ಕಿ), (ಪಿಟಿಐ): ಜಪಾನ್‌ನ ಏಷ್ಯನ್ ಕ್ರೀಡಾಕೂಟಕ್ಕೆ ಹೊಸಮುಖಗಳಿರುವ ತಂಡದೊಡನೆ ಕಣಕ್ಕಿಳಿಯಲಿರುವ ಭಾರತ ತಂಡವು ತನ್ನ ಸಿದ್ಧತೆಯನ್ನು ಮಂಗಳವಾರ ಇಲ್ಲಿ ಆರಂಭವಾಗಲಿರುವ ಆರ್ಚರಿ ವಿಶ್ವಕಪ್ (ಸ್ಟೇಜ್ 3) ಟೂರ್ನಿಯೊಡನೆ ಆರಂಭಿಸಲಿದೆ.

ಶಾಂಘೈನಲ್ಲಿ ಒಂದು ತಿಂಗಳ ಹಿಂದೆ ನಡೆದ ವಿಶ್ವಕಪ್‌ನ ಮಹಿಳೆಯರ ರಿಕರ್ವ್ ವಿಭಾಗದಲ್ಲಿ ಭಾರತ ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅನುಭವಿ ಆರ್ಚರ್ ದೀಪಿಕಾ ಕುಮಾರಿ ಅವರನ್ನು ಕೈಬಿಟ್ಟಿರುವುದು ಚರ್ಚೆಯ ವಿಷಯವಾಗಿದೆ. ತಂಡವು ಶಾಂಘೈನಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ ಒಲಿಂಪಿಕ್ ಚಾಂಪಿಯನ್ ದಕ್ಷಿಣ ಕೊರಿಯಾ, ಆತಿಥೇಯ ಚೀನಾ ತಂಡಕ್ಕೆ ಆಘಾತ ನೀಡಿತ್ತು.

ಶಾಂಘೈ ವಿಶ್ವಕಪ್ ನಂತರ ಭಾರತ ಆರ್ಚರಿ ಸಂಸ್ಥೆಯು (ಎಎಐ) ವಿಶ್ವಕಪ್ ಸ್ಟೇಜ್ 3 ಮತ್ತು ಸ್ಟೇಜ್ 4 ಟೂರ್ನಿಗಳ ಜೊತೆಗೆ ಏಷ್ಯನ್ ಗೇಮ್ಸ್‌ಗೆ ತಂಡ ಆರಿಸಲು ಆಯ್ಕೆ ಟ್ರಯಲ್ಸ್ ನಡೆಸಿತ್ತು. ಅಚ್ಚರಿ ಎಂಬಂತೆ ಟ್ರಯಲ್ಸ್‌ನಲ್ಲಿ ದೀಪಿಕಾ, ಅವರ ಪತಿ ಹಾಗೂ ಒಲಿಂಪಿಯನ್ ಅತನು ದಾಸ್, ಹಾಲಿ ಏಷ್ಯನ್ ಗೇಮ್ಸ್ ಕಾಂಪೌಂಡ್ ವಿಭಾಗದ ಚಾಂಪಿಯನ್ ಓಜಸ್ ದೇವತಳೆ ಅವರು ಮೊದಲ ಮೂರರಲ್ಲಿ ಸ್ಥಾನ ಪಡೆಯಲು ವಿಫಲರಾಗಿದ್ದರು. ಪ್ರತಿಯೊಂದು ವಿಭಾಗದಲ್ಲಿ ಮೂವರು ಬಿಲ್ಗಾರರು/ ಬಿಲ್ಗಾರ್ತಿಯರಿಗೆ ಮಾತ್ರ ಅವಕಾಶವಿದೆ.

ತಂಡದ ನಾಲ್ಕನೇ ಸದಸ್ಯರಾಗಿ ಈ ಅನುಭವಿಗಳು ತಂಡದಲ್ಲಿದ್ದರೂ ಅವರು ತಂಡ ವಿಭಾಗದಲ್ಲಿ ಪಾಲ್ಗೊಳ್ಳಲು ಅನರ್ಹರಾಗಿದ್ದಾರೆ. ಈ ಮೊದಲು ಮಹತ್ವದ ನಿರ್ಧಾರವೊಂದರಲ್ಲಿ ನಾಲ್ಕನೇ ರ್‍ಯಾಂಕ್ ಪಡೆಯುವ ಸ್ಪರ್ಧಿಯನ್ನು ವಿಶ್ವಕಪ್ ಋತುವಿಗೆ ತಂಡ ವಿಭಾಗದ ಸ್ಪರ್ಧೆಗಳಲ್ಲಿ ಅವಕಾಶ ನೀಡದಿರಲು ಎಎಐ ನಿರ್ಧರಿಸಿತ್ತು. ಆದರೆ ಅವರು ವೈಯಕ್ತಿಕ ವಿಭಾಗದಲ್ಲಿ ಕಣಕ್ಕಿಳಿಯಲು ಅವಕಾಶ ನೀಡಿದೆ. ಇದು ದೀಪಿಕಾ ಅವರಿಗೆ ಹಿನ್ನಡೆಯಾಗಿದೆ.

ಹೀಗಾಗಿ ವಿಶ್ವಕಪ್ ಸ್ಟೇಜ್3 ಟೂರ್ನಿಯಲ್ಲಿ ಹೊಸಬರ ನಿರ್ವಹಣೆ ಮೇಲೆ ಕುತೂಹಲವಿದೆ. 19 ವರ್ಷದ ಕೀರ್ತಿ ಶರ್ಮಾ ಅವರು ಟ್ರಯಲ್ಸ್‌ನಲ್ಲಿ ಅಗ್ರಸ್ಥಾನ ಪಡೆದಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸವಾಲು ಎದುರಿಸುತ್ತಿದ್ದಾರೆ.

ಮಹಿಳೆಯರ ರಿಕರ್ವ್ ತಂಡದ ಮೇಲೆಯೂ ಭರವಸೆಯಿಡಲಾಗಿದೆ. ಪುರುಷರ ತಂಡ ಅನುಭವಿ– ಪ್ರತಿಭಾನ್ವಿತರಿಂದ ಕೂಡಿದೆ. ಒಲಿಂಪಿಯನ್ ಧೀರಜ್ ಬೊಮ್ಮದೇವರ, ನೀರಜ್ ಚೌಹಾನ್, ಯಶದೀಪ್ ಭೋಗೆ ಈ ತಂಡದಲ್ಲಿದ್ದಾರೆ.

ಕುಸ್ತಿ: ಭಾರತಕ್ಕೆ 17 ಪದಕ

ಉಲಾನ್‌ಬಾತರ್ (ಪಿಟಿಐ): ದೀಪಕ್, ಸಾಗರ್ ಜಗ್ಲಾನ್ ಮತ್ತು ದಿನೇಶ್ ಅವರು ಉಲಾನ್‌ಬತಾರ್‌ನಲ್ಲಿ ನಡೆದ ಓಪನ್ ರ್‍ಯಾಂಕಿಂಗ್ ಕುಸ್ತಿ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಸೋಮವಾರ ಚಿನ್ನದ ಪದಕ ಗೆದ್ದುಕೊಂಡರು. ಭಾರತ ಒಟ್ಟು 17 ಪದಕಗಳೊಂದಿಗೆ ಅಭಿಯಾನವನ್ನು ಯಶಸ್ವಿಯಾಗಿ ಮುಗಿಸಿತು.

ಪುರುಷರ ಫ್ರೀಸ್ಟೈಲ್ 61 ಕೆ.ಜಿ ವಿಭಾಗದ ಫೈನಲ್‌ನಲ್ಲಿ ದೀಪಕ್ 6-0 ಅಂತರದಿಂದ ಕಜಾಕಸ್ತಾನದ ಅಸಿಲ್ ಐತಾಕಿನ್ ವಿರುದ್ಧ ಗೆಲುವು ಸಾಧಿಸಿದರು. 125 ಕೆ.ಜಿ ವಿಭಾಗದ ಫೈನಲ್‌ನಲ್ಲಿ ದಿನೇಶ್ 2–0 ಅಂತರದಿಂದ ಕಜಾಕಸ್ತಾನದ ಯೆಡಿಗೆ ಕಾಸಿಂಬೆಕ್ ಅವರನ್ನು ಸೋಲಿಸಿದರು. 74 ಕೆಜಿ ವಿಭಾಗದ ಚಿನ್ನದ ಪದಕ ಸುತ್ತಿನಲ್ಲಿ ಸಾಗರ್ 3–2ರಿಂದ ರಷ್ಯಾದ ತಮೀರ್ ಎಶಿನಿಮೇವ್ ಅವರನ್ನು ಕಠಿಣ ಹೋರಾಟದಲ್ಲಿ ಮಣಿಸಿದರು.

ಫ್ರೀಸ್ಟೈಲ್ ಕುಸ್ತಿಪಟುಗಳಾದ ಸುಮಿತ್ (57 ಕೆ.ಜಿ), ಕುಮಾರ್ ಮೋಹಿತ್ (65 ಕೆ.ಜಿ), ಜೈದೀಪ್ (74 ಕೆ.ಜಿ) ಮತ್ತು ವಿಕಿ (97 ಕೆ.ಜಿ) ನಾಲ್ಕು ಕಂಚಿನ ಪದಕಗಳನ್ನು ಗೆದ್ದರು. ಒಟ್ಟಾರೆ ರಷ್ಯಾ ಸಮಗ್ರ ಪ್ರಶಸ್ತಿ ಗೆದ್ದರೆ, ಭಾರತ ರನ್ನರ್ಸ್ ಅಪ್ ಆಯಿತು.

ಭಾರತದ ಗ್ರೀಕೊ-ರೋಮನ್ ಕುಸ್ತಿಪಟುಗಳಾದ ಸುನಿಲ್ (87 ಕೆ.ಜಿ) ಮತ್ತು ನಿತೇಶ್ (97 ಕೆ.ಜಿ) ಚಿನ್ನದ ಸಾಧನೆ ಮಾಡಿದ್ದರು. ಸಾಹಿಲ್ 60 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಮಹಿಳಾ ತಂಡವು ಭಾರತಕ್ಕೆ ಏಳು ಪದಕಗಳನ್ನು ತಂದುಕೊಟ್ಟಿತು. ಮನೀಷಾ (57 ಕೆ.ಜಿ), ನೇಹಾ (59 ಕೆ.ಜಿ) ಮತ್ತು ಕಾಜಲ್ (76 ಕೆ.ಜಿ) ಅವರು ಸ್ವರ್ಣ ಗೆದ್ದರು. ನೀಲಂ (50 ಕೆ.ಜಿ), ಹನ್ಸಿಕಾ ಲಂಬಾ (55 ಕೆ.ಜಿ), ಮಾನ್ಸಿ (62 ಕೆ.ಜಿ) ಮತ್ತು ಪ್ರಿಯಾ (76 ಕೆ.ಜಿ) ಕಂಚಿನ ಪದಕ ತಮ್ಮದಾಗಿಸಿಕೊಂಡರು.

'ಶ್ರೇಯಾಂಕಾ, ರಾಧಾ ಕೈಚಳಕ

ಕಾರ್ಡಿಫ್ (ಪಿಟಿಐ): ಸ್ಪಿನ್ನರ್‌ಗಳಾದ ಶ್ರೇಯಾಂಕಾ ಪಾಟೀಲ (36ಕ್ಕೆ 4) ಮತ್ತು ರಾಧಾ ಯಾದವ್ (25ಕ್ಕೆ 3) ಅವರ ಕೈಚಳಕದ ನೆರವಿನಿಂದ ಭಾರತ ವನಿತೆಯರ ತಂಡವು ಸೋಮವಾರ ನಡೆದ ಟಿ20 ವಿಶ್ವಕಪ್‌ನ ಮೊದಲ ಅಭ್ಯಾಸ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 26 ರನ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ವಿಂಡೀಸ್ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಭಾರತಿ ಫುಲ್ಮಾಲಿ (ಔಟಾಗದೇ 56;40ಎ) ಅವರ ಅರ್ಧಶತಕದ ನೆರವಿನಿಂದ ಭಾರತ ತಂಡವು 8 ವಿಕೆಟ್‌ಗೆ 179 ರನ್ ಗಳಿಸಿತು. ಆರಂಭ ಆಟಗಾರ್ತಿಯರಾದ ಶಫಾಲಿ ವರ್ಮಾ (29) ಮತ್ತು ನಾಯಕಿ ಸ್ಮೃತಿ ಮಂದಾನ (39) ಮೊದಲ ವಿಕೆಟ್‌ಗೆ 59 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ನಂತರ ಬಂದ ಜೆಮಿಮಾ ರಾಡ್ರಿಗಸ್ (7) ನಿರಾಸೆ ಮೂಡಿಸಿದರು.

ಯಷ್ಟಿಕಾ ಭಾಟಿಯಾ (36) ಮತ್ತು ಫುಲ್ಮಾಲಿ ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 60 ರನ್ ಸೇರಿ ತಂಡದ ಮೊತ್ತ ಹಿಗ್ಗಿಸಲು ನೆರವಾದರು. ಯಷ್ಟಿಕಾ ಗಾಯಾಳಾಗಿ ನಿವೃತ್ತಿಯಾದ ಬೆನ್ನಲ್ಲೇ ರನ್ ವೇಗಕ್ಕೂ ಕಡಿವಾಣ ಬಿತ್ತು. ವಿಂಡೀಸ್‌ನ ಅನುಭವಿ ಸ್ಪಿನ್ನರ್ ಅಫಿ ಫ್ಲೆಚರ್ ನಾಲ್ಕು ವಿಕೆಟ್ ಪಡೆದು ಮಿಂಚಿದರು.

ಗುರಿ ಬೆನ್ನಟ್ಟಿದ ವಿಂಡೀಸ್ ತಂಡಕ್ಕೆ ಡಿಯಾಂಡ್ರಾ ಡಾಟಿನ್ (49) ಮತ್ತು ಶೆಮೈನ್ ಕ್ಯಾಂಪ್‌ಬೆಲ್ ಅವರು ಮೊದಲ ವಿಕೆಟ್‌ಗೆ 63 ರನ್ ಸೇರಿಸಿದರು. 25 ರನ್ ಗಳಿಸಿದ್ದ ಶೆಮೈನ್ ಗಾಯಾಳಾಗಿ ನಿವೃತ್ತರಾದ ಬಳಿಕ ತಂಡವು ನಾಟಕೀಯ ಕುಸಿತ ಕಂಡಿತು. ಅರ್ಧಶತಕದ ಹೊಸ್ತಿಲಲ್ಲಿದ್ದ ಡಾಟಿನ್ ಅವರನ್ನು ರಾಧಾ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.


ಶ್ರೇಯಾಂಕಾ ಪಾಟೀಲ

ಮತ್ತೊಂದೆಡೆ ಕನ್ನಡತಿ ಶ್ರೇಯಾಂಕಾ ವಿಕೆಟ್ ಬೇಟೆಯಾಡಿದರು. ಹೀಗಾಗಿ, ವಿಂಡೀಸ್ ತಂಡವು 8 ವಿಕೆಟ್‌ಗೆ 153 ರನ್‌ಗಳಿಸಿ ಹೋರಾಟ ಮುಗಿಸಿತು.

ಭಾರತ ತಂಡವು ಇದೇ 10ರಂದು ಎರಡನೇ ಅಭ್ಯಾಸ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಜೂನ್ 14ರಂದು ಭಾರತ ಬರ್ಮಿಂಗ್‌ಹ್ಯಾಮ್‌ನಲ್ಲಿ ಪಾಕಿಸ್ತಾನ ವಿರುದ್ಧ ವಿಶ್ವಕಪ್ ಅಭಿಯಾನವನ್ನು ಆರಂಭಿಸಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ: 20 ಓವರ್‌ಗಳಲ್ಲಿ 8ಕ್ಕೆ 179 (ಶಫಾಲಿ ವರ್ಮಾ 29, ಸ್ಮೃತಿ ಮಂದಾನ 39, ಯಷ್ಟಿಕಾ ಭಾಟಿಯಾ 36, ಭಾರತಿ ಫುಲ್ಮಾಲಿ ಔಟಾಟಗದೇ 56; ಅಫಿ ಫ್ಲೆಚರ್ 23ಕ್ಕೆ 4). ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 8ಕ್ಕೆ 153 (ಡಿಯಾಂಡ್ರಾ ಡಾಟಿನ್ 49, ಶೆಮೈನ್ ಕ್ಯಾಂಪ್ಬೆಲ್ 25; ರಾಧಾ ಯಾದವ್ 25ಕ್ಕೆ 3, ಶ್ರೇಯಾಂಕಾ ಪಾಟೀಲ 36ಕ್ಕೆ 4). ಫಲಿತಾಂಶ: ಭಾರತಕ್ಕೆ 26 ರನ್ ಜಯ


ಗಸ್ ಅಟ್ಕಿನ್ಸನ್ ಮತ್ತು ಬೆನ್ ಸ್ಟೋಕ್ಸ್

ಬೆನ್ ಸ್ಟೋಕ್ಸ್ ವಿವಾದದ ಬಿಸಿ

ಲಂಡನ್ (ಎಎಫ್‌ಪಿ): ನ್ಯೂಜಿಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ನಂತರ ನೈಟ್‌ಕ್ಲಬ್ ನಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ನಿಯಮ ಉಲ್ಲಂಘಿಸಿದ್ದಕ್ಕಾಗಿ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಮತ್ತು ಬೌಲರ್ ಗಸ್ ಅಟ್ಕಿನ್ಸನ್ ಅವರ ವಿರುದ್ಧ ತನಿಖೆ ನಡೆಸಲಾಗುತ್ತದೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಸೋಮವಾರ ತಿಳಿಸಿದೆ.

ಜನವರಿಯಲ್ಲಿ ಮುಕ್ತಾಯಗೊಂಡ ಆ್ಯಶಸ್ ಸರಣಿಯನ್ನು 1–4 ಅಂತರದಿಂದ ಸೋತ ಇಂಗ್ಲೆಂಡ್ ತಂಡದ ಆಟಗಾರರು ಮದ್ಯಪಾನ ಸಂಸ್ಕೃತಿಯ ಆರೋಪ ಎದುರಿಸಿದ್ದರು. ಇದೀಗ ತಂಡ ಮತ್ತೊಂದು ವಿವಾದಕ್ಕೆ ಗುರಿಯಾಗಿದೆ.

'ನ್ಯೂಜಿಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯ ಮುಗಿದ ನಂತರ ತಂಡದ ಶಿಷ್ಟಾಚಾರಗಳ ಉಲ್ಲಂಘನೆಯಾದ ಬಗ್ಗೆ ಇಸಿಬಿ ಪ್ರಸ್ತುತ ತನಿಖೆ ನಡೆಸುತ್ತಿದೆ' ಎಂದು ಆಡಳಿತ ಮಂಡಳಿ ತಿಳಿಸಿದೆ.

ನಾವು ಪ್ರಸ್ತುತ ಹೆಚ್ಚಿನ ಮಾಹಿತಿಯನ್ನು ಕಲೆ ಹಾಕುತ್ತಿದ್ದಾರೆ. ಎರಡನೇ ಟೆಸ್ಟ್‌ಗೆ ತಂಡವನ್ನು ಸೂಕ್ತ ಸಮಯದಲ್ಲಿ ಪ್ರಕಟಿಸಲಾಗುತ್ತದೆ ಎಂದು ಇಸಿಬಿ ಹೇಳಿದೆ.

ಶೈನಿಂಗ್ ಸ್ಟಾರ್ ತಂಡಕ್ಕೆ ಗೆಲುವು

ಬೆಂಗಳೂರು: ವಿಘ್ನೇಶ್ ವಿ. ಅವರು ಗಳಿಸಿದ ಎರಡು ಗೋಲುಗಳ ನೆರವಿನಿಂದ ಶೈನಿಂಗ್ ಸ್ಟಾರ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 3–0ಯಿಂದ ಐಟಿಸಿ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಇತರ ಪಂದ್ಯಗಳಲ್ಲಿ ನ್ಯಾಷನಲ್ಸ್ ಎಫ್‌ಸಿ ತಂಡವು 2–1ರಿಂದ ಜೆ.ಪಿ. ಸ್ಪೋರ್ಟ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಯಂಗ್ ಡೈನಮೋಸ್ ಎಫ್‌ಸಿ 7–0ಯಿಂದ ದೇವನಹಳ್ಳಿ ಎಫ್‌ಸಿ ತಂಡವನ್ನು ಸೋಲಿಸಿತು.

ಬಿಸಿಬಿ ಅಧ್ಯಕ್ಷರಾಗಿ ತಮೀಮ್ ಇಕ್ಬಾಲ್

ಢಾಕಾ (ಪಿಟಿಐ): ರಾಷ್ಟ್ರೀಯ ತಂಡದ ಮಾಜಿ ನಾಯಕ ತಮೀಮ್ ಇಕ್ಬಾಲ್ ಅವರು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಅಧ್ಯಕ್ಷರಾಗಿ ಆಯ್ಕೆಯಾದರು. ಅವರು ಈ ಸ್ಥಾನ ನಿರ್ವಹಿಸುವ ಅತಿ ಕಿರಿಯ ವ್ಯಕ್ತಿ ಎನಿಸಿದ್ದಾರೆ.

ಶೇರ್–ಇ–ಬಾಂಗ್ಲಾ ನ್ಯಾಷನಲ್ ಸ್ಟೇಡಿಯಂನಲ್ಲಿ ಚುನಾವಣೆ ನಡೆಯಿತು. 37 ವರ್ಷ ವಯಸ್ಸಿನ ತಮೀಮ್ ಅವರು ಬಿಸಿಬಿಯ 21ನೇ ಅಧ್ಯಕ್ಷರಾಗಿದ್ದಾರೆ.

'14 ಸಿಎಸ್‌ಒ ಕಾಂಗ್ಲೈಪಾಕ್' ನೇತೃತ್ವದ ಹೋರಾಟಕ್ಕೆ 14 ಸಂಘಟನೆಗಳ ಬೆಂಬಲ

ಮಣಿಪುರ: ಎನ್‌ಆರ್‌ಸಿ ಜಾರಿಗೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಗುವಾಹಟಿ: 'ರಾಷ್ಟ್ರೀಯ ಪೌರತ್ವ ನೋಂದಣಿ'ಯನ್ನು (ಎನ್‌ಆರ್‌ಸಿ) ಜಾರಿಗೆ ತರಬೇಕು ಎಂದು ಆಗ್ರಹಿಸಿ ಮೈತೇಯಿ ಪ್ರಾಬಲ್ಯದ ಮಣಿಪುರದ ಕಣಿವೆ ಪ್ರದೇಶದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

'14 ಸಿಎಸ್‌ಒ ಕಾಂಗ್ಲೈಪಾಕ್' ನೇತೃತ್ವದಲ್ಲಿ ನೂರಾರು ಜನರು ಇಂಫಾಲ್‌ನ ಬೀದಿಗಳಲ್ಲಿ ಪ್ರತಿಭಟನೆ ನಡೆಸಿ, ಹೊಸ ಜನಗಣತಿ ನಡೆಸುವ ಮೊದಲು ಎನ್‌ಆರ್‌ಸಿ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ರಾಜ್ಯ ವಿಧಾನಸಭೆಯು 2022 ಮತ್ತು 2024ರಲ್ಲಿ ಎನ್‌ಆರ್‌ಸಿ ಬೇಡಿಕೆಯ ನಿರ್ಣಯವನ್ನು ಅಂಗೀಕರಿಸಿದರೂ, ಕೇಂದ್ರ ಸರ್ಕಾರವು ಅದನ್ನು ನಿರ್ಲಕ್ಷಿಸುತ್ತಿದೆ ಎಂದು ಪ್ರತಿಭಟನಕಾರರು ಆರೋಪಿಸಿದ್ದು, 'ಬೇಡಿಕೆ ಈಡೇರುವವರೆಗೆ, ಇಂತಹ ಪ್ರತಿಭಟನೆ ಆಯೋಜಿಸುವುದನ್ನು ಮುಂದುವರಿಸುತ್ತೇವೆ' ಎಂದು ತಿಳಿಸಿದ್ದಾರೆ.

ಮ್ಯಾನ್ಮಾರ್‌ನಿಂದ ಅಕ್ರಮ ವಲಸೆ ಬರುವವರಿಂದಾಗಿ ಮಣಿಪುರದಲ್ಲಿ ಜನಸಂಖ್ಯೆಯ ಸ್ವರೂಪ ಬದಲಾಗಿದೆ. ಈ ಬದಲಾವಣೆ ಮೈತೇಯಿಗಳು ಹಾಗೂ ಇತರ ಸ್ಥಳೀಯ ಸಮುದಾಯಗಳಿಗೆ ಅಪಾಯವನ್ನು ಉಂಟುಮಾಡಿದೆ ಎಂದು ಪ್ರತಿಪಾದಿಸಿರುವ ಮೈತೇಯಿ ಸಂಘಟನೆಗಳು, ಅದಕ್ಕಾಗಿ ಎನ್‌ಆರ್‌ಸಿ ಅಗತ್ಯವಿದೆ ಎಂದಿವೆ.

ಈ ಹೋರಾಟಕ್ಕೆ 14 ಸಂಘಟನೆಗಳು ಬೆಂಬಲ ನೀಡಿವೆ.


ಎನ್‌ಆರ್‌ಸಿ ಜಾರಿಗೆ ತರಬೇಕು ಎಂದು ಆಗ್ರಹಿಸಿ ಇಂಫಾಲ್‌ನಲ್ಲಿ ಮಹಿಳೆಯರು ಪ್ರತಿಭಟನಾ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

'ಕುಕಿಗಳನ್ನು ಗುರಿ ಮಾಡುವ ಯತ್ನ'

ಮೈತೇಯಿ ಸಂಘಟನೆಗಳ ಆಗ್ರಹವನ್ನು ಕುಕಿ ಸಂಘಟನೆಗಳು ವಿರೋಧಿಸಿದ್ದು, ಮೈತೇಯಿಗಳು ಎಲ್ಲಾ ಕುಕಿಗಳನ್ನು ಅಕ್ರಮ ವಲಸಿಗರೆಂದು ಹಣೆಪಟ್ಟಿ ಕಟ್ಟಲು ಯತ್ನಿಸುತ್ತಿದ್ದಾರೆ ಎಂದು ಹೇಳಿಕೊಂಡಿವೆ.

'ಒಂದು ವೇಳೆ ಅಕ್ರಮ ವಲಸಿಗರು ಇದ್ದರೆ, ಸರ್ಕಾರವು ವಿದೇಶಿ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲಿ. ಕುಕಿ–ಜೂ ಸಮುದಾಯಗಳನ್ನು ಗುರಿಯಾಗಿಸಲು ಎನ್‌ಆರ್‌ಸಿಯನ್ನು ಅಸ್ತ್ರವನ್ನಾಗಿ ಮಾಡಲು ಯತ್ನಿಸಲಾಗುತ್ತಿದೆ' ಎಂದು ಹೇಳಿವೆ.

'ಅಯೋಧ್ಯೆಯ ರಾಮಮಂದಿರದಲ್ಲಿ ನಗದು ಕಾಣೆ: ವರದಿ ಸುಳ್ಳು'

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಕೋಟ್ಯಂತರ ರೂಪಾಯಿ ಕಾಣೆಯಾಗಿದೆ ಎಂಬ ವರದಿಗಳನ್ನು ಮಂದಿರದ ಟ್ರಸ್ಟ್ ತಳ್ಳಿಹಾಕಿದೆ. ನಗದು ಕಾಣೆಯಾಗಿರುವ ಕುರಿತು ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂಬುದು ಸುಳ್ಳುಸುದ್ದಿ ಎಂದು ಅಯೋಧ್ಯೆ ಪೊಲೀಸರು ತಿಳಿಸಿದ್ದಾರೆ.

'ಟ್ರಸ್ಟ್‌ನ ಸದಸ್ಯರು ಹಾಗೂ ಎಸ್‌ಬಿಐನಿಂದ ಖಾತೆಗಳ ಲೆಕ್ಕಪರಿಶೋಧನೆ (ಆಡಿಟ್) ನಡೆಸಲಾಗುತ್ತಿದೆ. ಈವರೆಗೆ ಯಾವುದೇ ಅಕ್ರಮವು ಕಂಡುಬಂದಿಲ್ಲ' ಎಂದು ರಾಮಮಂದಿರ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರು ವಿಡಿಯೊ ಹೇಳಿಕೆಯಲ್ಲಿ ಭಾನುವಾರ ಸಂಜೆ ಹೇಳಿದ್ದಾರೆ.

'ಹುಂಡಿ ಹಣದ ಎಣಿಕೆ ಕೊಠಡಿ ಸೇರಿದಂತೆ ಅನೇಕ ಕಡೆ ನಿಯಮಿತವಾಗಿ ಟ್ರಸ್ಟ್ ಪರಿಶೋಧನೆ ನಡೆಸುತ್ತದೆ. ಟ್ರಸ್ಟಿಗಳು, ಸಿಬ್ಬಂದಿ ಹಾಗೂ ಎಸ್‌ಬಿಐ ಜಂಟಿಯಾಗಿ ಇದನ್ನು ನಡೆಸುತ್ತವೆ. ಈಗಲೂ ಲೆಕ್ಕ ಪರಿಶೋಧನೆ ನಡೆಯುತ್ತಿದ್ದು, ಇದು ಹಲವು ದಿನಗಳವರೆಗೆ ಮುಂದುವರಿಯುತ್ತದೆ' ಎಂದು ಅವರು ತಿಳಿಸಿದ್ದಾರೆ.

20 ಟಿಎಂಸಿ ಸಂಸದರು ಎನ್‌ಡಿಎಗೆ

ಒಂದನೇ ಪುಟದಿಂದ...

ದೂರವಾಣಿ ಮೂಲಕ ಪಿಟಿಐ ಜೊತೆ ಮಾತನಾಡಿದ ಕಾಕೋಲಿ ಘೋಷ್, 'ನಾನು ಸೇರಿದಂತೆ 20 ಸಂಸದರು ಎನ್‌ಡಿಎಗೆ ಬೆಂಬಲ ಸೂಚಿಸಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದೇವೆ' ಎಂದು ಹೇಳಿದರು.

'ಲೋಕಸಭೆಯಲ್ಲಿ ಪಕ್ಷದ ಅಧಿಕೃತ ಮುಖ್ಯ ಸಚೇತಕಿ ಆಗಿ ಕಾಕೋಲಿ ಘೋಷ್ ಅವರೇ ಮುಂದುವರಿಯಲಿದ್ದಾರೆ. ಪಕ್ಷದ ನಾಯಕತ್ವವು ಘೋಷಿಸಿರುವ ಯಾವುದೇ ಬದಲಾವಣೆಯು ಸಂಸದೀಯ ಪ್ರಕ್ರಿಯೆ ಮೂಲಕ ನಡೆದಿಲ್ಲ ಎಂದು ಸ್ಪೀಕರ್ ಮುಂದೆ ವಾದಿಸಲು ಭಿನ್ನಮತೀಯ ಸಂಸದರು ನಿರ್ಧರಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಘೋಷ್ ಅವರನ್ನು ವಜಾಗೊಳಿಸಿ ಕಲ್ಯಾಣ್ ಬ್ಯಾನರ್ಜಿ ಅವರನ್ನು ಮುಖ್ಯ ಸಚೇತಕರಾಗಿ ನೇಮಕ ಮಾಡಲು ಟಿಎಂಸಿ ನಿರ್ಧರಿಸಿದೆ. ಆದರೆ ಈ ಬಗ್ಗೆ ಲೋಕಸಭೆಯ ಸಚಿವಾಲಯಕ್ಕೆ ತಿಳಿಸಿಲ್ಲ' ಎಂದು ಬಂಡಾಯ ಸಂಸದರೊಬ್ಬರು ತಿಳಿಸಿದ್ದಾರೆ.

'ಪ್ರತ್ಯೇಕ ಬಣ ರಚಿಸುವ ಉದ್ದೇಶ'

'ಭಿನ್ನಮತೀಯ ಸಂಸದರು ತಕ್ಷಣವೇ ಪಕ್ಷಕ್ಕೆ ರಾಜೀನಾಮೆ ನೀಡದಿರಲು ಮತ್ತು ಬಿಜೆಪಿಗೆ ಸೇರ್ಪಡೆ ಆಗದಿರಲು ನಿರ್ಧರಿಸಿದ್ದಾರೆ. ಬದಲಾಗಿ, ಪಕ್ಷಾಂತರ ನಿಷೇಧ ಕಾಯ್ದೆಯಿಂದ ಪಾರಾಗಲು, ಪ್ರತ್ಯೇಕ ಸಂಸದೀಯ ಬಣವಾಗಿ ಕಾರ್ಯ ನಿರ್ವಹಿಸುವ ಉದ್ದೇಶವನ್ನು ಹೊಂದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಟಿಎಂಸಿ ಪ್ರಸ್ತುತ ಲೋಕಸಭೆಯಲ್ಲಿ 28 ಸಂಸದರನ್ನು ಹೊಂದಿದೆ. ಪಕ್ಷಾಂತರ ನಿಷೇಧ ಕಾನೂನಿನಿಂದ ರಕ್ಷಣೆ ಪಡೆಯಲು ಬೇಕಾದ ಮೂರನೇ ಎರಡರಷ್ಟು ಬಹುಮತವನ್ನು 20 ಸಂಸದರು ಹೊಂದಿದ್ದಾರೆ. ಹೀಗಾಗಿ ಸಂಸದ ಸ್ಥಾನದಿಂದ ಅನರ್ಹಗೊಳ್ಳುವುದರಿಂದ ಅವರು ಪಾರಾಗಲಿದ್ದಾರೆ.

ಎನ್‌ಡಿಎ ಬೆಂಬಲಕ್ಕೂ ಮುನ್ನ ಸಭೆ

ಒಂದನೇ ಪುಟದಿಂದ...

ಈ ಮಧ್ಯೆ ಟಿಎಂಸಿಯ ಭಿನ್ನಮತೀಯ ಸಂಸದರು ಮೋತಿಲಾಲ್ ನೆಹರೂ ಮಾರ್ಗದಲ್ಲಿರುವ ಕೇಂದ್ರ ಸಚಿವ, ಪಶ್ಚಿಮ ಬಂಗಾಳದ ಬಿಜೆಪಿ ಚುನಾವಣಾ ಉಸ್ತುವಾರಿ ಭೂಪೇಂದ್ರ ಯಾದವ್ ಅವರ ನಿವಾಸದಲ್ಲಿ ಸೇರಿದ್ದರು ಎಂದು ವರದಿಯಾಗಿದೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರೂ ಅಧಿಕೃತ ಕಾರ್ಯ ನಿಮಿತ್ತ ರಾಷ್ಟ್ರ ರಾಜಧಾನಿಯಲ್ಲಿದ್ದು, ಅವರು ಸಹ ಯಾದವ್ ಅವರ ನಿವಾಸಕ್ಕೆ ಭೇಟಿ ನೀಡಿದ್ದರು ಎಂದು ಹೇಳಲಾಗಿದೆ.

ಸುಖೇಂದು ಶೇಖರ್ ರಾಜೀನಾಮೆ

ಟಿಎಂಸಿಯ ಹಿರಿಯ ನಾಯಕ ಸುಖೇಂದು ಶೇಖರ್ ರಾಯ್ ಅವರು ಪಕ್ಷಕ್ಕೆ ಮತ್ತು ರಾಜ್ಯಸಭಾ ಸದಸ್ಯತ್ವಕ್ಕೆ ಸೋಮವಾರ ರಾಜೀನಾಮೆ ಸಲ್ಲಿಸಿದರು.

'ಇಂಡಿಯಾ' ಕೂಟದ ಸಭೆ ಆರಂಭಕ್ಕೂ ಮುನ್ನ ತಮ್ಮ ನಿರ್ಧಾರವನ್ನು ಪ್ರಕಟಿಸಿದರು.

'ರಾಜ್ಯಸಭಾ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಿದೆ' ಎಂದು ಹೇಳಿದರು.

'ಶಾಸಕರ ನಡೆಗೂ ನನ್ನ ನಿರ್ಧಾರಕ್ಕೂ ಯಾವುದೇ ಸಂಬಂಧವಿಲ್ಲ. ನಾನು ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ. ಅವರು ರಾಜೀನಾಮೆ ನೀಡಿಲ್ಲ. ರಾಜ್ಯಸಭೆಯ ನನ್ನ ಸದಸ್ಯತ್ವ ಅವಧಿಯು 2029ಕ್ಕೆ ಪೂರ್ಣಗೊಳ್ಳುತ್ತಿತ್ತು' ಎಂದು ತಿಳಿಸಿದರು.

14ರಿಂದ ಪ್ರೊ ಲೀಗ್ ಹಾಕಿ ಪಂದ್ಯಗಳು: ಅವಕಾಶ ಸದ್ಬಳಕೆಯತ್ತ ಕರ್ಕೇರ ಚಿತ್ತ

ಯೂರೋಪಿಯನ್ ಲೆಗ್‌ಗೆ ಸೂರಜ್ ಸಜ್ಜು

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: 'ಎಫ್‌ಐಎಚ್ ಪ್ರೊ ಲೀಗ್‌ನ ಮೊದಲೆರಡು ಲೆಗ್‌ಗಳಲ್ಲಿ ಮಾಡಿರುವ ತಪ್ಪುಗಳನ್ನು ತಿದ್ದಿಕೊಂಡು ಇದೇ 14ರಂದು ಆರಂಭವಾಗುವ ಯೂರೋಪಿಯನ್ ಲೆಗ್‌ಗೆ ಸಜ್ಜಾಗಿದ್ದೇವೆ. ಅಲ್ಲಿ ಬಲಿಷ್ಠ ತಂಡಗಳ ವಿರುದ್ಧ ಸಾಮರ್ಥ್ಯ ಮೆರೆದು, ಇದೇ ವರ್ಷ ನಡೆಯುವ ವಿಶ್ವಕಪ್ ಮತ್ತು ಏಷ್ಯನ್ ಗೇಮ್ಸ್‌ಗೆ ತಯಾರಿ ನಡೆಸುವ ಸವಾಲು ನಮ್ಮ ಮೇಲಿದೆ' ಎಂದು ಭಾರತ ಹಾಕಿ ತಂಡದ ಗೋಲ್‌ಕೀಪರ್ ಸೂರಜ್ ಕರ್ಕೇರ ಅಭಿಪ್ರಾಯಪಟ್ಟರು.

ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರ ಉತ್ತರಾಧಿಕಾರಿ ಎಂದೇ ಬಿಂಬಿತವಾಗಿರುವ ಸೂರಜ್ ಕಳೆದ ಎಂಟು ವರ್ಷಗಳಿಂದ ಭಾರತ ಸೀನಿಯರ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಅವರ ಪೋಷಕರು ಮಂಗಳೂರು ಮೂಲದವರಾಗಿದ್ದು, ನಾಲ್ಕು ದಶಕಗಳ ಹಿಂದೆ ಮುಂಬೈಗೆ ಸ್ಥಳಾಂತರವಾಗಿದ್ದಾರೆ. ಪ್ರೊ ಲೀಗ್ ಯೂರೋಪಿಯನ್ ಲೆಗ್‌ಗೆ 'ಹಾಕಿ ಇಂಡಿಯಾ' ಪ್ರಕಟಿಸಿದ ತಂಡದಲ್ಲಿ ಸೂರಜ್ ಸ್ಥಾನ ಪಡೆದಿದ್ದಾರೆ. ತಮ್ಮ ವೃತ್ತಿಜೀವನದ ಹಾದಿಯ ಬಗ್ಗೆ 'ಪ್ರಜಾವಾಣಿ' ಜೊತೆ ಅವರು ಮೆಲುಕು ಹಾಕಿದ್ದಾರೆ.

'ಹಾಕಿ ಕ್ರೀಡೆಯಲ್ಲಿ ಗೋಲ್‌ಕೀಪಿಂಗ್ ಹೊಣೆ ಹೆಚ್ಚು ಆಕರ್ಷಣೆಯ ಜೊತೆಗೆ ಸವಾಲಿನದು. ಪಂದ್ಯಗಳ ಫಲಿತಾಂಶದಲ್ಲಿ ಗೋಲ್‌ಕೀಪರ್‌ನ ಪಾತ್ರ ನಿರ್ಣಾಯಕವಾಗುತ್ತದೆ. ತೀವ್ರ ಒತ್ತಡವಿದ್ದರೂ ಅದನ್ನು ನಿಭಾಯಿಸಿಕೊಂಡು ಆತ್ಮಸ್ಥೈರ್ಯದಿಂದ ಚೆಂಡನ್ನು ತಡೆಯುವ ಕೌಶಲ ಕರಗತಮಾಡಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಶ್ರೀಜೇಶ್ ಅವರು ಹಾಕಿದ ಮೇಲ್ಪಂಕ್ತಿ ನಮಗೆಲ್ಲ ದಾರಿದೀಪವಾಗಿದೆ' ಎಂದು 30 ವರ್ಷದ ಸೂರಜ್ ಹೇಳಿದರು.



ಸೂರಜ್ ಕರ್ಕೇರ

'2025-26ರ ಪ್ರೊ ಲೀಗ್‌ನ ಎಂಟು ಪಂದ್ಯಗಳಲ್ಲಿ ಭಾರತಕ್ಕೆ ಒಂದೂ ಗೆಲ್ಲಲು ಸಾಧ್ಯವಾಗಿಲ್ಲ. ಆದರೆ, ತವರು ಲೆಗ್ ರೂರ್ಕೆಲಾದಲ್ಲಿ ನಾವು ಮಾಡಿದ ತಪ್ಪುಗಳೇ ನಮಗೆ ದುಬಾರಿಯಾಯಿತು. ಹೋಬರ್ಟ್ ಲೆಗ್‌ನಲ್ಲಿ ತಂಡವು ಸುಧಾರಿತ ಪ್ರದರ್ಶನ ನೀಡಿದೆ. ಅಲ್ಲಿ ನಾಲ್ಕು ಪಂದ್ಯಗಳ ಪೈಕಿ ಮೂರು ಪಂದ್ಯಗಳಲ್ಲಿ ಡ್ರಾ ಮಾಡಿಕೊಂಡಿದ್ದೇವೆ. ಮುಂದಿನ ರೋಟರ್‌ಡ್ಯಾಮ್ ಲೆಗ್‌ನಲ್ಲಿ ಬಲಿಷ್ಠ ನೆದರ್ಲೆಂಡ್ಸ್ ಮತ್ತು ಜರ್ಮನಿ ತಂಡವನ್ನು ಎದುರಿಸಲು ಸೂಕ್ತ ಸಿದ್ಧತೆ ಮಾಡಿಕೊಂಡಿದೆ' ಎಂದು ಹೇಳಿದರು.

'ಕಳೆದೆರಡು ಒಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲು ಅವಕಾಶ ಸಿಗದಿರುವುದಕ್ಕೆ ಬೇಸರವಿದೆ. ಆದರೆ, ತಂಡದ ಸಾಧನೆ ಬಗ್ಗೆ ಹೆಮ್ಮೆಯಿದೆ. ಮುಂದಿನ ಲಾಸ್ ಏಂಜಲೀಸ್‌ನಲ್ಲಿ ತಂಡವನ್ನು ಪ್ರತಿನಿಧಿಸಿ, ದೇಶಕ್ಕೆ ಪದಕ ಗೆಲ್ಲುವ ದೊಡ್ಡ ಗುರಿ ಹೊಂದಿದ್ದೇನೆ. ಅದಕ್ಕೂ ಮೊದಲು ಇದೇ ಆಗಸ್ಟ್‌ನಲ್ಲಿ ನಡೆಯುವ ವಿಶ್ವಕಪ್ ಟೂರ್ನಿಗೆ ಸಜ್ಜಾಗಬೇಕಿದೆ. ಅಕ್ಟೋಬರ್‌ನಲ್ಲಿ ನಡೆಯುವ ಏಷ್ಯನ್ ಗೇಮ್ಸ್‌ನಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಒತ್ತಡವೂ ಇದೆ' ಎಂದು ತಿಳಿಸಿದರು.

'ಗೋಲ್‌ಕೀಪಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಪೈಪೋಟಿಯಿದೆ. ದೇಶಿಯ ಹಾಕಿ ಲೀಗ್‌ನಿಂದಾಗಿ ಹೊಸ ಪ್ರತಿಭೆಗಳು ಬೆಳಕಿಗೆ ಬರುತ್ತಿದೆ. ಹೀಗಾಗಿ, ತಂಡದಲ್ಲಿ ನಮ್ಮ ಸ್ಥಾನ ಭದ್ರಪಡಿಸಿಕೊಳ್ಳುವುದೂ ಮುಖ್ಯವಾಗುತ್ತದೆ. ಪ್ರೊ ಲೀಗ್‌ನ ಉಳಿದ ಪಂದ್ಯಗಳಲ್ಲಿ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುವತ್ತ ಚಿತ್ತ ಹರಿಸಿದ್ದೇನೆ' ಎಂದು ಹೇಳಿದರು.

ಭಾರತಕ್ಕೆ ಸುಲಭ ತುತ್ತಾದ ಅಫ್ಗಾನಿಸ್ತಾನ

ಮೂರೇ ದಿನದಲ್ಲಿ ಮುಗಿದ ಟೆಸ್ಟ್ • ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಮಾನವ್ ಸುತಾರ್

• ಮಧು ಜವಳಿ

ಮುಲ್ಲನಪುರ: ಅಫ್ಗಾನಿಸ್ತಾನ ತಂಡಕ್ಕೆ ಸೋಲು ಕಟ್ಟಿಟ್ಟಬುತ್ತಿಯಾಗಿತ್ತು. ಉಳಿದಿದ್ದ ಒಂದೇ ಕುತೂಹಲವೆಂದರೆ ಎಷ್ಟು ಬೇಗ ಭಾರತ ಪಂದ್ಯ ಮುಗಿಸಬಹುದೆಂಬುದು. ತಮ್ಮ ತಂಡದ ಇತರ ಹಲವು ಆಟಗಾರರಂತೆ ಮೊಹಮ್ಮದ್ ಸಲೀಂ, ಚಹ ವಿರಾಮದ ಅರ್ಧ ಗಂಟೆಯ ನಂತರ ವಿಕೆಟ್ ಚೆಲ್ಲಿದರು. ಅದರೊಂದಿಗೆ ಭಾರತ ಏಕೈಕ ಟೆಸ್ಟ್ ಪಂದ್ಯವನ್ನು ಮೂರನೇ ದಿನವಾದ ಸೋಮವಾರ ಇನಿಂಗ್ಸ್ ಮತ್ತು 300 ರನ್‌ಗಳಿಂದ ನಿರಾಯಾಸವಾಗಿ ಗೆದ್ದುಕೊಂಡಿತು.

5 ವಿಕೆಟ್‌ಗೆ 113 ರನ್‌ಗಳೊಡನೆ (451 ರನ್‌ಗಳ ಹಿನ್ನಡೆಯೊಡನೆ) ದಿನದಾಟ ಮುಂದುವರಿಸಿದ ಪ್ರವಾಸಿ ತಂಡ ಮೊದಲ ಇನಿಂಗ್ಸ್‌ನಲ್ಲಿ 58.4 ಓವರುಗಳಲ್ಲಿ 152 ರನ್‌ಗಳಿಗೆ ಕುಸಿಯಿತು. ಎಡಗೈ ಸ್ಪಿನ್ನರ್ ಮಾನವ್ ಸುತಾರ್ (33ಕ್ಕೆ6) ಪದಾರ್ಪಣೆ ಪಂದ್ಯದಲ್ಲೇ ಐದು ಅಥವಾ ಹೆಚ್ಚು ವಿಕೆಟ್ ಪಡೆದ ಭಾರತದ ಹತ್ತನೇ ಬೌಲರ್ ಎನಿಸಿದರು. 412 ರನ್‌ಗಳ ಭರ್ಜರಿ ಮೊದಲ ಇನಿಂಗ್ಸ್ ಮುನ್ನಡೆ ಪಡೆದ ಭಾರತ ತಂಡವು ಫಾಲೊ ಆನ್ ಹೇರಿತು. ಧಗೆಯ ವಾತಾವರಣದಲ್ಲಿ ಮೂರನೇ ದಿನವೇ ಪಂದ್ಯ ಮುಗಿಸಲು ತಂಡ ಮನಸ್ಸು ಮಾಡಿದಂತೆ ಕಂಡಿತು.

ಭಾರತಕ್ಕೆ ಅತಿಹೆಚ್ಚು ರನ್ ಅಂತರದ ಇನಿಂಗ್ಸ್ ಗೆಲುವು

ರನ್	ಎದುರಾಳಿ	ತಾಣ	ವರ್ಷ
300	ಅಫ್ಗಾನಿಸ್ಥಾನ	ಮುಲ್ಲನಪುರ	2026
272	ವೆಸ್ಟ್ ಇಂಡೀಸ್	ರಾಜಕೋಟ್	2018
262	ಅಫ್ಗಾನಿಸ್ತಾನ	ಬೆಂಗಳೂರು	2018
239	ಬಾಂಗ್ಲಾದೇಶ	ಮೀರ್‌ಪುರ	2007
239	ಶ್ರೀಲಂಕಾ	ನಾಗ್ಪುರ	2017

ಮಾನವ್ ಸುತಾರ್ ಅವರು ಮೊದಲ ಇನಿಂಗ್ಸ್‌ನಲ್ಲಿ ಮಾಡಿದ ಮೋಡಿ ಮುಂದುವರಿಸಬಹುದೆಂಬ ವಿಶ್ವಾಸದೊಡನೆ ಅವರಿಗೇ ಹೊಸ ಚೆಂಡು ನೀಡಲಾಯಿತು. ಅವರು ಬೇಗ ಯಶಸ್ಸು ದೊರಕಿಸಿಕೊಡಲಿಲ್ಲ. ಆದರೆ ಉಳಿದ ಸ್ಪಿನ್ನರ್‌ಗಳಾದ ವಾಷಿಂಗ್ಟನ್ ಸುಂದರ್ (36ಕ್ಕೆ4) ಮತ್ತು ಕುಲದೀಪ್ ಯಾದವ್ (30ಕ್ಕೆ3) ಅವರು ಅಫ್ಗನ್ ಪಡೆಯನ್ನು 35.5 ಓವರುಗಳಲ್ಲಿ 112 ರನ್‌ಗಳಿಗೆ ಉರುಳಿಸಿದರು. ಗಾಯಾಳಾಗಿದ್ದ ಆಲ್‌ರೌಂಡರ್ ಶರಾಫುದ್ದೀನ್ ಅಶ್ರಫ್ ಆಡಲು ಇಳಿಯಲಿಲ್ಲ.

ಅಫ್ಗಾನಿಸ್ತಾನದ ಮೊದಲ ಇನಿಂಗ್ಸ್‌ನಲ್ಲಿ ಸುತಾರ್ ಅವರ ಕೌಶಲ ಮತ್ತು ಯಶಸ್ಸು ಗಮನಸೆಳೆದರೆ, ಎರಡನೇ ಇನಿಂಗ್ಸ್‌ನಲ್ಲಿ ಗುಣಮಟ್ಟದ ದಾಳಿಯೆದುರು ಅಫ್ಗನ್ ಬ್ಯಾಟರ್‌ಗಳ ದುರ್ಬಲ ಮನೋಬಲ ಎದ್ದುಕಂಡಿತು. ಟಿ20 ಪಂದ್ಯದಲ್ಲಿ ದೊಡ್ಡ ಗುರಿ ಎದುರಾದಾಗ ಉಂಟಾಗುವ ಒತ್ತಡದ ಸನ್ನಿವೇಶದ ರೀತಿ ಬ್ಯಾಟಿಂಗ್ ಮಾಡಿದ ಅಫ್ಗನ್ ಪಡೆ ಎರಡನೇ ಇನಿಂಗ್ಸ್‌ನಲ್ಲಿ ಬೇಗ ಉರುಳಿತು.

ಪದಾರ್ಪಣೆ ಪಂದ್ಯದಲ್ಲೇ 'ಪಂದ್ಯ ಶ್ರೇಷ್ಠ' ನಾದ ಮೂರನೇ ಆಟಗಾರ ಎಂಬ ಗೌರವ ಮಾನವ್ ಅವರದಾಯಿತು. ಪ್ರವೀಣ್ ಆಮ್ರೆ ಮತ್ತು ಆರ್. ಅಶ್ವಿನ್ ಮೊದಲ ಇಬ್ಬರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ತಲುಪಲು ಕಠಿಣ ಸವಾಲು ಎದುರಿಸುತ್ತಿರುವ ಭಾರತಕ್ಕೆ, ಅನನುಭವಿ ಅಫ್ಗಾನಿಸ್ತಾನ ಎದುರಿನ ಪಂದ್ಯ ತಾಲೀಮಿನಂತೆ ನೆರವಾದಂತಾಯಿತು. ಈ ವರ್ಷದ ಆರಂಭದಿಂದಲೇ ಸಾಕಷ್ಟು ನಿಯಮಿತ ಓವರುಗಳ ಪಂದ್ಯಗಳನ್ನು ಆಡಿರುವ ಭಾರತ ತಂಡಕ್ಕೆ ಟೆಸ್ಟ್ ಪಂದ್ಯದ ಅಭ್ಯಾಸವೂ ಅಗತ್ಯವಾಗಿತ್ತು. ಮುಂದಿನ ಆರು ತಿಂಗಳಲ್ಲಿ ಎದುರಾಗಲಿರುವ ತಂಡಗಳು ಅಫ್ಗಾನಿಸ್ತಾನಕ್ಕಿಂತ ಪ್ರಬಲ ಹಾಗೂ ಅನುಭವಿಗಳಾಗಿವೆ.

ಭಾರತ ತವರಿನಲ್ಲಿ ಸ್ಪಿನ್ನರ್‌ಗಳ ಎದುರು ಪರದಾಡಿತ್ತು. ಬ್ಯಾಟರ್‌ಗಳಿಗೆ ಮುಂದಿನ ಸವಾಲುಗಳಿಗೆ ಸಜ್ಜಾಗಲು ಆತ್ಮವಿಶ್ವಾಸದ ಅಗತ್ಯವೂ ಇತ್ತು. ಬಹುಶಃ ಇದನ್ನೇ ಗಮನದಲ್ಲಿಟ್ಟುಕೊಂಡ 'ಭಾರತ ತನ್ನ ಕೆಲವು ಉದ್ದೇಶಗಳನ್ನು ಈಡೇರಿಸಿದೆ' ಎಂದು ಬ್ಯಾಟಿಂಗ್ ಕೋಚ್ ಸಿತಾಂಶು ಕೊಟಕ್ ಹೇಳಿದಂತಿತ್ತು.



ಮುಲ್ಲನಪುರದಲ್ಲಿ ಅಫ್ಗಾನಿಸ್ತಾನ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಸೋಮವಾರ ಜಯಗಳಿಸಿದ ನಂತರ ಭಾರತ ತಂಡದ ಆಟಗಾರರು ಸಂಭ್ರಮಿಸಿದ್ದು ಹೀಗೆ.... ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 8 ವಿಕೆಟ್‌ಗೆ 564 ಡಿಕ್ಲೇರ್ಡ್

ಅಫ್ಗಾನಿಸ್ತಾನ: 152 (58.4 ಓವರುಗಳಲ್ಲಿ) (ಭಾನುವಾರ: 5 ಕ್ಕೆ 113)

ರೆಹಮತ್ ಶಾ ಬಿ ಸುತಾರ್ 60 (135ಎ, 4x9, 6x1)
ಅಜ್ಮತ್‌ವುಲ್ಲಾ ಬಿ ಪ್ರಸಿದ್ಧಕೃಷ್ಣ 0 (10 ಎ)
ಶರಾಫುದ್ದೀನ್ ಸಿ ಪಂತ್ ಬಿ ಸುತಾರ್ 11 (32ಎ, 4x2)
ಖರೋಟೆ ಔಟಾಗದೇ 4 (12ಎ)
ಸಲೀಮ್ ಎಲ್‌ಬಿಡಬ್ಲ್ಯು ಬಿ ಸುತಾರ್ 0 (3ಎ)
ರಹಮಾನ್ ಸಿ ಪಂತ್ ಬಿ ಸುಂದರ್ 6 (3ಎ)
ಇತರೆ: 3 (ನೋಬಾಲ್ 2, ವೈಡ್ 1)
ವಿಕೆಟ್ ಪತನ: 6–118 (ಅಜ್ಮತ್‌ವುಲ್ಲಾ ಒಮರ್‌ಜೈ, 44.2), 7–142 (ಶರಾಫುದ್ದೀನ್ ಅಶ್ರಫ್, 55.1), 8–143 (ರಹಮತ್ ಶಾ, 57.2), 9–143 (ಮೊಹಮ್ಮದ್ ಸಲೀಮ್, 57.5), 10–152 (ಝಿಯಾವುರ್ ರಹಮಾನ್, 58.4).
ಬೌಲಿಂಗ್: ಮೊಹಮ್ಮದ್ ಸಿರಾಜ್ 9–2–29–0; ಪ್ರಸಿದ್ಧ ಕೃಷ್ಣ 11–2–37–3; ಮಾನವ್ ಸುತಾರ್ 22–10–33–6; ಕುಲದೀಪ್ ಯಾದವ್ 10–1–32–0; ವಾಷಿಂಗ್ಟನ್ ಸುಂದರ್ 6.4–1–21–1

ಎರಡನೇ ಇನಿಂಗ್ಸ್: ಅಫ್ಗಾನಿಸ್ತಾನ (ಫಾಲೊಆನ್): 112 (35.5 ಓವರುಗಳಲ್ಲಿ)

ಸೇದಿಖುಲ್ಲಾ ಸಿ ಪ್ರಸಿದ್ಧ ಬಿ ಸುಂದರ್ 42 (80ಎ, 4x5, 6x1)
ಮಲಿಕ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 8 (40ಎ)
ಗುರ್ಬಾಝ್ ಸಿ ಪ್ರಸಿದ್ಧ ಬಿ ಕುಲದೀಪ್ 24 (24ಎ, 4x3, 6x1)
ರಹಮತ್ ಸಿ ಸುತಾರ್ ಬಿ ಸುಂದರ್ 13 (16ಎ, 6x1)
ಹಷ್ಮತ್‌ವುಲ್ಲಾ ಸಿ ಗಿಲ್ ಬಿ ಸುಂದರ್ 5 (10ಎ, 4x1)
ಅಫ್ಸರ್ ಝಝೈ ಎಲ್‌ಬಿಡಬ್ಲ್ಯು ಬಿ ಸುತಾರ್ 8 (19ಎ 4x1)
ಅಜ್ಮತ್‌ವುಲ್ಲಾ ಸಿ ಕುಲದೀಪ್ ಬಿ ಸುಂದರ್ 4 (5ಎ)
ಖರೋಟೆ ಸಿ ಸುತಾರ್ ಬಿ ಕುಲದೀಪ್ 6 (11ಎ, 6x1)
ಝಿಯಾವುರ್ ಔಟಾಗದೇ 0 (11ಎ)
ಸಲೀಮ್ ಸಿ ಸಾಯಿ ಸುದರ್ಶನ್ ಬಿ ಕುಲದೀಪ್ 0 (1ಎ)
ಶರಾಫುದ್ದೀನ್ ಗಾಯಾಳಾಗಿ ನಿವೃತ್ತಿ –
ಇತರೆ: 2 (ನೋಬಾಲ್ 2)
ವಿಕೆಟ್ ಪತನ: 1–42 (ಅಬ್ದುಲ್ ಮಲಿಕ್, 13.1), 2–74 (ರಹಮಾನುಲ್ಲಾ ಗುರ್ಬಾಝ್, 19.1), 3–87 (ರಹಮತ್ ಶಾ, 22.6), 4–93 (ಹಷ್ಮತ್‌ವುಲ್ಲಾ ಶಾಹಿದಿ, 26.3), 5–98 (ಸೇದಿಖುಲ್ಲಾ ಅಟಲ್, 28.6), 6–106 (ಅಫ್ಸರ್ ಝಝೈ, 31.5), 7–106 (ಅಜ್ಮತ್‌ವುಲ್ಲಾ, 32.1), 8–112 (ನಂಗೇಯಲಿಯಾ ಖರೋಟೆ, 35.4), 9–112 (ಮೊಹಮ್ಮದ್ ಸಲೀಮ್, 35.5).
ಬೌಲಿಂಗ್: ಸುತಾರ್ 10–2–29–1; ಪ್ರಸಿದ್ಧ 3–0–6–0; ಕುಲದೀಪ್ 7.5–1–30–3; ಸಿರಾಜ್ 4–1–11–1; ಸುಂದರ್ 11–4–36–4
ಪಂದ್ಯದ ಆಟಗಾರ: ಮಾನವ್ ಸುತಾರ್

ಫಲಿತಾಂಶ: ಭಾರತಕ್ಕೆ ಇನಿಂಗ್ಸ್ ಹಾಗೂ 300 ರನ್ ಜಯ

ಸುತಾರ್ 'ಕನಸಿನ ಆರಂಭ'

ಪ್ರಜಾವಾಣಿ ವಾರ್ತೆ



ಮುಲ್ಲನಪುರ: ಟೆಸ್ಟ್‌ನಲ್ಲಿ ಯಶಸ್ವಿ ಬೌಲರ್ ಎನಿಸಿಕೊಳ್ಳಲು ಕೌಶಲ ಅತಿ ಮುಖ್ಯ. ಕ್ರಿಕೆಟ್‌ನ ದೀರ್ಘ ಮಾದರಿಯಲ್ಲಿ ಅಷ್ಟೇ ನಿರ್ಣಾಯಕವಾಗುವುದು ಸಂಯಮ ಮತ್ತು ಶಿಸ್ತು. ಮಾನವ್ ಸುತಾರ್ ಪಾಲಿಗೆ ಇದು ಆರಂಭವಷ್ಟೇ. ಅವರು ಆಡಿರುವುದು ಒಂದು ಟೆಸ್ಟ್ ಮಾತ್ರ. ಅದೂ ಅನನುಭವಿ ಅಫ್ಗಾನಿಸ್ತಾನ ವಿರುದ್ಧ. ಆದರೆ ಅವರು ಈ ಮಾದರಿಗೆ ಬೇಕಾದ ಗುಣಗಳನ್ನು ಪ್ರದರ್ಶಿಸಿದ್ದಾರೆ. ಭರವಸೆಯನ್ನೂ ಮೂಡಿಸಿದ್ದಾರೆ.

ರಾಜಸ್ಥಾನದ 23 ವರ್ಷ ವಯಸ್ಸಿನ ಈ ಸ್ಪಿನ್ನರ್ ಪದಾರ್ಪಣೆ ಪಂದ್ಯದಲ್ಲೇ 'ಕನಸಿನ ಆರಂಭ' ಮಾಡಿ ಏಳು ವಿಕೆಟ್‌ಗಳನ್ನು ಪಡೆದಿದ್ದಾರೆ. ಇದರಲ್ಲಿ ಮೊದಲ ಇನಿಂಗ್ಸ್‌ನಲ್ಲಿ ಪಡೆದ 33 ರನ್ನಿಗೆ 6 ವಿಕೆಟ್‌ಗಳ ಗೊಂಚಲು ಒಳಗೊಂಡಿದೆ. ಭಾರತದ ಟೆಸ್ಟ್ ಇತಿಹಾಸದಲ್ಲಿ ಕೇವಲ ಹತ್ತು ಮಂದಿ ಮಾತ್ರ ಚೊಚ್ಚಲ ಟೆಸ್ಟ್‌ನಲ್ಲೇ ಐದು ಅಥವಾ ಅದಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ.

ಮಧ್ಯಮ ವೇಗದ ಬೌಲರ್ ಮೊಹಮ್ಮದ್ ನಿಸಾರ್ (1932ರಲ್ಲಿ ಇಂಗ್ಲೆಂಡ್ ವಿರುದ್ಧ 93ಕ್ಕೆ5) ಅವರು ಈ ಸಾಧನೆ ಮಾಡಿದ ಮೊದಲಿಗರು. ಇದು ಸುತಾರ್ ಅವರ ಸಾಧನೆಯ ಮಹತ್ವ ತೋರಿಸುತ್ತದೆ. ಆದರೆ ಇವರಲ್ಲಿ ಕೆಲವಷ್ಟೇ ಆರಂಭದಲ್ಲಿ ತೋರಿದ ಮೊನಚನ್ನು ಉಳಿಸಿಕೊಂಡಿದ್ದರು. ಇಲ್ಲೇ ಮಾನವ್ ಸುತಾರ್ ಅವರಿಗೆ ಸವಾಲು ಇರುವುದು. ಆದರೆ ಅವರು ಮೊದಲ ಪಂದ್ಯದಲ್ಲೇ ತೋರಿದ ಉತ್ಕಟತೆಯು ಮುಂದಿನ ದಿನಗಳಲ್ಲಿ ಭರವಸೆ ಇಟ್ಟುಕೊಳ್ಳುವಂತೆ ಮಾಡಿದೆ.

'ಎಲ್ಲದರಲ್ಲೂ ಸ್ಥಿರತೆ ಅತಿ ಮುಖ್ಯ ಎಂಬುದು ಈ ಪಂದ್ಯದಿಂದ ಕಲಿತ ದೊಡ್ಡ ಪಾಠ' ಎಂದು ಸುತಾರ್ ಹೇಳಿದ್ದಾರೆ. 'ಪದೇ ಪದೇ ಒಂದೇ ಜಾಗದದಲ್ಲಿ ಬೌಲಿಂಗ್ ಮಾಡಬೇಕಾಗುತ್ತದೆ. ನನಗನಿಸುವಂತೆ ಟೆಸ್ಟ್ ಕ್ರಿಕೆಟ್‌ನಲ್ಲಿ ಇದು ಅತಿ ಮುಖ್ಯವಾಗುತ್ತದೆ' ಎಂದು ಸುತಾರ್ ಪಂದ್ಯದ ಆಟಗಾರ ಪ್ರಶಸ್ತಿ ಸ್ವೀಕರಿಸಿದ ವೇಳೆ ಹೇಳಿದರು.

ಭಾರತ–ಇಂಗ್ಲೆಂಡ್ ಟಿ20 ಸರಣಿ ಒಂದು ಗಂಟೆ ಮೊದಲೇ ಆರಂಭ

ಲಂಡನ್ (ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವೆ ಟಿ20 ಸರಣಿಯ ಎಲ್ಲಾ ಐದೂ ಪಂದ್ಯಗಳನ್ನು ನಿಗದಿಗಿಂತ ಒಂದು ಗಂಟೆ ಮೊದಲು ಆರಂಭಿಸಲು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ನಿರ್ಧರಿಸಿದೆ. ಈ ನಿರ್ಧಾರದ ಪ್ರಕಾರ ಪಂದ್ಯಗಳು ಭಾರತೀಯ ಕಾಲಮಾನ ರಾತ್ರಿ 11 ಗಂಟೆ ಬದಲು 10 ಗಂಟೆಗೆ ಆರಂಭವಾಗಲಿದೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ.

ನಿಗದಿಯಂತೆ ಸ್ಥಳೀಯ ಕಾಲಮಾನ ಸಂಜೆ 6.30ಕ್ಕೆ (ಭಾರತೀಯ ಕಾಲಮಾನ ರಾತ್ರಿ 11 ಗಂಟೆ) ಪಂದ್ಯಗಳು ಆರಂಭವಾಗಬೇಕಿದ್ದವು. ಉಪಖಂಡದ ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಟೆಲಿವಿಷನ್‌ನಲ್ಲಿ ನೇರ ಪ್ರಸಾರ ವೀಕ್ಷಿಸಲು ಅನುಕೂಲವಾಗುವಂತೆ ಪ್ರಸಾರ ಸಂಸ್ಥೆ ಜೊತೆ ಚರ್ಚಿಸಿ ಪಂದ್ಯದ ಸಮಯದಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೊ ವರದಿ ಮಾಡಿದೆ.

ಇಂಗ್ಲೆಂಡ್‌ನಲ್ಲಿ ಸ್ಕೈ ಸ್ಪೋರ್ಟ್ಸ್ (ಯುಕೆ) ಮತ್ತು ಭಾರತದಲ್ಲಿ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ (ಇಂಡಿಯಾ) ಪ್ರಸಾರ ಹಕ್ಕು ಪಡೆದಿವೆ.

ಭಾರತ ಟಿ20 ಸರಣಿಯ ಜೊತೆಗೆ ಮೂರು ಪಂದ್ಯಗಳ ಏಕದಿನ ಸರಣಿಯನ್ನೂ ಆಡಲಿದೆ. ಎಲ್ಲ ಟಿಕೆಟ್‌ಗಳು ಈಗಾಗಲೇ ಮಾರಾಟವಾಗಿವೆ ಎಂದು ವರದಿ ತಿಳಿಸಿದೆ.

ಅಫ್ಗಾನಿಸ್ತಾನ ವಿರುದ್ಧ ಏಕದಿನ ಸರಣಿಯ ಬಳಿಕ ಇಂಗ್ಲೆಂಡ್ ವಿರುದ್ಧ ಸರಣಿಗೆ ತಂಡವನ್ನು ಪ್ರಕಟಿಸಲಾಗುವುದು ಎಂದು ಬಿಸಿಸಿಐ ಹೋದ ವಾರ ತಿಳಿಸಿತ್ತು.

ರಾಷ್ಟ್ರೀಯ ಬ್ರಿಜ್: ಮವೆರಿಕ್ಸ್, ಟಾಪ್‌ರಫ್‌ಗೆ ಅಗ್ರಸ್ಥಾನ

ಮಂಗಳೂರು: ಸಂಜೆಯವರೆಗೂ ಅಗ್ರಸ್ಥಾನದಲ್ಲಿ ಸಾಗುತ್ತಿದ್ದ ದೀಪ ಧಾರ್ ತಂಡವನ್ನು ದಿನದ ಕೊನೆಯ ಸುತ್ತಿನಲ್ಲಿ ಮಣಿಸಿದ ಮವೆರಿಕ್ಸ್ ತಂಡ ಇಲ್ಲಿ ನಡೆಯುತ್ತಿರುವ ಮವೆರಿಕ್ಸ್ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ 'ಗೋಲ್ಡ್' ತಂಡ ವಿಭಾಗದಲ್ಲಿ ಸೋಮವಾರ ಅಗ್ರಸ್ಥಾನ ಗಳಿಸಿದೆ. 'ಸಿಲ್ವರ್' ತಂಡ ವಿಭಾಗದಲ್ಲಿ ಟಾಪ್ ರಫ್ ಅಗ್ರಸ್ಥಾನಕ್ಕೇರಿತು.

ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಕರಾವಳಿ ಬ್ರಿಜ್ ಸಂಸ್ಥೆ ಬೆಂದೂರಿನ ಸೇಂಟ್ ಸೆಬಾಸ್ಟಿಯನ್ ಸಭಾಂಗಣದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ 'ಗೋಲ್ಡ್' ವಿಭಾಗದಲ್ಲಿ ಮವೆರಿಕ್ಸ್ ದಿನದ ನಾಲ್ಕು ಸುತ್ತುಗಳ ಅಂತ್ಯಕ್ಕೆ 61.05 ಸ್ಕೋರು ಗಳಿಸಿತು. ಪಾರ್ಥಸಾರಥಿ ಮುಖರ್ಜಿ, ಅನಿರುದ್ಧ ಭಟ್ಟಾಚಾರ್ಯ, ಜೇಕಬ್, ಪ್ಯಾಟ್ರಿಕ್, ಡೊಮಿನಿಕ್ ಫಿಲಿಪೋಸ್ ಮತ್ತು ಮಿಶ್ರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಕೆಜಾದ್ ಅಂಕ್ಲೆಸಾರಿಯ ಅವರನ್ನು ಒಳಗೊಂಡ ತಂಡ ಮವೆರಿಕ್ಸ್.

ಮೊದಲ ಸುತ್ತಿನಲ್ಲಿ 'ಮಿಕ್ಸ್ ಆ್ಯಂಡ್ ಮ್ಯಾಚ್' ವಿರುದ್ಧ 77-13ರ ಗೆಲುವಿನೊಂದಿಗೆ ಭರ್ಜರಿ ಆರಂಭ ಕಂಡ ಮವೆರಿಕ್ಸ್ ನಂತರ ಎಹಾ ಮತ್ತು ರ‍್ಯಾಂಪೇಜ್ ವಿರುದ್ಧ ಕ್ರಮವಾಗಿ 20-19 ಮತ್ತು 35-14ರಲ್ಲಿ ಗೆಲುವು ಸಾಧಿಸಿತು. ಭಾರಿ ಕುತೂಹಲ ಕೆರಳಿಸಿದ್ದ ಕೊನೆಯ ಸುತ್ತಿನಲ್ಲಿ 37-17ರಲ್ಲಿ ಗೆದ್ದಿತು. ದೀಪಧಾರ್ ತಂಡಕ್ಕೆ ಇದು ದಿನದ ಮೊದಲ ಸೋಲು. 53.58 ಸ್ಕೋರುಗಳೊಂದಿಗೆ ತಂಡ ನಾಲ್ಕನೇ ಸ್ಥಾನಕ್ಕೆ ಕುಸಿಯಿತು.

ಆಯುಷ್, ಸಿಂಧು ಮೇಲೆ ನಿರೀಕ್ಷೆ


ಆಯುಷ್ ಶೆಟ್ಟಿ

ಸಿಡ್ನಿ (ಪಿಟಿಐ): ಉದಯೋನ್ಮುಖ ತಾರೆ ಆಯುಷ್ ಶೆಟ್ಟಿ ಅವರು ಮಂಗಳವಾರ ಇಲ್ಲಿ ಪ್ರಾರಂಭವಾಗುವ ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಪುರುಷರ ಸಿಂಗಲ್ಸ್‌ನ ಸವಾಲನ್ನು ಮುನ್ನಡೆಸಲಿದ್ದಾರೆ.

ಆರನೇ ಶ್ರೇಯಾಂಕದ ಆಯುಷ್ ಅವರು ಕಳೆದ ವಾರ ಇಂಡೊನೇಷ್ಯಾ ಓಪನ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದಿದ್ದರು. ಕರ್ನಾಟಕದ ಈ ಆಟಗಾರ, ಕ್ವಾಲಿಫಯರ್ ಆಟಗಾರನ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ದೀರ್ಘಕಾಲದ ಪ್ರಶಸ್ತಿ ಬರವನ್ನು ನೀಗಿಸುವ ಪ್ರಯತ್ನದಲ್ಲಿದ್ದಾರೆ. 2024ರ ಸೈಯದ್ ಮೋದಿ ಅಂತರರಾಷ್ಟ್ರೀಯ ಪ್ರಶಸ್ತಿ ಗೆದ್ದ ನಂತರ ತನ್ನ ಮೊದಲ ಬಿಡಬ್ಲ್ಯುಎಫ್ ವಿಶ್ವ ಟೂರ್ ಕಿರೀಟದ ನಿರೀಕ್ಷೆಯಲ್ಲಿದ್ದಾರೆ. ಮೂರನೇ ಶ್ರೇಯಾಂಕದ ಅವರು, ಪೆರುವಿನ ಇನೆಸ್ ಲೂಸಿಯಾ ಕ್ಯಾಸ್ಟಿಲ್ಲೊ ಅವರನ್ನು ಎದುರಿಸಲಿದ್ದಾರೆ.





